
ಅರೆಭಾಷೆ ಪಾರಂಪರಿಕ ವಸ್ತುಕೋಶ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅರೆಭಾಷೆ ಪಾರಂಪರಿಕ ವಸ್ತುಕೋಶ

ಅರೆಭಾಷೆ ಪಾರಂಪರಿಕ ವಸ್ತುಕೋಶ

AREBHASHE PARAMPARIKA VASTUKOSHA
Karnataka Arebhashe Samskrithi Mattu Sahitya Academy,
Coffee Krupa, Rajaseat Road, Madikeri, Kodagu Dist. 571201.
Email : arebaseacademy@gmail.com, Mob: 6362522677
Web : https://arebhasheacademy.karnataka.gov.in

ISBN : 978-81-956598-4-5

ಪ್ರಕಟಣೆ	:	**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ**
ಪ್ರಥಮ ಮುದ್ರಣ	:	2022
ಆಕಾರ	:	¼ ಡೆಮ್ಮಿ
ಪುಟಗಳು	:	260+4
ಕಾಗದ	:	130 GSM Art Paper
ಬೆಲೆ	:	ರೂ. 500/-
ಮುಖಪುಟ-ಪುಟ ವಿನ್ಯಾಸ	:	**ಸುಧಾಕರ ಆಚಾರ್ಯ**, ದಿಗಂತ ಮುದ್ರಣ
ಮುದ್ರಣ	:	**ದಿಗಂತ ಮುದ್ರಣ ಲಿ.**, ಯೆಯ್ಯಾಡಿ, ಮಂಗಳೂರು.
ಹಕ್ಕುಸ್ವಾಮ್ಯ	:	ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಪುಸ್ತಕ ದೊರೆಯುವ ಸ್ಥಳ	:	**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ** ಕಾಫಿಕೃಪ ಬಿಲ್ಡಿಂಗ್, ರಾಜಸೀಟ್ ರಸ್ತೆ, ಮಡಿಕೇರಿ ದೂರವಾಣಿ: 08272-223055 Email: arebaseacademy@gmail.com, Mob: 6362522677 www.arebhasheacademy.karnataka.gov.in

ಪ್ರಧಾನ ಸಂಪಾದಕರು:

ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ

ಕಾರ್ಯನಿರ್ವಹಣಾ ಸಂಪಾದಕರು:

ಶ್ರೀ ಜಯಪ್ರಕಾಶ್ ಮೋಂಟಡ್ಕ ಬಿಳಿನೆಲೆ

ಸಂಪಾದಕರು:

ಶ್ರೀ ಎಂ.ಜಿ. ಕಜೆ

ಶ್ರೀ ಬಾರಿಯಂಡ ಜೋಯಪ್ಪ

ಶ್ರೀ ಕುಂಞೇಟಿ ಶಿವರಾಮ ಗೌಡ

ಡಾ. ವಿಶ್ವನಾಥ ಬದಿಕಾನ

ಡಾ. ಪುರುಷೋತ್ತಮ ಕೆ.ವಿ., ಕರಂಗಲ್ಲು

ಶ್ರೀ ಭರತೇಶ ಅಲಸಂಡೆಮಜಲು

ಗೌರವ ಸಲಹೆ:

ಡಾ. ಕೆ. ಚಿನ್ನಪ್ಪ ಗೌಡ
ವಿಶ್ರಾಂತ ಕುಲಪತಿಗಳು

ಸಂಪನ್ಮೂಲ ಒದಗಿಸಿದವರು:

ಶ್ರೀ ಸುಬ್ರಹ್ಮಣ್ಯ ಗೌಡ
ಶ್ರೀಮತಿ ಪಾರ್ವತಿ ತೋಟಂಬೈಲು

ಅಕಾಡೆಮಿ ಅಧ್ಯಕ್ಷರು:

ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ

ಅಕಾಡೆಮಿ ಸದಸ್ಯರು:

ಬೈತಡ್ಕ ಜಾನಕಿ ಬೆಳ್ಯಪ್ಪ
ಸ್ಮಿತಾ ಅಮೃತರಾಜ್
ಚೊಕ್ಕಾಡಿ ಪ್ರೇಮ ರಾಘವಯ್ಯ
ಧನಂಜಯ ಅಗೋಳಿಕಜೆ
ದಂಬೆಕೋಡಿ ಯಸ್. ಆನಂದ
ಡಾ. ದಯಾನಂದ ಕೆ. ಸಿ. ಕೂಡಕಂಡಿ
ಕುಸುಮಾಧರ ಎ.ಟಿ
ಡಾ. ವಿಶ್ವನಾಥ ಬದಿಕಾನ
ಜಯಪ್ರಕಾಶ್ ಮೋಂಟಡ್ಕ ಬಿಳಿನೆಲೆ
ಪುರುಷೋತ್ತಮ ಕಿರ್ಲಾಯ
ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು
ಕಿರಣ್ ಕುಂಬಳಚೇರಿ
ಭರತೇಶ್ ಅಲಸಂಡೆಮಜಲು

ರಿಜಿಸ್ಟ್ರಾರ್:

ಶ್ರೀ ಚಿನ್ನಸ್ವಾಮಿ

ಅರ್ಥ ಸದಸ್ಯರು:

ಶ್ರೀಮತಿ ಕೆ.ಟಿ. ದರ್ಶನ

ಕಛೇರಿ ಸಿಬ್ಬಂದಿ:

ಶ್ರೀಮತಿ ಜ್ಯೋತಿ, ಶ್ರೀಮತಿ ಶೋಭಾ, ಶ್ರೀ ವಿಘ್ನೇಶ್ ಜಿ.ಜಿ.

ಪ್ರಧಾನ ಸಂಪಾದಕರ ಮಾತ್

ಪಾರಂಪರಿಕ ಸೊತ್ತ್‌ಗಳ ಪ್ರದರ್ಶನಂದ ಕೋಶ ತಯಾರಿ ವರೆಗೆ



✍ **ಲಕ್ಷ್ಮೀನಾರಾಯಣ ಕಜೆಗದ್ದೆ**
ಅಧ್ಯಕ್ಷರ್
ಕಜೆಗದ್ದೆ ಮನೆ, ಅಂಚೆ ಕನಕಮಜಲು
ಸುಳ್ಯ, ದ.ಕ. – 574223
ಮೊ: +91 9449082249

2011 ಡಿಸೆಂಬರ್ 15ರಂದ್ ಕರ್ನಾಟಕ ಸರಕಾರ ಸಂಸ್ಕೃತಿ ಇಲಾಕೆನ ಭಾಷಾ ಅಕಾಡೆಮಿಗಳ ಸಾಲ್‌ಲಿ ಐದ್‌ನೆ ಅಕಾಡೆಮಿಯಾಗಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸೇರಿ ಕನ್ತ್. ಹೀಂಗೆ ಸುರಾದ ಅಕಾಡೆಮಿನ ನಾಲ್ಕನೆ ಅವದಿಲಿ ದಶವರ್ಷ ಸಂಬ್ರಮ ಆಚರಣೆ ಮಾಡ್ತಾ ಒಳ. ಈ ನಡುಲಿ ಎರಡ್ ಅರೆಭಾಷೆ ಸಾಹಿತ್ಯ ಸಮ್ಮೇಳನಗ ನಡ್ತ್. ಹತ್ತಾರ್ ಪುಸ್ತಕಗ ಪ್ರಕಟ ಆದೊ.

2020ರ ಫೆಬ್ರವರಿ 23ರಂದ್ ಕೊಡ್ಗ್‌ನ ಸೋಮವಾರ ಪೇಟೆ ತಾಲೂಕ್‌ನ ಆಲೂರು ಸಿದ್ದಾಪುರಲಿ ಅಕಾಡೆಮಿಂದ ಎರಡ್‌ನೆ ಅರೆಭಾಷೆ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡೊ. ಆ ಜಂಬರ ಬಾರಿ ಪೊರ್ಲುಲಿ ಗೌಜಿಲಿ ನಡ್ತ್. ಅಂದ್ ಸುಮಾರ್ 4 ಸಾವಿರ ಜೆನ ಕೂಡಿದ್ದೊ. ಬಂದ ಜೆನಕೆ ಬಾಸೆ, ಸಂಸ್ಕೃತಿ ಬಗ್ಗೆ ಇಚಾರ ಗೊತ್ತಾಕೆ ಬಗೆಬಗೆನ ಗೋಸ್ಟಿಗ, ಸಾಂಸ್ಕೃತಿಕ ಕಾರ್ಯಕ್ರಮಗ ಇತ್ತ್. ಹಂಗೆನೆ ಅರೆಬಾಸೆ ಸಂಸ್ಕೃತಿ ಕಣ್ಣ್‌ಲಿ ನೋಡಿ ಕುಸಿ ಪಡಿಕೆ ನಮೂನೆ ನಮೂನೆನ ಪ್ರದರ್ಸನಲಿ ಪಂಡ್‌ನ ಸೊತ್ತ್‌ಗಳ ತೋರ್ಸೊಕುತ ಗ್ಯಾನ ಮಾಡ್ಡೊ. ಅಲ್ಲಿನ ಹಕ್ಕಲೆ ಮನೆಗಳ ಜೆನಗ ಅವರಕ್ಕಲೆ ಇರ್‌ವ ಹಳೆ ಸೊತ್ತ್‌ಗಳ ತಂದ್ ಇಸ್‌ವೆತ ಮಾತ್‌ಕೊಟ್ಟೊ. ಆದ್ರೆ ಸಮ್ಮೇಳನ ದಿನ ಹಕ್ಕಲೆ ಹಕ್ಕಲೆ ಬಾಕನ ಸಂಗಟಕರ್ ತುಂಬಾ ಸೊತ್ತ್‌ಗಳ ಸಂಗ್ರಹ ಮಾಡಿಕೆ ಬಂಜ ತ ಹೇಳ್ದೊ. ಆಗ ನೆಂಪಾದ್ ದಕ್ಷಿಣಕನ್ನಡ ಜಿಲ್ಲೆನ ಕಡಬ ತಾಲೂಕ್ ಕುಂತೂರುನ ಸುಬ್ರಹ್ಮಣ್ಯ ಮಾಸ್ತ್ರ ಪಂಡ್‌ನ ಸೊತ್ತ್‌ಗಳ ಕದಿಕೆಂತೇಳುವ ಸಂಗ್ರಾಹಾಲಯ. ಅವ್ಕೆ ಪ್ರದರ್ಶನದ ಇಸಯ ತಿಳ್ಸ್‌ಕಾಕನ ಅವ್ ಅವರ ಕಷ್ಟ ಹೇಳಿಕಂಡ. ದೂರದ ಸೋಮವಾರ ಪೇಟೆನ ಊರಿಗೆ ತಾಕೆ ಮೂರು ದಿನ ಸಾಲೆಗೆ ರಜೆ ಹಾಕೊಕು. ಮೂರು ಜೆನ ಸಹಾಯಕರ್ ಬೇಕ್. ಸೊತ್ತ್‌ಗಳ ತಕೊಂಡು ಹೋಕೆ ಬಾಕೆ ಒಂದ್ ಮಿನಿಲಾರಿ ಬೇಕ್. ಹೋಕನ ಬಾಕನ ಹಾಳ್ ಆಗದಂಗೆ ನೋಡಿ ಕಣೊಕು. ಹಂಗಾಗಿ ಕಷ್ಟ ಆದೆತ ಹೇಳಿ ಅವು 'ಗೂಂಜಿಗೆ ಅಂಟಿಕಂಡರೆ', ನಾ'ರಚ್ಚೆಗೆ ಅಂಟಿಕಂಡ್' ಇಲ್ಲೆ ನೀವ್ ಬಂದೇ ಬರೋಕುತ ಕೇಳಿಕಂಡೆ. ಯಾದಕೂ ಹೆಡ್‌ಮಾಸ್ಟ್ರುಟ್ಟ್‌ಗೆ ಮಾತಾಡಿ ರಜೆ ಪಡ್ಕಂಡ್ ನೀವ್ಗೆ ಹೇಳ್‌ನೆ ತ ಹೇಳಿದ್ದೊ.

ಆಗ ತಲೆಗೆ ಹೊಳ್ದದ್ ಈ ಪಂಡ್‌ನ ಸೊತ್ತ್‌ಗಳ ಮುಂದೆನ ತಲೆಮಾರಿಗೆ ಪರ್ಚಯ ಮಾಡಿಕೆ ಒಂದ್ ಪಾರಂಪರಿಕ ಸೊತ್ತ್‌ಗಳ ಕೋಶ ಮಾಡ್ರೆ ಹೆಂಗೆತ? ಮುಂದೆನ ದಿನಲಿ ಸೊತ್ತ್ ಪ್ರದರ್ಶನ ಮಾಡಿಕೆ ಊರ್‌ಊರ್‌ಗೆ ತಕಂಡ್ ಹೋದು ಮತ್ತೆ ತೋರ್‌ಸುದು ಎಲ್ಲ ಬಂಜ ಆದೆ. ಪುಸ್ತಕ ಇಲ್ಲರೆ ಡಿಜಿಟಲ್ ಪುಸ್ತಕ ರೂಪಲಿ ಬಂದರೆ ಜೆನಗಳಿಗೆ ಉಪಯೋಗ ಆದೆತ ಹೇಳಿ ಅಕಾಡೆಮಿ ಸದಸ್ಯೆರೆಲ್ಲ ಯೋಚನೆ ಮಾಡಿ ಈ ಕೆಲಸ ಸುರು ಮಾಡ್ಡೊ.

ಪಂಡ್‌ನ ಕಾಲದ ಸೊತ್ತ್‌ಗಳ ನೋಡ್ರೆ ನಮ್ಮ ಹಿರಿಯರ ಜೀವನ ಕ್ರಮ, ಅವ್ ಬೊದ್ಕಿದ ರೀತಿನ ಬಗ್ಗೆ ಗೌರವ ಹೆಚ್ಚಾದೆ. ಮಾತ್ ಮಾತ್‌ಗೆ 'ಸಾಲೆ ಮೆಟ್ಲ್ ಹತ್ತಿತ್ಲೆ' ತ ಹೇಳ್‌ವ ನಮ್ಮ ಹಿರಿಯರ್ ಬೊದ್ಕಿಕೆ ಬೇಕಾದರೆಲ್ಲ ಅವ್ ಆ ಕಾಲಲೇ ಎಷ್ಟ್ ಕೆಣಿಲಿ ಮಾಡಿಕಂಡ್ ಬಂದಿದ್ದಾ. ಇಂದ್‌ನ ಅದುನಿಕ ಯುಗಲಿ ಎಷ್ಟೆಲ್ಲಾ ಸೊತ್ತ್‌ಗ ಇದ್ದರೂ ಪಂಡ್‌ನ ಸೊತ್ತ್‌ಗಳ ಬಗ್ಗೆ ಇಂದ್‌ನ ಜೆನರಿಗೆ ಒಂದ್ ವಿಸೇಸ ಪ್ರೀತಿ ಉಟ್ಟ್. ಕೆಲವು ಜೆನಗ 'Antique Piece' ತ ಜೋಕೆ ಮಾಡ್ರೆ, ಇನ್ನ್ ಕೆಲವು ಜೆನಗ ಈಗೊಳೂ ಪಂಡ್‌ನ ಸೊತ್ತ್‌ಗಳ ಉಪಯೋಗ ಮಾಡ್ವೆ. ಮೊಣ್ಣ್‌ನ ಅಳೆಗೆಲಿ ಮೀನ್ ಮಾಸ ಗೈಪು ಮಾಡ್ರೆ ಬಾರಿ ರುಚಿತ ಹೇಳುವೊವು ಮಿಕ್ಸ್‌ಲಿ ಕಡ್‌ದರೆ ರುಚಿ ಇಲ್ಲೆತ ಹೇಳಿ ಕಡ್ಕಲ್ಲ್‌ಲಿ ಕಡೆವೂ ಒಳೊ.

ಆದರೆ ಕಾಲ ಬದಲಾದಂಗೆ ಎಲ್ಲಾ ಬದಲಾಗ್ತ ಹೋದೆ. ಪಂಡ್ ಕಾಲದ ಸೊತ್ತುಗ ಮುಂದೆನ ಜೆನಾಂಗಕ್ಕೆ ನಮ್ಮ ಪರಿಸರದ ಜೆನಂಗ ಹೆಂಗೆ ಬಾಳಿ ಬದುಕಿದ್ದೊತ ಹೇಳಿಕೆ 'ಸತ್ಯ ಸಾಕ್ಷಿಗ' ತ ಹೇಳ್ರೆ ತಪ್ಪಾಕಿಲೆ. ಇಂದ್ ನಮ್ಮ ಅಗತ್ಯಕೆ ಹಳೆ ಕಾಲದ ಸೊತ್ತ್‌ಗಳ ಉಪಯೋಗ ಕಮ್ಮಿ ಆಕಂಡ್ ಇದ್ದಂಗೆ ಅವೆಲ್ಲಾ ಅಟ್ಟಕೆ ಸೇರ್ದೆ. ಎಷ್ಟೊ ಹಳೆ ಮನೆಗಳ ಅಟ್ಟಕ್ಕೆ ಹತ್ತಿ ನೋಡ್ರೆ ಅದರೆಲ್ಲರ ಕಾಣಕ್. ಹಳೆ ಹಂಚಿನ ಮನೆ ಹೋಗಿ ಹೊಸ 'ತಾರಸಿ' ಮನೆ ಅಕನ 'ಅಟ್ಟ' ಇಲ್ಲದೆ ಸೊತ್ತ್‌ಗ ಮೊಣ್ಣಾಗಿ, ಕುಂಬಾಗಿ ಹೋತ್. ಪಂಡ್‌ನ ಸೊತ್ತ್‌ಗ ಮಾಯ ಆದಂಗೆ ಅದರ ಹೆಸ್ರ್ ಕೂಡಾ ನೆಂಪುಂದ ಮಾಸಿ ಹೋದೆ. ಪದಗಳ ಬಳ್‌ಸದೇ ಬಾಸೆನ ಬೆಳವಣಿಗೆಗೆ ಬೇರೆ ಬಾಸೆಂದ ತಕಂಬ ಅಲ್ಲರ್ ಕೊಟ್ಟ್ ತಕಂಬ ಪದಗ ಕಮ್ಮಿ ಆದೆ. ಈ ನೆಲೆಲಿ ಇಂದ್ ಪಂಡ್‌ನ ಸೊತ್ತ್‌ಗ ಉಪಯೋಗ ಕಮ್ಮ್ಯಾಕಂಡ್ ಹೋದಾಂಗೆ ಮುಂದೆಗೆ ಇಂತ ಪದಗಳೇ ಇರ್ದುಲೆ.

ಸಮ್ಮೇಳನಗ ಬಾಸೆ ಮಾತಾಡವರ ಮತ್ತೆ ಸಾಹಿತ್ಯ ಚಿಂತಕರ ಒಟ್ಟ್ ಮಾಡ್ರೆ, ಇಂತ ಸೊತ್ತ್‌ಗಳ ಪ್ರದರ್ಸನಗ ನಮ್ಮ ಸಂಸ್ಕೃತಿ ಮತ್ತೆ ಪರಂಪರೆನ ನೆಂಪು ಮಾಡಿಕೆ ಊಂದ್ ಕೊಟ್ಟದೆ. ಎಷ್ಟೋ ಮೂಲೆ ಗುಂಪಾವ ಸೊತ್ತ್‌ಗಳ್‌ಲಿ ಹಿಂದೆನವರ ಬೊದ್ಕ್‌ನ ಕತೆಗ ಸುತ್ತಿಕೊಂಡಿದ್ದದೆ. ಅಡ್‌ಗೆ ಮನೆಲಿ ಬಳ್ಸ್‌ವ ಸೊತ್ತ್‌ಗ ಹೊಸತಾಕನ ಅದರ ತಯಾರ್ಸ್‌ವ ಪಾರಂಪರಿಕ ವೃತ್ತಿಗ, ವ್ಯಕ್ತಿಗ ಮಾಯ ಆದೊ. ಹಂಗಾಗಿ ಅಕಾಡೆಮಿ ಕೊನೆ ಪಕ್ಷ ಇಂತ ಪಂಡ್‌ನ ಸೊತ್ತ್‌ಗ ಮತ್ತೆ ಅದರ ಬಗ್ಗೆನ ಕತೆಗಳ ದಾಕಲ್ಸೊಕ್‌ತ ಹೇಳಿ ಈ ಕೆಲ್ಸ ಮಾಡ್ಯೊಳ.

ಈ ಪುಸ್ತಕ ತಯಾರ್ಸಿಕೆ ತುಂಬಾ ಜೆನಗ ಸಹಕಾರ ಕೊಟ್ಟೊಳೊ. ಬಿಳಿನೆಲೆ ಜಯಪ್ರಕಾಶ್ ಮೋಂಟಡ್ಕ ಪುಸ್ತಕದ ಕಾರ್ಯನಿರ್ವಾಹಕ ಸಂಪಾದಕರಾಗಿ ಕೆಲಸ ಮಾಡ್ದೊ, ಡಾ. ವಿಶ್ವನಾಥ ಬದಿಕಾನ, ಡಾ. ಪುರುಷೋತ್ತಮ ಕೆ.ವಿ., ಭರತೇಶ ಅಲಸಂಡೆ ಮಜಲು ಕೋಶದ ಸಂಪಾದನೆ ಕೆಲ್ಸ ಮಾಡ್ದೊ, ಎಂ.ಜಿ.ಕಜೆ, ಬಾರಿಯಂಡ ಜೋಯಪ್ಪ, ಡಾ. ಪುರುಷೋತ್ತಮ ಕೆ.ವಿ., ಕೊಲ್ಲಮೊಗ್ರದ ಕುಂಞಟ್ಟಿ ಶಿವರಾಮ ಗೌಡ ಹೀಂಗೆ ನಾಲ್ಕ್ ಮಾಸ್ಟ್ರ್ ಪಂಡ್‌ನ ಸೊತ್ತ್‌ಗಳ ಬಗ್ಗೆ ಬಾರಿ ಪೊರ್ಲುಲಿ ಲೇಕನಗಳ ಬರ್ದ್‌ಕೊಟ್ಟೊ. ಕಡಬದ ಕುಂತೂರ್‌ನ ಸುಬ್ರಹ್ಮಣ್ಯ ಮಾಸ್ಟ್ರ್, ಕೊಡಗ್‌ನ ತೋಟಂಬೈಲು ಪಾರ್ವತಿ ಅವು ಪಂಡ್‌ನ ಸೊತ್ತ್‌ಗಳ ಪಟ ತೆಗಿಯಕೆ ಅವಕಾಸ ಮಾಡಿ ಕೊಟ್ಟೊ, ಕೊಯಿಂಗೋಡಿ ಶಶಿ ಗೌಡ ಸೊತ್ತ್‌ಗಳ ಪಟತೆಗ್ದ್ ಉಪಕಾರ ಮಾಡ್ದೊ, ಪ್ರೊ. ಕೆ. ಚಿನ್ನಪ್ಪ ಗೌಡ್ರ್ ಪುಸ್ತಕದ ಬಗ್ಗೆ ಚರ್ಚೆ ಮಾಡಿ ಕೋಶ ಪೊರ್ಲು ಬಾಕೆ ಸಲಹೆ ಕೊಟ್ಟೊ ಹಂಗೆನೆ ಬಾರಿ ಲಾಯ್ಕಿಲಿ ಮುನ್ನುಡಿ ಬರ್ದೊ, ನನ್ನೊಟ್ಟಿಗೆ ಕೆಲ್ಸ ಮಾಡ್‌ವ ನನ್ನ ಪ್ರೀತಿನ ಅಕಾಡೆಮಿನ ಎಲ್ಲ ಸದಸ್ಯರ್, ರಿಜಿಸ್ಟ್ರಾರ್ ಚಿನ್ನಸ್ವಾಮಿ, ಅರ್ತ ಸದಸ್ಯರಾದ ಕೆ.ಟಿ. ದರ್ಶನ ಮತ್ತೆ ಸಿಬ್ಬಂದಿ ವರ್ಗದ ಜ್ಯೋತಿ, ಶೋಭಾ, ವಿಘ್ನೇಶ್ ಎಲ್ಲರ ಈ ಹೊತ್ತಿಲಿ ಕುಸಿಲಿ ನೆನ್ಸಿಕಣೆ. ಈ ಪುಸ್ತಕನ ಸರಿಯಾದ ಸಮಯಕ್ಕೆ ಪೊರ್ಲಿಲಿ ಮುದ್ರಣ ಮಾಡಿಕೊಟ್ಟ ಮಂಗಳೂರಿನ ಮುದ್ರಕರಾದ ದಿಗಂತ ಪ್ರಿಂಟಿಂಗ್ ಪ್ರೆಸ್‌ನ ಸಂಬಂದ ಪಟ್ಟ ಎಲ್ಲವುಕೆ ಅರೆಭಾಷೆ ಅಕಾಡೆಮಿ ಕಡೆಂದ ದನ್ಯವಾದಗ.

ಕಾರ್ಯನಿರ್ವಹಣಾ ಸಂಪಾದಕರ ಮಾತ್



✍ **ಜಯಪ್ರಕಾಶ್ ಮೋಂಟಡ್ಕ, ಬಿಳಿನೆಲೆ**
'ಕೌಸ್ತುಭ ನಿಲಯ' ಬಿಳಿನೆಲೆ ಗ್ರಾಮ,
ನೆಟ್ಟಣ ಪೋಸ್ಟ್, ಕಡಬ ತಾಲೂಕು – 574230 ದ.ಕ.
ಮೊ: +91 9480293464, 7406141591

ಅನಾದಿ ಕಾಲಂದ ನಮ್ಮ ಹಿರಿಯರ್ ದಿನನಿತ್ಯ ಬಳ್ಸಿಕಂಡ್ ಬಂದ ವಸ್ತುಗ ಕೃಸಿಗೆ ಬಳಸ್ತಿದ್ದ ಉಪಕರಣಗ ಇಂದ್ ಕಾಣದಾಂಗೆ ಆಗುಟು. ವೈಜ್ಞಾನಿಕ ಯುಗಲಿ ಪಾರಂಪರಿಕ ವಸ್ತುಗ ಕಾಣೆಯಾಗಿ ಹೊಸ ತಲೆಮಾರ್‌ನ ಹೊಸ ಹೊಸ ವಸ್ತುಗಳ ನಾವು ಕಾಣ್ತಾ ಒಳೊ. ಕಾಲ ಬದಲಾಗ್ತಾ ಇದ್ದ್, ಇಂದ್ ಪಾರಂಪರಿಕ ವಸ್ತುಗ ಕಾಂಬಕೆ ಸಿಕ್ಕುದುಲೆ. ಉದಾರ್ಣೆಗೆ, ಚಾಳೆನ ಜನಪದರ್ ಕಲ್ಪವೃಕ್ಷತ ಹೇಳೆಕಂಡೊ. ಚಾಳೆನ ನೂರಾರ್ ಸೊತ್ತುಗಳ ಬಳಕೆ ಆರೋಗ್ಯಕ್ಕೆ ವೈಜ್ಞಾನಿಕವಾಗಿ ಒಳ್ಳದ್‌ಂತ ನಂಬಿದ್ದೊ. ಹಿಂದೆನ ಕಾಲಲಿ ಕಾಯಿ ಚಿಪ್ಪಿಲಿ ಮಾಡ್ತಿದ್ದ ಸೆಡೆಗ ಇಂದ್ ಸ್ಟೀಲ್, ಕೀಜಿ ಸೆಡೆ ಆಗಿ ಬದಲಾಗುಟು. ಹಂಗೇನೆ ಮಣ್ಣ್‌ಂದ ಮಾಡ್ದ ಸುಮಾರ್ ಸೊತ್ತುಗಳ ಜಾಗೆಲಿ ಇಂದ್ ಪ್ಲಾಸ್ಟಿಕ್, ಸ್ಟೀಲ್ ಅಲ್ಲರ್ ಕೀಜಿನ ಸೊತ್ತುಗ ತುಂಬಿಯೊಳ. ಹಿಂದೆ ಇದ್ದ ಸೇಮಿಗೆ ಮಣೆ ಆಗಲಿ ಬೆತ್ತಂದ ಮಾಡ್ದ ಪೆಟ್ಟಿಗೆ ಆಗಲಿ ಕೃಸಿಗೆ ಸಮ್ಮಂದ ಆವ ಹತ್ಯಾರ್, ಕಿಡಿಂಜೋಳು, ಒಲಿ ಮೊಂದ್ರಿ ಹೀಂಗೇ ಬೇರೆ ಬೇರೆ ಸೊತ್ತುಗ ಇಂದ್ ಕಾಂಬಕೆ ಸಿಕ್ಕುದುಲೆ. ಹಿಂದೆನ ಕಾಲಲಿ ನಮ್ಮ ಹಿರಿಯರ್ ಬಳಸ್ತಿದ್ದ ಪಾರಂಪರಿಕಾ ವಸ್ತುಗ ವೈಜ್ಞಾನಿಕವಾಗಿ ಒಳ್ಳದ್ತ ನಂಬಿಕೆ ಇರಿಕೂ ಸಾಕ್.

2020–2022ನೇ ಸಾಲ್‌ನ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಅಧ್ಯಕ್ಷರ್ ಮತ್ತೆ ಸರ್ವ ಸದಸ್ಯರ್ ಸಬೆ ಸೇರಿ ಪಾರಂಪರಿಕ ವಸ್ತುಗಳ ಪಟ ಪುಸ್ತಕ ರೂಪಲಿ ತಾವ ಆಲೋಚನೆ ಮಾಡ್ದೊ. ಮಡಿಕೇರಿಲಿರುವ ತೋಟಂಬೈಲು ಶ್ರೀಮತಿ ಪಾರ್ವತಿ ಮತ್ತೆ ಕುಂತೂರ್ ಆಲಂಗಾರ್‌ನ ಮಾಸ್ಟ್ರ ಸುಬ್ರಹ್ಮಣ್ಯ ಗೌಡ್ರ 'ಕದಿಕೆ' ಸಂಗ್ರಹಂದ ಪಾರಂಪರಿಕ ಸೊತ್ತುಗಳ ಸುಳ್ಯದ ಫೋಟೋಜೆನಿಕ್ಸ್‌ನ ಶ್ರೀ ಶಶಿಯವು ಪಟೊ ತೆಗ್ದೊ. ಮೂರು ಜೆನ ನಿವೃತ್ತ ಮಾಸ್ಟ್ರಗ ಶ್ರೀ ಎಂ.ಜಿ. ಕಜೆ, ಶ್ರೀ ಬಾರಿಯಂಡ ಜೋಯಪ್ಪ, ಶ್ರೀ ಕುಂಞೇಟಿ ಶಿವರಾಮ ಅವು ಪಟ ನೋಡಿ ಮಾಹಿತಿ ಇರ್‌ವ ಪೊರ್ಲ್‌ನ ಲೇಕನ ಬರಿಯಕ್ಕೆ ಒಪ್ಪಿಕಂಡ. ಅಕಾಡೆಮಿನ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆಯವು ನನ್ನ ಮೇಲೆ ನಂಬಿಕೆ ಇಟ್ಟ್ ಈ ಕೆಲ್ಸನ ಕೊಟ್ಟೊಳೊ. ಲೇಕನಗಳ ಕರಡು ಪ್ರತಿ ತಯಾರಿಗೆ ಮತ್ತೆ ಒಟ್ಟು ಸಂಪಾದನೆಗೆ ಅಕಾಡೆಮಿ ಸದಸ್ಯರಾದ ಡಾ. ವಿಶ್ವನಾಥ ಬದಿಕಾನ, ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು ಮತ್ತೆ ಶ್ರೀ ಭರತೇಶ ಅಲಸಂಡೆ ಮಜಲು ಇವೆಲ್ಲಾ ಕೆಲ್ಸ ಮಾಡ್ಯೊಳ. ಈ ಪುಸ್ತಕಲಿ ಇರುವ ಪಾರಂಪರಿಕ ಸೊತ್ತುಗ ಬರೇ ಅರೆಭಾಷೆಯವರ್ದ್ ಮಾತ್ರ ಅಲ್ಲ, ಅರೆಭಾಷೆ ಪ್ರದೇಶಲಿ ಇರುವ ಎಲ್ಲವೂ ಬಳಸುತ್ತಿದ್ದೊ, ಹಂಗೆ ಈ ಎಲ್ಲಾ ಸೊತ್ತುಗ ಬೇರೆ ಬೇರೆ ಬಾಗಗಳ್‌ಲಿ ಬಳಕೆಲಿ ಇತ್ತ್.

ಪುಸ್ತಕಂತ ಹೇಳ್ದ ಮೇಲೆ ಅದಕ್ಕೊಂದು ಮುನ್ನುಡಿಂತ ಬೇಕುತ ನಿವೃತ್ತ ಕುಲಪತಿ ಡಾ. ಚಿನ್ನಪ್ಪ ಗೌಡ್ರೊಟ್ಟಿಗೆ ಕೇಳ್‌ಕನ ಒಪ್ಪಿಕಂಡ. ಹಾಂಗೆನೆ ಅಕಾಡೆಮಿನ ಸರ್ವ ಸದಸ್ಯರ್, ರಿಜಿಸ್ಟ್ರಾರ್ ಚೆನ್ನಸ್ವಾಮಿ, ಅರ್ಥ ಸದಸ್ಯರ್ ಕೆ.ಟಿ. ದರ್ಶನ ಮತ್ತೆ ಅಕಾಡೆಮಿನ ಸಿಬಂದಿ ವರ್ಗದವು ಮನಪೂರ್ವಕ ಸಹಾಯ, ಬೆಂಬಲ ಕೊಟ್ಟೊಳ. ಪುಸ್ತಕ ಲಾಯ್ಕ್ ಬಾಕೆ ಶ್ರಮವಹಿಸಿ ಕೆಲಸ್ ಮಾಡ್ದ ಎಲ್ಲವ್ಕೂ ವಂದನೆಗ.

ಸಂಪಾದಕರ ಮನಸ್‌ನೊಳಗೆನ ಮಾತ್



✍ ಎಂ. ಜಿ. ಕಜೆ.
'ಹಸೆಮನೆ'
1-3(ಜ)2, ಬಗಂಬಿಲ ರಸ್ತೆ, ಅಂಚೆ: ದೇರಳಕಟ್ಟೆ,
ಮಂಗಳೂರು ದ.ಕ. – 575018
ಮೊ: +91 9448549035

ನಾ ಎಸ್ಟೋ ಸರ್ತಿ ಗೇನ ಮಾಡ್ತಿದ್ದೆ ನಮ್ಮ ಹಿಂದೆನವು ಆ ಕಾಲಲೇ ಎಷ್ಟ್ ಬುದ್ಧಿವಂತರಾಗಿದ್ದೋಂತ! ಗೆಯ್ದ್‌ತಿಂಬೊದೇ ಅವರ ಬದ್ಕ್ ಆಗಿದ್ದರೂ ಅವುಕೆ ಗೆಯ್ಯೋದರ್‍ಲ್ಲು ಬಾರೀ ಚಾತುರ್ಯ ಇತ್ತ್. ಗದ್ದೆ ಹೂಡಿಕೆ ನೊಗ ನೇಗ್ಲ್, ನೊಗಕ್ಕೊಂದು ಪಣ್ಣೋಳು, ಕೆಯ್ಯಿ ಹೊಡೆಕೆ ಪಡಿಮಂಚ, ಅಕ್ಕಿ ಬತ್ತನೆಲ್ಲ ಹಾಳಾಗದ ಹಾಂಗೆ ಮುಡಿಕಟ್ಟುದು, ಬಿಳ್ಗ್‌ಲ್ ಹಾಳಾಗದಂಗೆ ಬಿಳ್ಗ್‌ಲ್‌ದ್ ಮಂಟಮೆ ಮಾಡ್ದು, ಗುಂಡಿಂದ ಗದ್ದೆಗೆ ನೀರ್ ಬುಡಿಕೆ ಚೊಂಟೆ ಮಾಡ್ದು ಹೀಂಗೇ ಬೇರೆ ಬೇರೆ ನಮೂನೆನ ಹಿಕ್‌ಮತ್ ಅವರಕ್ಕಲೆ ಇತ್ತ್. ಸುರೂಗೆ ಇಂತದರೆಲ್ಲ ಅವ್ಕೆ ಕಲ್ಸಿದೊವು ಯಾರ್? ಬತ್ತಂದ ಅಕ್ಕಿ ಮಾಡುವ ಕ್ರಮ ಹೇಂಗೆ ಗೊತ್ತಾತ್? ಅಕ್ಕಿನ ನೀರ್‌ಲಿ ಬೇಯಿಸರೆ ಗಂಜಿ ಹೇಂಗೆ ಆತ್? ಹೀಂಗೇ ನೂರಾರ್ ಪ್ರಶ್ನೆಗ ಮನ್ಸಿಗೆ ಬಂದದೆ. ಅವು ಸಾಲೆಗೆ ಹೋಗಿ ಕಲ್ತೊವು ಅಲ್ಲ. ಆದರೂ ಅವರ ಬುದ್ದುವಂತಿಕೆ ನೋಡಿರೆ ಸಾಲೆಗೆ ಹೋಗಿ ಕಲ್ತ ನಮ್ಮಂತವುಕೆ ಅದೆಲ್ಲ ಗೇನ ಮಾಡಿಕೇ ಆಕಿಲೆ! ಮೊಣ್ಣ್‌ಂದ ಮಡಿಕೆ ಮಾಡ್ದೊ, ಚಿಪ್ಪಿಂದ ಸೆಡೆ ಮಾಡ್ದೊ, ಮೀನ್ ಹಿಡೆಕೆ ಕೂಳಿ ಮಾಡ್ದೊ, ಮಳೆಗಾಲಕ್ಕೆ ಕಿಡಿಂಜೋಳು ಮಾಡ್ದೊ, ಅಟ್ಟಕ್ಕೆ ಹತ್ತಿಕೆ ಏಣಿ ಮಾಡ್ದೊ, ಬತ್ತಂದ ಅಕ್ಕಿ ಮಾಡಿಕೆ ಒನಕೆ ಮಾಡ್ದೊ, ಬೆತ್ತನ ಕೀಸಿ ಬೆಂಡ್ ಕುಕ್ಕೆ ಚಿಬುಳೆ ಕುಡ್ಪು ಮಾಡ್ದೊ ಒಂದಲ್ಲ ಎರಡಲ್ಲ ಅವು ಮಾಡ್ದ ಕೆಲಸ ಹೇಳಿರೆ ಮುಗೆಕಿಲ್ಲೆ. ಇಂದ್‌ನವ್ಕೆ ಇದರೆಲ್ಲ ಹೇಳಿರೆ ಎಂತದ್‌ಂತ ಗೊತ್ತೇ ಆಕಿಲೆ. ಅವರಕ್ಕಲೆ ಅಂದ್ ಇದ್ದ ಸೊತ್ತುಗ ನಮ್ಮ ಕಾಲಕೆ ಕಾಂಬಕೇ ಸಿಕ್ಕುದುಲೆ. ಅಂತದರ್‍ಲ್ಲಿ ನಮ್ಮ ಮಕ್ಕಳಿಗೆ, ಮಕ್ಕಳ ಮಕ್ಕಳಿಗೆ ಇದೆಲ್ಲ ಗೊತ್ತಾದು ಹೇಂಗೆ?

ನಾ ಸಣ್ಣೆತಿರಿಕನ ನಮ್ಮ ಮನೆ ಅಟ್ಟಲಿ ಬೆತ್ತಂದ ಮಾಡ್ದ ಪೆಟ್ಟಿಗೆ, ಕುಕ್ಕೆ, ಬೆದ್‌ರ್ ಬಾಸ್‌ಂದ ಮಾಡ್ದ ಕದಿಕೆ, ಕೊಮ್ಮೆ, ಎಲ್ಲ ಇತ್ತ್. ನಮ್ಮ ಮಕ್ಕಳಾಟಿಕೆಲಿ ಅದರ ನಾವೇ ಹಾಳ್ ಮಾಡ್ದೊ. ಈಗ ಬೇಜಾರ್ ಆದೆ ಅದರ ಉಳಿಸಿಕಾಂಕಿತ್ತ್ ಅಂತ. ಅಂದ್‌ನ ಸೊತ್ತುಗ ಇಂದ್ ಕಾಂಬಕೆ ಸಿಕ್ಕುದುಲೆ. ಯಾಗ ಮೊಂಯ್ಸು ದುಡ್ಡುನ ಹಿಂದೆ ಬೀತೋ ಆಗ ನಮ್ಮ ಗದ್ದೆ ಹೋಗಿ ತೋಟ ಬಾತ್! ಬೇಸಾಯ ಮಾಡ್ದು ನಿತ್ತತ್, ನಮ್ಮ ಹಿರಿಯವು ಮಾಡಿಕನ್ ಬಂದ ಆಚರಣೆಗ ಕಮ್ಮಿ ಆಕನ್ ಬಾತ್. ನಮ್ಮ ಪರಂಪರೆ – ಸಂಸ್ಕೃತಿನೂ ದೂರ ದೂರ ಹೋತ್. ಹಿಂದೆನವುಕೆ ಹಗಲಿಡೀ ಕೆಲ್ಸ ಮಾಡಿ ಹೊಟ್ಟೆ ತುಂಬ ತಿಂದ್ ಉಂಡ್ ಕತ್ತಲಾಕನ ಮಲ್ಗಿರೆ ಬೊಳ್ಪು ಮುಟ್ಟ ನಿದ್ದೆ. ಕಾಯಿಲೆ ಕಸಾಲೆ ಹಕ್ಕಲೇ ಬಾಕಿಲೆ, ಬಂದರೂ ಅವ್ವವ್ವೇ ಮೊದ್ದ್ ಮಾಡಿಕಾಂತಿದ್ದೋ. ಇಂದ್‌ನ ಹಾಂಗೆ ಯಾವ ದೊಡ್ಡ ದೊಡ್ಡ ಕಾಯಿಲೆಗ ಇತ್ತ್‌ಲೆ. ಮನ್ಸ್‌ಗೂ ನೆಮ್ಮದಿ ಇತ್ತ್. ಅಷ್ಟ್ ಮಾತ್ರ ಅಲ್ಲ ಅಕ್ಕಪಕ್ಕದ ಮನೆಯವರೊಟ್ಟಿಗೆ, ಕುಟುಂಬದವರೊಟ್ಟಿಗೆ ಒಳ್ಳ ಒಡನಾಟ ಇತ್ತ್

ಗದ್ದೆಗೆ ಎತ್ತ್ ಕಟ್ಟ್‌ಕನ ಆಚೆ ಮನೆವು ಈಚೆ ಮನೆವು ಒಟ್ಟಿಗೆ ಸೇರಿ ಗದ್ದೆ ಹೂಡ್ದು, ಗದ್ದೆ ಗೋರ್ದು, ನೇಜಿ ನೆಡ್ದು, ಕೆಯ್ಯಿ ಕೊಯ್ಯೊದು ಹೀಂಗೇ ಕೂಡಿ ಬಾಳ್ವೆ ಮಾಡ್ತಿದ್ದೋ. ಹಿಂದೆ ಕಾವೇರಿ ಸಂಕ್ರಮಣಕ್ಕೆ ಮುಂದೆ ಹೊಸ್ತು ಉಂಬ ಕ್ರಮಇತ್ತ್. ಅದ್ಕೆ ಅಕ್ಕ ಪಕ್ಕದ ಮನೆಯವರ ಕರೆವ ಕ್ರಮ ಇತ್ತ್. ಮನೆಲಿ ಕೂಸು ಹುಟ್ಟಿರೆ ಕುಟುಂಬದವು, ಬಂದು ಬಳಗದವು, ಆಚೆ ಮನೆವು ಈಚೆ ಮನೆವು ಎಲ್ಲ ಬಂದ್ ಸೇರ್ತಿದ್ದೊ. ಎಲ್ಲವೂ ಒಟ್ಟು ಸೇರಿರೆ ಬಾರೀ ಪಣ್ಣಂಬ್ರ. ಈಗ ಅಂತ ಆಚಾರ ವಿಚಾರಗ ಎಲ್ಲಾ ಮಾಯ ಆವುಟು. ಹೀಂಗೇ ಇಂತಾ ಆಚಾರ ವಿಚಾರಗಳಿಗೆ ಕೃಷಿ ಪದ್ದತಿಗಳ್ಗೆ ಕೆಲವು ಹತ್ಯಾರ್‌ಗ ಬೇಕಾಗಿತ್ತ್. ಅಂತದರೆಲ್ಲ ಅವರವರ ಊರೊಳಗೆ ಯಾರಾರ್ ಮಾಡಿ ಕೊಡ್ತಿದ್ದೋ. ಈಗ ಯಾರಿಗೆ ಬೇಕು ಅಂತದೆಲ್ಲ. ದುಡ್ಡು ಕೊಟ್ಟರೆ ತಕಂಕೆ ಅಂಗಡಿಗ ಒಳೊ. ಹಾಂಗೆಂತ ಹಿಂದೆನ ಸೊತ್ತುಗ ಈಗ ಸಿಕ್ಕುದುಲೆ. ಹಿಂದೆನ ಸೊತ್ತುಗ ಈಗ ಯಾರಕ್ಕಲೆನೂ ಕಾಂಬಕೆ ಸಿಕ್ಕುದುಲೆ. ಸಿಕ್ಕಿರೂ ಅಪರೂಪ. ಆ ಸೊತ್ತುಗಳ್‌ಲಿ ಬೊದ್ಕ್‌ನ ಕಷ್ಟ ಸುಖ ಇತ್ತ್. ಮರ್‍ಯಕೇ ಆಗದಂತ ಕತೆಗ ಇದ್ದೋ. ಅದರೆಲ್ಲ ಗೇನ ಮಾಡಿಕನ ಏನೋ ಒಂತರಾ ಕುಸಿ.

ಹಾಂಗೇ ನಮ್ಮ ನಮ್ಮ ಮನೆಲಿ ಪಿರಾಕ್‌ನ ಸೊತ್ತುಗ ಏನಾರ್ ಇದ್ದರೆ ಅದರ ಲಾಯ್ಕ್‌ಲಿ ಇಸಿಕಾಂಕು. ನಮ್ಮ ಮಕ್ಕ ಪುಳ್ಳಿಕಂಗ ನೋಡಲಿ. ಇಸಿಕಾಂಕೆ ಆದುಲೆಂತಾದರೆ ಕುಂತೂರ್‌ನ ಸುಬ್ರಹ್ಮಣ್ಯ ಮಾಸ್ಟ್ರಿಗೆ ಕೊಡಿ ಅವು ಇಸಿಕಾಂದವೆ. ಸುಬ್ರಹ್ಮಣ್ಯ ಮಾಸ್ಟ್ರ ಜೋಡನೆ ನೋಡಿರೆ ಎಲ್ಲವುಕೆ ಆಶ್ಚರ್ಯ ಆದು. ಅಷ್ಟ್ ಸೊತ್ತುಗಳ ಅವು ಜೋಡ್ಸಿ ಇಸಿಯೊಳೊ. ಹಾಂಗೇ ಕೊಡಗ್‌ನ ಅಕ್ಕ ಪಾರ್ವತಿ ತೋಟಂಬೈಲು ಅವು ಸ ತುಂಬ ಸೊತ್ತುಗಳ ಜೋಡ್ಸಿ ಇಸಿಯೊಳ. ಅವರ ಕೆಲಸಕ್ಕೆ ನಾವು ತಲೆ ಬೊಗ್ಗುಸೋಕೆ. ಯಾಕೆಂತೇಳಿರೆ ಇಷ್ಟೆಲ್ಲ ನಾವು ಬರೆಕುಂತಾದರೆ ಅವು ಜೋಡ್ಸಿ ಇಸಿದ ಸೊತ್ತುಗ ನಾವ್ಗೆ ಪ್ರೇಜನಕ್ಕೆ ಸಿಕ್ಕಿತ್ತ್. ಇಲ್ಲೆಂತಾದರೆ ನಾವು ಯಾರ್‍ಯಾರ ಮನೆಗಳಿಗೆ ಹುಡ್ಕೆನ್ ಹುಡ್ಕೆನ್ ಹೋಕಾತಿತ್.

ಅರೆಬಾಸೆ ಸಂಸ್ಕೃತಿಂತೇಳಿರೆ ನಮ್ಮ ಹಿಂದೆನವರ ಬೊದ್ಕ್, ಯವಸಾಯ ಪದ್ದತಿ, ಅವರ ಆಟ, ಕೂಟ ಎಲ್ಲ ಅದರ್ಲಿ ಸೇರ್ದೆ. ಅರೆಬಾಸೆ ಬೆಳೆಕುಂತಾದರೆ ಅರೆಬಾಸೆ ಜನಾಂಗದವು ಅರೆಬಾಸೆಲೇ ಮಾತಾಡೊಕು, ಅರೆಬಾಸೆ ಆಚರಣೆಗಳ ಮನೆಗಳ್‌ಲಿ ಆಚರಣೆ ಮಾಡೊಕು.ಆಗ ಅರೆಬಾಸೆ ಒಳ್ದದೆ, ಬೆಳ್ದದೆ ನಮ್ಮ ಸಂಸ್ಕೃತಿನೂ ಉಳ್ದದೆ. ನಮ್ಮ ಪರಂಪರೆ – ಸಂಸ್ಕೃತಿ, ಆಚಾರ ವಿಚಾರಗ ಬೆಳೆಕುಂತಾದರೆ ಅಕಾಡೆಮಿ ಮಾತ್ರ ಅಲ್ಲ ನಾವೆಲ್ಲ ಕೈ ಜೋಡ್ಸೊಕುಂತೇಳ್ದು ನನ್ನ ನಂಬಿಕೆ.

ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ ಕಡೆಂದ ಪಾರಂಪರಿಕ ವಸ್ತುಗಳ ಬಗ್ಗೆ ಪುಸ್ತಕ ಮಾಡ್ವೆಂತ ಲಕ್ಷ್ಮಿನಾರಾಯಣ ಕಜೆಗದ್ದೆವು ಒಮ್ಮೆ ಹೇಳಿದ್ದೊ. ಆಗ ನಂಗೆ ಬಾರೀ ಕುಸಿ ಆತ್. ಅಕಾಡೆಮಿನ ಸದಸ್ಯ ನನ್ನ ಪಿರಾಕ್‌ನ ಜೋಸ್ತಿ ಜಯಪ್ರಕಾಶ ಮೋಂಟಡ್ಕ ಬಿಳಿನೆಲೆಯವು ಸಿಕ್ಕಿಕನ ಪಾರಂಪರಿಕ ವಸ್ತುಗಳ ಬಗ್ಗೆ ನೀವು ಲೇಖನ ಬರೆಕುಂತ ಹೇಳ್ದೊ.ನಾ ಬರೆದು ಬುಟ್ಟು ಎಷ್ಟೋ ವರ್ಸ ಆತ್, ಕಷ್ಟ ಆದುಂತ ಹೇಳ್ದೆ. ಆದರೂ ಅವರ ಸ್ನೇಹಾಚಾರಕೆ ನೋಡೊಮೊಂತ ಹೇಳ್ದೆ. ಅವು ಕೆಲವು ಚಿತ್ರಗಳ ಕೊಟ್ಟೊ. ಅದರ್ಲಿ ಒಸಿ ಚಿತ್ರಗಳ ನಾ ಇಸಿಕಾಂದೆ. ಬರೆಕೆ ಸುರು ಮಾಡಿಕನ ಹಿಂದೆ ನಾ ನೋಡ್ದ್, ಮಾಡ್ದ್, ನನ್ನ ಅನುಬವಕ್ಕೆ ಬಂದದ್ ಎಲ್ಲ ಗೇನ ಮಾಡಿಕಾಂದೆ. ಬರ್‍ದಾಂಗೇ ನನ್ನ ಗೇನ ಸುಮಾರ್ 50,60 ವರ್ಸದ ಹಿಂದೆ ಹೋತ್. ಎಂತದೋ ಒಂದ್ ಕುಸಿ ಆತಿತ್. ಈಗ ಏನೋ ಅಷ್ಟೋ ಇಷ್ಟೋ ಬರ್ದೊಳೆ. ಬರ್ದದರ ಅಕಾಡೆಮಿ ಸದಸ್ಯರಾದ ಡಾ. ವಿಶ್ವನಾಥ ಬದಿಕಾನ, ಭರತೇಶ್ ಅಲಸಂಡೆ ಮಜಲು ಮತ್ತೆ ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು ಓದಿದ್ ಸಲಹೆ ಸೂಚನೆ ಕೊಟ್ಟೊಳೊ. ಅವರೆಲ್ಲ ನಾ ಯಾಗೋಳು ಗೇನ ಮಾಡಿಕನೆ. ಈ ಕೆಲ್ಸನ ನಂಗೆ ವಹಿಸಿ ಕೊಟ್ಟ ಜಯಪ್ರಕಾಶ್‌ರ ನಾ ಯಾಗೋಳು ಮರೆಕಿಲೆ. ಅಕಾಡೆಮಿ ಕೆಲ್ಸಲಿ ನಂಗೂ ಒಂದು ಪಾಲ್ ಕೊಟ್ಟ ಅಕಾಡೆಮಿನ ಅಧ್ಯಕ್ಷರ್ ಮತ್ತೆ ಎಲ್ಲಾ ಸದಸ್ಯರಿಗೆ, ರಿಜಿಸ್ಟ್ರಾರ್‌ಗೆ ನನ್ನ ನಮಸ್ಕಾರ.

ಸಂಪಾದಕರ ಮಾತ್

ಹೊಸ ಪೀಳಿಗೆಗೆ ಪಾರಂಪರಿಕ ವಸ್ತುಗ



✍ **ಬಾರಿಯಂಡ ಜೋಯಪ್ಪ**
ಮದೆ ಗ್ರಾಮ ಮತ್ತು ಅಂಚೆ
ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ – 571201
ಮೊ: +91 9481770584

ನಾವು ಹುಟ್ಟಿದಲ್ಲಿಂದ ಇಲ್ಲಿ ಮುಟ್ಟ ನಮ್ಮದೇ ಆದ ಕಟ್ಟ್‌ಪಾಡ್‌ಗಳೊಟ್ಟಿಗೆ ಬೊದ್ಕಿದವು, ನಮ್ಮದೇ ಬಾಸೆ, ಆಚಾರ ವಿಚಾರ, ಸಂಸ್ಕೃತಿ– ಸಂಪ್ರದಾಯಗಳ ರೂಡಿಸಿಕಂಡ್ ಬಂದವ್. ಹಿರಿಯರ್ ಮಾಡ್ದ ಕಟ್ಟ್‌ಪಾಡ್‌ಗ ನಮ್ಮ ಬೊದ್ಕಿಗಾಗಿಯೇ. ಅದರ ಹಿಂದೆ ವೈಜ್ಞಾನಿಕ ಸತ್ಯನೂ ಉಟ್ಟು. ಆದರೆ ಎಲ್ಲನೂ ಅಲ್ಲ! ಪರಂಪರೆಂದ ಬಂದದ್ದ್ ತ್ತೇಳಿ ಅದರ್‌ನೇ ಅನುಸರ್ಸೊ ಕುಂತೇನೂ ಇಲ್ಲೆ. ಇಂದ್ ಎಲ್ಲಾ ಅಮ್‌ಸರದ ಬೊದ್ಕ್. ಎಲ್ಲನೂ ಅನುಸರ್‌ಸಿಕಂಡ್ ಹೋಕೆ ಪುರುಸೊತ್ತುನೂ ಇಲ್ಲೆಂತೇಳುವ ಮಾತ್ ಉಟ್ಟು. ಕಿನಾರ ಕುದ್ದು ಮನಾರ ಉಂಬೊದು ಎಲ್ಲಿಟ್ಟು? ಕುದ್ದ್ ಉಂಬೊದಾಗಲೀ, “ಕೈ ಬಾಯಿ ಒಪ್ಪಿತಾ” ತ ಕೇಳ್ದು ಉಟ್ಟಾ? ಜಂಬರಗಳ್‌ಲಿ ಪರಂಪರೆಂದ ಬಂದ ಬಾಳಲೆ ಊಟ ಎಲ್ಲಿ ಹೋತು? ಹಿಂದೆಲ್ಲಾ ಹೀಂಗಿಂಗಿತ್ತ್ ತೇಳ್ವ ತಿಳುವಳಿಕೆ ಕೊಡುವ ಜವಾಬ್ದಾರಿ ಹಿರಿಯರ ಮೇಲುಟ್ಟು. “ಓ! ಹೀಂಗೆಲ್ಲಾ ಇತ್ತಾ” ತ ಕಿರಿಯವು ತಿಳ್ಕಂಬದರ್‌ಲಿ ತೊಪ್ಪಿಲ್ಲೆ.

ಹಿಂದೆ ನಾವ್ ಬಳ್ಸ್‌ತಿದ್ದ ಸೊತ್ತ್‌ಗಳ ಜಾಗೆಲಿ ಇಂದ್ ಬೇರೊಂದು ಸೊತ್ತ್ ಬಂದುಟು, ನಮ್ಮ ಸೊತ್ತ್ ಊರ್ ಬುಟ್ಟುಟು. ಇಂದ್ ಇದೇ ಸುಲಾಬತ್ತೇಳುವ ತೀರ್ಮಾನಕ್ಕೆ ಹೊಸ ಪೀಳಿಗೆವು ಬಂದೊಳ. ಅದರ ತೊಪ್ಪುಂತೇಳಿಕಾದ್ಲೆ. ಹಿಂದೆ ಬಳಕೆ ಮಾಡ್ತಿದ್ದ ಸೊತ್ತುಗಳ ಬಗ್ಗೆ ಪವಿತ್ರ ಬಾವನೆ ಬೇಕ್. ಯಾಕೆಂತೇಳ್ರೆ ಅಂದ್ ಅವೆಲ್ಲ ಇಲ್ಲದೇ ಹೋಗಿದ್ದರೆ ಇಂದ್‌ನವುಕೆ ಕಷ್ಟ ಆತಿತ್.

ಅಚಿದೆಲ್ಲಾ ಸಂತೆ, ಜಾತ್ರೆ, ಜಂಬರ ಎಲ್ಲೇ ಹೋದರೂ ಪಾದರಕ್ಷೆ ಹಾಕ್‌ತಿತ್ಲೆ! ಕ್ರಮೇಣ ಚಪ್ಲಿನೂ ಬಾತ್, ಪಾದರಕ್ಷೆ ಸೂರ್ ಕೆಳಗೆ ಇಜ್ಜಾಲ್‌ಲೇ ಇರ್ತಿತ್. ಮನೆ ಒಳಗೆ ಹಾಕಿಕೆ ಬತ್ತ್ ತ್ತೇಳ್ವ ಕಟ್ಟ್‌ಪಾಡಿತ್ತ್. ಮನೆ ಒಳಗೆ ಹಿರಿ(ಚಾಂಪ) ಮಾತ್ರ ಕಡಾವ್ ಹಾಕ್‌ತಿದ್ದೊ. ಅದೂ ಕತ್ತಲಾಕನ ಮೀದೊ, ಕಾಲ್ ಕೈ ತೊಳ್ದೇ ಹಾಕ್‌ತಿದ್ದೊ. ಎಲ್ಲಾ ಚಾಂಪಂದರ್ ಹಾಕ್‌ತಿತ್ಲೆ. ಅದರ್‌ಲೂ ಹೆಣ್ಮಕ್ಕ ಕಡಾವು ಹಾಕಿದ ಉದಾರ್ಣೆ ಇಲ್ಲೇಲೆತ್ತೇಳಕ್. ಕಡಾವ್ತೇಳ್ರೆ ಮರಂದ ಮಾಡ್ದ ತೆಳುವಾದ ಪಾದರಕ್ಷೆ. ಇಂದ್ ಎಲ್ಲೋ ಕೆಲವ್ ಸ್ವಾಮೀಜಿಗ ಮಾತ್ರ ತೊಟ್ಟವೆ.

ಒಂದ್ ಕಾಲಲಿ ಮಣೆಗೆ ಅಗ್ರ ಸ್ಥಾನ ಇತ್ತ್. ಮೊಕ ನೋಡಿ ಮಣೆ ಹಾಕ್ ತ್ತೇಳ್ವ ಕಾಲ! ಅಂದ್ ಉಂಬೊತಿದ್ದದ್ ಅಡ್ಗೆ ಮನೆಲಿ, ಒಲೆ ಮುಂದೆ! ಮಣೆ ಮತ್ತೆ ಮುಕ್ಕಾಲಿಗೆ ಎಲ್ಲಿಲ್ಲದ ಗೌರವ. 'ಮಣೆ ಹಾಕಿ 'ಕೂರಿ' ತ್ತೇಳಿ ಕೂರುಸ್ತಿದ್ದೋ.'ಯಾರಿಗೆ ಸುರೂಗೆ ಮಣೆ? ಗುಣ ನೋಡಿ ಮಣೆ ಹಾಕ್ ತ್ತೇಳುವ

ಮಾತಿತ್.ನೆಲ್ಲಕ್ಕಿ ನಡುಬಾಡೆಲಿ ಎಡೆ ಇಕ್ಕಿಕೆ, ಮೊದುವೆ ಶಾಸ್ತ್ರಲಿ, ಬಾಣಂತಿ ನಿತ್ ಮೀಯಕೆ, ಕೂಸುನ ಮೀಸಕನ, ಕುದ್ದ್ ಉಂಬಕ್ಕೆ ಅಕ್ಕಿ, ಮೆಣ್ಸ್ ಕಡೆಕನ, ಕಡ್ಕಲ್ ಮುಂದೆಕೂರಿಕೆ, ತಲೆದಿಂಬು ಇತ್ಲರೆ ಮಣೆನೇ ಬೇಕಾಗಿತ್. ಹಿಂದೆಲ್ಲಾ ಮಕ್ಕಳ ಆಟಕ್ಕೆ ಗೊಂಬೆ ಇರ್‌ತಿಲ್ಲೆ. ಹೆಣ್ಣ್ ಮಕ್ಕಳಿಗೆ ಮಣೆನೇ ಗೊಂಬೆ ಆತಿತ್. ಅದರ ಮೀಸುದು ಚೆಂಡಿತೆಗ್ದ್ ಬಟ್ಟೆ ಸುತ್ತಿ ಬೊಟ್ಟು ಹಾಕಿ ಸೊಂಟಲಿ ಕೂರ್ಸಿಕಂಡ್ 'ನನ್ನ ಕೂಸು' ತ ಆಟ ಆಡ್ತಿದ್ದದ್ ಮಣೆ ಒಟ್ಟಿಗೆತ್ತೇಳ್ದು ಮರೆಕಾದ್ಲೆ.

ಮಡೆಗುತ್ತಿ, ಬೋಗುಣಿ, ಎಣ್ಣೆಚರ್ಕ್, ಸುಣ್ಣಕಾಯಿ, ಸುಣ್ಣ ಗುಂಬ, ಉಪ್ಪು, ಉಮ್ಮಿಕರಿ, ಮಡ್ಕೆ, ಮಜ್ಜಿಗೆಗುತ್ತಿ, ನೆಲು, ಬೆಸಗೆ, ಒಲೆತಿಂಟೆ, ಏಣಿ, ಅಟ್ಟ, ನೊಗ, ನೇಗ್ಲ್, ಉಯ್ಯಪಾರ್, ಕಣಿಕೋಲು, ಮೆಂಟೆ, ತಟ್ಟೆ, ಮೆದೆ, ಬೇಟೆ, ಕೊಟ್ಟು, ಕುಕ್ಕೆ, ಹಾರೆ, ಪಿಕಾಸಿ ಹೀಂಗೆ ನೂರಾರ್ ಸೊತ್ತುಗಳೆಲ್ಲ ಪಾರಂಪರಿಕ ವಸ್ತುಗಳೇ.ಇಂದ್ ಎಷ್ಟೋ ಸೊತ್ತುಗ ಸಿಕ್ತಿಲ್ಲೆ, ಪಟನೂ ಇಲ್ಲೆ, ಮಾಹಿತಿನೂ ಇಲ್ಲೆ. ಅಂತವುಗಳ ಬಗ್ಗೆ ಮಾಹಿತಿ ಸಂಗ್ರಹ ಮಾಡಿ ದಾಕಲು ಮಾಡಿ ಪುಸ್ತಕ ರೂಪಲಿ ಹೊರತಾವ ಕೆಲ್ಸನ ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮಾಡ್ತಾ ಇರ್ದು ಶ್ಲಾಘನೀಯ ಕೆಲ್ಸ.

ಸಂಪಾದಕರ ಮಾತ್

ಪಾರಂಪರಿಕ ವಸ್ತುಗ



✍ **ಕುಂಞೇಟಿ ಶಿವರಾಮ ಗೌಡ**
ಕೊಲ್ಲಮೊಗ್ರ ಅಂಚೆ
ಸುಳ್ಯ ತಾಲೂಕು ದ.ಕ. – 574218
ಮೊ: 8762121694

ಪರಂಪರೆ ತೇಳ್ರೆ ಒಂದು ಜನ ಸಮುದಾಯದ ಸಂಸ್ಕೃತಿನ ಒಂದು ಭಾಗ. ಸಂಸ್ಕೃತಿ ಮನುಸ್ಯರ ಸರ್ವ ರಂಗಗಳ ಒಟ್ಟು ಅಬಿವ್ಯಕ್ತಿತ ಹೇಳಕ್. ಪರಂಪರೆನ ಅರ್ತ ಮಾಡಿಕೆ ನಾವು ಹಿಂದೆನ ಕಾಲಲಿ ಕಟ್ಟಿದ ದೇವಸ್ತಾನದ ಶಿಲ್ಪಕಲೆಗ, ಸ್ಮಾರಕಗ, ಲೋಹ ಶಿಲ್ಪ ಕಲೆ, ಮರಂದ ಮಾಡ್ದ ಕಲಾಕೃತಿಗಳ ನೋಡ್ರೆ ಗೊತ್ತಾದೆ. ನೂರಾರು ವರ್ಷಗಳ ಕಲಾಕೃತಿ ನಮ್ಮ ಹಿಂದೆನ ಪರಂಪರೆನ ತಿಳಿಕೆ ಸಾಯ ಮಾಡ್‌ದೆ. ಒಂದು ಹಬ್ಬದ ಆಚರಣೆ ಒಂದೊಂದು ಊರ್‌ಲಿ ಒಂದೊಂದು ಸಂಪ್ರದಾಯ ಪರಂಪರೆ ಮುಕಾಂತ್ರ ಆಚರಣೆ ಮಾಡ್‌ವೆ. ಮೊನ್ಸನ ಜೀವನಲಿ ಶೋಡಸ ಸಂಸ್ಕಾರಗಳ ಆಚರಣೆ ವುಟ್ಟು. ಇದ್ಕೆ ವೈಜ್ಞಾನಿಕ ಬೆಂಬಲನೂ ವುಟ್ಟು. ಇಂತಹ ಆಚರಣೆಗ ಪೀಳಿಗೆಂದ ಪೀಳಿಗೆಗೆ ಬಂದದೆ. ಇದರ ನಾವು ಒಂದು ಪರಂಪರೆಂತ ಹೇಳಕ್ಕ್. ದೇವರ ಮೂರ್ತಿ ಅಲ್ಲರೆ ಪೊಟದ ಮುಂದೆ ದೀಪ ಹೊತ್ತ್‌ಸಿ ಬಜನೆ, ಪ್ರಾರ್ತನೆ ಮಾಡ್‌ವ ಆಚರಣೆಗ ಹಿಂದೆನ ಕಾಲಂದಲೆ ನಡ್ಕಂಡ್ ಬಂದುಟು. ಇಂದ್ ಇದ್ ಒಂದು ಪರಂಪರೆ ಆಗಿ ಮುಂದೆ ಹೋತಾ ವುಟ್ಟು.

ಹುಟ್ಟುಹಬ್ಬದ ದಿನ ಮಾಯಣದ ಬತ್ತಿನ ಹೊತ್ಸಿ ಮತ್ತೆ ಕೆಡ್ಸುವ ಹೊಸ ಪರಂಪರೆ ಸುರುವಾಗುಟು. ನಮ್ಮ ಸಂಸ್ಕೃತಿ ದೀಪ ಹೊತ್ಸಿ ಪ್ರಾರ್ತನೆ ಮಾಡುವ ಪರಂಪರೆ ಎಲ್ಲಾಕಡೆ ಕಂಡದೆ. ಒಂದು ಪದ್ದತಿ ತುಂಬಾ ವರ್ಸಂದ ಆಚರಣೆ ಮಾಡ್ರೆ ಅದ್ಕೆ ಸಮಾಜಲಿ ಪ್ರಚಾರ ಮತ್ತು ಒಪ್ಪಿಗೆ ಸಿಕ್ಕಿದೆ. ಮುಂದೆ ಅದೇ ಒಂದು ಪರಂಪರೆ ಆದೆ.

ಯಾವುದೇ ಪರಿಸ್ತಿತಿಲಿ ಒಂದು ಆಚರಣೆ ಸುರು ಆಗಿ ಒತ್ತಡಂದಾಗಿ ಮುಂದುವರೆವ ವಿಷಯಗಳೂ ಕಂಡ್ ಬಂದದೆ. ಸತಿ ಪದ್ದತಿತ ಒಂದು ಪರಂಪರೆ ಹಿಂದೆ ಇತ್ತ್. ಸಮಾಜಲಿ ಜಾಗೃತಿ ಆ ದಾಂಗೆ ಅದ್ ನಿತ್ತ್ ಹೊತು. ಕೈ ಹಿಡ್ಸ್‌ವ ಮೊದುವೆ ಕೂಡ ಒಂದು ಹೊಸ ಪರಂಪರೆ ಆಗಿ ನಮ್ಮ ಕಣ್ಣಿಗೆ ಕಂಡದೆ. ಇಂದ್ ಎಲ್ಲ ದೇವಸ್ತಾನಗಳಿಗೆ ಹೋವಂಗೆ ಆವುಟು. ಈ ಹೊಸ ಪರಂಪರೆನ ಜೆನ ಸರ್ವಸಮ್ಮತಂದ ಸ್ವೀಕಾರ ಮಾಡ್ಯೊಳ.

ನಮ್ಮ ದೇಶಲಿ ಸಾಂಸ್ಕೃತಿಕ ಪರಂಪರೆ ಲಾಯ್ಕ್‌ಲಿ ಬೆಳ್ದುಟು. ಒಳ್ಳೆಯ ವಿಚಾರಗ ಪ್ರಪಂಚದ ಯಾವ ಪ್ರದೇಶಲಿದ್ದರೂ ಅದರ ಸ್ವಾಗತ ಮಾಡುವ ಒಳ್ಳೆ ಪರಂಪರೆ ನಮ್ಮ ಸಂಸ್ಕೃತಿಲಿ ಸೇರಿಕಂಡ್ ವುಟ್ಟು. ಪರಂಪರೆಂತ ಹೇಳ್ರೆ ಬರೀ ಆಚರಣೆ ಪದ್ದತಿಗ ಮಾತ್ರ ಅಲ್ಲ. ಪರಂಪರೆ ಒಂದು ಜನಾಂಗದ ಹಿಂದೆ

ಕಾಲದ ಸಾದನೆಗಳ ಒಂದು ಮುಂದುವರಿಕೆಂತ ಹೇಳಕ್. ನಮ್ಮ ದೇಶಲಿ ಇರುವ ಪಾರಂಪರಿಕ ಸೊತ್ತುಗ, ದೇವಸ್ತಾನದ ಶಿಲ್ಪಕಲೆ, ನೃತ್ಯ, ಸಂಗೀತ, ಸ್ಮಾರಕಗ ತುಂಬಾ ಕಡೆಕಂಡ್ ಬಂದದೆ. ಈ ಪರಂಪರೆ ಕಾಲಕಾಲಕ್ಕೆ ಪರಿಸ್ತಿತಿಗೆ ಹೊಂದಿಕಂಡ್ ಮುಂದುವರಿತಾ ಹೊದೆ. ನಮ್ಮ ದೇಶಲಿದ್ದ ಎಸ್ಟೋ ಪಾರಂಪರಿಕ ಲೋಹದ ಮೂರ್ತಿಗ ಶಿಲಾ ಮೂರ್ತಿಗ ಕಳ್ಳತನ, ದರೋಡೆ ಮೂಲಕ ದಾಳಿಕೋರರ ಪಾಲಾವುಟ್, ಚರಿತ್ರೆ ಮಾತಾತ್. ಅಂತ ಪಿರಾಕ್‌ನ ಸೊತ್ತುಗ ವಿದೇಸಲಿ ಬಾರೀ ಬೆಲೆಗೆ ಮಾರಾಟ ಆದೆ. ಹೊರ ದೇಶಗಳ ವಸ್ತು ಸಂಗ್ರಹಾಲಯಲಿ ನಮ್ಮ ದೇಶದ ತುಂಬಾ ಪಾರಂಪರಿಕ ಸೊತ್ತುಗ ಒಳೊ. ಕಳ್ದ ಏಳೆಂಟ್ ವರ್ಸಲಿ ನೂರಾರ್ ಪಾರಂಪರಿಕ ವಸ್ತುಗಳ ಸರಕಾರ ವಿದೇಶಂದ ಹಿಂದೆ ತಂದುಟು. ಇದೊಂದು ದೊಡ್ಡ ಸಾದನೆಂತ ನಾವು ಹೆಮ್ಮೆ ಪಡೊಕು.

ಪಾರಂಪರಿಕ ವಿಚಾರಲಿ ನಮ್ಮ ನಡೆ–ನುಡಿ, ವೇಸ ಬೂಷಣ, ಆಹಾರ ಪೊದ್ದತಿ, ದಾರ್ಮಿಕ ನಡವಳಿಕೆ, ಜೀವನ ಪದ್ದತಿ, ರಾಜಕೀಯ ಆಗು–ಹೋಗುಗ ಆರ್ತಿಕ ಮಟ್ಟ ಎಲ್ಲಾ ಕಂಡ್ ಬಂದದೆ.

ಈಗ ನಾವು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನವು ಪಾರಂಪರಿಕ ಸೊತ್ತುಗಳ ಪರಿಚಯ ಮಾಡ್‌ವ ಪ್ರಯತ್ನ ನಿಜಕ್ಕೂ ಒಂದು ಐತಿಹಾಸಿಕ ಪ್ರಯತ್ನಂತ ಹೇಳಕ್. ನಮ್ಮ ಹಿರಿಯವು ಉಪಯೋಗ ಮಾಡ್ತಿದ್ದ (ಇಂದ್ ಬಳಕೆಲಿ ಇಲ್ಲೆ) ಸೊತ್ತುಗಳ ಚಿತ್ರ ಸಮೇತ ಸಣ್ಣ ವಿವರಗಳ ಕೂಡ ಕೊಟ್ಟೊಳೊ. ಇಲ್ಲಿ ಪ್ರಕಟ ಆವ ಸೊತ್ತಗಳ್‌ಲಿ ಕೃಷಿ ಉಪಕರಣಗ, ಅಡುಗೆ ಪಾತ್ರೆಗ, ಕುಲ ಕಸುಬಿನ ಸೊತ್ತುಗ, ಆಯುಧಗ ಅಲ್ಲದೆ ಹತ್ತ್ ಹಲವು ಅಪರೂಪದ ವಸ್ತುಗಳ ಚಿತ್ರ ಸಮೇತ ಪ್ರಕಟಿಸಿ ಹೊಸ ಪೀಳಿಗೆಗೆ ನಮ್ಮ ಪರಂಪರೆನ ಪರಿಚಯ ಮಾಡ್‌ವ ಕೆಲ್ಸ ಮೆಚ್ಚುವಂತದ್ದ್. ಇದ್ ಪರಿಪೂರ್ಣ ಅಲ್ಲ ಇನ್ನೂ ಹೊಸ ಹೊಸ ಪಾರಂಪರಿಕ ಸೊತ್ತುಗ ಕಣ್ಣ್ ತಪ್ಪಿ ಹೋಗಿರ್ದು. ಈ ಮೂಲಕ ಜೆನಗಳ ಮನ್ಸ್‌ಲಿ ಹೊಸ ಉತ್ಸಾಹ, ಪರಂಪರೆಗೆ ಗೌರವ ಮತ್ತೆ ನಮ್ಮ ಹಿರಿಯರ ಬಗ್ಗೆ ಅಬಿಮಾನ ಬೆಳೆಕೆ ಮಾದ್ಯಮ ಆದ್ರೆ ಈ ಪ್ರಯತ್ನ ಸಾರ್ತಕ ಆದೆ.

ಸಂಪಾದಕರ ಮಾತ್

ಅರೆಬಾಸೆ ಪಾರಂಪರಿಕ ಸೊತ್ತು ಮತ್ತೆ ಪದ ಸಂಪೊತ್ತು



✍ ಡಾ. ವಿಶ್ವನಾಥ ಬದಿಕಾನ
ಸಹಾಯಕ ಪ್ರಾಧ್ಯಾಪಕರು
ಸಂತ ಅಲೋಶಿಯಸ್ ಕಾಲೇಜು(ಸ್ವಾಯತ್ತ), ಮಂಗಳೂರು
ಮೊ: +91 9449615474

ಬಾಸೆ ಒಂದರ ಸಮಗ್ರ ಪದಕೋಸನ ತಯಾರ್ ಮಾಡೊಕಾರೆ ಜೆನರ ಮಾತ್ ಕತೆಲಿರ್‌ವ ಮಾಹಿತಿಗಳ ಕೂಡಿ ಹಾಕೊಕಾದೆ. ಈ ನೆಲೆಲಿ ಅರೆಬಾಸೆನ ಪಾರಂಪರಿಕ ಸೊತ್ತ್‌ಗಳ ಪದ ಸಂಪೊತ್ತ್‌ನ ಚಿತ್ರ ಸಮೇತ ಉಳ್ಳ್‌ವ ಕೆಲ್ಸನ ಅಕಾಡೆಮಿಯವು ಮಾಡಿಕೆ ಹೊರ್‌ಟೊಳೊ. ಪಾರಂಪರಿಕ ಸೊತ್ತ್ ತೇಳ್ದು ಅರೆಬಾಸಿಕರ ಬೌತಿಕ ಮತ್ತೆ ಸಾಮಾಜಿಕ ಪರಿಸರನ ಪ್ರತಿಪಲಿಸಿದೆ. ನಿತ್ಯ ಜೀವನಲಿ ಮತ್ತೆ ಆಚರಣೆಲಿ ಸುಮಾರ್ ಸೊತ್ತ್‌ಗಳ ಬಳ್ಸಿಕಂಡ್ ಬಂದೊಳ.

ಹೊಸ ತಲೆಮಾರ್‌ನ ಜೆನಂಗ ಪಂಡ್‌ನ ಸಂಗತಿಗಳ ಮಹತ್ವನ ತಿಳ್ಕಂಬ ಸುದ್ದಿಗೂ ಹೋಗದ ಕಾಲ ನಿರ್ಮಾಣ ಆಗುಟು. ಅಂತದರ್‌ಲಿ ಅಕಾಡೆಮಿ ಅರೆಬಾಸೆ ಮಾತಾಡ್‌ವ ಸಮುದಾಯದ ಜೆನರ ಗುಮನಲಿ ಬಾವ ಹಲವ್ ವಿಚಾರಗ, ಆಸಕ್ತಿಗ ಮತ್ತೆ ಅವರ ದಿನೋಳುನ ವ್ಯವಹಾರದ ಸೊತ್ತ್‌ಗಳ ಕೂಡ್ಸಿ, ಸಂಸೋದನೆ ಮಾಡಿ ನೋಡ್‌ವ ಪ್ರಯತ್ನನ ಮಾಡ್ನೊಳೊ. ಬಿಳಿನೆಲೆನ ಜಯಪ್ರಕಾಶ್ ಮೋಂಟಡ್ಕ ಇವು ಸುಬ್ರಹ್ಮಣ್ಯ ಮಾಸ್ತ್ರ ಕದಿಕೆಂದ ಮತ್ತೆ ಪಾರ್ವತಿ ತೋಟಂಬೈಲ್ ಅವರ ಸಂಗ್ರಹಂದ ಕೆಲವೊಂದ್ ಸೊತ್ತ್‌ಗಳ ಹೆರ್ಕಿ ಒಟ್ಟ್ ಮಾಡಿ ಕೊಟ್ಟೊ. ಅದರ ಎಂ.ಜಿ. ಕಜೆ, ಬಾರಿಯಂಡ ಜೋಯಪ್ಪ ಮತ್ತೆ ಕುಂಞಟ್ಟಿ ಜಟ್ಟಿ ಶಿವರಾಮ ಗೌಡ ತೇಳುವ ಮೂರ್‌ಜೆನ ಮಾಸ್ತ್ರಗ ಸೇರಿ ನೂರಾರ್ ಲೇಕನಂಗಳ ಬರ್ದೊ. ಲೇಕನಂಗಳ ಯಾರೂ ಬರಿಯಕ್, ಆದರೆ ಇವ್ ಈ ಸೊತ್ತ್‌ಗಳ ಬೌತಿಕ ಮತ್ತೆ ಸಾಂಸ್ಕೃತಿಕ ನೆಲೆಕಟ್ಟ್‌ನ ಕಟ್ಟಿ ಕೊಟ್ಟೊಳೊ.

ಈ ಹೊತ್ತಗೆಲಿ ಇರ್‌ವ ಎಲ್ಲ ಲೇಕನಂಗಳ ಸೊತ್ತ್‌ಗ ಆಯಾ ಪ್ರದೇಸಕ್ಕೆ ಸೀಮಿತ ಅನ್ಸಿರೆನು ಅರೆಬಾಸೆ ಮಾತಾಡ್‌ವ ಹಕ್ಕೆಲೆನ ಕನ್ನಡ, ಕೊಡವ, ತುಳು, ಬ್ಯಾರಿ, ಮಲೆಯಾಳಿ ಹೀಂಗೆ ಎಲ್ಲ ಜಾಗೆಲೂ ಬಳ್ಸ್‌ವ ಸೊತ್ತ್‌ಗಳ ಉಪಯೋಗ ಒಂದೇ ಆಗಿದ್ದದೆ. ಅದರ ರಚನೆ, ಬಳಸ್‌ವ ಸಂದರ್ಬಗ ಬೇರೆನೇ ಇದ್ದದೆ. ಅಂತ ರಚನೆಗೆ ಸಮ್ಮಂದ ಇರ್‌ವ ಇಚಾರಗಳ ಲೇಕನಲಿ ಚರ್ಚೆ ಮಾಡ್ನೊಳೊ. ಉದಾರ್‌ಣೆಗೆ, 'ಕೇಪುನ ಬೆಡಿ' ತೇಳ್ವ ಒಂದ್ ಸೊತ್ತ್‌ಗೆ ಸುಮಾರ್ ಬಾಗಗ ಒಳ. ಅವೆಲ್ಲವೂ ಅರೆಬಾಸೆನ ಪಾರಿಭಾಷಿಕ ಪದಗ. ಹೀಂಗೆ ಬೇಸಾಯದ ನೊಂಜ, ನೇಗ್ಲ್ ಇಂತ ಬೌತಿಕ ಸೊತ್ತುಗಳ ಹಿಂದೆ ಇರ್‌ವ ಪರಿಸ್ರಮ, ಆಲೋಚನೆಗ ಅರೆಬಾಸೆ ಸಂಸ್ಕೃತಿ ಮತ್ತೆ ಪರಿಸರನ ಕಟ್ಟಿಕೊಟ್ಟದೆ.

ಎಡ್ವರ್ಡ್ ಸಫೀರ್ (Edward Sapir) ತೇಳ್‌ವ ಅಮೇರಿಕಾದ ಭಾಷಾ ವಿಜ್ಞಾನಿ, 'ಯಾದೇ ಬಾಸೆನ

ಮಾತಾಡ್‌ವ ಒಂದ್ ಸಮುದಾಯತ ಇದ್ದದೆ. ಆ ಸಮುದಾಯದ ಸಬ್ದಕೋಶ ನಾವ್ಗೆ ಸಿಕ್ಕಿರೆ ಆ ಸಮುದಾಯನ ಬೌತಿಕ ಪರಿಸರ, ಬಾಸಿಕ ಸಂಸ್ಕೃತಿನ ಲಕ್ಷಣಂಗಳ ತಿಳ್ಕಂಬಕೆ ಸಾದ್ಯ ಆದೆ'ತ ಹೇಳ್ದಿ. ಅರೆಬಾಸೆ ಮಾತಾಡ್‌ವ ಸಮುದಾಯದ ಒಳೆಗೆನ ನೂರಾರ್ ಪಂಡ್‌ನ ಪಾರಂಪರಿಕ ಪದಗ ನಮಗೇನಂದ ಜಾರಿ ಹೋಕಂಡ್ ಉಟ್ಟು. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಂದ ಪಾರಂಪರಿಕ ಸೊತ್ತ್‌ಗಳ ನೆಂಪು ಇಸಿಕಂಡ್ ಉಪಯೋಗ್‌ಸಿ ಉಳ್ಸಿ ಬೆಳ್ಸಿಕೆ ಉಪಕಾರ ಆಗಲಿಂತ ಈ ಪ್ರಯತ್ನ ಮಾಡ್ಯೊಳೊ. ಇಂತ ಇನ್ನಷ್ಟ್ ಸೊತ್ತ್‌ಗಳ ಕೋಸ ಮುಂದೆ ಸಮುದಾಯದ ಮೂಲಕ ರಚನೆ ಆಗಿ ಬರಲಿ.

ಸಂಪಾದಕರ ಮಾತ್

ಪಾರಂಪರಿಕ ವಸ್ತ್‌ಗಳೇ ನಮ್ಮ ಹಿರಿಯರ ಬುದ್ಧಿವಂತಿಕೆ ಮತ್ತೆ ಶ್ರಮಕ್ಕೆ ಸಾಕ್ಷಿ



✍ **ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು**
ಪ್ರಾಂಶುಪಾಲರು
ಪೊಂಪೈ ಕಾಲೇಜು, ಐಕಳ, ದ.ಕ. – 574141
ಮೊ: +91 9448216070

ಅರೆಬಾಸೆ ಮಾತಾಡುವ ಪ್ರದೇಸಗಳ ಮತ್ತೆ ಸಮುದಾಯಗಳ ಕಲೆ, ಸಂಸ್ಕೃತಿ, ಆಚಾರ ವಿಚಾರಗ ಬೇರೆಯವರದಷ್ಟೆ ಗಟ್ಟಿ ಮತ್ತೆ ಐಸಿರ ಇರ‍್ದು ಕಂಡ್ ಬಂದದೆ. ನಮ್ಮ ಬಾಸೆ ಎಷ್ಟ್ ಲಾಯ್ಕ್ ಉಟ್ಟೊ ಪರಂಪರೆನೂ ಅಷ್ಟೇ ಲಾಯಿಕ್ ಉಟ್ಟು. ಪರಂಪರೆನ ಉಳ್ಸಿ ಮುಂದಿನ ಜನಾಂಗಕ್ಕೆ ತಿಳ್ಸುವ ಮತ್ತೆ ಕೊಡುವ ಕೆಲ್ಸ ಕಷ್ಟ. ವಿಜ್ಞಾನ–ತಂತ್ರಜ್ಞಾನ ಮುಂದುವರ‍್ದಂಗೆ ಹಳೆದೆಲ್ಲ ಕಾಣೆ ಆದೆ. ಅದರ ಉಳ್ಸಿಕೆ ಪುಸ್ತಕ ಮತ್ತೆ ವಸ್ತ್ ಸಂಗ್ರಹಾಲಯಗಳ್‌ಂದ ಮಾತ್ರ ಸಾಧ್ಯ. ‘ಪಾರಂಪರಿಕ ವಸ್ತುಕೋಶ’ ತೇಳುವ ಪುಸ್ತಕ ರೂಪಲಿ ಪಾರಂಪರಿಕ ವಸ್ತ್ ಗಳ ಮಾಹಿತಿ ಸಂಗ್ರಹಿಸುವ ಕೆಲ್ಸಕ್ಕೆ ದೈರ ಮಾಡ್ದೊವು ಅರೆಬಾಸೆ ಅಕಾಡೆಮಿ ಅಧ್ಯಕ್ಷರಾದ ಶ್ರೀಮಾನ್ ಲಕ್ಷಿನಾರಾಯಣ ಕಜೆಗದ್ದೆವು. ಈ ‘ಪಾರಂಪರಿಕ ವಸ್ತುಕೋಶ’ ರಚನೆ ಅರೆಬಾಸೆ ಅಕಾಡೆಮಿ ಸಣ್ಣ ಸಮಯಲಿ ಹಾಕಿಕೊಂಡ ದೊಡ್ಡ ಯೋಜನೆ. ಇದರ ಬಾರನ ಹೊತ್ತ್‌ಕಂಡ್ ಕೆಲ್ಸ ಮಾಡ್ದವು ಶ್ರೀಮಾನ್ ಜಯಪ್ರಕಾಶ ಮೊಂಟಡ್ಕ ಇವು. ‘ಗೂಂಜಿಂದ ಬುಡಿಕಿಲೆ – ರಚ್ಚೆಂದ ಬುಡಿಕಿಲೆ’ ತೇಳುವ ಜಾಯಮಾನದ ಅಧ್ಯಕ್ಷರ್ ಅದರ ಹಿಂದೆಂದ ಭಗೀರಥ ಪ್ರಯತ್ನ ಮಾಡೆಳೊ.

ಈ ಪುಸ್ತಕಕ್ಕೆ ಬೇಕಾದ ವಿಷಯ ಸಂಗ್ರಹಕ್ಕೆ ಮುಕ್ಯ ಕಾರಣಕರ್ತರ್ ಸುಬ್ರಹ್ಮಣ್ಯ ಗೌಡ ಕುಂತೂರು. ಅವರ ಸಂಗ್ರಹಲಿ ಇದ್ದ ವಸ್ತುಗಳ ಬಗ್ಗೆ ಹಾಂಗೆ ಬೇರೆ ಕಡೆಂದ ಸಿಕ್ಕಿದ ಮಾಹಿತಿ ಸಂಗ್ರಹ ಮಾಡಿ ಬರಹಗಳ ಬರ್ದ್‌ಕೊಟ್ಟೊವು ಶ್ರೀಮಾನ್ ಎಂ.ಜಿ. ಕಜೆ, ಶ್ರೀಮಾನ್ ಬಾರಿಯಾಂಡ ಜೊಯಪ್ಪ ಮತ್ತೆ ಕುಂಞೇಟಿ ಶಿವರಾಮ ಮಾಸ್ಟ್ರ. ತೋಟಂಬೈಲು ಪಾರ್ವತಿಯವು ಸಹ ಮಾಹಿತಿ ಕೊಟ್ಟ್ ನಮ್ಮ ‘ವಸ್ತುಕೋಶ’ ರಚನೆ ಆಕೆ ಸಹಾಯ ಮಾಡೆಳೊ. ಇಲ್ಲಿರುವ ಬರಹಗ ಪರಿಪೂರ್ಣ ಏನೂ ಅಲ್ಲ. ಇದರ ಇನ್ನಷ್ಟ್ ವಿಸ್ತಾರ ಮಾಡಿಕೆ ಮುಂದೆ ಅವಕಾಸ ಉಟ್ಟು. ಇದರ‍್ಲಿ ದಾಕಲೆ ಆಗದ ನಮ್ಮ ಹಿರಿಯೊವು ಬಳ್ಸ್‌ತ್ತಿದ್ದ ಎಷ್ಟೊ ಪಾತ್ರೆ – ಪಗಡೆಗ, ಕೃಷಿ ಸೊತ್ತುಗ ಇಂದ್ ಅಟ್ಟ ಸೇರೆಳೊ, ಅಟ್ಟ ಇಲ್ಲದೊವು ಮೊಣ್ಣಡಿಗೆ – ಗುಜಿರಿಗೆ ಹಾಕ್ಯಳೊ. ಮುಂದೆನ ದಿನಗಳ್‌ಲಿ ಈ ಪಾರಂಪರಿಕ ವಸ್ತುಕೋಶಕ್ಕೆ ಬುಟ್ಟುಹೋದ ಇನ್ನಷ್ಟ್ ವಿಷಯಗಳ ಸೇರ್ಸಿಕಂಡ್, ಇರುವ ಬರಹಗಳ ವಿಸ್ತರಿಸಿಕಂಡ್ ಇನ್ನೂ ಲಾಯಿಕ್‌ನ ಪುಸ್ತಕನ ಹೊರತಾಕೆ ಸಾದ್ಯ ಉಟ್ಟು.

ನಾ ಬರ‍್ದ ಕೆಲವು ಲೇಕನಗಳಿಗೆ ನಂಗೆ ತುಂಬಾ ಮಾಹಿತಿ ಕೊಟ್ಟೊವು ಶ್ರೀ ಧರ್ಮಪಾಲ ಗೌಡ ಕರಂಗಲ್ಲು, ಶ್ರೀ ತೇಜ ಕುಮಾರ ಕರಂಗಲ್ಲು, ಶ್ರೀ ಗಂಗಾಧರ ಗೌಡ ದೊಡ್ಡಕಜೆ, ಅರಣ್ಯ ವೀಕ್ಷಕ ನೇಮಿರಾಜ ಗೌಡ ಕೊತ್ನಡ್ಕ, ಶ್ರೀಮತಿ ಭುವನೇಶ್ವರಿ ಕರಂಗಲ್ಲು ಮತ್ತೆ ಕರಂಗಲ್ಲು ದೊಡ್ಡಕಜೆ ಬಾಗದ ನನ್ನ

ಸಂಬಂಧಿಕರ್. ಅವರಕ್ಕಲೆ ತುಂಬಾ ವಿಸಯಗ ಒಳೊ. ಇವರ್ಲಿ ಹೆಚ್ಚಿನ ಹಿರಿಯೊವುಕೆ ಮೊಂದ್ರಿ, ಬೆಂಡ್‌ಕುಕ್ಕೆ, ಹೆಡೆಗೆ, ಕೂಂಟೆಗೆ, ಕೂಳಿ, ಕಿಡಿಂಜೋಳ್, ಮಡ್ಲ್‌ತಟ್ಟಿ, ಬಳದ ಕಾವುಲಿ ಈ ತರದ ಅವುಕೆ ದಿನಂಪ್ರತಿ ಬೇಕಾದ ಬೇರೆ ಬೇರೆ ಸೊತ್ತುಗಳ ಮಾಡಿಕಂಬ ಹಿಕ್‌ಮತ್ ಗೊತ್ತುಟ್ಟು.

ಈ ಪುಸ್ತಕಲಿ ಇರುವ ವಿಸಯಗ ನಮ್ಮ ಹಿರಿಯೊವುಕೆ ಹೊಸ್ತೇನಲ್ಲ. ಆದರೆ ಅವುಕೆ ಈ ಪುಸ್ತಕನ ಓದಿಕನ ತಾವು ಬೇಡಾಂತೇಳಿ ಇಟ್ಟು ಬುಟ್ಟ (ಬಿಸಾಡ್ದ) ಸೊತ್ತುಗಳ ಬಗ್ಗೆ ಪಶ್ಚತಾಪ ಅದು ಕಂಡಿತ. ಈಗ ಸಹ ಸುಳ್ಯ ಸುತ್ತ ಮುತ್ತ ಹಳ್ಳಿಲಿ ಹೋಕನ ಎಷ್ಟೊ ಉಪಯೋಗ ಇಲ್ಲದ ಪಾರಂಪರಿಕ ಸೊತ್ತುಗಳ ಮೂಲೆಗೆ ಹಾಕಿಸಿದ್ ಕಂಡ್ ಬಂದದೆ. ಅದರ ಹಂಗೆನೆ ಮೂಲೆಗೆ ಹಾಕದೆ, ಲಾಯಿಕಲಿ ದೂಳು–ಹೊಗೆ ತೊಳ್ದ್, ಮರದೆಣ್ಣೆ – ಪಾಲಿಸ್ ಕೊಟ್ಟ್ ರಕ್ಷಣೆ ಮಾಡಿ ನಮ್ಮ ಹಿರಿಯವರ ನೆಂಪು ಆ ಮೂಲಕ ಇರ್ವಂಗೆ ಮಾಡೊಕು. ಹಿರಿಯವು ನಾವುಗೆ ಬುಟ್ಟು ಹೋದ ಅಮೂಲ್ಯ ಸಂಪತ್ತ್‌ಗಳ ರಕ್ಷಣೆ ಮಾಡ್ದರ ಮೂಲಕ ಅವುಕೆ ಗೌರವ ಸಲ್ಲಿಸಮೊ.

• • •

ಸಂಪಾದಕರ ಮಾತ್

ಅರೆಬಾಸೆನ ಸೊತ್ತು ಸಂಸ್ಕೃತಿ



✍ **ಭರತೇಶ ಅಲಸಂಡೆಮಜಲು**
ಬೋಜಪ್ಪ ಗೌಡರ ಮಗ, ಅಲಸಂಡೆ ಮಜಲು ಮನೆ,
ಪೆರ್ಲಂಪಾಡಿ ಅಂಚೆ, ಕೊಳ್ತಿಗೆ ಗ್ರಾಮ, ಪುತ್ತೂರು
ಮೊ: +91 9008027271

ಒಂದ್ ಬಾಸೆನ ಮೂಲಸತ್ತ್ವ ಆಯಾ ಸಮುದಾಯದ ಸಂಸ್ಕೃತಿನ ಪಾರಂಪರಿಕ ಗ್ಯಾನಲಿ ಉಟ್ಟು. ಅವು ಬಾಯಿ ಮಾತ್‌ನ ಮುಕೇನ ಸಂಸ್ಕೃತಿನ ಕಾಪಾಡಿಕಂಡ್ ಬಂದಿದ್ದದೆ. ಪಂಡ್‌ನ ಕಾಲಂದಲೇ ಬಂದ ಮೊನ್ನನ ಜನಪದ ಗ್ಯಾನನ ಅರ್ತ ಮಾಡಿಕೆ ಮತ್ತೆ ಅದ್ಕೆ ರೂಪ ಕೊಡಿಕೆ ಪರಂಪರೆನ ಅದ್ಯಯನಂದ ಸಾದ್ಯ ಆದೆ. ನಮ್ಮ ಹಿರಿಯರ್ ಏನ್ ಮಾಡ್ತಿದ್ದೊ? ಹೇಂಗೆ ಬೊದ್ಕಿದೊ? ನಾವ್ಎಂತ ಮಾಡ್ತ ಒಳೊ? ಹೇಂಗೆ ಬೊದ್ಕ್‌ತ ಒಳೊ? ಇಂತದರ ತಿಳ್ಕೊಂಬಕೆ 'ಸೊತ್ತ್‌ಜನಪದ' ತೇಳ್ವ ಹೊಸ ನೆಲೆಲಿ ಪಾರಂಪರಿಕ ಸೊತ್ತ್‌ನ ನೊಡಕ್. ಇದ್ ಅರೆಬಾಸೆ ಸಂಸ್ಕೃತಿನ ಸಮ್ಮೃದ್ದ ತೆನ ಸೋದನೆ ಮತ್ತೆ ಸೋದಿಸಿ ಸಂರಕ್ಷಿಸಿ ಒಳ್ಳಿ ಬೆಳ್ಸುವ ಕೆಲಸ ಮಾಡ್ದೆ.

ಯಾದೇ ಸೊತ್ತ್‌ಗೆ ಜೀವನ ಕ್ರಮಲಿ ಅದರ್ದೆ ಒಂದ್ ಹಿನ್ನೆಲೆ, ಇತಿಯಾಸ ಇದ್ದದೆ. ಜನಂಗಳ ಆಹಾರ ಕ್ರಮಂಗ, ಹಳ್ಳಿ ಮೊದ್ದ್, ದಿನೋಳುನ ಜೀವನಕ್ರಮ ಅಡೆಂಗಿದ್ದದೆ. ಪಾರಂಪರಿಕ ಸೊತ್ತ್‌ಗಳ ಹೆಸ್ರ್‌ಲಿ ಅರೆಬಾಸೆ ಸೊತ್ತ್ ಸಂಸ್ಕೃತಿ ವಿಸೇಸ ದ್ವನಿಮಾ, ದನಿ ಬದಲಾವಣೆ, ಪ್ರಾದೇಸಿಕ ವ್ಯತ್ಯಾಸ ಕಾಂಬಕೆ ಸಿಕ್ಕಿದೆ. ಹೀಂಗೆ ಸಂಸ್ಕೃತಿನ ಸಮ್ಮಂದ ಇರ್‌ವ ಇಚಾರಗ ಸೇರಿಕಂಡ್ ಸೊತ್ತ್ ಸಂಸ್ಕೃತಿನ ಸ್ವರೂಪದ ಗುರ್ತನ ಸಂಕೇತ, ರಚನೆ ಅಲ್ಲರ್ ಆಚರಣೆ ನೆಲೆಲಿ ನೋಡಿಕಾದೆ. ತಿಂಡಿ ತಿನ್ಸ್‌ನ ಹಾಕಿಸ್‌ವ ಮತ್ತೆ ಗೆಂಜಿ ಬೊಗ್ಗುಸ್‌ವ 'ಮರ್ಚಟೆ' ಪಂಡ್ ನವ್ಕೆ ಸಾಂಸ್ಕೃತಿಕ ಸೊತ್ತಾಗಿತ್ತ್. ಆ ಪದದ ಮೂಲ ನೋಡ್ರೆ ಹಿಂದೆನವು ಮರದ ಬೀಣೆನ ಕೆತ್ತಿ ಮಾಡ್ದ ಚಪ್ಪಟೆ ಮತ್ತೆ ಉರುಟ್ ಅಗಿ ಕೆತ್ತಿದ ಸೊತ್ತ್. ಹಂಗಾಗಿ ಮರ್ಚಟೆತ ಅದರ ರೂಪಂದ ಬಂದ ಹೆಸ್ರ್ ಆಗಿರ್ದು. 'ನೇಕೆ' ತೇಳ್‌ವ ಪದ, ಇದ್ ಬಟ್ಟೆ ಅಲ್ಲರ್ ಕತ್ತಿನ ನೇಲ್ಸಿಕೆ ಬೇಕಾದ ಸೊತ್ತ್. ಇದ್ ನೇಲುವ ಕೋಲು. ಹಂಗಾಗಿ ನೇಲು ಪದದ'ನೇ ಮತ್ತೆ ಕೋಲುಪದದ' ಕೋ'ಪೂರ್ವಅಕ್ಷರ ಒಟ್ಟು ಸೇರಿ ನೇಕೆ ಅಗಿರ್ದು. ಹೊಸಕ್ಕಿ ಗೆಂಜಿ ಇಕ್ಕಿಕೆ ಹೊಸ್ತ್‌ನ ದಿನ ಮಾತ್ರ ಗೆಂಜಿ ಸೆಡೆನ ಬಳ್ಸ್‌ವೆ. ಬಾಳ್ವಿಕೆ ಮತ್ತೆ ಉಪಯೋಗದ ನೆಲೆಲಿ ಹಲ್ಸ್‌ನ ಮರಂದ ಮಾಡ್ದ ಸೆಡೆಗೆ ಚಿತ್ರ ಕೆತ್ತಿ, ಚುಕ್ಕಿ ಹಾಕಿ ಕಲಾತ್ಮಕ ರೂಪ ಕೊಟ್ಟವೆ. ಹೀಂಗೆ ಒಂದ್ ಸೊತ್ತ್‌ನ ಸಮುದಾಯದ ಆಚರಣೆನ ಪ್ರತಿಬಿಂಬಿಸಿವೆ. ಇಂತವೆಲ್ಲ ಈ ಪಾರಂಪರಿಕ ಸೊತ್ತ್‌ನ ಸಂಪುಟಲಿ ಸಾಂಸ್ಕೃತಿಕ ರಾಯಬಾರಿಗ ಆದವೆ.

'ಅರೆಭಾಷೆ ಪಾರಂಪರಿಕ ವಸ್ತು ಕೋಶ' ಶೈಕ್ಷಣಿಕ ಶಿಸ್ತ್‌ನ ಸಾಂಸ್ಕೃತಿಕ ಮತ್ತೆ ಸಾಮಾಜಿಕ ಮಹತ್ವ ಪಡೆವ ಕೋಸ ಆದು. ಜನಪದ ಗೇನನ ಒಂದ್ ಪಾಲ್ ಇಲ್ಲಿ ಉಟ್ಟು. ಬರ್‌ವ ದಿನಗಳ್‌ಲಿ ಅರೆಬಾಸೆನ ಜಾನಪದ ಅದ್ಯಯನ ಮಾಡುವವ್ಕೆ ಅಕಾಡೆಮಿ ಕೊಡ ಮಾಡ್ವ ದೊಡ್ಡ ಕೊಡ್ಗೆ ಆದು. ಅರೆಬಾಸೆ ಭಾಷಿಕ ಮತ್ತೆ

ಜಾನಪದೀಯ ಇತಿಯಾಸನ ರಚಿಸಿಕೆ ಈ ಸಂಪುಟ ಕೊಟ್ಟ ಗ್ರಾಂತಿಕ ಆದಾರಗ ಸಾಕ್ಷಿಯಾದವೆ. ಬಾಯಿ ಮಾತ್‌ನ ಇತಿಯಾಸನ(Oral History) ಪುಸ್ತಕ ರೂಪಕೆ ತಂದ್ 'ಸೊತ್ತ್ ಸಂಸ್ಕೃತಿ'ನ ಮುಂದೆನ ಪೀಳಿಗೆಗೆ ಸಾಗ್ಲುದು ಒಂದ್ ಕುಸಿನ ಕೆಲ್ಸ. ಈ ಸಂಪುಟ ದ್ರಾವಿಡ ಬಾಸೆನ ಸಂಸೋದನೆಲಿ ಮತ್ತೆ ಬೇರೆ ಬಾಸೆಗಳ ಜಾಗತಿಕ ಪಂತಲಿ ದೇಸಿ ಬಾಸೆಯಾದ ಅರೆಬಾಸೆ ಮತ್ತೆ ಅದರ ಸಂಸ್ಕೃತಿನ ಮೂಲ ಹುಡ್ಕಿ ಬೆಳ್ಸುವ ಆಶಾದಾಯಕ ಬೆಳವಣಿಗೆಗೆ ದಾರಿಯಾಗಲಿ.

ಸಂಪಾದಕರ ಮಾತ್

ಕದಿಕೆ ಕಟ್ಟಿಕನಾ



✍ **ಸುಬ್ರಹ್ಮಣ್ಯ ಗೌಡ ಕೆ.ಜಿ.**
ವಿಟ್ಲ, 'ಗಿರಿಸುಮ ನಿಲಯ' ಕುಂತೂರು,
ಕಡಬ ತಾಲೂಕು.
ಮೊ: +91 9448901953

"ಐತಿಹಾಸಿಕ ನೆಲೆಗಟ್ಟ್‌ಲಿ ವರ್ತಮಾನದ ಅನುಬವಲಿ ಬವಿಸ್ಯನ ಕಟ್ಟೊಕು. ಇತಿಹಾಸ ಮರೆತವಂಗೆ ಬವಿಸ್ಯಇಲ್ಲೆ" ತ ಹಿರಿಕರ ಅನುಬವದ ಮಾತ್. ಬದಲಾದ ಕಾಲಗಟ್ಟಲಿ ಪೂರ್ವ ಪರಂಪರೆನ ಹಾಂಗೇನೇ ಉಳ್ಸಿಕೆ ಬಾರೀಕಷ್ಟ ಉಟ್ಟು. ಅದರ್ಲಿನೂ ನಾವು ತಿಂಬಕಾವ ಬೆಳೆಗಳ ಕೃಷಿ ಪೊದ್ದತಿ ಕಡಿಮೆ ಆಗ್ತ ಉಟ್ಟು. ವಾಣಿಜ್ಯ ಬೆಳೆಗ ಮತ್ತೆ ಕೃಷಿಲಿ ಯಂತ್ರೋಪಕರಣಗಳ ಬಳಕೆ ಜಾಸ್ತಿ ಆದಾಂಗೆ, ಸಾಂಪ್ರದಾಯಿಕ ಕೃಷಿ ಪೊದ್ದತಿ ನಾಶ ಆತ್. ಇದರೊಟ್ಟಿಗೆ ಪಾರಂಪರಿಕ ಆರಾದನಾ ಪೊದ್ದತಿ, ಅದ್ಕೆಲ್ಲ ಬಳಕೆ ಮಾಡ್ತಿದ್ದ ಪರಿಕರಗ ಅಟ್ಟ ಸೇರ್ತ್. ಕ್ರಮೇಣ ಅಟ್ಟ ಇಲ್ಲದ ಸಿಮೆಂಟ್‌ನ ತಾರಸಿ ಮನೆಗ ಸೃಷ್ಟಿ ಆದಾಂಗೇ ಅಟ್ಟದ ಸೊತ್ತುಗ ಜೇಸಿಬಿನ ಬಾಯ್ಗೆ ಸಿಕ್ಕಿ ಮಣ್ಣ್ ಪಾಲಾದೊ. ಇದರ ಕಣ್ಣೆದುರೇ ಕಾಂಬಕನ ಕಣ್ಣ್‌ಲಿ ನೀರ್ ಉಕ್ಕಿದೂ ಉಟ್ಟು. ಹಿರಿಯವು ಅದರೊಟ್ಟಿಗೆ ಇಸಿಕನಿದ್ದ ಗೌರವದ, ಬಾವನಾತ್ಮಕ, ದೈವೀಸಮ್ಮಂದನ ಕಳ್ಕಂಡ್ ಕೂಸುನ ಹೊಕ್ಕುಳ ಬಳ್ಳಿನ ಅಯ್ಯೆಂದ ಕಡ್ದ್ ಬುಟ್ಟ ಹಾಂಗೇ ಆತ್.

ನಾ ಸಣ್ಣೆ ತಿರಿಕನವೇ ಹಳ್ಳಿ ಪರಿಸರಲಿ ಬೆಳ್ದಂವ. ಮುಳಿಹುಲ್ಲ್‌ನ ಮಾಡ್, ಅಟ್ಟಕ್ಕೆ ಚಾಳಿ ಮರದ ಅಡ್ಡ ಹಾಕಿ ಹಲಗೆಲಿ ಮುಚ್ಚಿಕೆ ಹಾಕಿದ ಮನೆ. ಬೈಲ್‌ಗದ್ದೆ, ಕಟ್ಟಪುಣಿ, ಕಣಿ, ಚೋಡಿ, ಚೋಡಿಗೆ ಮರದ ಪಾಪು, ಅದ್ಕೆ ಕೈಸಾಂಗ್, ದಾರಿಗಡ್ಡ ಇರುವ ತಡಮೆ ದಾಟಿ ಹೋಕನ್ ಇದ್ದಂವ. "ಜನ್ನ-ಮುದ್ದ" ಜೋಡೆತ್ತ್‌ಗಳ ಗದ್ದೆಲಿ ಹೂಡಿ, ಪುಣಿ ಪೂಜಿ, ನೇಜಿಗೆ ಬಿತ್ತ್ ಬಿತ್ತಿ, ನೇಜಿ ನೆಟ್ಟ್, ಪೈರ್ ಕೊಯ್ದ್ ಅಪ್ಪನೊಟ್ಟಿಗೆ ಬಿಳ್ಗ್‌ಲ್ ಮೊಂಟಮೆಗೆ ಕೈ ಜೋಡ್ಸಿ "ಪೊಲಿ" ಕರ್ಕನೇ ಬೆಳ್ದ್ ಬಂದಂವ. ಅವ್ವ ಮಾಡ್ದ 'ಮೆಂತೆ ಮಣ್ಣಿ' ಅಸ್ಟೆಮಿಗೆ ಮಾಡ್ದ ಕೊಟ್ಟಿಗೆ, ಕೆಡ್ದಾಸಕ್ಕೆ ಮಾಡ್ದ 'ನೆನ್ನೆರಿ' ತಿಂದ್ ಕುಸಿ ಪಟ್ಟಂವ. ಹಟ್ಟಿಲಿ ಗೌರಿ ಬೆಳ್ಳಿ ದನಗಳಿಗೆ ಬೆಳ್ಕ್ ತೋರ್ಸಿ ಆಶೀರ್ವಾದ ಕೇಳ್ದಂವ. ಬತ್ತ ಮಿಜೆವ, ಮುಡಿ ಕಟ್ಟುವ ಪೊರ್ಲುನ, ಅವ್ವ, ಉಗ್ಗವ್ವ ಅಕ್ಕಿ ಹೊಡ್ಡಿಕನ ತಡ್ಪೆನ ಮೂಲೆಲಿ ಒಂದಿದ ದಪ್ಪದ ಸೀ ಇದ್ದ 'ತೌಡು' ತಿಂದ ನೆಂಪುನ ಮರ್ಯಕೆ ಸಾದ್ಯಇಲ್ಲೆ.

ಮುಂದೆ ಸಾಲೆಲಿ ಮಾಸ್ಟರ್ ಆಗಿ ಅದರ್ಲಿನೂ ಹಳ್ಳಿ ಮಕ್ಕಳಿಗೆ ಪಾಟ ಮಾಡ್ಕನ, ನೊಗ ನೇಗಿಲ್‌ನ ಪರಿಚಯ ಇಲ್ಲದೆ ಮಕ್ಕ ಪಿಳಿ ಪಿಳಿ ಕಣ್ಣ್ ಬುಡ್ದರ ಕಾಂಬಕನ, ಇಂತಾ ಸೊತ್ತುಗಳ ಸಂಗ್ರಹ ಮಾಡಿ ರಕ್ಷಣೆ ಮಾಡೊಕುಂತೇಳ್ವ ಆಸೆ ಮನಸ್ಲಿಗಾತ್. ಒಮ್ಮೆ ನಮ್ಮ ಹಕ್ಕಲೆನ ನೆಂಟ್ರ ಮನೆಗೆ ಹೋಗಿರ್ಕನ ಇಜ್ಜಾಲ್‌ನ ಮೂಲೆಲಿ ಒಂದು ಮರದ ತುಂಡು ಬಿದ್ದ್‌ಕನಿತ್ತ್. ಎತ್ತಿ ನೋಡ್ರೆ ಅದರ್ಲಿ ಹೂ ಬಳ್ಳಿಗಳ ಕೆತ್ತನೆ ಇತ್ತ್. ಅದರ್ಲಿ ಇದ್ದ ಮೊಣ್ಣನ ತೊಳ್ದ್ ನೋಡ್ರೆ ಅದ್ ಒಂದೇ ಮರದ ತುಂಡುಲಿ ಕೆತ್ತಿ ಮಾಡ್ದ ಬಾರೀ

ಸೋಕುನ ಕುಸುರಿ ಕೆಲ್ಸದ ಸೇಮಿಗೆ ಮಣೆ ಆಗಿತ್ತ್. ಆದರೆ ಹಿಟ್ಟ್ ಒತ್ತುವ ಹಿಡಿ ಮಾತ್ರ ಇತ್ತ್‌ಲೆ. ಕಡೆಗೆ ಎಲ್ಲ ಕಡೆ ಹುಡ್ಕಿಕನ ಕೊಟೆಗೆ ಅಟ್ಟಲಿ ಬಿಳ್ಗ್‌ಲ್ ರಾಸಿಲಿ ಸಿಕ್ಕಿತ್. ಅದರ ಮನೆಗೆ ತಂದ್ ಇಸಿಕಂಡೆ.

ಅಂದ್‌ಂದ ಎಲ್ಲಿ ಹೋದರೂ ನಾ ನೋಡ್ದು ಮನೆ ಹಿಂದೆನ ಜಗಲಿ, ಹಟ್ಟಿ ಕೊಟಗೆಗಳ ಅಟ್ಟ, ಇಜ್ಜಾಲ್‌ನ ಕರೆ ಬರೆ! ಏನಾರ್ ಹಳೇ ಸೊತ್ತುಗ ಕಂಡರೆ ಕೇಳಿ ತಂದ್ ಮನೆಲಿ ಜಾಗ್ರತೆಲಿ ಇಸಿಕಂಬದ್. ಮುಂದೆ ನನ್ನ ಶಾಲಾ ಮಾಸ್ಟ್ರಗಳ, ಶಾಲಾ ಮಕ್ಕಳ ಮನೆಗೆ ಹೋಗಿ ಸಿಕ್ಕಿದ ಸೊತ್ತ್‌ಗಳ ಜೋಡ್ಸಿ ಇಸಿದೆ. ಈ ಚಟ ನನ್ನ ಊರೂರು ಸುತ್ತುವಂಗೆ ಮಾಡ್ತ್. ಇದರ್‌ಂದಾಗಿ ಸುಳ್ಯ ತಾಲೂಕ್‌ನ ಮಡಪ್ಪಾಡಿ, ಬಾಳುಗೋಡು, ಹರಿಹರ, ಮರ್ಕಂಜ, ಅಡ್ಕಾರ್, ಪೈಲಾರ್, ಬಂಟ್ವಾಳ ತಾಲೂಕ್ ಕನ್ಯಾನ, ಸಾಲೆತ್ತೂರು, ಎಲ್ಲಾ ತಿರ್ಗಾಡ್ದೆ. ಕೆಲವೇ ತಿಂಗಳ್‌ಲಿ ನನ್ನಕ್ಕಲೆ ನೂರಾ ಎಂಬತ್ತರ್‌ಂದಲೂ ಹೆಚ್ಚ್ ಸೊತ್ತುಗ ಒಟ್ಟು ಸೇರ್ತ್.

2014ರ್‌ಲಿ ಮಂಗಳೂರ್‌ನ, ಸಹ್ಯಾದ್ರಿ ಕಾಲೇಜ್‌ಲಿ ನಡ್ದ ತುಳು ಸಮ್ಮೇಳನಲಿ ಸುರೂನ ವಸ್ತು ಪ್ರದರ್ಸನ ಮಾಡ್ದೆ. ಅಲ್ಲಿಂದ ಮುಂದೆ ಸಾಲೆ ಕಾಲೇಜ್‌ಗಳ ಬೆಳ್ಳಿಹಬ್ಬ, ಬೇರೆ ಬೇರೆ ದೇವಸ್ತಾನಗಳ ಬ್ರಹ್ಮ ಕಳಸ, ಕೃಸಿ ಸಮ್ಮೇಳನ, ಸಾಹಿತ್ಯ ಸಮ್ಮೇಳನ, ಯುವಕ ಮಂಡಲ, ಜಾತ್ರಾ ಮಹೋತ್ಸವಗಳ್‌ಲಿ ಪಾರಂಪರಿಕ ಸೊತ್ತುಗಳ ಪ್ರದರ್ಶನ ನಡ್ದ್ ಬಾತ್. ವಸ್ತುಗಳ ಲೆಕ್ಕ ಮುನ್ನೂರು ಗಡಿದಾಟಿ ಅದರ ಸಾಗ್ಸಿಕೆ ಮಿನಿ ಲಾರನೇ ಬೇಕಾಗಿ ಬಾತ್. ಇದರ್ಲಿ ನಂಗೆ ಬಾರೀ ಪ್ರಚಾರ ಮತ್ತೆ ಗೌರವತಂದ್ ಕೊಟ್ಟದ್‌ಂತ ಹೇಳ್ರೆ ಕೊಡಗ್ ಜಿಲ್ಲೆನ ಆಲೂರು ಸಿದ್ದಾಪುರಲಿ ನಡ್ದ ಎರಡ್‌ನೆ ಅರೆಬಾಸೆ ಸಮ್ಮೇಳನ. ಇದ್ ಗೌಡ ಸಮುದಾಯದ ಬದ್ಕ್, ಸಂಸ್ಕೃತಿ, ಆಚಾರ ವಿಚಾರಕ್ಕೆ ಸಮ್ಮಂದಿಸಿದ ಆ ವಸ್ತುಗಳ ಪ್ರದರ್ಶನಂದ ಹೊಸ ರೂಪ ಪಡಿಯಕೆ ಕಾರಣ ಆತ್. ಹೋದಲ್ಲೆಲ್ಲ ಜನಗ ಬಾರೀ ಕುಸಿಲಿ ಅವರ ಅಬಿಪ್ರಾಯನ ಹೇಳಿಕಂಬತ್ತಿದ್ದೊ.

ಈ ಎಲ್ಲಾ ವಸ್ತುಗಳ ಇಸಿಕಾಂಕೆ ಮನೆಲಿ ಒಂದು ಕೋಣೆನ ಕಟ್ಟಿಕಂಡ್ ಜಾಗ್ರತೆ ಮಾಡ್ದೆ. ಅದ್ಕೆ 'ಕದಿಕೆ' ಅಂತ ಹೆಸ್ರ್ ಇಸಿದೆ. ಈ ಸಂಗ್ರಹಕ್ಕೆ ನಾ ಎಷ್ಟ್ ಮನೆಗೆ ಹೋಗೊಳೆಂತ ಲೆಕ್ಕನೇ ಇಲ್ಲೆ. ಪಟ್ಟ ಕಷ್ಟ, ಮಾಡ್ದ ಕರ್ಚ್ ಅಷ್ಟಿಷ್ಟಲ್ಲ. ವಸ್ತು ಪ್ರದರ್ಶನದ ಹೊತ್ತ್‌ಲಿ ಹಿರಿಯವು ಅದರ ನೋಡಿ "ಇದರೆಲ್ಲ ನಾವು ಬಳ್ಸಿಕನ್ ಇದ್ದೋ ಇನ್ನೆಲ್ಲಿ ಇದರೆಲ್ಲ ನೋಡಿಕೆ ಸಾದ್ಯ" ತೇಳಿಕನ್ ಬೇಜಾರ ಮಾಡಿಕನ್ ಇದ್ದರೆ ಮಕ್ಕಂಗ ಇದರ ನೋಡಿ ಇದೆಂತ? ಇದರ ಉಪಯೋಗ ಹೇಂಗೆ? ತೇಳೀ ನೂರಾರ್ ಪ್ರಶ್ನೆ ಕೇಳ್ತಿದ್ದೊ. ಜನರ ಮೆಚ್ಚಿಕೆನ ಮಾತ್, 'ಸಂತ್ರಪ್ತಿ'. ಈ ಸಂಗ್ರಹಲಿ ಸೇಕಡಾ ತೊಂಬತ್ತರಷ್ಟ್ ಸೊತ್ತುಗ ಗೌಡ ಸಮುದಾಯದ ಬಂದುಗ ಕೊಟ್ಟದ್‌ತ ಹೇಳಿಕೆ ತುಂಬಾ ಹೆಮ್ಮೆ ಆದೆ. ಈ ವಸ್ತು ಸಂಗ್ರಹನ ನೋಡಿಕನ ಗೌಡ ಸಮುದಾಯದ ಸಾಂಸ್ಕೃತಿಕ ಪರಂಪರೆನ ಬೇರ್ ಎಷ್ಟ್ ಆಳಕ್ಕೆ ಗಟ್ಟಿ ಆಗಿ ನೆಲೆ ಊರಿಟ್ಟು, ಅದರ ವಿಸ್ತಾರ ಯಾವ್ಯಾವ ಕ್ಷೇತ್ರಲಿ ಹರಡಿಕಾಂವುಟುತ ನೆಂಪಾವ ಪರಂಪರೆ ಕಂಡದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಅಧ್ಯಕ್ಷರಾದ ಲಕ್ಷ್ಮೀನಾರಾಯಣ ಕಜೆಗದ್ದೆಯವು ಮತ್ತೆ ಸದಸ್ಯರಾದ ಜಯಪ್ರಕಾಶ್ ಮೋಂಟಡ್ಕ, ಬಿಳಿನೆಲೆಯವು ಕದಿಕೆ ಸಂಗ್ರಹಾಲಯಕ್ಕೆ ಬಂದ್ ಅಕಾಡೆಮಿನ ದಾಖಲೀಕರಣ ಕೃತಿಗೆ ಬೇಕಾದ ಪಾರಂಪರಿಕ ಸೊತ್ತುಗಳ ಪಟ ತಕಂಡೊ. ಆ ಪಟಗಳ ಬಳ್ಸಿಕಂಡ್ ಬರವಣಿಗೆ ಮಾಡ್ಸಿ 'ಅರೆಭಾಷೆ ಪಾರಂಪರಿಕ ವಸ್ತುಕೋಶ' ತೇಳುವ ಪುಸ್ತಕನ ಪ್ರಿಂಟ್ ಮಾಡ್ದು ಬಾರೀ ಒಳ್ಳ ಕೆಲ್ಸ.

ಸಂಪಾದಕರ ಮಾತ್

ಜಾನಪದ ಸೊತ್ತುಗ ಅರೆಬಾಸೆ ಸಂಸ್ಕೃತಿನ ಪ್ರತೀಕಗ



✍ **ತೋಟಂಬೈಲು ಪಾರ್ವತಿ**
ತೋಟಂಬೈಲು ರಾಘವೇಂದ್ರ (ಮೋಹನ್), ಕಟ್ಟೆಮಾಡ್,
ಕಟ್ಟೆಮಾಡ್ ಗ್ರಾಮ ಮತ್ತು ಅಂಚೆ
ವಯ; ಮೂರ್ನಾಡು, ಮಡಿಕೇರಿ, ಉತ್ತರ ಕೊಡಗು – 571 257
ಮೊ: +91 9449515388

ಹತ್ತ್ ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರ್‌ದ ಗೌಡ ಸಮುದಾಯದವು ಅರೆಬಾಸೆದ್ದೇ ಆದ ವಿಸೇಸ ಸಂಸ್ಕೃತಿನ ಹೊಂದ್ಯೊಳ. ಮುಕ್ಯ ಕಸುಬ್ ಮಾಡಿಕಂಡ್ ಬಂದ ಗೌಡರ್, ತಮ್ಮದೇ ಜಾನಪದದ ಪರಂಪರೆನ ಹೊಂದ್ಯೊಳ.

ಹರಿಯ ಬೊಸ್ರ್‌ಲಿ ಬ್ರಹ್ಮಾಂಡ ಅಡ್‌ಂಗಿಸಿದಂಗೆ ಜಾನಪದದ ಕುಕ್ಕೆಲಿ ಜಗತ್ತೆಲ್ಲನೂ ಅಡೆಂಗ್ಯೊಟ್ಟು. ಜಾನಪದ ದಷ್ಟ್ ವಿಶಾಲವೂ ವ್ಯಾಪಕವೂ ಸರ್ವಾತ್ಮಕವೂ ಆದ ಮತ್ತೊಂದ್ ವಿಸಯ ಇಲ್ಲೆತ ತೋರಿದೆ.

ಜಾನಪದ ಸಂಸ್ಕೃತಿಗೆ ಪೂರಕ ಆಗಿ ಜಾನಪದ ಕಲೆಗಳೂ ಅರೆಬಾಸಿಕ ಗೌಡ್ರ ಸಂಸ್ಕೃತಿ ವೈಬವನ ಶಿಕರಗ ಆಗೊಳ, ನಮ್ಮದ್ ವಿಸಿಸ್ಟ ಆದ ಸ್ರೀಮಂತಿಕೆನ ಸಂಸ್ಕೃತಿ, ಆಚಾರ, ವಿಚಾರ ತಿಳಿಯೊಕಾರೆ ಹಿರಿಯೊವು ಪ್ರತಿ ನಿತ್ಯ ಬಳಸ್ತಿದ್ದ ಪರಿಕರಗಳ ಪ್ರಾಮುಕ್ಯತೆನ ತಿಳಿಯೊಕಾದೆ.

ನಮ್ಮ ಪೂರ್ವಿಕರ್ ಬಳಸ್ತಿದ್ದಂತ ದಿನನಿತ್ಯದ ಸೊತ್ತುಗ ಇಂದ್‌ಗೂ ಅವರ ದೀರತನದ, ಶೂರ ತನದ, ಶ್ರಮದ, ಪ್ರೀತಿನ ಸಂಕೇತಾಗಿ ಒಳ್ದುಟ್ಟು. ಇವ್ ಬಾಹ್ಯರೂಪಲಿ ದಿನ ಬಳಕೆನ ಸೊತ್ತುಗಳ ಆಕೃತಿಯಾಗಿ ಕಂಡರೂ ಹಿರಿಯವು ಜಾನಪದ ಅಂತರಂಗದ ಪ್ರೀತಿನ ಕಲಾತ್ಮಕ ಸೃಷ್ಟಿಯಾಗಿ ಒಳ್ದುಟ್ಟು. ನಮ್ಮ ಸಂಸ್ಕೃತಿನ ನಿರ್ಮಾಣಲಿ ಹಿರಿಯವು ಬಳಸ್ತಿದ್ದಂತ ಕಂಚ್‌ನ, ತಾಮ್ರ, ಹಿತ್ತಾಳೆ, ಮರದ, ಬಿದಿರ್‌ನ, ಕಬ್ಬಿಣದ, ಗಾಜ್‌ನ, ಪಿಂಗಾಣಿನ ಸೊತ್ತುಗ ಮುಕ್ಯ ಆದೆ. ಇವೆಲ್ಲವೂ ಗೌಡ್ರ ಜೀವನ ಆಚರಣೆಲಿ ಹುಟ್ಟ್‌ಂದ ಸಾವು ಮುಟ್ಟದ ಆಚರಣೆಗ, ಮತ್ತೆ ವರ್ಸಇಡೀ ಆಚರ್ಸ್‌ವ ಹಬ್ಬ ಹರಿದಿನ ಸಂದರ್ಬಲೂ ವಿಸೇಸಾಗಿ ಬಳ್ಕೆ ಆದೆ.

ಇಂತ ಸೊತ್ತ್‌ಂದ ನಿರ್ಮಾಣಗೊಂಡ ವಿವಿದ ಆಕೃತಿಗಳ ನಮ್ಮ ಸಂಸ್ಕೃತಿನ ದೀಮಂತಗೊಳ್ಸಿದೆ. ಜಾನಪದ ಬೊದ್ಕ್ ನಿರಂತರಾಗಿ ಚಲನಶೀಲ ಗೊಂಡದೆ. ಹೊಸ್ತ್ ಹಳ್ತಾಗಿದ್ದದೆ. ಹಳ್ತ್ ಮತ್ತೆ ಬೇರೆ ಬೇರೆ ಸ್ವರೂಪಂದ ಮತ್ತೆ ಚಾಲ್ತಿಗೆ ಬಂದದೆ. ಪಾರಂಪರಿಕ ಸೊತ್ತುನ ಮೂಲರೂಪ ವಿರೂಪ ಆಗದಾಂಗೆ ನಮ್ಮ ಮುಂದೆನ ಪೀಳ್ಗೆಗೆ ರಕ್ಷಿಸುದು ನಮ್ಮ ಕರ್ತವ್ಯ ಅದೆ.

ಒಂದು ಕಾಲಲಿ ಪ್ರತಿ ಮನೆಗಳ್‌ಲಿ ಬಳಕೆ ಆಗ್‌ತ್ತಿದ್ದಂತ ಪಾರಂಪರಿಕ ಪರಿಕರಗ ಅದುನೀಕತೆನ ಗಾಳಿಗೆ ಸಿಕ್ಕಿ ತನ್ನ ಮೂಲನ ಪೂರ ಕಳ್ಕೊಂಡದೆ. ಬಾಸೆ ಆಚರಣೆ ಪೊದ್ದತಿಗ ನಮ್ಮ ಐನ್ ಮನೆಗ, ಹಳ್ತ್

ದಿನಬಳಕೆ ಸೊತ್ತುಗ ನಮ್ಮ ಪರಂಪರೆನ ಮುಕ್ಯ ಅಂಸಗ. ಇವ್ ಒಂದ್ ಸಮುದಾಯನ ಒಟ್ಟು ಮಾಡಿದೆ. ಮತ್ತೆ ಇವ್ ನಮ್ಮದ್‌ತ ಬಾವನೆನ ನೆಂಪಿಸಿದೆ. ಗೌಡ ಸಂಸ್ಕೃತಿನ ರೂಪೀಕರಣ, ಮತ್ತೆ ಸಂಸ್ಕೃತಿ ಶ್ರೇಷ್ಠತೆನ ಮುಂದೆನ ಪೀಳಿಗೆಗೆ ದಾಟ್ಸಿಕೆ ಈ ಜಾನಪದ ಸಂಗ್ರಹ ಪ್ರಮುಕ ಕಾರ್ಯನ ಮಾಡ್ದೆ. ಇಂತ ಒಂದ್ ಕಾರ್ಯಕೆ ನಾವೆಲ್ಲವೂ ಕೈ ಜೋಡ್ಸೋಮ.

ಮುನ್ನುಡಿ

ಅರೆಬಾಸೆ ಸಂಸ್ಕೃತಿನ ಹೆಗ್ಗೆ ಹೆಚ್ಚಿಸ್‌ವ ಸಂಪುಟ



✍ ಡಾ. ಕೆ. ಚಿನ್ನಪ್ಪ ಗೌಡ
ವಿಶ್ರಾಂತ ಕುಲಪತಿಗಳು
'ಸಿರಿಬಾಮ' ಅಸೈಗೋಳಿ, ಮಂಗಳೂರು – 574199
ಮೊ: +91 9448726464

ಬಾಸೆನ ಬಳ್ಸ್‌ವ ಮತ್ತೆ ಬೆಳ್ಸ್‌ವ ಒಂದ್ ಆವರಣ ಪಂಡ್‌ನ ಪರಂಪರೆಲಿ ಉಟ್ಟು.ಇದ್ ಪರಂಪರೆಂದ ಸಿದ್ದ ಆದ ಒಂದ್ ವ್ಯೆವಸ್ತೆ.ಬಾಸೆ ಬೆಳಿಯಕೆ ಪೂರಕ ಆವ ಇಂತ ಸನ್ನಿವೇಸಗ ಬೇರೆ ಬೇರೆ ಕಾರಣಂದ ಕಣ್ಮರೆ ಆವುಟು.ಒಂದ್ ನಿರ್ದಿಷ್ಟ ಬಾಸೆನ ಬಳ್ಸ್‌ವ ಸಂದರ್ಬಗ ಕಡಿಮೆ ಆದು.ಒಂದ್ ಬಾಸೆನ ಜಾಗನ ಮತ್ತೊಂದ್ ಬಾಸೆ ಆಕ್ರಮಿಸುದು. ಕೆಲವ್ ಸಮುದಾಯಗ ಸೀಮಿತ ಬಾಸೆನ ಸಾರ್ವಜೆನಿಕ ಆಗಿ ಮಾತಾಡಿಕೆ ಜೆನ ಹಿಂದೇಟ್ ಹಾಕುವೊ. ಜೆನ ದಿನ ವ್ಯವರ್ಸ್‌ವ ಬಾಸೆಲಿ ಅವರ ಮಕ್ಕಳಿಗೆ ಸಾಲೆಲಿ ಕಲಿವ ಅವಕಾಸ ಸಿಕ್ಕದೆ ಹೋಕನ ಅದರ ಓದ್‌ವ ಬರೆವ ಗೇನದ ಬೆಳವಣಿಗೆ ಕಮ್ಮಿಯಾದೆ. ಬಾಸೆನ ಬಳಕೆ ಕಮ್ಮಿಯಾದಂಗೆ ಅದರ್‌ಲಿ ಇರ್‌ವ ಬಾಯಿಮಾತ್‌ನ ಸಾಹಿತ್ಯ ತನ್ನಷ್ಟಕೆ ಅಡೆಂಗಿ ಹೋದೆ.ಒಂದ್ ನಿರ್ದಿಷ್ಟ ಬಾಸೆಲಿ ಇರ್‌ವ ಸಾಂಸ್ಕೃತಿಕ ಜೆಗತ್ತ್ ಚುರ್‌ಂಗಿಕಂಡ್ ಹೋದೆ. ಇಂತ ಹೊತ್ತ್‌ಲಿ ಮಾಸಿ ಹೋವ ಬಾಸೆನ ಬಳಕೆನ ಹೆಚ್ಚಿಸಿಕೆ ಅಕಾಡೆಮಿನಂತ ಸಂಸ್ತೆಗ ಕೆಲ್ಸ ಮಾಡೊಕಾದೆ. ಕೊಡಗ್‌ನ ಮಡಿಕೇರಿ ಮತ್ತೆ ದಕ್ಷಿಣ ಕನ್ನಡದ ಸುಳ್ಯ ಪರಿಸರಲಿ ಹಲವ್ ಸಮುದಾಯಗಳ ಸಂವಹನ ಮಾದ್ಯವ ಆಗಿ ಬಳಕೆಲಿರುವ ಅರೆಬಾಸೆ ಅಲ್ಲರ್ ಗೌಡ ಕನ್ನಡ ಬಾಸೆನ ಒಳ್ಸಿಕೆ ಮತ್ತೆ ಬೆಳ್ಸಿಕೆ ಕರ್ನಾಟಕ ಸರಕಾರಂದ ಸ್ತಾಪನೆ ಆಗಿರ್‌ವ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮಾಡ್‌ವ ಕೆಲ್ಸನ ಈ ಹಿನ್ನೆಲೆಲಿ ನೋಡೊಕಾದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸುರು ಅದ ಕಾಲಂದ ಈ ಸಂಸ್ತೆನ ಶೈಕ್ಷಣಿಕ ಕೆಲ್ಸನ ನಾ ನೋಡ್ಯೊಳೆ. ಹಿಂಗಾರತೇಳ್ವ ಮೂರ್ ತಿಂಗಳ ಪತ್ರಿಕೆನ ಪ್ರಕಟ್‌ಸಿ ಹಿರಿಯೊವು ಕಿರಿಯೊವು ಲೇಕಕರ ಬರವಣಿಗೆನ ಪ್ರಕಟ್‌ಸಿಕಂಡ್ ಬಂದುಟು. ಅರೆಬಾಸೆ ಸಾಹಿತ್ಯ ಮತ್ತೆ ಸಾಂಸ್ಕೃತಿಕ ಪರಂಪರೆನ ಅವಲೋಕನನ ಸಮ್ಮೇಳನ ಮತ್ತೆ ಸಾಹಿತ್ಯ ಸಂಕಿರಣಗಳ ಮೂಲಕ ನಡ್ಸಿಕಂಡ್ ಬಂದುಟು. ವರ್ಸಕ್ಕೊಮ್ಮೆ ಗೌರವ ಪ್ರಶಸ್ತಿನ ಕೊಟ್ಟ್ ಅರಬಾಸೆನ ವಿದ್ವಾಂಸರ್, ಸಾದಕರ ಗುರ್ತ್‌ಸಿ ಗೌರವ್‌ಸಿಕಂಡ್ ಬಂದುಟು. ಪುಸ್ತಕಗಳ ಪ್ರಕಟ್‌ಸಿ ಬಾಸೆನ ಬರೆವ ಪರಂಪರೆನ ಗಟ್ಟಿಗೊಳ್‌ಸ್ಯುಟು. ಶಿಕ್ಷಣ ಸಂಸ್ತೆಗಳ್‌ಲಿ ಕಾರ್ಯಾಗಾರ ಕಮ್ಮಟನ ಆಯೋಜನೆ ಮಾಡಿ ಯುವ ಮೊನ್ಸ್‌ನ ಅರೆಬಾಸೆ ಸಾಹಿತ್ಯನ ಕಡೆ ಎಳ್ಕೊಂಬಲ್ಲಿ ಗೆದ್ದೊಳೊ. ಅರೆಬಾಸೆನ ಸಾಹಿತ್ಯ ಪ್ರಕಾರಕೆ ಸಮ್ಮಂದ ಪಟ್ಟಂಗೆ ಜಂಬರಗಳ ಮಾಡಿ ಜೆನರ ಸಾಹಿತ್ಯಾಸಕ್ತಿನ ಹೆಚ್ಚ್‌ಸ್‌ವ ಕೆಲ್ಸನ ಮಾಡಿಟು. ಕರ್ನಾಟಕ ರಾಜ್ಯಲಿ ಅರೆಬಾಸೆನ ನಾಟಕನ ಜೆನಕೆ ತೋರ್‌ಸಿ, ಹಾಂಗೆ ತಾಳಮದ್ದಳೆ ಮಾಡಿದ್ ಈ ಬಾಸೆನ ಪೊರ್ಲ್ಪು, ಸಕ್ತಿ ಸಾಮರ್ತ್ಯನ ಅರೆಬಾಸೆ ಮಾತಾಡದ ಹೊರೆಗಿನವ್ಕೂ ಮುಟ್ಟುಸಿದ ಕೆಲ್ಸಗ ನನ್ನ ದೃಷ್ಟಿಲಿ ತುಂಬ ಮುಕ್ಯ ಆದೆ. ಒಂದ್ ಕಡೆ ಇಂತ ಕೆಲ್ಸಗ ಈ ಬಾಸೆನ ಸಂವಹನ

ಸಾಮರ್ತ್ಯನ ತೋರ್ಸಿದೆ. ಸವಾಲ್‌ಗಳ ಎದ್‌ರ್ಸಿ ಬಾಸೆ ಬೆಳೆಕಾದ ದಾರಿನ ಗುರ್ತ ಮಾಡ್ದೆ. ಬಾಸೆನ ಬಗ್ಗೆ ತಿಳ್ಕೊಂಬ ಸಕ್ತಿನೂ ಅದರ ಮಿತಿನೂ ಒಟ್ಟೊಟ್ಟಿಗೆ ತಿಳ್ಸಿದೆ. ಬೇರೆ ಬಾಸೆಂದ ತಕಂಬ ನಿಯಮನ ಪಾಲ್‌ಸಿ ಪದಗಳ ಸ್ವೀಕರ್ಸಿ ಬಾಸೆ ಬೆಳೆಕಾದ ಕೆಣಿನ ಕಲ್ಸಿದೆ. ಹಿರಿಯ ಸಾದಕರ ಬಗ್ಗೆ ಅಕಾಡೆಮಿ ತಯಾರ್ಸಿದ ಸಾಕ್ಷ್ಯಚಿತ್ರಗ ಅರೆಬಾಸೆ, ಸಂಸ್ಕೃತಿ ಮತ್ತೆ ಸಾಹಿತ್ಯದ ಹೆಗ್ಗೆ ಆದೆತ ನಾ ಬಾವಿಸಿನೆ. ಅರೆಬಾಸೆಲಿ ಮಾತಾಡ್‌ವ, ಬರೆವ ಮತ್ತೆ ಓದ್‌ವ ಬೇಲಿನ ತಯಾರ್ ಮಾಡ್ದು ಮುಕ್ಯ. ಅದರ ಅರೆಬಾಸೆ ಅಕಾಡೆಮಿ ಮಾಡ್‌ತಾ ಉಟ್ಟು. ಅಷ್ಟ್ ಮಾಡ್ರೆ ಅರೆಬಾಸೆನ ಒಳ್ಸ್‌ವ ಬೆಳ್ಸ್‌ವ ಜವಾಬ್ದಾರಿನ ಮುಂದೆ ಸಮುದಾಯದ ಜೆನಂಗಳೆ ಹೊತ್ತವೆ.

ಒಂದ್ ಬಾಸೆನ ಮಾತಾಡವು ಮತ್ತೆ ಆ ಬಾಸೆನ ಒಟ್ಟ್ ಸಂಸ್ಕೃತಿಲಿ ಬೊದ್ಕ್‌ವ ಜೆನಂಗ ಅವ್ವೇ ಆಗಿ ಮಾಡಿಕಾಗದ ಕೆಲವ್ ಕೆಲ್ಸಗ ಒಳೊ. ಅದರ ಅಕಾಡೆಮಿ ಮಾಡಕಾದೆ. ಅರೆಬಾಸೆನ ಪದಕೋಶ ರಚನೆ,ಅರೆಬಾಸೆನ ವಿಶ್ವಕೋಶ ರಚನೆ, ಅರೆಬಾಸೆನ ಪಾರಂಪರಿಕ ಸೊತ್ತ್‌ಗಳ ಕೋಶ ರಚನೆ, ಸಾಕ್ಷ್ಯಚಿತ್ರ ನಿರ್ಮಾಣ ಇಂತ ಕೆಲ್ಸನ ಅಕಾಡೆಮಿನೇ ಎದ್‌ರ್ ನಿತ್ತ್ ನಿರ್ವಹಿಸೊಕಾದೆ. ಜೆನಕೆ ಗೊತ್ತಿರ್‌ವ ಮಾಹಿತಿನ ಕೂಡ್ಸಿ, ಬಾಯಿ ಮಾತ್‌ಲಿ ಇರ್‌ವ ಸಂಗತಿಗಳ ಬಳ್ಸಿಕಂಡ್ ಇಂತ ಯೋಜನೆನ ಕಾರ್ಯಗತಗೊಳಿಸೊಕಾದೆ. ಇದ್ಕೆ ವಿದ್ವಾಂಸರ ಮಾರ್ಗದರ್ಶನ, ಸಂಶೋದಕರ ಸಾಕಾರ ಬೇಕಾದೆ. ಒಂದ್ ತಂಡ ದೀರ್ಗ ಕಾಲ ಯಾಗೋಳು ಸ್ರಮ ಪಡೊಕಾದೆ. ಇದರ್‌ಲಿ ಬಾಸೆನ ವಿದ್ವಾಂಸರ್, ಸಂಸ್ಕೃತಿ ಚಿಂತಕರ್, ಪದಕೋಶ ಪರಿಣತರ್, ಸಮಾಜ ವಿಜ್ಞಾನಿಗ ಹೀಂಗೆ ಹಲವ್ ವಿಸಯ ತಜ್ಞರ್ ಒಟ್ಟಿಗೆ ಸೇವಾ ಮನ್ಸ್‌ಂದ ದುಡಿಯೊಕಾದೆ. ಇಂತ ಒಂದ್ ಹಿನ್ನೆಲೆಲಿ ಮಾಡ್ದ **'ಅರೆಭಾಷೆ ಪಾರಂಪರಿಕ ವಸ್ತುಕೋಶ'** ಸಂಪುಟದ ಮಹತ್ವ ಬಗ್ಗೆ ನನ್ನ ಕೆಲವ್ ಆಲೋಚನೆನ ಇಲ್ಲಿ ಹೇಳಿಕೊಂಡನೆ. ನನ್ನ ಪಾಲ್‌ಗೆ ಇದ್ ಅಬಿಮಾನನ ಸಂಗತಿ.

ಜಾನಪದ ಒಳಗೆ ಬಾವ ನಾಲ್ಕ್ ವಿದಗ ತ ಹೇಳ್ರೆ 1. ಜನಪದ ಸಾಹಿತ್ಯ, 2. ಬೌತಿಕ ಸಂಸ್ಕೃತಿ, 3. ಸಾಮಾಜಿಕ ಆಚರಣೆಗ, ಹಬ್ಬಗ, ಸಂಪ್ರದಾಯಗ ಮತ್ತೆ 4. ಆರಾದನೆಗ, ಕೋಣ್ತಗ, ಆಟಗ ಇಂತ ಪ್ರದರ್ಶನ ಕಲೆಗ. ಈ ವರ್ಗಗಳ ನೊಡುಲಿ ಸಮ್ಮಂದಗ ಉಟ್ಟು. ಜಾನಪದ ಅದ್ಯಯನ ತೇಳ್ರೆ ಅದ್ ಸಂಸ್ಕೃತಿನ ಅದ್ಯಯನನೆ ಆದೆ. ಜಾನಪದ ಚಲನಶೀಲ ಆದ ಜ್ಞಾನಶಿಸ್ತು. ಜನಪದ ಸಾಹಿತ್ಯದ ಪಟ್ಯ ಆದರೆ ಅದರ್ಲಿ ಸುಮಾರ್ ಪ್ರಬೇದಗ ಉಟ್ಟು. ಮೌಕಿಕ ತೇಳ್‌ರೆ ಅದ್ ಬಾಯಿಂದ ಬಾಯಿಗೆ, ತಲೆಮಾರ್‌ಂದ ತಲೆಮಾರ್‌ಗೆ ದಾಟಿಕಂಡ್ ಸಾಗುದರ್‌ಂದ ಇದರ್ಲಿ ಬದಲಾವಣೆಗ ಆಣ್ಯೋದೆ. ಓದ್ ಬರವು ಇಲ್ಲದ ಜೆನಗ ಒಂದ್ ಕಾಲಲಿ ಜಾನಪದದ ಬೇರೆ ಬೇರೆ ಪ್ರಕಾರಲಿ ಅವು ತಮ್ಮ ಇಚಾರನ ಬಾವನೆನ ಕಷ್ಟಸುಕನ ಬೇರೆವರೊಟಿಗೆ ಹೇಳಿಕಂಡ್ ಕೇಳಿಕಂಡ್ ಬಂದೊಳೊ. ಸಾರ ಸಂಗ್ರಹಲಿ ಹೇಳೊಕುಂತಾದರೆ ಜೆನರ ಪೊದ್ಯಗಳ್‌ಲಿ, ಕತೆಗಳ್‌ಲಿ, ಕೋಣ್ತಗಳ್‌ಲಿ, ಆರಾದನೆಗಳ್‌ಲಿ, ಆಟಗಳ್‌ಲಿ, ಹಬ್ಬ ಹರಿದಿನಗಳ್‌ಲಿ ಜೆನರ ಬೊದ್ಕ್‌ನ ಇತಿಯಾಸನೆ ಉಟ್ಟು. ಚಿಂತನೆನ ದಾರಿಗ ಮತ್ತೆ ಜೆನರ ಲೋಕದೃಷ್ಟಿ ಉಟ್ಟು. ಹಾಂಗೆನೆ ಜೆನರ ಇತಿಯಾಸನ ಕಟ್ಟಿಕೆ ಇರ್‌ವ ಮುಕ್ಯವಾದ ಒಂದ್ ಮೂಲ ತೇಳ್‌ರೆ ಬೌತಿಕ ಸಂಸ್ಕೃತಿನ ವರ್ಗಲಿರ್‌ವ ಸೊತ್ತುಗ. ಇಂತ ಸೊತ್ತುಗಳ ಪೊಟ್ಟಿ ಮತ್ತೆ ಅದರ ಸಾಂಸ್ಕೃತಿಕ ವಿವರ ಇರ್‌ವ ಈ ಸಂಪುಟದ ಮಹತ್ವನ ಮುಂದೆ ತಿಳ್ಸಿನೆ.

ಅರೆಬಾಸೆ ಮಾತಾಡ್‌ವ ಜೆನಗ ವಿಶಿಷ್ಟ ಸಂಸ್ಕೃತಿನ ರೂಪಿಸಿಕೊಂಡೊಳ. ಇದರ್‌ಲಿ ಸುಳ್ಯ ಪರಿಸರದ ಗೌಡ ಸಮುದಾಯದ ಜೆನರ ಕೊಡ್‌ಗೆ ಮುಕ್ಯವಾಗುಟು. ಅರೆಬಾಸೆನ ಮಾತಾಡ್‌ವ ಗೌಡರ ಪ್ರದಾನ ಕಸ್‌ಬು ಬೇಸಾಯ.ನೆಲನ ಒಕ್ಕಿ ಬೇಸಾಯಕೆ ಹದ ಮಾಡ್ದರ್‌ಂದ ಇವರ ಒಕ್ಕಲಿಗರ್‌ತ ಕರ್‌ದೊಳ. ಒಕ್ಕಲ್ತೆ ಮತ್ತೆ ಬೇಸಾಯ ಗೌಡ್ರ ಕಾಂಬ ಸೊತ್ತ್‌ಗಳ ಜಗತ್ತ್‌ನ ನಿರ್ಮಾಣ ಮಾಡ್ದೆ. ಅವರ ಮನೆ ಮತ್ತೆ ಕೊಟೆಗೆ ಕಟ್ಟುದು, ವಾಸಕೆ ಉಪಯೋಗ್ಸ್‌ವ ಸೊತ್ತುಗ, ತಿನ್ಸ್ ತಯಾರಿ ಮತ್ತೆ ಉಂಬಕೆ ತಿಂಬಕೆ ಬಳ್ಸುವ ಮಡ್ಕೆಗ, ಪಾತ್ರೆಗ, ಬೇಸಾಯಕೆ ಬಳ್ಸ್‌ವ ಸಲಕರಣೆಗ, ಅಳತೆ ಮತ್ತೆ ತೂಕದ ಸಾದನಗ, ಮೀನ್ ಪ್ರಾಣಿ ಹಕ್ಕಿ ಇದರ ಬೇಟೆನ ಹತ್ಯಾರ್‌ಗ ಇದರ ನೋಡಿರೆ ಬೇಸಾಯ ಗೌಡ್ರ ಸಂಸ್ಕೃತಿನ ನಡೂಲಿರ್ದು ಸ್ಪಷ್ಟ. ಮೊಣ್ಣ್ ಕಲ್ಲ್ ಮರ ಲೋಹ ಬೊಳ್ಳಿ ನಾರ್ ಸೊಪ್ಪು ಹೀಂಗೆ ಪರಿಸರಲಿ ಸಿಕ್ಕ್‌ವ ಕಚ್ಚಾ ಸೊತ್ತುಗಳ್‌ಂದ ಬಳ್ಸಿಕೆ ಯೋಗ್ಯ ಇರ್‌ವ ಸೊತ್ತುನ ತಯಾರ್‌ಸಿ ಕೊಂಡೊಳ. ಸೊತ್ತ್‌ಗಳ ಬಳಕೆನ ಸಂದರ್ಬ ಮತ್ತೆ ಉದ್ದೇಸಕೆ ಅನುಗುಣಾಗಿ ಅದರ ರೂಪ, ಆಕಾರ ಮತ್ತೆ ವಿನ್ಯಾಸಗ ಉಟ್ಟು. ಇಂತ ಸುಮಾರ್ ನೂರೈವತ್ತ್ ಸೊತ್ತುಗಳ ವಿವರನ ಬಣ್ಣದ ಚಿತ್ರ ಸಮೇತ ಈ ಸಂಪುಟಲಿ ಕೊಟ್ಟೊಳೊ. ಈ ಸಂಗ್ರಹಲಿ ಬಾರೀ ಅಪ್ರೂಪದ ಸೊತ್ತುಗಳ ಮಾಹಿತಿ ಸೇರಿಟು. ಈ ಪಾರಂಪರಿಕ ಸೊತ್ತುಗಳ ಮಾಹಿತಿಕೋಶದ ರಚನಾ ವಿದಾನದ ಬಗ್ಗೆ ಕೆಲವು ಮಾತ್‌ಗಳ ಹೇಳಿನೆ.

ಈ ಸಂಪುಟಲಿ ಸೇರ್‌ದ ಸೊತ್ತುನ ಅದರ ಸ್ವರೂಪ, ಬಳಕೆನ ಸಂದರ್ಬ ಮತ್ತೆ ಉದ್ದೇಸಗಳ ಆದರ್‌ಸಿ ಪಾಲ್ ಮಾಡಿ ಕೊಟ್ಟೊಳೊ. ಇದ್ ಸರ್ಯಾದ ವಿದಾನ. ಮನೆ ಒಳಗೆನ ಉಪಯೋಗದ ಸೊತ್ತುಗ, ಬೇಸಾಯ ಸಲಕರಣೆಗ, ಬೇಟೆನ ಹತ್ಯಾರ್‌ಗ ಮತ್ತೆ ಮೈಮೇಲೆ ಉಡ್‌ವ ತೊಡುವ ಆಬರಣಗ, ಅಳತೆ ಮತ್ತೆ ತೂಕದ ಸಲಕರಣೆಗ, ಮನೆ ಮತ್ತೆ ಕಟ್ಟಣಗಳ ಕಟ್ಟ್‌ವ ವಿವರಗ ಮತ್ತೆ ಅದರ ಬಾಗಗಳ ಹೆಸರ್‌ಗ ಹೀಂಗೆ ಸೊತ್ತ್‌ಗಳ ಪಾಲ್‌ಮಾಡಿ ಬೌತಿಕ ಸಂಸ್ಕೃತಿ ಅದ್ಯಯನಲಿ ಅನ್‌ಸರ್ಸುವ ಸಾಮಾನ್ಯ ವಿದಾನ ಆವುಟು. ಈ ಸಂಪುಟಲಿ ಅಳವಡ್ಸಿದ ವರ್ಗೀಕರಣ ವಿದಾನ ಹೀಂಗುಟ್ಟು : 1. ಅಳತೆ ಸೊತ್ತುಗ 2. ಅಡುಗೆ ಸೊತ್ತುಗ

3.ಮೊದ್ದ್‌ನ ಸೊತ್ತುಗ 4.ಕೃಷಿ ಸೊತ್ತುಗ 5. ದಿನಬಳ್ಕೆನ ಸೊತ್ತುಗ 6. ಪೂಜಾ ಸೊತ್ತುಗ 7.ಪ್ರಾಣಿ ಬೇಟೆ ಮಾಡ್ವ ಹತ್ಯಾರ್‌ಗ 8. ಶಿಕ್ಷಣಕೆ ಸಮ್ಮಂದಪಟ್ಟ ಸೊತ್ತುಗ ಮತ್ತೆ 9. ಇತರ ಸೊತ್ತುಗ. ಹೀಂಗೆ ಪಾಲ್‌ಮಾಡಿ ಸೊತ್ತುಗಳ ಹೆಸರ್‌ನ ಅಕಾರಾದಿ ಪೊಟ್ಟಿ ಮಾಡ್ಯೋಳ. ಅಡುಗೆ ಸೊತ್ತುಗ (ಸುಮಾರ್ ಐವತ್ತ್), ಕೃಷಿ ಸೊತ್ತುಗ (ಸುಮಾರ್ ಐವತ್ತೈದ್), ದಿನ ಬಳ್ಕೆನ ಸೊತ್ತ್‌ಗ (ಸುಮಾರ್ ಇಪ್ಪತ್ತೆರಡ್) ಈ ಪೊಟ್ಟಿ ಬಾಕಿದ್ದಕ್ಕಿಂತ ಉದ್ದ ಉಟ್ಟು. ಈ ಪೊಟ್ಟಿಲಿ ಸೆರಿರ್ವ ಸೊತ್ತುಗ ಬೌತಿಕ ಸಂಸ್ಕೃತಿನ ಗೊತ್ತ್ ಮಾಡ್ವಲ್ಲಿ ದೊಡ್ಡ ಪಾತ್ರವಹಿಸಿದೆಂತೇಳ್‌ದು ಇದ್ಕೆ ಇರ್‌ವ ಕಾರಣವಾಗುಟ್ಟು. ಬೆನ್ನಿ ಬೇಸಾಯ, ತಿನ್ಸ್‌ನ ಬೆಳಿದು, ತಿನ್ಸ್ ತಯ್ಯಾರ್ ಮಾಡ್‌ದು ಮತ್ತೆ ಅದರ ಬಳ್ಸುದು ಇವ್ ಎಲ್ಲ ಮುಕ್ಯ ಆದ್ದ್ ಇನ್ನೊಂದು ಕಾರಣ.ದಿನದ ಅಡುಗೆ ಅಲ್ಲದೆ ಹಬ್ಬ ಹರಿದಿನಗಳ್‌ಲಿ ವಿಶೇಷ ಅಡುಗೆ, ಆಹಾರ ಸೊತ್ತುಗಳ ಸಂರಕ್ಷಣೆ ಇದರ ಮೇಲೆ ವಿಸೇಸ ಗಮನ ಕೊಟ್ಟದ್ ಮತ್ತೊಂದ್ ಕಾರಣ. ನೆಲ ಗದ್ದೆನ ಪೂಜಿಸ್‌ವ, ಅಕ್ಕಿನ ಬಡ್ತನ ಕಮ್ಮಿ ಮಾಡಿಕೆ, ಸಮೃದ್ದಿನ ಸೂಚ್‌ಸಿಕೆ, ಸಂತಾನದ ಆಶಯನ ತುಂಬುಸಿಕೆ ಹೀಂಗೆ ನಾನಾ ಉದ್ದೇಸಕೆ ಬಳ್ಸ್‌ವ ಆಶಯನ ಅರೆಬಾಸೆ ಮಾತಾಡ್‌ವ ಸುಳ್ಯ ಪರಿಸರದ ಗೌಡ ಜನಾಂಗನ ಸಾಂಸ್ಕೃತಿಕ ಅದ್ಯಯನ ಮಾಡ್ದ ಡಾ. ಪುರುಷೋತ್ತಮ ಬಿಳಿಮಲೆವು ಗುರ್ತಿಸಿಯೊಳ. ಈ ಹಿನ್ನೆಲೆಲಿ ಈ ಸೊತ್ತುಗಳ ಸಾಂಸ್ಕೃತಿಕ ಮಹತ್ವನ ನಾವು ನೆನ್ಸಿಕಣಕು.

ವಿಸಯ ಸೆರಿಯಾಗಿ ತಲೆಗೆ ಹುಗ್ಗುವಂಗೆ ಮಾಡಿಕೆ ಪ್ರಯತ್ನ ಪಟ್ಟೊಳೊ. ನೀವ್ ಕೆಲವ್ ಸೊತ್ತುಗಳ ಹೆಸ್ರ್‌ಗಳ ನೋಡಕ್. ಅಡಿಗೆರ, ಅಳೆಗೆ, ಇಡ್‌ಮಣೆ, ಇಡ್ಲಿ ಮಿಲ್ಲಿ, ಉಪ್ಪುನ ಗುತ್ತಿ–ಕೊಮ್ಮೆ, ಒಣಲೆ, ಕೈ ಮರ್ಚಟೆ, ಚಿಬುಳೆ, ಕುದುಪೆ, ಸೂಂಪೆ, ಸೆಡೆ, ಕುಕ್ಕೆ, ಮಿಂಟಿ, ಸಬ್ಬಲ್, ಪಾರೆಂಗಿ, ಪೊಂಚು ಕುಕ್ಕೆ, ಒಚ್ಚಿಮರ, ಕತ್ತಿ ನೇಕೆ, ಕಿಡಿಂಜೋಳು, ಕೊರಿಂಗೆ, ಬೆಂಡ್ ಕುಕ್ಕೆ, ಒಲಿ ಮೊಂದ್ರಿ, ಕಡ್ಕಲ್, ಕೂಂಜೋಳು, ಕುರ್ಚಟೆ, ಗೊಟ್ಟ ಹೀಂಗೆ ಸುಮಾರ್ ಸೊತ್ತುಗಳ ಮತ್ತ್ ಅವ್‌ಗಳ ಹೆಸ್ರ್ ಅರೆಬಾಸೆ ಮಾತಾಡ್ವವರ ಜನಪದ ಬಂಡಾರ ಅವುಟ್ಟು. ಬೇರೆ ಬಾಸೆಂದ ಬಂದ ಪದಗ ಮತ್ತೆ ವಲಸೆ ಸಂಸ್ಕೃತಿನ ಅದ್ಯಯನಕೆ ಇಂತ ಸಂಪುಟಗ ಅದಾರ ಆದವೆ. ಸೊತ್ತುಗೆ ಅರೆಬಾಸೆಲಿರ್‌ವ ಹೆಸ್ರ್, ತುಳು, ಮಲೆಯಾಳಿ, ಬ್ಯಾರಿ ಹೀಂಗೆ ಬೇರೆ ಬಾಸೆಗಳ್‌ಲಿ ಇರ್‌ವ ಸಮಾನಾಂತರ ಹೆಸರ್‌ಗ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಸಕಲೇಶಪುರ ಹೀಂಗೆ ನೆರೆಕರೆಲಿ ಈ ಸೊತ್ತ್ ಬಳೆಕೆಲಿ ಉಟ್ಟಾ ತ ಮಾಹಿತಿ, ನಿರ್ದಿಷ್ಟ ಸೊತ್ತುನ ತಯಾರಿ ಪ್ರಕ್ರಿಯೆನ ಹಂತಹಂತಗಳ ವಿವರಣೆ, ತಯಾರಿಕೆಗ ಬಳ್ಸ್‌ವ ಸೊತ್ತ್‌ಗಳ ಮಾಹಿತಿ, ಅದರ ಬಳಸ್‌ವ ವಿದಾನ, ಉಪಯೋಗ್ಸ್‌ವ ವಿಸೇಸ ತಂತ್ರಗಾರಿಕೆ, ಬಳಕೆನ ಸಾಮಾನ್ಯ ಮತ್ತೆ ವಿಸೇಸ ಸಂದರ್ಬಗ, ಸೊತ್ತುನ ಕಲಾತ್ಮಕತೆ ಮತ್ತೆ ಪೊರ್ಲು, ಸೊತ್ತ್‌ನ ಬೇರೆ ಪ್ರಬೇದಗ, ಸೊತ್ತ್‌ನ ಬೇರೆ ಬೇರೆ ಬಾಗಗಳ ಹೆಸರ್‌ಗ, ಸಲಕರಣೆನ ತಯಾರ್ಸ್‌ವ ಕುಶಲಕರ್ಮಿಗಳ ಜನಾಂಗೀಯ ವಿವರಗ, ಕೆಲವು ಸೊತ್ತುಗಳ್‌ಗೆ ಸಮ್ಮಂದ ಆವ ಪೊದ್ಯ, ಗಾದೆ ಒಗಟ್, ನಂಬಿಕೆಗಳ ಕೊಟ್ಟೊಳದ್ ಹೀಂಗೆ ಮಾಹಿತಿಗ ಸಮಗ್ರ ಆವಂಗೆ ಎಚ್ಚರಿಕೆಲಿ ಸಂಶೋದನಾ ಸಹಾಯಕರ್ ಕೆಲ್ಸ ಮಾಡ್ದರ್‌ಂದ ಈ ಸಂಪುಟದ ಸಾಂಸ್ಕೃತಿಕ ಮಹತ್ತ ಹೆಚ್ಚಾಗುಟು. ಕಡಲ್ ಕರೆನ ಬೇರೆ ಜೆನಂಗ ಬಾಸಿಕ, ಪ್ರಾದೇಸಿಕ, ಸಾಂಸ್ಕೃತಿಕ ನೆಲೆಲಿ ಪಾರಂಪರಿಕ ಪದಕೋಶ ಕಟ್ಟ್‌ವ ಅಗತ್ಯನ ಈ ಸಂಪುಟ ತೋರ್ಸಿ ಕೊಟ್ಟದೆ.

ನಮ್ಮ ನಾಡ್‌ನ ಜೆನರ, ಅದರ್ಲಿನು ಬೆನ್ನಿ ಬೇಸಾಯ ಮಾಡ್ವ ಮೆತ್ತೆ ಕೂಲಿ ಕೆಲ್ಸಕೆ ಹೋವ ಜೆನರ ಇತಿಹಾಸನ ಕಟ್ಟ್‌ವ ಪ್ರಯತ್ನ ಈಗ ಹೆಚ್ಚ್ ಹೆಚ್ಚ್ ನಡಿತ ಉಟ್ಟು. ಈ ಬಗೆನ ಇತಿಯಾಸನ ಬಾಯಿಮಾತ್‌ನ ಇತಿಯಾಸ ಅಂತ ಕರ್‌ದವೆ. ಬರೆವ ಪರಂಪರೆನ ಮೂಲ ಸೊತ್ತ್‌ಗಳ ಬಳ್ಸಿ ಬರೆವ ಇತಿಯಾಸಕ್ಕಿಂತ ಬಾಯಿಮಾತ್‌ನ ಇತಿಯಾಸ ತುಂಬಾ ಬೇರೆ ಬೇರೆ ಅವುಟ್ಟು. ಅರೆಬಾಸೆ ಮಾತಾಡ್ವ ಗೌಡ್ರ ಇತಿಯಾಸ ಹೊಸ ರೂಪಲಿ ಕಟ್ಟುದಾದರೆ ಈ ಪುಸ್ತಕ ಉಪಕಾರಕೆ ಬಾದು. ಗೌಡರ ಕುಟುಂಬ, ಆಹಾರ, ಕುಲ ಕಸುಬುಗ, ಗದ್ದೆ ಮತ್ತೆ ಬೇಸಾಯ, ಕುಟುಂಬ ನಿರ್ವಹಣೆ, ಆರೋಗ್ಯ ರಕ್ಷಣೆ, ಆಚರಣೆಗ ಇವ್‌ಗಳ್‌ಗೆ ಸಮ್ಮಂದ ಇರ್‌ವ ಸಾಂಸ್ಕೃತಿಕ ಇತಿಯಾಸನ ಈ ಸೊತ್ತುಗಳ ಕೋಶನ ಮಾಹಿತಿ ನೆರವುಲಿ ಕಟ್ಟಕ್. ಈ ಪುಸ್ತಕಲಿರ್‌ವ ಸೊತ್ತುನ ಚಿತ್ರಗಳ ನಿರ್ಜೀವಂತ ನೋಡದೆ ಆ ಚಿತ್ರಗ ವಿವರಣೆ ಮುಕೇನ ಬಿಚ್ಚಿಸುವ ಕತೆಗೆ ನಾವ್ ಕೆಬಿ ಕೊಡಕು. ಪ್ರತಿಯೊಂದ್ ಸೊತ್ತುಗ ಸಾ ಅದರ ಚರಿತ್ರೆನ ಬರೆಯಕೆ ಕಾದು ಕುದ್ದೊಳೊ. ನಾವ್ ಹಂಞ ಆಸಕ್ತಿ ತೋರ್ಸಿರೆ ಕೆಲವ್ ಸೊತ್ತುಗ ನಾವ್‌ಗೆ ಗೊತ್ತಿರದ ನಿಗೂಡ ಲೋಕನ ಬುಳ್ಗಿ ಇಸಿಕೆ ಉತ್ಸುಕ ಆಗಿದ್ದವೆ. ಎಲ್ಲೋ ಹುಟ್ಟಿ ಎಲ್ಲಿಗೋ ವಲಸೆ ಬಂದದರ ಹೇಳ್‌ವೆ. ಕೆಲ್ಸಂದ ಬಿಡ್ಗಡೆ ಆಗಿ ಮೂಲೆ ಸೇರ್ದರ ತಿಳ್ಸ್‌ವೆ. ನಿಜವಾಗಿ ಸೊತ್ತುಗ ಕಟ್ಟ್‌ವ ಇತಿಯಾಸದ ಕತನಗ ಜೆನರ ಇತಿಯಾಸನೇ ಆಗಿದ್ದದೆ. ಈ ಸೊತ್ತುಗಳ್‌ಂದ ನಾವ್ ಪಡೆವ ಜ್ಞಾನ ಜೆನರ ಸಂವಹನದ ಬಾಗನೇ ಆವುಟು. ಅರೆಬಾಸೆನ ಮಾತಾಡ್‌ವ ಜೆನರ್ ಹಿಂದೆ ಬಳ್ಸಿದ್ದ ಮತ್ತೆ ಈಗ ಬಳಸ್ತಿರ್‌ವ ಸೊತ್ತುಗಳ ಗೌಡ ಸಮಾಜದ ಸಾಮಾಜಿಕ ವಾಸ್ತವತೆನ ತಿಳಿಸಿವೆ. ಸೊತ್ತುಗಳ ಬಳಕೆ ಮಾತ್ರ ಅಲ್ಲ, ಅದರ ಮಾಡ್‌ವ, ಹಂಚ್‌ವ ಮತ್ತೆ ಮಾರ್‌ವ ಇತಿಯಾಸನೂ ಈ ಸೊತ್ತುಗ ಹೇಳ್‌ವೆ. ವಸ್ತು ಸಂಗ್ರಹಾಲಯ ಮಾಡ್ವ ವಿಸೇಸ ಕೆಲಸನ ಈ ಪುಸ್ತಕ ಬೇರೆ ಬೇರೆ ರೂಪಲಿ ಮಾಡಿದೆ. ವಸ್ತು ಸಂಗ್ರಹಾಲಯದ ಸಾಧ್ಯತೆಗ ತುಂಬಾ ಉಟ್ಟು. ಪುಸ್ತಕದ ಕಡೆಲಿರ್‌ವ ಅನುಬಂಧಲಿ ಡಿಜಿಟಲ್ ವೀಡಿಯೋ ಕೊಡ್‌ವ ಕ್ರಮ ಸಾ ಉಟ್ಟು. ಅಕಾಡೆಮಿ ಬಾವ ದಿನಲಿ ತಂತ್ರಜ್ಞಾನನ ಬಳಸಿಕೊಂಡ್ ಪೊರ್ಲುನ ಮ್ಯೂಸಿಯಂನ್ ಸಾ ಮಾಡಕ್.

ಸೊತ್ತುಗಳ ಚಿತ್ರ ಮತ್ತೆ ವಿಸಯಗಳ ಸಂಗ್ರಹಿಸಿ ಪುಸ್ತಕಲಿ ಅದರ ಜೋಡಣೆ ಮಾಡ್ದ ರೀತಿ ಬಾರಿ ಪೊರ್ಲಾವುಟ್ಟು. ಪಂಡ್‌ಲಿ ಜೆನಗ ಬಳಸ್‌ತಿದ್ದ ಸುಮಾರ್ ಸೊತ್ತ್‌ಗ ಇಂದ್ ಬಳ್ಸುದುಲೆ. ಸೊತ್ತುಗಳ ಬಳಸ್‌ದುಲೆಂತೇಳಿರೆ ಅದರ ಮಾಡ್ವ, ಬಳಸ್ವ ಗೇನ ಸಾ ಇಲ್ಲೆಂತಾವುಟ್ಟು. ಕಾಂಬ ಸೊತ್ತ್‌ಗೆ ಸಮ್ಮಂದ ಆವ ದೇಸೀ ಜ್ಞಾನ ಪರಂಪರೆನ ನಾವ್ ಕಳ್ಕಣತೊಳ. ನಮ್ಮ ಹಿರಿಯರ ಜೀವನ ಕ್ರಮಲಿ ಆಗಿರ್‌ವ ಬದಲಾವಣೆನ ಮೇಲೆ ಇದ್ ಬೊಳ್ಳು ತೋರ್ಸಿದೆ. ಮೊಣ್ಣು, ಮರದ ಸೊತ್ತ್‌ಗಳ ಜಾಗೆಲಿ ಇಂದ್ ಕೀಜಿನ ಸೊತ್ತ್‌ಗ ಬಂದ್ ತುಂಬಾ ದಿನಗ ಅವುಟ್ಟು. ಪಂಡ್‌ನ ಸೊತ್ತ್‌ಗಳ ಜಾಗೆಲಿ ಹೊಸ ಸೊತ್ತ್‌ಗ ಬಂದದೆ ಅಂದರೆ ಜೆನರ ಜೀವನ ಮಾಡ್ವ ಕ್ರಮ ಮಾತ್ರ ಅಲ್ಲರ್ ಅವರ ಅಲೋಚನೆ ಮಾಡ್ವ ರೀತಿನೆ ಬದಲಾಗುಟುತ ಅರ್ತ. ಹೆಣ್ಮಕಳ ಗಂಡ್‌ಸ್‌ಗಳ ಶ್ರಮನಹೊಸ ತಂತ್ರಜ್ಞಾನ ತುಂಬ ಕಡಿಮೆ ಮಾಡ್ಯುಟ್ಟು. ಇಂತ ಬದಲಾವಣೆನ ಒಪ್ಪುದಿರಿಕೆ ಆದುಲೆ.ಅದರೆ ನಮ್ಮ ಜೀವನ ಕ್ರಮಲಿ ಅವ ಬದಲಾವಣೆನ ವೇಗ ಮತ್ತೆ ನಮ್ಮೊಟ್ಟಿಗೆ ಕಳ್ದು ಹೋಗತಿರುವ ಪಾರಂಪರಿಕ ಸೊತ್ತ್‌ಗಳ ಪ್ರಮಾಣ ಇವ್‌ಗಳ ನೋಡಿರೆ ನಮ್ಮೊಳಗೊಳಗೆ ಬಾರಿ ಬೇಜಾರಾದೆ. ಈ ಬಗೆನ ವಿಷಾದದ ಜತೆಗೆ ಹೊಸ ಎಚ್ಚರನ ಮೂಡ್ಸ್‌ವ ಕೆಲ್ಸನ ಈ ಸಂಪುಟ ಮಾಡ್ದು. ಹಂಗಾಗಿ ಈ ಸಂಪುಟ ಅರೆಬಾಸೆ ಸಂಸ್ಕೃತಿನ ಹೆಗ್ಗನ ಹೆಚ್ಚಿಸುದುಂತ ನಾ ನಂಬ್ಯೊಳೆ.

ಈ ಪಾರಂಪರಿಕ ವಸ್ತುಕೋಶನ ಕಾರ್ಯನಿರ್ವಹಣಾ ಸಂಪಾದಕರಾದ ಬಿಳಿನೆಲೆ ಶ್ರೀ ಜಯಪ್ರಕಾಶ್ ಮೋಂಟಡ್ಕ ಮತ್ತೆ ಅಕಾಡೆಮಿನ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಇವ್ ಇಬ್ಬರ್ ನನ್ನ ಮೇಲೆ ಇಸಿದ ಪ್ರೀತಿ ಇದ್ಕೆ ಕಾರಣ ಆವುಟು. ಈ ಕೋಶದ ಬಣ್ಣದ ಚಿತ್ರಕೆ ಲೇಕನಗಳ ಬರ್ದ್‌ಕೊಟ್ಟ್ ಶ್ರೀ ಎಂ.ಜಿ. ಕಜೆ, ಶ್ರೀ ಬಾರಿಯಂಡ ಜೋಯಪ್ಪ, ಶ್ರೀ ಕುಂಞಟ್ಟಿ ಶಿವರಾಮ ಗೌಡ ಹಾಂಗೇ ವಾಣಿಜ್ಯೇತರ ಮೊನ್ಸ್‌ಂದ ದುಡ್‌ದ ಸಂಪಾದಕ ಬಳಗದ ಡಾ. ವಿಶ್ವನಾಥ ಬದಿಕಾನ, ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು ಮತ್ತೆ ಭರತೇಶ ಅಲಸಂಡೆಮಜಲು ಅವರ್‌ನೂ ನಾ ಅಬಿನಂದಿಸಿನೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಶೈಕ್ಷಣಿಕ ಮಹತ್ವನ ಇಂತ ಪ್ರಕಟಣೆಗ ಹೆಚ್ಚಿಸ್‌ವೆ. ಅಕಾಡೆಮಿ, ಅದ್ ಪ್ರತಿನಿಧಿಸ್ವ ಜೆನರ ಬಾಸೆ, ಸಾಹಿತ್ಯ ಮತ್ತೆ ಸಂಸ್ಕೃತಿನ ಬೆಳವಣಿಗೆಗೆ ಕಾರಣ ಅವ ರೀತಿಲಿ ಸುಮಾರ್ ಯೋಜನೆನ ತಯಾರ್ ಮಾಡಿ ಅದರ ಕಾರ್ಯರೂಪಕೆ ತಾವ ಅದ್ಯಕ್ಷರ್‌ಅಗಿರ್‌ವ ಶ್ರೀ ಲಕ್ಷೀನಾರಾಯಣ ಕಜೆಗದ್ದೆಯವು ಮತ್ತೆ ಅವರ ಗೈಮೆನ ನಿಯತ್ತ್‌ನ ಅಬಿನಂದಿಸಿನೆ.

ಪರಿವಿಡಿ

ಅಡ್‌ಗೆ ಸಾಮಾನ್‌ಗ

ಅಳತೆ ಸೊತ್ತುಗ

ಕೃಸಿ ಸಲಕರಣೆಗ

ನಿತ್ಯೋಪಯೋಗಿ ವಸ್ತ್‌ಗ

ಪೂಜೆ ಸಾಮಾಗ್ರಿಗ

ಬೇಟೆ ಹತ್ಯಾರ್‌ಗ

ಮೊದ್ದುನ ಸಲಕರಣೆಗ

ಹಳೆ ಇತರ ಸೊತ್ತುಗ

ಅರೆಭಾಷೆ ಪಾರಂಪರಿಕ ವಸ್ತುಕೋಶ

ಅಡ್ಗೆ
ಸಾಮಾನ್ಗ



ಅಡಿಗೆರ

ಗಂಜಿ ತೆಳಿ ಬಾಗ್ಸುವ ಪಾತ್ರೆ ಅಡಿಗೆರ. ಹುಗ್ಗೆ ಮಾಡೊಕುಂತಾರೆ ಗಂಜಿ ತೆಳಿನ ಬಾಗ್ಸೊಕು.

ತುಳುಲಿ ಅಡ್ಯರ, ಮಲೆಯಾಳಂಲಿ ಕಞ ಕಲಂ, ಕೊಂಕಣಿಲಿ ವಳ್ಣಿ, ಬ್ಯಾರಿ ಬಾಸೆಲಿ ಅಡಿಕಲಂತೇಳ್ವೆ. ಇದರ ದ.ಕನ್ನಡ ಜಿಲ್ಲೆ, ಉಡುಪಿ, ಕೊಡಗ್ ಜಿಲ್ಲೆಲಿ ಹೆಚ್ಚಾಗಿ ಬಳಕೆ ಮಾಡ್ವೆ.

ಅಡಿಗೆರ ನೋಡಿಕೆ ಹಞ ಉರುಟಾಗಿ ಗೆಯ್ಪುನ ಅಳೆಗೆನ ಹಾಂಗೇ ಇದ್ದದೆ. ಅಡಿಗೆರನ ನೆಲಲಿ ಕುತ್ತ ಇಸಿಕೆ ಆವ ಹಾಂಗೆ ಮೊಣ್ಣ್ಂದಲೇ ಸುತ್ತೊಳು ಮಾಡ್ದ ಒಂದು ಕಂಟ ಇದ್ದದೆ. ಹಾಂಗಾಗಿ ನೆಲಲಿ ಇಸಿಕೆ ಸೂಂಪೆ ಬೇಕುಂತಿಲ್ಲೆ.

ಗಂಜಿ ಬೆಂದಾಕನ ಮಡಿಕೆನ ಇಳ್ಗ್‌ಸ್‌ವೆ. ಇಳ್ಗ್‌ಸಿ ಗಂಜಿ ಮಡ್ಕೆ ಮೇಲೆ ಚಿಬುಳೆ ಮತ್ತೆ ಮರ್ಚಟೆನ ಮೇಲೆ ಮೇಲೆ ಇಸ್‌ವೆ. ಮಡಿಕೆನ ಮೇಲೆನ ಕಂಟಲಿ ಕೈಂಕುತ್ತಲಿ ಹಾಂಗೇ ಹಿಡ್ಕಂಡ್ ಅಡಿಗೆರದ ಬಾಯಿಗೆ ಮಡಿಕೆನ ಬಾಯಿ ಬಾವ ಹಾಂಗೇ ಮೆಲ್ಲಂಗೆ ಹಞ ಓರೆ ಮಾಡಿ ಇಸಿ ಬಾಗ್ಸ್‌ವೆ. ಹಾಂಗೇ ಬಾಗ್ಸಿ ಮಡಿಕೆನ ಬಾಯಿ ಅಡಿಗೆರಲಿ ಸರಿ ಕುದ್ರ್‌ಸೊಕು. ಅಡಿಗೆರನ ಮೇಲೆ ಸರಿ ಕುದ್ದಾಕನ ಮಡ್ಕೆನ ಬುಟ್ಟ್ ಬುಡೊಕು. ತೆಳಿ ಚಿಬುಳೆನ ಒಟ್ಟೆಲಿ ಇಳ್ಕಂಡ್ ಅಡಿಗೆರಲಿ ತುಂಬಿದೆ. ಚಿಬುಳೆನ ತಾಂಗ್ಸಿಕಾಂಕೆ ಮರ್ಚಟೆ ಇರ್ದು. ತೆಳಿ ಪೂರಾ ಇಳ್ದ್ ಹೋದ ಮೇಲೆ ಮಡಿಕೆನ ಸರ್ತ ಮಾಡಿ ಇಸ್‌ವೆ.

ಮನೆನ ಒಳಗೆ ಹಞ ಜನ ಇದ್ದರೆ ಮಡ್ಕೆಲಿ ಗಂಜಿ ಮಾಡಿ ಅಡಿಗೆರಕೆ ಬಾಗ್ಸ್‌ವೆ. ದೊಡ್ಡ ಜಂಬರ ಇದ್ದರೆ ದೊಡ್ಡ ಕುಡ್ಸುಗೆ ಬೆತ್ತದ ಕುಕ್ಕೆಗೆನೂ ಸನಾ ಗಂಜಿ ತೋಂಡುವೆ. ಮೂಲ್ಯರ್ ಕುಲಕಸುಬ್ ಅಗಿ ಮೊಣ್ಣ್‌ನ ಮಡ್ಕೆಗಳ ಮಾಡ್ವೆ. **(ಎಂ.ಜಿ.ಕೆ)**



ಅಪುದಿಟ್ಟ್ ಕಾವುಲಿ

ಅಪುದಿಟ್ಟ್ ಮಾಡ್ವ ಕಾವುಲಿಗೆ ಅಪುದಿಟ್ಟ್ ಕಾವುಲಿಂತ ಹೇಳುವೆ. ತುಳುಲಿ ಅಪ್ಪದ ಕಾವುಲಿ, ಮಲೆಯಾಳಂಲಿ ಅಪ್ಪಕಾರ, ಬ್ಯಾರಿ ಬಾಸೆಲಿ ಕುದಿ ಅಪ್ಪಕಾವುಲಿಂತ ಹೇಳ್ವೆ.

ದಕ್ಷಿಣ ಕನ್ನಡ, ಉಡುಪಿ, ಕೊಡಗ್, ಹಾಸನ ಹೀಂಗೇ ಬೇರೆ ಬೇರೆ ಜಿಲ್ಲೆಗಳ್‌ಲಿ ಅಪುದಿಟ್ಟ್ ಕಾವುಲಿ ಇದ್ದದೆ.

ಕಾಡ್‌ಲಿ ಮೆತ್ತಂಗೆ ಇರ್ವ ಒಂದ್ ಜಾತಿಕಲ್ಲ್ ಇದ್ದದೆ. ಇದರ ಬಳದ ಕಲ್ಲ್‌ತ ಹೇಳ್ವೆ. ಈ ಕಲ್ಲ್‌ನ ಹಲಗೆನ ಹಾಂಗೆ ಮೂರು ಅಲ್ಲರ್ ನಾಲ್ಕ್ ಅಂಗುಲದಷ್ಟ್ ದಪ್ಪಕ್ಕೆ ಕೊಯ್ಯೊಕು. ಕಾವುಲಿನ ಚಕ್ರದಾಂಗೆ ಉರುಟಾಗಿ ಕೆತ್ತೊಕು. ಇದರ್ಲಿ ಏಳ್ ಗುಂಡಿ ಇದ್ದದೆ. ಕಾವುಲಿ ದೊಡ್ಡದಾದರೆ ಗುಂಡಿ ದೊಡ್ಡದಿದ್ದದೆ. ಬಳದ ಕಾವುಲಿನ ಮರದ ಆಚಾರಿಗ ಮತ್ತೆ ಕೆಲವು ಬೇರೆ ಜಾತಿಯವು ಸ ಮಾಡ್ವೆ. ಇಂತಾ ಕಾವುಲಿನ ಮೊಣ್ಣ್‌ಲಿ, ಕಬ್ಬಿಣಲಿಸ ಅಪ್ಪುದಿಟ್ಟು ಕಾವುಲಿನ ಮಾಡುವೆ. ಮೊಣ್ಣ್‌ನ ಕಾವುಲಿನ ಮಡಿಕೆ ಮಾಡ್ವ ಮೂಲ್ಯ ಸಮುದಾಯದವು ಮಾಡ್ವೆ.

ದೀಪಾವಳಿ, ಕಾವೇರಿ ಸಂಕ್ರಮಣ ಇಂತ ಹಬ್ಬ ಹರಿ ದಿನಗಳ್‌ಲಿ ಅಪುದಿಟ್ಟ್ ಮಾಡ್ವ ಕ್ರಮ ಉಟ್ಟು. ಮನೆಗೆ ನೆಂಟ್ರ್ ಬಾಕನ ಅವ್ಕೆ ಸಂಮಾನ ಮಾಡೊಕಾರ್ ಅಪುದಿಟ್ಟ್ ಮಾಡ್ವೆ. **(ಎಂ.ಜಿ.ಕೆ)**



ಇಡ್ಮಣೆ

ಅಕ್ಕಿ ಹಿಟ್ಟ್‌ಂದ ಸೇಮಿಗೆ ಮಾಡ್ವ ಮರದ ಸೊತ್ತಿಗೆ ಇಡ್ಮಣೆ, ಸೇಮಿಗೆ ಮಣೆಂತ ಹೇಳ್ವೆ. ಎರಡ್ ಮಣೆಗಳ ಎಡೆಲಿ ಹಿಟ್ಟ್ ಬಾವ ಕಾರಣಂದ ಇಡ್ಮಣೆಂತ ಕರ್ದವೆ. ಇದ್ಕೆ ನೂಕುಮಣೆ, ಒತ್ತುಮಣೆ, ನೂಪಿಟ್ಟ್ ಮಣೆ ಅಂತಲೂ ಹೇಳ್ವೆ.

ತುಳುಲಿ ಇದ್ಕೆ ಸೇಮೆಗೆತ ಮಣೆ, ಇರ್ಮಣೆ, ಪಿರಿಮಣೆಂತ, ಮಲೆಯಾಳಂಲಿ ನೂಲುಪುಟ್ಟು ಪಲಗ, ಬ್ಯಾರಿ ಬಾಸೆಲಿ ಇಡಿ ಅಪ್ಪ ಪಲೆಂತ ಹೇಳ್ವೆ.

ಇಡ್ಮಣೆನ ಮರಲಿ ಮಾಡ್ವೆ. ಎರಡ್‌ಕಾಲ್, ಮೂರುಕಾಲ್, ನಾಲ್ಕ್‌ಕಾಲ್ನ ಮಣೆ ಸ ಉಟ್ಟು. ಅಂದಾಜ್ ಒಂದ್ ತೋಳ್‌ನಷ್ಟು ಎತ್ತರದ ಮಣೆಲಿ ನಡುಲಿ ಒರ್ಳ್ ಕಲ್ಲ್‌ನ ಗುಂಡಿನ ಹಾಂಗೆ ಇದ್ದ್ ಅಡಿಮೆಯ್ಯಿಗೆ ಕಾಲಿ ಇದ್ದದೆ. ಈ ಒರ್ಳಿಗೆ ಸಣ್ಣ ಸೇರ್‌ನ ಆಕಾರದ ಪಾತ್ರೆಗೆ ಅಡಿಮೆಯ್ಯಿಲಿ ಸಣ್ಣ ಸಣ್ಣ ಒಟ್ಟೆ ಇರ್ವ ಹಿತ್ತಾಳೆ ಪಾತ್ರೆನ ಇಸ್‌ವೆ. ಆ ಪಾತ್ರೆ ಅಲ್ಲಿ ಕುದ್ರಿಕೆ ಬೇಕಾದಸ್ಟೆ ಜಾಗೆ ಇದ್ದ್ ಅದ್ ಕಾಗಡೆ ಬೀಳದ ಹಾಂಗೆ ಮಾಡ್‌ವೆ. ಈ ಪಾತ್ರೆನ ಒಳಗೆ ಅಡ್ಡ ಕುದ್ರ್‌ವ ಹಾಂಗೆ ಮರನ ಕೆತ್ತಿದ್ ಅದರ ಮೇಲೆ ಎರಡ್ ಪುಡೆಗೂ ಅಡ್ಡಕ್ಕೆ ಅಂದಾಜ್ ಒಂದ್ ತೋಳ್‌ನಷ್ಟು ಉದ್ದದ ಹಿಡಿ ಇದ್ದದೆ. ಇದರ ಕುದುರೆಂತಲೂ ಹೇಳ್ವೆ. ಕೆಲವ್ ಮಣೆಗೆ ನಾಲ್ಕ್ ಕಾಲ್ ಇದ್ದ್ ಸಣ್ಣ ಮರದ ದಡೆನ ಹಾಂಗೆ ಮಾಡಿ, ಒಂದ್ ಕರೆಗೆ ಇರ್‌ವ ಕಾಲ್ಗಳ ಎರಡ್ ಗೇಣ್‌ನಸ್ಟ್ ಇರ್‌ವ, ಎರಡ್ ಕಾಲ್ಗಳ ನಡುಲಿ ಅಡ್ಡಕ್ಕೆ ಕಾಗಡೆ ಮೇಗಡೆ ಮಾಡ್‌ವ ಹಾಂಗೆ ಮರದ ಕುದುರೆನ ಕೀಲ್ ಹಾಕಿ ಜೋಡ್ಸ್‌ವೆ. ಬೆಂಚ್‌ನ ನಡುಲಿ ಒರ್ಳ್‌ಕಲ್ಲ್‌ನ ಹಾಂಗೆ ಗುಂಡಿ ಮಾಡಿ ಹಿತ್ತಾಳೆದ್ ಒಟ್ಟೆ ಇರ್‌ವ ಪಾತ್ರೆ ಜೋಡ್ಸ್‌ವ್ವೆ. ಕುದುರೆನ ನಡುಲಿ ಪಾತ್ರೆಗೆ ಅಡ್ಡ ಆವ ಹಾಂಗೆ ಕೆತ್ತಿದ ಮರದ ತುಂಡ್‌ನ ಜೋಡ್ಸುವೆ. ಕುದುರೆನ ಮೇಲೆ ಮಾಡಿಕನ ಪಾತ್ರೆನ ಒಳಗೆ ಅಡ್ಡ ಇರ್‌ವ ತುಂಡು ಮೇಲೆ ಬಂದದೆ. ಮೇಲೆಂದ ಒತ್ತ್‌ಕನ ಅದ್ ಪಾತ್ರೆ ಒಳಗೆ ಹೋದೆ. ಮಣೆ ಪೊರ್ಲು ಕಾಂಬಕೆ ಅದರ ಮೇಲೆ ತರ ತರದ ಚಿತ್ರ ಕೆತ್ತ್‌ವೆ. ಇದರ ಮರದ ಆಚಾರಿಗ ಮಾಡುವೆ.

ಮನೆಲಿ ಏನಾರ್ ಗಮ್ಮತ್ ಮೊನಿ ಇದ್ದರೆ, ನೆಂಟ್ರ್ ಬಂದರೆ ಸೇಮಿಗೆ ಮಾಡುವೆ. ಕುಚ್ಚುಲು ಅಕ್ಕಿಗೆ ಹಳಿ ಬೆಂತೆಕ್ಕಿ ಸೇರ್ಸಿರೆ ಒಳ್ಳದ್ ನೀರ್‌ಲಿ ನೆನ್ಸಿ ಕಡ್ದ್ ಬೇಕಾದಸ್ಟ್ ಉಪ್ಪು ಹಾಕಿ ಮಾಜ್‌ಸಿ ಪುಂಡಿ ಮಾಡಿ ಬೆಚ್ಚ ಬೆಚ್ಚ ಇರಿಕನ ಒರ್ಳಿಗೆ ಹಾಕಿ ಕುದುರೆಲಿ ಒತ್ತ್‌ವೆ. ಆಗ ಹಿಟ್ಟ್ ಒಟ್ಟೆಲಿ ಕಾಗಡೆ ಬಂದದೆ. ಬಾಳೆ ಪಂಬೆನ ಅಗಲಕ್ಕೆ ಸೆಡೆನ ಹಾಂಗೆ ಮಾಡಿ ಅಡಿಗೆ ಹಿಡಿಯೊಕು. ದಪ್ಪದ ನೂಲುನ ಹಾಂಗೆ ಹಿಟ್ಟ್ ಪಂಬೆಲಿ ಕುದ್ದದೆ.

ಇದ್ಕೆ ತೆಳ್ಳಂಗೆ ಮಾಡ್ದ ಪದ್‌ಂಜಿ ಪಾಯಸ, ಕಾಯಿ ಹಾಲಿಗೆ ಬೆಲ್ಲ ಹಾಕಿ ಮಾಡ್ದ ರಸಾಯನ, ಬಾಳೆ ಹಣ್ಣ್‌ನ ರಸಾಯನ, ಕೋಳಿ, ಕುರಿ ಮಾಸದ ಸಾರ್ ಒಳ್ಳದಾದೆ. 'ಹಾಕಿಕೊಬ್ಬ, ನೂಕಿಗೊಬ್ಬ, ದೀಟಿಗೆ ದೀಪ ಹಿಡಿಯಕೊಬ್ಬ ಏನ್‌ಂತ ಹೇಳಿಂತ' ಒಡ್ಗೋಕತೆ ಉಟ್ಟು. **(ಎಂ.ಜಿ.ಕೆ.)**



ಇಡ್ಲಿ ಮಡ್ಕೆ ಮತ್ತೆ ಇಡ್ಲಿ ಮಿಳ್ಳಿ

ಇಡ್ಲಿ ಬೇಸುವ ಪಾತ್ರೆಗೆ ಇಡ್ಲಿ ಮಡ್ಕೆ ತೇಳಿ ಹೇಳುವೆ. ತುಳುಲಿ ಇಡ್ಲಿತ ಕರ, ಮಲೆಯಾಳಂಲಿ ಇಡ್ಲಿ ಪಾತ್ರಂ, ಬ್ಯಾರಿ ಬಾಸೆಲಿ ಇಡ್ಲಿ ಕಲತೇಳಿ ಕರ್ದವೆ.

ಇದ್ ಸಪೂರ ಆಗಿ ಎತ್ತರ ಇದ್ದದೆ. ಹಿಡೆಕೆ ಎರಡ್ ಕಡೇಲಿ ಕೈ ಇದ್ದದೆ. ಒಳೆಗೆನ ಪುಡೆನ ನಡುಲಿ ಸುತ್ತಲೂ ಹಞ ಒಟ್ಟಿದ ಹಾಂಗೆ ಇದ್ದದೆ. ಅದ್ ಇಡ್ಲಿತಟ್ಟೆ ಇಸಿಕೆ ಇರ್‌ವ ಹಿಕ್ಮತ್. ಇಡ್ಲಿತಟ್ಟೆಗೆ ಅಲ್ಲಲ್ಲಿ ಒಟ್ಟೆ ಉಟ್ಟು. ಇದ್ ಅಡಿಂದ ನೀರ್ ಕುದೆಕನ ಬರುವ ಗಾರ್ – ಸೆಕೆ ಮೇಲೆ ಬಾಕೆ ಇರುವಂತದ್ದ್. ಇಡ್ಲಿ ಬಂದ ಹೊಯ್ಯಕೆ ಇಡ್ಲಿ ಮಿಳ್ಳಿ ಬೇಕ್. ಅದ್‌ಸ ಮೊಣ್ಣದ್. ಮುಚ್ಚಿಕೆ ಮುಚ್ಚಳ ಸ ಮೊಣ್ಣದ್ ಇದ್ದದೆ.

ಪಾತ್ರೆಗೆ ಹಞ ನೀರ್ ಹಾಕಿ ತಟ್ಟೆ ಇಸ್‌ವೆ. ಅದರ ಮೇಲೆ ಇಡ್ಲಿ ಬಂದನ ಮಿಳ್ಳಿಗೆ ಹೊಯ್ದ್ ಮುಚ್ಚಳ ಮುಚ್ಚೊಕು. ಒಲೆಲಿರುವ ಕಿಚ್ಚಿಗೆ ನೀರ್ ಕೊದ್ದ್ ಅದರ ಸೆಕೆ ತಟ್ಟೆನ ಒಟ್ಟೆಲಿ ಮೇಲೆ ಬಂದದೆ. ಅದರ ಗಾರ್ಗೆ ಇಡ್ಲಿ ಬೆಂದದೆ. ಮನೆಲಿ ಏನಾರ್ ಜಂಬರ ಮಿನಿ ಇದ್ದರೆ, ಮನೆಗ ನೆಂಟ್ರ್ ಬಂದರೆ ಮತ್ತೆ ಹಬ್ಬಕ್ಕೂ ಇಡ್ಲಿ ಮಾಡ್‌ವೆ.

ಇಡ್ಲಿ ಮಾಡ್‌ವ ಕ್ರಮ ಬಾರಿ ಹಿಂದೇನೆ ಇದ್ದದ್. ಎಲ್ಲಾ ಊರುಲೂ ಇದ್ಕೆ ಇಡ್ಲಿಂತನೇ ಹೇಳ್‌ವೆ. ಇಡ್ಲಿ ಮಾಡ್‌ವ ಮಡಿಕೆಗ ಬೇರೆ ಬೇರೆ ರೂಪಲಿ ಇರ್ದು, ಇಡ್ಲಿನೂ ಬೇರೆ ಬೇರೆ ರೂಪಲೂ ಇರ್ದು. ಆದರೂ ಇಡ್ಲಿ ಮಾತ್ರ ಎಲ್ಲಾ ಕಡೆನೂ ಒಂದೇ ನಮೂನೆ ಇದ್ದದೆ. ಇಡ್ಲಿ ಹೊಯ್ಯಕೆ ಮಿಳ್ಳಿನೇ ಬೇಕುಂತ ಇಲ್ಲೆ. ಬಟ್ಲ್‌ಲಿ, ಚಿಪ್ಪಿನ ಪೊಲ್ಲು ಕೆರೆಸಿ ಅದರ್ಲೂ ಬಂದನ ಹೊಯ್ಯಕ್. ಇಡ್ಲಿ ಮಡಿಕೆಲಿ ಸೆಕೆಲಿ ಬೇಯುವ ಪುಂಡಿ, ಮೂಡೆ ಹಿಟ್ಟ್‌ನಂತದೆಲ್ಲಾ ಬೇಸಿಕೆ ಆದೆ. ಇಡ್ಲಿ ಪಾತ್ರೆಗಳ ಮೊಣ್ಣುಲಿ, ಕೀಜಿ, ತಾಮ್ರ, ಸ್ಟೀಲ್ ಲೋಹಗಳ್‌ಲಿ ಮಾಡುವೆ. ಮೊಣ್ಣ್‌ನ ಇಡ್ಲಿ ಮಡಿಕೆನ ಮೂಲ್ಯ / ಕುಂಬಾರ ಸಮುದಾಯದವು ಮಾಡ್ವೆ. **(ಎಂ.ಜಿ.ಕೆ)**

ಉಪ್ಪನಕಾಯಿ ಮರ್ಗಿಲ್

ಉಪ್ಪನಕಾಯಿ ಹಾಕಿ ಇಸುವ ಮರದ ಮರ್ಗಿಲ್ ಮತ್ತೆ ಮರದ ಚಂಚಿ (ಸಣ್ಣ ಚಮಚೆ) ಇದ್ಕೆ ತುಳುಲಿ ಉಪ್ಪಡ್ದ ಮರಾಯಿತ, ಮಲೆಯಾಳಂಲಿ ಅಚ್ಚಾರ್ ಮರಿತ ಹೇಳ್ವೆ.

ಇದ್ ಮರಂದ ಮಾಡ್ದ ಸೊತ್ತ್. ಮರನ ಕೆತ್ತಿ ಪಾತ್ರೆನ ಹಾಂಗೆ ಮಾಡ್ವೆ. ಅದ್ಕೆ ಸಮಾ ಆವಾ ಹಾಂಗೆ ಮುಚ್ಚಳ ಸ ಇದ್ದದೆ. ಉಪ್ಪನೆಕಾಯಿ ಇಕ್ಕಿಕೆ ಮರದ್ದೇ ಚಂಚಿ ಇದ್ದದೆ. ಇದರ ಆಚಾರಿಗಳೇ ಮಾಡ್ದು.

ಕೆಲವು ಕಡೆ ಉಪ್ಪನೆಕಾಯಿ ಹಾಕಿಕೆ ಕುಪ್ಪಿದ್ ಬರಣಿ, ಮತ್ತೆ ಮೊಣ್ಣ್‌ನ ಸಣ್ಣ ಪಾತ್ರೆ ಇದ್ದದೆ. ಹಂಞ ದೊಡ್ಡದಿದ್ದರೆ ಅದರ್‌ಲಿ ಉಪ್ಪು ಹಾಕಿ ಇಸ್‌ವೆ. ಇದ್ ಬಾರೀ ಪಿರಾಕ್‌ಲೇ ಇದ್ದ ಸೊತ್ತು.

ಉಂಬಕ್ಕೆ ಇಲ್ಲದ ಉಪ್ಪನೆಕಾಯಿ ಯಾಕೆ, ಉಪ್ಪನೆಕಾಯಿ ಇದ್ದರೆ ನೆಕ್ಕಿ ನೆಕ್ಕಿ ಉಣಕ್‌ಂತ ಗಾದೆ ಮಾತುಟ್ಟು. **(ಎಂ.ಜಿ.ಕೆ)**



ಉಪ್ಪುನ ಗುತ್ತಿ – ಉಪ್ಪುನ ಮರ್ಗಿಲ್

ಗುತ್ತಿತೇಳಿರೆ ಮರ ಅಲ್ಲರ್ ಬೆದ್ರ್‌ನ ಕಡ್ಡ ಮೇಲೆ ಉಳಿವ ಬುಡದ ತುಂಡು. ನೋಡಿಕೆ ಗುತ್ತಿನ ಹಾಂಗೆ ಕಾಂಬೊದರ್‌ಂದ ಇದ್ ಗುತ್ತಿ. ಇದರ್‌ಲಿ ಉಪ್ಪು ಹಾಕುದರ್‌ಂದಾಗಿ ಇದ್ ಉಪ್ಪುನಗುತ್ತಿ. ಇನ್ನೊಂದು ಉಪ್ಪು ಹಾಕಿಸುವ ಮರ್ಗಿಲ್.

ತುಳುಲಿ ಇದ್ಕೆ ಉಪ್ಪುದ ಕುತ್ತಿ, ಉಪ್ಪುದ ಮರಾಯಿತೇಳಿ ಹೇಳ್ವೆ. ಮಲೆಯಾಳಂಲಿ ಉಪ್ಪಿನ ಮರಿ, ಬ್ಯಾರಿ ಬಾಸೆಲಿ ಉಪ್ಪು ಮರೈತ ಹೇಳ್ವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಇದ್ ಇದ್ದದೆ.

ಬೆದ್ರ್‌ನ ಗಂಟ್‌ಂದ ಕಾಗಡೆ ತುಂಡು ಮಾಡಿ ಮೇಲೆಗೆ ಎಷ್ಟ್ ದೊಡ್ಡದ್ ಬೇಕುತ ನೋಡಿಕಂಡ್ ತುಂಡು ಮಾಡೊಕು. ಗಂಟ್‌ನ ಹದ ಸಪಾಯಿ ಮಾಡಿಕಂಡ್ರೆ ಲಾಯ್ಕಾದೆ. ಒಳಗೆನ ಪುಡೆಲಿ ಇದ್ದ ಕೊಳಕ್‌ನ ಮನಾರ ಮಾಡಿಕಾಂಕು. ಗುತ್ತಿನ ಹಿಡೆಕೆ ಆವ ಹಾಂಗೆ ಕೈನ ಮಾಡಿಕಾದೆ. ಉಪ್ಪು ಹಾಕಿಕೆ ಮರದ ಮರ್ಗಿಲ್‌ನೂ ಇದ್ದದೆ. ಮರ ಕೆಲ್ಸದ ಆಚಾರಿಗ ಮರನ ಕೆತ್ತಿ ಮರ್ಗಿಲ್ ಮಾಡ್‌ವೆ.

ಇದರ್‌ಲಿ ಉಪ್ಪು ಮಾತ್ರ ಅಲ್ಲ ಹುಳಿನೂ ಹಾಕಿಸಕ್. ಅದ್ಕೆ ಬೆದ್ರ್‌ದ್ ಅಲ್ಲರ್ ಮರದ್ದ್ ಮುಚ್ಚಳ ಮಾಡಿರೆ ಕೊತ್ತಂಬರಿ ಜೀರಿಗೆ, ಮೆಂತೆ ತರದ ಸಾಮಾನ್‌ನ ಹಾಕಿಸಿಕೆ ಆದೆ. ಅಡಿಗೆಲಿ ಉಪ್ಪು ಇಕ್ಕುವ ಕ್ರಮ ಸುರು ಆಕನವೇ ಗುತ್ತಿಲಿ ಉಪ್ಪು ಹಾಕಿಕೆ ಸುರು ಮಾಡಿರುವೊ. ಉಪ್ಪುನ ಮಡಿಕೆಲಿ ಸ ಹಾಕಿಸುವೆ. **(ಎಂ.ಜಿ.ಕೆ.)**

ಉಪ್ಪು – ಉಪ್ಪನಕಾಯಿ ಹಾಕಿಸುವ ಕರಡಿಗೆ

ಉಂಬಕನ ಬೇಕಾದ ಉಪ್ಪು, ಉಪ್ಪನೆಕಾಯಿ ಹಾಕಿಸಿಕಾಂಬ ಕರಡಿಗೆ. ಇದ್ ದಕ್ಷಿಣ ಕನ್ನಡದ ಕೆಲವು ಕಡೆ ಇದ್ದದೆ. ಇದರ ಬಳದ ಕಲ್ಲ್‌ಲಿ ಕೆತ್ತಿ ಮಾಡ್ದ್.

ಇದರ ಮರದ ಆಚಾರಿಗ ಮಾಡುವೆ. ಹಇ ಚಾತುರ್ಪು ಇದ್ದೊವು ಯಾರೂ ಮಾಡಕ್. ಉಂಬಕನ ಕೆಲವು ಜನಕ್ಕೆ ಉಪ್ಪು ಅಲ್ಲರ್ ಉಪ್ಪನೆಕಾಯಿ ಬೇಕಾದೆ. ಹಾಂಗೆ ಬೇಕಾದವು ಅದರ ತಕಂಕೆ ಬೇಕಾಗಿ ಇದರ್‌ಲಿ ಹಾಕಿಸಿ ಎದ್ರ್ ಇಸುವೆ. ಗಾದೆ ಮಾತ್ : ಕನ್ನಡಲಿ – ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂದುವಿಲ್ಲ ಅಂತ ಮಾತುಟ್ಟು ತುಳುಲಿ – ಉಪ್ಪಡ್ ಇತ್ತ್‌ಂಡ ಇಪ್ಪಡ್ ಅಂತ ಹೇಳುವೆ. **(ಎಂ.ಜಿ.ಕೆ.)**



ಏಮೆ ಕೂಜಗೆ

ನೀರ್ ತುಂಬ್ಸುವ ಹೂಜಿ. ಇದ್ ನೋಡಿಕೆ ಏಮೆನ ಹಾಂಗೇ ಇರುವ ಕಾರಣ ಇದ್ಕೆ ಏಮೆ ಕೂಜಗೆತೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಇದ್ದದೆ. ಇದ್ ಮೊಣ್ಣ್‌ಂದ ಮಾಡ್ದ ಸೊತ್ತು. ಇದರ ಬಾಯಿ ಸಣ್ಣದಿದ್ದ್ ಬೊಗ್ಗಿಸಿ ಕುಡೆಕೆ ಆದೆ. ಬಾಯಿಗೆ ಮುಚ್ಚಳ ಸ ಉಟ್ಟು. ಸುತ್ತೊಳು ಬೊಳ್ಳಿ ಸಿಕ್ಕಿಸಿಕೆ ಆವ ಹಾಂಗೆ ಉಟ್ಟು. ಬೊಳ್ಳಿ ಸಿಕ್ಕಿಸಿರೆ ಹೆಗ್ಲಿಗೆ ಕೋಸಿಕಾಂಕು ಆದೆ. ಇದರ ಮಡಿಕೆ ಮಾಡೋವು ಕುಲಾಲರ್ ಮಾಡುವೆ. ಇದರ್ಲಿ ನೀರ್ ಹಾಕಿಸಿರೆ ಅದ್ ತಂಪು ಇದ್ದದೆ. ಮನೆಂದ ದೂರ ಹೋಕನ ಕುಡೆಕೆಂತ ಇದರ್‌ಲಿ ನೀರ್ ತಕನ್ ಹೋಕೆ ಆದೆ. ಇದರ್‌ಲಿ ನೀರ್ ಮಾತ್ರ ಅಲ್ಲ ಕಳ್ಳ್ ಸ ತುಂಬ್ಸ್‌ವೆ. **(ಎಂ.ಜಿ.ಕೆ.)**

ಕಡ್ಕಲ್

ಇದ್ ಹಿಟ್ಟ್ ಮಾಡಿಕೆ ಅಕ್ಕಿ, ರಾಗಿ ಕಡೆಕೆ ಮತ್ತೆ ಗೆಯ್ಪುಗೆ ಮೆಣ್ಸ್ ಕಡೆಕೆ ಇರುವ ಕಲ್ಲ್. ಕಡೆವಕಲ್ಲ್ ಆಗಿರ್‌ದರ್‌ಂದ ಕಡ್ಕಲ್‌ತ ಹೆಸ್ರ್ ಬಂದಿರ್ದು ತುಳುಲಿ ಕಡೆಪಿ ಕಲ್ಲ್‌ಂತ ಹೇಳುವೆ. ಇದ್ ಸಾಮಾನ್ಯ ಎಲ್ಲಾ ಊರ್‌ಗಳ್‌ಲಿ ಕಂಡ್ ಬಂದದೆ.

ಇದರ ಕರ್ಗಲ್‌ಂದ ಮಾಡುವೆ. ಒಳ್ಳ ಕಲ್ಲ್‌ನ ನೋಡಿಕನ್ ಇದರ ಮಾಡೊಕು. ತೇಳಿರೆ ಕಲ್ಲ್‌ಲ್ಲಿ ಸೆರೆ ಮೊನಿ ಇರಿಕೆ ಬೊತ್ತು. ಕಲ್ಲ್‌ನ ಅರ್ದಮೊಟ್ಟೆನ ಹಾಂಗೆ ಕೆತ್ತಿಕಾಂಕು. ಕಲ್ಲ್‌ನ ಅಡಿ ಪುಡೆ ನೆಲಲಿ ನಿಲ್ಲಿಕಾವ ಹಾಂಗೆ ಚಪ್ಪಟೆ ಮಾಡುವೆ. ಮೇಲ್ಪುಡೆಲಿ ನಡೂಗೆ ಗುಂಡಿ ಇರುವ ಹಾಂಗೆ ಕೆತ್ತಿ ತೆಗ್ದವೆ. ಗುಂಡಿ ಹಕ್ಕಲೆ ಹಕ್ಕಲೆ ಒಂದು ಗೇಣ್ ಇದ್ದದೆ. ಕಲ್ಲ್‌ನ ಮೇಲ್ಪುಡೆಲಿ ಅಂದಾಜ್ ಮೂರು ಬೆರಳ್‌ನ ದಪ್ಪಕ್ಕೆ ಬುಟ್ಟು ಗುಂಡಿನ ಸುತ್ತೊಳೂ ಮೂರು ಬೆರಳ್‌ಷ್ಟ್ ಕೆತ್ತಿ ತೆಗ್ದವೆ. ಕಡೆವ ಸಾಮಾನ್ ಇಸಿಕೆ ಇದ್ ಬೇಕಾದೆ. ಹೀಂಗೆ ಮಾಡಿರೆ ಕಡ್ಕಲ್ ಆದಾ ಹಾಂಗೇ.

ಕಡ್ಕಲ್ಲ್‌ಲಿ ಕಡೆಕಾರ್ ಗುಂಡುಕಲ್ಲ್ ಬೇಕು. ಗುಂಡುಕಲ್ಲ್ ನಡುಲಿ ಹಞ ದಪ್ಪ ಇದ್ದ್ ಕಡೆಕೊಡಿ ಸಪೂರ ಇದ್ದದೆ. ಇದರ ಕೊಡಿಲಿ ಉರುಂಟು ಇದ್ದ್ ಅದ್ ಕಡ್ಕಲ್‌ನ ಗುಂಡಿಲಿ ಹಿಡೆವ ಹಾಂಗೇ ಇರೋಕು. ಅದರ ಇನ್ನೊಂದು ಕಡೆ ಅಂಗೈಲಿ ಹಿಡೆಕಾವಷ್ಟ್ ಇದ್ದದೆ. ತುಂಬ ದೊಡ್ಡ ಗುಂಡುಕಲ್ಲ್ ಆದರೆ ಅದ್ಕೆ ಕಡೆಲಿ ಒಟ್ಟೆ ಮಾಡಿ ಸಣ್ಣದೊಂದು ಹಿಡಿ ಇದ್ದದೆ. ಕೆಲವರಲ್ಲಿ ಕಡ್ಕಲ್ಲ್‌ನ ಮುಚ್ಚಿಕೆ ಬೆತ್ತದಕುಕ್ಕೆ ಇದ್ದದೆ. ಕಡ್ಕಲ್ಲ್‌ನ ಗುಂಡಿ ಒಳಗೆ ಸುತ್ತೋಳು ಸಪೂರದ ಉಳಿಲಿ ಕುಟ್ಟಿ ಕುಟ್ಟಿ ಸಣ್ಣ ಸಣ್ಣ ಒಟ್ಟೆ ಮಾಡುವೆ. ಹಾಂಗೇ ಗುಂಡುಕಲ್ಲ್‌ನ ಕೊಡಿಲಿ ಸುತ್ತೋಳೂ ಒಟ್ಟೆ ಮಾಡುವೆ. ಹೀಂಗೆ ಮಾಡ್ರೆ ಕಡೆವ ಸಾಮಾನ್ ಬೇಗ ಸಣ್ಣ ಆದೆ. ಇದರ ಕಲ್ಲ್ ಕುಟ್ಟಿಗರ್ ಮಾಡುವೆ. ಕಡ್ಕಲ್ಲ್‌ಲಿ ಸಣ್ಣದ್ ದೊಡ್ಡದ್ ಇದ್ದದೆ.

ಕಡ್ಕಲ್ ತುಂಬ ಎತ್ತರ ಇದ್ದರೆ ಕುದ್ರಿಕೆ ಎತ್ತರದ ಮಣೆ ಇಸಿಕಾಂಕು. ಕಡ್ಕಲ್ಲ್‌ಲಿ ಕಡ್ಡ್‌ಕಡ್ಡ್ ಗುಂಡು ಕಲ್ಲ್‌ನ ಕೊಡಿ ಮತ್ತೆ ಕಡ್ಕಲ್ಲ್‌ನ ಗುಂಡಿ ಸವ್ದದೆ. ಆಗ ಅದ್ಕೆ ಕಲ್ಲ್ ಕುಟ್ಟಿಗ ಉಳಿ ಹಾಕುವೆ. ಗಾದೆ – ಕಲ್ಲಪ್ಪ ಗುಂಡಪ್ಪ ಸೇರಿ ಮೆಣ್ಸಪ್ಪ ಚಟ್ನಿ ಅಂತ ಕನ್ನಡಲಿ ಒಂದು ಗಾದೆ ಉಟ್ಟು. **(ಎಂ.ಜಿ.ಕೆ.)**





ಕಾವುಂಗ

ದೊಡ್ಡ ದೊಡ್ಡ ಜಂಬರಲಿ ಆರ್‌ಸಿದ ಗೆಯ್ಪು, ಸಾರ್, ಪಾಯಸ ಎಲ್ಲ ಇಕ್ಕಿಕೆ ಬೇಕಾದ ಪಾತ್ರೆ ಕಾವಂಗ. ತುಳುಲಿ ಇದ್ಕೆ ಕಾವಂಗೊಂತಲೇ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಇದ್ದದೆ. ಸುಮಾರ್ ನೂರು ನೂರ್‌ಐವತ್ತ್ ವರ್ಷಂದಲೂ ಕೆಲವು ಮನೆಲಿ ಇರುವಂತ ಸೊತ್ತು. ತಾಮ್ರಂದ ಮಾಡ್ದ ಪಾತ್ರೆ. ಇದರ ತಾಮ್ರದ ಕೆಲಸ ಮಾಡುವ ಸಮುದಾಯದವು ಮಾಡುವೆ. ಮೊದುವೆ, ಬೊಜ್ಜ ಮತ್ತೆ ತುಂಬ ಜನ ಸೇರುವ ಜಂಬರಲಿ ಗೆಯ್ಪು, ಪಾಯ್ಸ, ಆರ್ಸಿದ ಗೆಯ್ಪು ಇಂತದರೆಲ್ಲ ಇಕ್ಕಿಕೆ ಕಾವಂಗ ಬೇಕಾದೆ.

ತಾಮ್ರದ ಪಾತ್ರೆಗೆ ಕಿಲುಂಬು ಬಾದುಟ್ಟು. ಕಿಲುಂಬು ತೇಳಿರೆ ಅದರ ಒಳಗೆ ಹಇ ಪಚ್ಚೆ ಬಣ್ಣಲಿ ಒಂದು ನಮೂನೆ ಪಾಂಬಾಜಿನ ಹಾಂಗೆ ಬಂದದೆ. ಅದ್ ಹೊಟ್ಟೆಗೆ ಹೋದರೆ ತಿಂದೊವುಕೆ ಕಕ್ಕಿಕೆ ಬಂದದೆ. ಹಾಂಗಾಗಿ ಇದರ್‌ಲಿ ಅಡಿಗೆನ ಹಾಕಿಕೆ ಮುಂದೆ ಸರಿ ತೊಳಿಯೊಕಾದೆ. ಕೆಲವೊಮ್ಮೆ ಎಷ್ಟು ತೊಳ್ದರೂ ಅದ್ ಹೋದುಲೆ. ಅದ್ಕೆ ಬೇಕಾಗಿ ಅದರ ಒಳಗೆ ಕಲಾಯಿ ಹಾಕುವ ಕ್ರಮ ಉಟ್ಟು. ಕಲಾಯಿಂತ ಹೇಳಿರೆ ತವರ ತ ಹೇಳುವ ಒಂದು ಲೋಹನ ಕರ್ಗಿಸಿ ಅದರ ಒಳಗೆ ಮೆತ್ತುವೆ. ಆಗ ಅದ್ ಕಿಲುಂಬು ಬಾದುಲೆ. ಆದರೂ ಉಪಯೋಗಿಸಿದ ಮೇಲೆ ಪೊರ್ಲು ತೊಳ್ದ್ ನೀರ್‌ಪಸೆ ತೆಗ್ದ್ ಕಂಕಣಿ ಹಾಕಿ ಇಸುವೆ. ತಾಮ್ರದ ಕಾವುಂಗ ಚೊಂಬು ಕುಟ್ಟಿ ಅಂಗ್ಡಿಲಿ ಸಿಕ್ಕದೆ. ಚೊಂಬು ಕುಟ್ಟಿತ್ತೇಳ್ರೆ ಪಾತ್ರೆ ವ್ಯಾಪಾರಿದ್ ಅಂಗ್ಡಿ. **(ಎಂ.ಜಿ.ಕೆ., ಬಾ.ಜೋ.)**

ಕುದುಪೆ ಮತ್ತೆ ಮೊಂತ್

ಕುದುಪೆಂತ ಹೇಳಿರೆ ಮೊಣ್ಣ್‌ನ ಸಣ್ಣ ಮಡಿಕೆ. ಹಾಲಿಗೆ ಹೆಪ್ಪು ಹಾಕಿ ಇಸುವ ಸಣ್ಣ ಮೋಣ್ಣ್‌ನ ಮಡಿಕೆಗೆ ಕುದುಪೆತ ಹೇಳುವೆ.

ತುಳುಲಿ ಅಲೆತಕುದ್ಪೆ, ಮಲೆಯಾಳಂಲಿ ಮೋರ್‌ಂಡೆ ಮಣ್ಣ್ ಪಾತ್ರಂ–ಮಂದ್, ಬ್ಯಾರಿ ಬಾಸೆಲಿ ಮೋರ್ ಕುಡಿಕೆ–ಮೊಂತ್ ಅಂತ ಹೇಳುವೆ. ಕನ್ನಡಲಿ ಕುದುಪೆಗೆ ಸಣ್ಣ ಮಡಿಕೆ, ಮೊಂತ್‌ಗೆ ಕಡಗೋಲುಂತ ಹೇಳುವೆ. ಮೊಜ್ಜಿಗೆ ಕಡೆಕೆ ಒಂದು ಮರದ ಕೋಲುನ ಮೊಂತ್ ಇದ್ದದೆ.

ಮಡಿಕೆ ಮಾಡುವ ಮೂಲ್ಯ ಸಮುದಾಯದವು ಕುದುಪೆ ಮಾಡುವೆ. ಮೊಂತ್‌ನ ಕಡೆ ದಪ್ಪ ಇದ್ದ್ ಅಡಿಲಿ ಚಪ್ಪಟೆ ಆಗಿದ್ದದೆ. ಅದರ ಪುಡೆ ಸುತ್ತಲೂ ಮೊಂತ್ ಹುಳಿನ ಹಾಂಗೇ ಕೆತ್ತುದರಿಂದ ಇದ್ಕೆ ಮೊಂತ್ ತ ಹೆಸರ್ ಬಂದಿರುದು. ಮರದ ಆಚಾರಿಗ ಮೊಂತ್ ಮಾಡುವೆ.

ಹಾಲ್ ಕಾಯ್ಸಿ ತಣ್ಣಂಗಾದ ಮೇಲೆ ಅದ್ಕೆ ಹನಿ ಹುಳಿ ಮಜ್ಜಿಗೆನ ಸೇರ್‌ಸ್‌ರೆ ಮಾರ್‌ನೆ ದಿನ ಅದ್ ಮೊಸ್ರ್ ಆದೆ. ಮೊಸ್ರ್‌ನ ಮೊಜ್ಜಿಗೆ ಮಾಡಕರ್ ಅದರ ಮೊಂತ್‌ಲಿ ಕಡೆಕು. ಎರಡ್ ಅಂಗೈಲಿ ಮೊಂತ್‌ನ ಹಿಡಿನ ಹಿಡ್ಕನ್ ಅದರ ಕಡೆನ ಮೊಸ್ರ್‌ಗೆ ಕಂತಿಸಿ ಹಿಂದೆ ಮುಂದೆ ತಿರುಗಿಸೊಕು. ಆಗ ಮೊಂತ್ ಮೊಸ್ರ್‌ನ ಒಳಗೆ ತಿರ್ಗಿ ತಿರ್ಗಿ ಮೊಸ್ರ್ ನೀರಾಗಿ ಮೊಜ್ಜಿಗೆ ಆದೆ. ಬೆಣ್ಣೆ ಮೇಲೆ ಪೇಂಬಿದೆ. ಇದ್ ಸ ಬಾರೀ ಪಿರಾಕ್‌ಂದಲೇ ಇದ್ದದ್. **(ಎಂ.ಜಿ.ಕೆ.)**



ಕೈ ಮರ್ಚಟೆ

ಮರ್ಚಟೆ ಮರಂದ ತೆಳುವಾಗಿ ಕೆತ್ತಿ ಮಾಡ್ದ ಸೊತ್ತ್. ಮನೆಲಿ ತಿಂಡಿ ಹಾಕಿಸಿಕೆ, ಗಂಜಿ ಬೊಗ್ಗ್‌ಸಿಕೆ ಬಳಸ್‌ವ ಮರಂದ ಮಾಡ್ದ ಚಟ್ಟಿ, ಹಾಂಗಾಗಿ ಮರ್ಚಟೆಂತ ಹೆಸ್ರ್ ಬಾತ್. ತುಳುಲಿ ಇದ್ಕೆ ಅರ್‌ಂಬುಚ್ಚಿ, ತಂಬುರ್ಚ್ಚಿ, ಹರ್‌ಂಬುಚ್ಚಿ ಮಲೆಯಾಳಂಲಿ ಅಡಿಚಟ್ಟಿ, ಬ್ಯಾರಿ ಬಾಸೆಲಿ ದಾರಂಕಣಿತ ಹೇಳ್ವೆ.

ಮರ್ಚಟೆ ಚಪ್ಪಟೆ ಆಗಿ ಉರುಂಟಾಗಿದ್ದದೆ. ಒಳಮೆಯ್ಯಿ ನಡುಲಿ ಹನಿ ಗುಂಡಿ ಮತ್ತೆ ಅಡಿಮೆಯ್ಯಿ ಹಳಾ ಮಡಿಕೆನ ಅಡಿಬಾಗದ ಆಕಾರಲಿ ಇದ್ದದೆ. ಇದರ್‌ಲಿ ಸಣ್ಣದ್ ದೊಡ್ಡದ್ ಇದ್ದದೆ. ಇದರ ಮರದ ಆಚಾರಿಗ ಹಳಾ ಗಟ್ಟಿ ಜಾತಿ ಮರಲಿ ಮಾಡ್‌ವೆ. ಕೆಲವ್ ಜನ ಅವ್ಕೆ ಬೇಕಾದ ಮರ್ಚಟೆನ ಮನೆಲಿ ಮಾಡಿಕಂದವೆ. ಒಂದು ಜಾತಿ ಮರದ ಬೇರ್ ನೆಲಂದೊಳೂ ಮೇಲೆ ಚಪ್ಪಟೆ ಆಗಿ ಬೆಳ್ದದೆ. ಆ ಚಪ್ಪಟೆ ಬೇರ್‌ನ ಬೇಕಾದಷ್ಟ್ ತುಂಡುಮಾಡಿ ಅದರ್ಲಿ ಮರ್ಚಟೆ ಮಾಡುವೆ. ಚಟ್ಟಿ ಇರುವ ಮರಂದ ಮಾಡುವ ಕಾರಣ ಅದ್ಕೆ ಮರ್ಚಟೆ ಅಂತ ಹೆಸರ್ ಬಂದಿರ್ದು.

ಮನೆಲಿ ರೊಟ್ಟಿ, ದೋಸೆ ಮತ್ತೆ ಕೆಲವು ತಿನ್ಸ್ ಹಾಕಿಸಿಕೆ, ಗಂಜಿಗೆಯ್ಯುನ ಪಾತ್ರೆಗೆ ಮುಚ್ಚಿಸಿಕೆ ಮರ್ಚಟೆ ಬೇಕಾದೆ. ಮಡಿಕೆಲಿ ಗಂಜಿ ಬೆಂದ ಮೇಲೆ ಹುಗ್ಗ ಮಾಡಕರ್ ಗಂಜಿ ತೆಳಿನ ಬಾಗ್ಸೊಕು. ಅದ್ಕೆ ಮಡಿಕೆನ ಬಾಯಿಗೆ ಚಿಬುಳೆ ಇಸಿ ಅದರ ಮೇಲೆ ಮರ್ಚಟೆನ ಇಸಿ ಮತ್ತೆ ಅಡಿಗೆರದ ಮೇಲೆ ಮಡಿಕೆನ ಬಗ್ಸುವೆ. ಅಡಿಗೆರದ ಒಳೆಗೆ ಹುಗ್ಗೆ ಬೀಳದಾಂಗೆ ಹಳಾ ಓರೆ ಮಾಡಿ ಇಸುವೆ. ಹೀಂಗೆ ಮಾಡಿರೆ ತೆಳಿ ಎಲ್ಲ ಇಳ್ದ್ ಅಡಿಗೆರಕ್ಕೆ ಬಿದ್ದದೆ.

ಮರ್ಚಟೆನ ಹಾಂಗೇ ಇರ್‌ವ ಸೊತ್ತ್ ಕೈ ಮರ್ಚಟೆ. ಇದ್ಕೆ ಕೈ ಇದ್ದದೆ, ಹಾಂಗಾಗಿ ಕೈ ಮರ್ಚಟೆತ ಹೇಳುವೆ. ಇದ್ ಮರಂದ ಮಾಡ್ದ ಸೊತ್ತ್. ಇದರ್‌ಲಿ ಹಳಾ ದೊಡ್ಡದ್ ಸ ಇದ್ದದೆ. ಕೆಲವು ದೊಡ್ಡದಾಗಿ ಹಳಾಗುಂಡಿ ಇದ್ದದೆ. ಇದರ ಮರದ ಆಚಾರಿ ಜನಂಗ ಮಾಡ್ದು. ಇದರ್‌ಲಿ ಹಿಟ್ಟ್ ಹಾಕಿಸಿಕೆ ಆದೆ. ಗುಂಡಿ ಇದ್ದದರ್‌ಲಿ ಅಕ್ಕಿ, ರಾಗಿ, ಜೋಳದ, ಗೋದಿ ಹುಡಿ ಹಾಕಿ ಕಲ್‌ಸಿಕೆನೂ ಆದೆ. ಪುಂಡಿ ಮಾಜಿಸಿ ಇದರ್‌ಲಿ ಹಾಕಿ ಪುಂಡಿ ಮಾಡಿಕೂ ಬೇಕಾದೆ. **(ಎಂ.ಜಿ.ಕೆ.)**

ಕೋಪೆ

ಕೋಪೆ ತೇಳಿರೆ ಮೊಣ್ಣುಲಿ ಮಾಡ್ದ ಗ್ಲಾಸ್. ತುಳುಲಿ ಕೋಪೆಂತ ಹೇಳುವೆ. ಇದ್ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಲಿ ಇತ್ತ್. ಇದರ ಮೊಣ್ಣ್‌ಂದಲೇ ಮಾಡ್ದ್. ಇದರ ಮಡಿಕೆ ಮಾಡುವ ಮೂಲ್ಯ ಜನಾಂಗದವು ಮಾಡ್ದು. ಚಾಯ ಕಾಪಿ ಕುಡೆಕೆ ಬೇಕಾದ ಸೊತ್ತು. ಹಿಂದೆನ ಕಾಲಲಿ ಕಾಪಿ ಚಾಯ ಇದರ್‌ಲೆ ಕುಡೆತಿದ್ದೊ. ಕೈತಪ್ಪಿ ನೆಲಕ್ಕೆ ಬಿದ್ದರೆ ಒಡ್ದ್ ಹೋತಿತ್ತ್. ಈಗೊಳು ರೈಲ್‌ಲಿ ಹೋಕನ ಕೆಲವು ಕಡೆ ಮಡ್ಕ (ಕೋಪೆ) ಚಾಯ ಸಿಕ್ಕಿದೆ. **(ಎಂ.ಜಿ.ಕೆ.)**



ಗಂಜಿ ಅರ್ಪುವ ಮಡ್ಕೆ

ಗಂಜಿ ಬೇಸಿದ ಮೇಲೆ ಹುಗ್ಗೆ ಮಾಡಕರ್ ಗಂಜಿ ತೆಳಿನ ಅರ್ಪುವ ಮಡಿಕೆ. ಅರ್ಪುದುಂತೇಳಿರೆ ತೆಳಿ ಬೇರೆ ಹುಗ್ಗೆ ಬೇರೆ ಮಾಡ್ದು. ತುಳುಲಿ ಗಂಜಿ ಅರ್ಪುನ ಕರ. ಮಲೆಯಾಳಂಲಿ ಕಞಿ ಅರಿಕ್‌ನ ಕಲಂ ತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಇದ್ದದೆ.

ಇದ್ ನೋಡಿಕೆ ಗಂಜಿ ಮಡಿಕೆನ ಹಾಂಗೇ ಇದ್ದದೆ. ಆದರೆ ಈ ಮಡಿಕೆನ ಅಡಿ ಮೆಯ್ಯಿಲಿ ಒಟ್ಟೊಟ್ಟೆ ಇದ್ದದೆ. ಗಂಜಿ ಬೆಂದ ಮೇಲೆ ಗಂಜಿ ಮಡಿಕೆನ ಈ ಮಡಿಕೆನ ಬಾಯಿಗೆ ಕಂಕಣಿ ಹಾಕೊಕು. ಆಗ ಗಂಜಿ ತೆಳಿ ಸಮೇತ ಅಡಿಲಿದ್ದ ಮಡಿಕೆಗೆ ಬಿದ್ದದೆ. ಮಡಿಕೆಲಿರುವ ಒಟ್ಟೆಲಿ ತೆಳಿ ಇಳ್ದ್ ಕಾಗಡೆ ಇಸಿದ ಪಾತ್ರೆಗೆ ಬಿದ್ದದೆ ಹುಗ್ಗೆ ಅಲ್ಲೇ ಒಳ್ದದೆ.

ಗಂಜಿಂದ ಹುಗ್ಗೆ ಮಾಡಿಕೆ ಚಿಬುಳೆ ಮತ್ತೆ ಮರ್ಚಟೆ ಇದ್ದರೆ ಅಡಿಗೆರಲಿ ಬಾಗ್ಲಿಕೆ ಆದೆ. ಕುಡ್ಪು ಇದ್ದರೆ ತೋಂಡಿಕೆನೂ ಆದೆ. ಇದ್ ಇದ್ದರೆ ಚಿಬುಳೆ ಬೇಡ, ಮರ್ಚಟೆ ಬೇಡ, ಕುಡ್ಪುನೂ ಬೇಡ. ಇದರ ಮಡಿಕೆ ಮಾಡುವ ಮೂಲ್ಯ ಸಮುದಾಯದವು ಮಾಡುವೆ. **(ಎಂ.ಜಿ.ಕೆ.)**

ಗಂಜಿ ಮಡ್ಕೆ

ಗಂಜಿ ಬೇಸುವ ಮಡ್ಕೆಗೆ ಗಂಜಿ ಮಡ್ಕೆತ ಹೇಳ್‌ವೆ. ತುಳುಲಿ ಗಂಜಿದ ಕರತ ಹೇಳ್‌ವೆ. ಮಲೆಯಾಳಂಲಿ ಚೋರ್ ಕಲಂ, ಬ್ಯಾರಿ ಬಾಸೆಲಿ ಕಂಞ ಕಲಂತ ಹೇಳ್‌ವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ.

ಮೊಣ್ಣುನ ಗಂಜಿ ಮಡ್ಕೆ ಉರುಂಟಾಗಿದ್ದದೆ ಮತ್ತೆ ಯಾಗೋಳೂ ಈ ಮಡಿಕೆನ ಒಡೆದಂಗೆ ಸೂಂಪೆ ಮೇಲೆ ಇಸುವೆ. ಇದರ್‌ಲಿ ಬೇರೆ ಬೇರೆ ಅಳ್ತೆನ ಮಡ್ಕೆಗ ಇದ್ದವೆ. ಅರ್ದ ಸೇರ್, ಒಂದು ಸೇರ್, ಎರ್ಡ್ ಸೇರ್, ನಾಲ್ಕ್ ಸೇರ್ ಅಕ್ಕಿ ಬೇಯುವ ಅಳತೆನ ಮಡಿಕೆಗ ಇದ್ದದೆ. ಅಕ್ಕಿಂದ ಗಂಜಿ ಮಾಡೊಕರ್ ಈ ಪಾತ್ರೆ ಬೇಕು. ಯಾವ ಪಾತ್ರೆಲೂ ಅಕ್ಕಿ ಬೆಂದದೆ. ಹಾಂಗೆಂತ ಅಳೆಗೆಲಿ, ಅಡಿಗೆರಲಿ ಗಂಜಿ ಬೇಸುದುಲೆ. ಗಂಜಿ ಬೇಸಿಕೆಂತಲೇ ಇಂತಾ ಮಡ್ಕೆ ಬೇಕು. ಇದರ ಮೂಲ್ಯ ಸಮುದಾಯದವು ಮಾಡುವೆ. 'ಮನೆ ಎದ್ರ್ ಮಡಿಕೆ ಕಂಕ್ಣಿ ಹಾಕಿಸಿಕೆ ಬೊತ್ತ್‌ಂತ ಹೇಳುವೆ, ಮಡಿಕೆಗೆ ಕಲ್ಲ್ ತಾಂಗಿರೂ ಕಲ್ಲಿಗೆ ಮಡಿಕೆ ತಾಂಗಿರೂ ಮಡಿಕೆ ಒಡ್ದದೆ,

'ಕುಂಬಾರಂಗೆ ವರ್ಸ ದೊಣ್ಣೆಗೆ ನಿಮಿಸ' ತ ಗಾದೆ ಉಟ್ಟು. **(ಎಂ.ಜಿ.ಕೆ.)**



ಚಾಯ ತಕನ್ ಹೋವ ಮರದ ಸೊತ್ತು

ಚಾಯ, ಕಾಪಿ ಇಂತದರ ಕುಪ್ಪಿ ಗ್ಲಾಸಿಗೆ ಹಾಕಿ ತಕನ್ ಹೋವ ಸೊತ್ತ್. ಇದರ ಮರಲಿ ಮಾಡುವೆ. ಚಾದ ಗಲಾಸ್‌ನ ಇದರ ಒಳಗೆ ಇಸಿಕೆ ಆದೆ. ಲೋಟ ಇಸಿದ ಮೇಲೆ ಅದರ ಮೇಲೆಂದ ಮುಚ್ಚಿಕೆ ಮರದ ಹಲಗೆ ಅದರ್ಲೆ ಸಿಕ್ಕಿಸಿಕನ್ ಉಟ್ಟು. ಅದರ ಕಾಗಡೆ ಮೇಗಡೆ ಮಾಡಿಕೆ ಆದೆ. ಮರದ ಆಚಾರಿಗ ಇದರ ಮಾಡುವೆ.

ಬೇರೆ ಕಡೆಗೆ ಬೆಚ್ಚ ಬೆಚ್ಚ ಚಾಯ, ಕಾಪಿ ಅದೂ ಕುಪ್ಪಿಗ್ಲಾಸ್‌ಲಿ ತಕನ್ ಹೋದು ಬಂಗದ ಕೆಲಸ. ಅದ್ಕೆ ಇಂತಹ ಸೊತ್ತ್‌ಲಿ ತಕನ್ ಹೋಕೆ ಸುಲಬ. ಹಲಗೆ ಮುಚ್ಚಿರೆ ಚಾಯ ಬೇಗ ತಣ್ಣಂಗೆ ಆದುಲೆ. ಗ್ಲಾಸಿಗೆ ಕಾಡ್, ದೂಳು ಸ ಬೀಳ್ದುಲೆ. ಹಿಂದೆ ತೋಟಲಿ ಗದ್ದೆಲಿ ಕೆಲ್ಸ ಮಾಡೋವುಕೆ ಮನೆಂದ ಮತ್ತೆ ಹೋಟ್ಲ್‌ಂದ ಚಾಯ, ಕಾಪಿನ ತಕನ್ ಹೋಕೆ ಇಂತಾ ಹತ್ಯಾರ್ ಬೇಕಾಗಿತ್ತ್. (ಎಂ.ಜಿ.ಕೆ.)



ಚಿಪ್ಪಿ ಸೆಡೆ

ತಿಂಬ ವಸ್ತುಗಳ ಇಕ್ಕಿಕೆ ಬೇಕಾದ ಸೊತ್ತು ಸೆಡೆ. ತುಳುಲಿ ಇದರ ಚಿಪ್ಪಿದ ಕೈಲ್ ತ ಹೇಳುವೆ. ಸೆಡೆ ಇಡೀ ಲೋಕಲೇ ಇರುವಂತದ್ದ್. ಆದರೆ ಚಿಪ್ಪಿ ಸೆಡೆ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಇದ್ದದೆ. ಬೇರೆ ಜಿಲ್ಲೆಲೂ ಇರ್ದ್ಲ. ತೆಂಗಿನಕಾಯಿ ಬೆಳ್ಳುವ ಎಲ್ಲಾ ಊರ್ಗ್‌ಳಲಿ ಚಿಪ್ಪಿ ಸೆಡೆ ಕಾಂಬಕೆ ಸಿಕ್ಕಿದೆ.

ಚಿಪ್ಪಿ ಸೆಡೆ ಮಾಡಕರ್ ಕಾಯಿ ಚಿಪ್ಪಿ ಬೇಕು. ಕಾಯಿ ಚಿಪ್ಪಿನ ಪೊರ್ಲ್ದಲಿ ಕೆರ್ಕಿ ಲಾಯ್ಕ್ ಮಾಡಿಕಾಂಕು. ಹೊರಮೆಯ್ಯಿ ಒಳಮೆಯ್ಯಿ ಕೆರ್ಕಿ ಸಪಾಯಿ ಮಾಡಿರೆ ನುಣ್ಣಂಗೆ ಆದೆ. ಅದರ ಬಾಯಿನ ಸ ಕಲ್ಲ್‌ಲೆ ಉಜ್ಜಿ ಸಪಾಯಿ ಮಾಡಿಕಾಂಕು. ಸೆಡೆ ಯಾವ್ದರ ಇಕ್ಕಿಕೆ ಇರ್ದ್ಲತ ನೋಡಿಕನ್ ಚಿಪ್ಪಿನ ತಕಾಂಕು. ಅಂತೇಳ್ರೆ ಹುಗ್ಗಿ ಇಕ್ಕೋಕಾರೆ ದೊಡ್ಡದ್ ಇರೊಕು. ಗೈಪುಗಾದರೆ ಹಙ ಸಣ್ಣದಿರೊಕು. ಆರ್ಸಿದ ಗೈಪು ಇಕ್ಕಿಕೆ ಇನ್ನೂ ಸಣ್ಣದಿರೊಕು. ಸೆಡೆ ಯಾವ್ದಾಕಾದ್ರೂ ಗಂಡ್ ಚಿಪ್ಪಿನೇ ಆಕು. ಸೆಡೆ ಹಿಡಿಯಕೆ ಕೈ (ಕಾವು) ಬೇಕು. ಅದ್ಕೆ ಬೆದ್ರ್ ಸಲ್ಕೆ (ತಟ್ಟೆ) ಬೇಕು. ಬೆಳ್ದ ಅಲ್ಲರ್ ಕಡೆಕಾಲ್ ಬೆದ್ರ್ ಆದರೆ ಒಳ್ಳದ್. ಚಿಪ್ಪಿ ನೋಡಿಕನ್ ಕಾವು ತಯಾರ್ ಮಾಡೊಕು. ತೇಳ್ರೆ ದೊಡ್ಡ ಸೆಡೆಗೆ ಹಙ ದಪ್ಪದ ಕಾವು ಸಣ್ಣ ಸೆಡೆಗೆ ಸಣ್ಣ ಕಾವು. ಬೆದ್ರ್‌ನ ಬೇಕಾದ ಹಾಂಗೆ ಕೀಸಿ ಎರಡ್ ಗೇಣ್‌ನಷ್ಟ್ ಉದ್ದಕ್ಕೆ ತುಂಡ್ ಮಾಡಿಕಾಂಕು. ಕಾವುನ ಕೊಡಿ ಸಪೂರ ಮಾಡಿಕಂಡ್ ತೆಳ್ಳಂಗೆ ಮಾಡಿಕಾಂಕು. ಚಿಪ್ಪಿನ ನಡುಲಿ ಕಾವುನ ಕೊಡಿ ಹುಕ್ಕ್ ಹೋಗುವ ಹಾಂಗೆ ಚೂರು ಕಬ್ಬಿಣದ ಸಪೂರದ ಉಳಿಂದ ಬಿಸಿಮಾಡಿ ಸುಟ್ಟು ಎರಡು ಒಟ್ಟೆ ಮಾಡಿಕಾಂಕು. ಒಟ್ಟೆ ಕಾವುನ ಕೊಡಿ ಹುಕ್ಕ್ ಹೋಗುವಷ್ಟೇ ಇರೊಕು. ಕಾವುನ ಹುಗ್ಸಿ ಆದ ಮೇಲೆ ಅದರ ಕೊಡಿನ ಹಙ ಸೀಳಿ ಅದರೊಳಗೆ ಅಷ್ಟೇ ತೆಳ್ಳಂಗೆ ಮಾಡ್ದ ಬೆದ್ರ್‌ನ ಹುಗ್ಸಿ ಹೊಡ್ದರೆ ಕಾವು ಜಾರ್ದ್ಲೆ. ಕೊಡಿಲಿ ಹೊರಗೆ ಬಂದ ಬೆದ್ರ್‌ನ ತುಂಡು ಮಾಡಿ ಸಪಾಯಿ ಮಾಡಿಕಂಡ್ರೆ ಸೆಡೆ ತಯಾರ್ ಆದಂಗೇ. ಸೆಡೆಗೆ ಬೈನೆ ಮರದ ಕಾವುನ ಸ ಹಾಕುವೆ. ಜಂಬರದ ಮನೆಲಿ ದೊಡ್ಡ ಅಂಡೆಗಳ್‌ಲಿ ಪಾಯಸ, ಅನ್ನ ಮಾಡಿಕನ ಕಮ್ಮುನ ತಟ್ಟೆಲಿ ದೊಡ್ಡ ಸೆಟ್ಟ್‌ಗನಂಗೆ ಮಾಡಿ ಮೊಕ್ಚಿಕೆ ಉಪಯೋಗಿಸುವೆ. ಇದ್ಕೆ ದಾಣೆಂತೇಳಿ ಕರ್ದ್ಲವೆ.

ಹುಗ್ಗಿ ಇಕ್ಕಿಕೆ, ಗೈಪು ಇಕ್ಕಿಕೆ, ಪೊಜ್ಜಿ ಇಕ್ಕಿಕೆ, ಪಾಯ್ಸ ಇಕ್ಕಿಕೆ ಸೆಡೆ ಬೇಕಾದೆ. ಸೆಡೆನ ಮಾಡ್ದು ದೊಡ್ಡ ಕೆಲಸ ಅಲ್ಲ. ಯಾರೂ ಮಾಡಕ್ ಆದರೂ ಊರ್‌ಲಿ ಕೆಲವು ಜನ ಬಾರೀ ಲಾಯ್ಕ್ ಸೆಡೆ ಮಾಡೊವು ಇದ್ದವೆ. ಸೆಡೆಗಳ ಅಡ್ಗೆ ಮನೆಯಲಿ ಇಸಿಕೆ ಒಂದು ನೇಕೆ ಮಾಡುವೆ. ಇದ್ಕೆ ಜೋಲೆ ಇಲ್ಲರ್ ಅಳ್ಕೆ ತೇಳಿ ಕರ್ದ್ಲವೆ.

ಹುಗ್ಗಿ ತೋಡಿಕೆಂತಲೇ ಕೆಲವು ಜನ ದೊಡ್ಡ ಚಿಪ್ಪಿ ತಕಂಡ್ ಅದರ್ಲಿ ಸಣ್ಣ ಸಣ್ಣ ಕಣ್ಣ್ ಮಾಡಿ ಸೆಡೆ ಮಾಡುವೆ. ಅದ್ಕೆ ಕಣ್ಣ್ ಸೆಡೆಂತೇಳಿ ಕರ್ದ್ಲವೆ. ಉಪ್ಪನೆ ಕಾಯಿ ಇಕ್ಕಿಕೆ ಸಣ್ಣ ಚಿಪ್ಪಿಲಿ ಸಣ್ಣಸೆಡೆ ಸ ಮಾಡುವೆ. ಹಿಂದೆನ ಕಾಲಲಿ ಸಣ್ಣ ಸಣ್ಣ ಮಕ್ಕಳಿಗೆ ಕಣೇರ್ ಮೊದ್ದು ಅರ್ದ್ಲ ಕುಡಿಸಿಕೆ ಮಕ್ಕಳ ಬಾಯಿಗೆ ಸೆಡೆ ಕಾವುನ ಇಸಿ ಕುಡ್ಸುತಿದ್ದೊ. **(ಎಂ.ಜಿ.ಕೆ., ಬಾ.ಜೊ.)**



ಚಿಬುಲು

ಗಂಜಿ ಬಾಗಿಸಿಕೆ, ಪಾತ್ರೆಗೆ ಮುಚ್ಚಿಸಿಕೆ, ರೊಟ್ಟಿ, ದೋಸೆ ಹಾಕಿ ಇಸಿಕೆ ಉಪಯೋಗ ಆವ ಒಂದು ಸಾಮಾನ್ ಚಿಬುಲು. ತುಳುಲಿ ಕುಡ್ಪು, ಮಲೆಯಾಳಂಲಿ ಅರಿಪ, ಬ್ಯಾರಿ ಬಾಸೆಲಿ ತುಡುಪು ಅಂತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಇದ್ದದೆ.

ಬೆತ್ತದ ಬೊಳ್ಳಿಲಿ ಇದರ ಮಾಡುವೆ. ಬೆತ್ತನ ಪೊರ್ಲುಟ ಒಳ್‌ಂಗ್ಲೋಕ್. ಒಳ್‌ಂಗಿದ ಬೆತ್ತನ ಸಪೂರಕ್ಕೆ ಸೀಳಿಕಾಂಕು. ಕೀಸಿ ತೆಳ್ಳಂಗೆ ಮಾಡಿ ಕಣೊಕು. ಚಿಬುಳಿ ಮಾಡಿಕಾಕನ ನೀರ್‌ಲಿ ಪದ್‌ನಿಸಿಕಣಕು. ಆಗ ಮುಡೆಕೆ ಲಾಯ್ಕಾದೆ. ಕಾಡ್‌ಲಿ ಇರುವ ಸಪೂರದ ಕಾಡ್ ಬೊಳ್ಳಿಲಿ – ಹಾಲ್ ಬೊಳ್ಳಿ, ಹರ್ಕ್ ಬೊಳ್ಳಿಲಿ ನೂ ಇದರ ಮಾಡುವೆ. ಅಜಲರ್, ಕೊರಗರ್, ಮಲೆ ಕುಡಿಯರ್ ಇದರ ಮಾಡ್ತಿದ್ದೊ. ಬೇರೆ ಸಮುದಾಯದವು ಸ ಮಾಡುವೆ.

ಗಂಜಿ ಬಾಗ್ಸಿಕೆ ಇದರ ಬಳ್ಸುವೆ. ಮಡಿಕೆಲಿ ಗಂಜಿ ಬೆಂದ ಮೇಲೆ ಹುಗ್ಗೆ ಮಾಡಕರ್ ಗಂಜಿ ತೆಳಿನ ಬಾಗ್ಸೊಕು. ಅದ್ಕೆ ಮಡಿಕೆನ ಬಾಯಿಗೆ ಚಿಬುಳೆ ಇಸಿ ಅದರ ಮೇಲೆ ಮರ್ಚಟೆನ ಇಸಿ ಅಡಿಗೆರದ ಮೇಲೆ ಇಲ್ಲರೆ ಬೇರೆ ಮಡಿಕೆನ ಮೇಲೆ ಬೊಗ್ಗಿಸಿ ಅದರ ಬಾಯಿಗೆ ಬೀಳದ ಹಾಂಗೆ ಹಞ ಓರೆ ಮಾಡಿ ಇಸುವೆ. ತೆಳಿ ಎಲ್ಲ ಇಳ್ದ್ ಹೋದ ಮೇಲೆ ಮಡಿಕೆನ ಸರ್ತ ಮಾಡಿ ಇಸುವೆ.

ಇದರ್‌ಲಿ ಸಣ್ಣದ್ ದೊಡ್ಡದ್ ಇದ್ದದೆ. ಕೆಲವ್ ಚಿಬುಳಿಗಳ ಹಿಡ್ಕಂಬಕೆ ಕೈ ನೂ ಇದ್ದದೆ. **(ಎಂ.ಜಿ.ಕೆ.)**



ದಂಡಾಸ್

ಬೆಚ್ಚ ಬೆಚ್ಚ ಇರುವ ಸಾಮಾನ್ ತೆಗೆಕೆ ಆವ ಸೊತ್ತು. ಇದ್ಕೆ ಚಿಂಟಿಂತಲೂ (ಚಿಮ್ಟ) ಹೇಳುವೆ. ಇದ್ ಎಲ್ಲಾ ಊರುಲಿ ಇರುವಂತ ಸೊತ್ತು. ಇದ್ ಸಪೂರ ಆಗಿ ಬೆತ್ತದ ಬಾಸ್‌ನ ಹಾಂಗೆ ಇದ್ದ್ ಎರಡ್ ಬಾಸ್‌ಗಳೂ ಎರಡುವರೆ ಗೇಣ್‌ನಷ್ಟು ಉದ್ದ ಇದ್ದದೆ. ಕಡೆಲಿ ಹಿಡ್ದ್ ಒತ್ತಿಕನ ಕೊಡಿ ಹಕ್ಕಲೆ ಬಂದದೆ. ಇದರ ಕಬ್ಬಿಣದ ಆಚಾರಿಗ ಮಾಡುವೆ. ಇದ್ ಒಲೆಂದ ಕೆಂಡ ತೆಗೆಕೆ ಬೇಕಾದೆ. ಎಣ್ಣೆಲಿ ಕಾಸುವ ತಿಂಡಿ ತೆಗೆಕೂ ಆದೆ. ಮೀನ್, ಹಪ್ಪಳ, ಗೇರ್ದ ಬೀಜ, ಗೆಲ್ಸ್ ಒಲೆಲಿ ಸುಟ್ಟು ತೆಗೆಕೆ ಬೇಕಾದೆ. ಇಂತಾ ಸಣ್ಣ ದಂಡಾಸ್ ಚಿನ್ನದ ಆಚಾರಿಗಳಿಗೆ ಚಿನ್ನದ ಕೆಲ್ಸ ಮಾಡಿಕೆ ಬೇಕಾದೆ. ಕಬ್ಬಿಣದ ಆಚಾರಗಳಿಗೂ ಇಂತದ್ದೇ ದೊಡ್ಡ ದಂಡಾಸ್ ಬೇಕಾದೆ.

ಇದೊಂದು ಕಬ್ಬಿಣದ ಸೊತ್ತು. ಒಲೆಂದ ಕೆಂಡನ ಹಿಡ್ಕಂಬಕೆ ಇದ್ ಬೇಕ್. ಕೆಂಡನ ಹಿಡ್ಕಂಬಕಷ್ಟೇ ಅಲ್ಲ, ಇನ್ನೂ ಬೇರೆ ಬೇರೆ ಕೆಲ್ಸಕೂ ಬೇಕಾದೆ.

ಕೊಡಗ್‌ಲಿ ಅಕ್ಕಿ ರೊಟ್ಟಿ ಹೆಸ್ರ್‌ವಾಸಿ. ಓಡುಲಿ ಒಂದ್ ಹಂತಲಿ ಬೆಂದ ರೊಟ್ಟಿನ ತೆಗ್ದ್ ಒಲೆ ಬಾಯಿಲಿ ಕೆಂಡಲಿ ಕಾಸಿವೆ. ಆಗ ಪೊಕ್ಕಳ ಬಂದದೆ. ರೊಟ್ಟಿ ಬೆಂದಾಕನ ರೊಟ್ಟಿನ ಒಲೆಂದ ತೆಗೆಕನ ಇಕ್ಕಳನ ಉಪಯೋಗಿಸಿವೆ.

ಬಿಸಿ ಬೂದಿಲೊ, ಕೆಂಡದ ಮೇಲೆನೊ ಸುಡಿಕೆತ ಹಾಕಿದ ಒಣ್‌ಗ್‌ಲ್ ಮೀನ್‌ನ ತೆಗೆಕೆ, ಅಳುಂಬು ಸುಡಕನ, ಎಸಂಡ್ ಸುಡಕನ, ಗ್ಯಾರ್‌ದ ಬೀಜ, ಹಲ್ಸ್ ಬಿತ್ತ್ ಸುಡಕನೆಲ್ಲಾ ಇಕ್ಕಳಕೆ ಬಾರೀ ಕೆಲ್ಸ. ಉಪ್ಪು ಮೆಣ್ಸ್ ಮಾಡಕನ ಒಣ್‌ಗ್‌ಲ್ ಮೆಣ್ಸ್ ಸುಟ್ಟ್ ಮಾಡಿವೆ. ಮೆಣ್ಸ್ ಸುಡಕನ ಮೆಣ್ಸ್ ಸುಟ್ಟ್‌ಕರಿ ಆಕೆ ಮುಂದೆ ಒಲೆಂದ ತೆಗೆಕೊರೆ ಇಕ್ಕಳ ಬೇಕೇ ಬೇಕ್.

ಕೆಲವು ಜನ ಬೀಡಿ ಹೋಸಕನ ಇಕ್ಕಳಲಿ ಹಿಡ್ಕಂಡ ಕೆಂಡಕೆ ಬೀಡಿನ ಮುಟ್ಟಿಸಿ ಹೊತ್ತಿ ಕಂಡವೆ. ಬೆಳಿಗ್ಗೆ ಒಲೆಗೆ ಬೆಂಕಿ ಮಾಡ್‌ಕನ ಬೂದಿಯೊಳಗೆ ಇರ್‌ವ ಸಣ್ಣ ಸಣ್ಣ ಕೆಂಡಗಳೆಲ್ಲಾ ಒಟ್ಟು ಮಾಡಿಕೆ ಇಕ್ಕಳ ಬೇಕ್.

ಈಗ ಸ್ಟೀಲ್‌ದ್ ಇಕ್ಕಳ ಬಂದುಟು. ಆದರೆ ಅದರ ಒಲೆ ಬುಡಲಿ ಉಪಯೋಗ ಮಾಡ್ದುಲೆ. ಅದೇನಿದ್ದರೂ ಪಾತ್ರದ ಒಳಗೆನ ಸೊತ್ತುನ ತೆಗೆಕೆ ಉಪಯೋಗಿಸಿವೆ.

ಉಂಬ ಮೇಜ್‌ನ ನಡುಲಿ ಇರ್‌ವ ಪಾತ್ರೆಂದ ತಿಂಡಿ ತಕಂಬಕೆ ಸ್ಟೀಲ್‌ದ್ ಇಕ್ಕಳ ಬೇಕಾದೆ. ಸುತ್ತ ಉಂಬಕೆ ಕುದ್ದ್‌ರ್ಕನ ಊಟದ ಕೈಯಿಂದಳೇ ತಕಂಬಕಾಗದ್, ಅತವಾ ಇನ್ನೊಂದ್ ಕೈ ಹಾಕಿ ಹಾಕೊಂಬೊದು 'ಮೇಜದ ಪದ್ದತಿ' ಅಲ್ಲ. ಅದ್ ಆಕೆ ಬತ್ತೇಳಿ ಇಕ್ಕಳನ ಇಸಿದ್ದವೆ. ಇಡ್ಲಿ, ಕಡುಂಬು, ಬಟ್ಲಿಟ್, ಪಾಪಿಟ್ಟ್, ನೂಪಿಟ್ಟ್, ಹೋರ್ದಮೀನ್, ಹೋರ್ದಮಾಸ ಹಿಂಗೆ ಅದರೆಲ್ಲ ತಕ್ಕಂಡ್ ಬಟ್ಲಿಗೆ ಹಾಕಂಬಕೆ ಇಕ್ಕಳ ಬೇಕ್.

ಕೆಲವು ಮನೆಲಿ ಮಕ್ಕ ಇಕ್ಕಳನ 'ಶೃತಿಕವೆ' ತ್ತೇಳಿಕಂಡ್ ಅದರ ನೆಲಕ್ಕೆ ಹೊಡ್ದ್ ಕೆಬಿ ಹತ್ರ ಹಿಡ್ದವೆ. ಆಗ ಅದರ್‌ಂದ ಗರ್‌ತ ಬರ್‌ವ ಸದ್ದ್ ಕೇಳಿ ಕುಸಿಪಟ್ಟವೆ. ಇಸ್ಕೂಲ್‌ಲಿ ಶೃತಿಕವೆಂದ ಹೆಂಗೆ ಸದ್ದ್ ಹೊರ್ಡದೆತ ಪ್ರಯೋಗ ಮಾಡಿ ತೋರ್ಸಿವೆ. ಮಕ್ಕ ಮನೆಲಿ ಮಾಡಿ ನೋಡಿವೆ. ಒಂದ್ ಸೆಕೆಂಡಿಗೆ ಶೃತಿಕವೆಂದ ಹೊರ್ಡ್‌ವ ಸದ್ದಿಗೂ ಇಕ್ಕಳಂದ ಬರ್‌ವ ಸದ್ದಿಗೂ ಮಕ್ಕ ಹೋಲ್ಸಿಕಂಡವೆ. **(ಎಂ.ಜಿ.ಕೆ., ಬಾ.ಜೋ.)**



ನೆಲು

ಮನೆಗಳ್ಲಿ ಹಾಲ್, ಮಜ್ಜಿಗೆ ಮತ್ತೆ ಮಾಡ್ದ ಅಡ್ಗೆ ಒಳ್ದರೆ ಅದರ ರಕ್ಷಣೆ ಮಾಡುವ ರಕ್ಷಕನೇ ನೆಲು. ಹತ್ತೈವತ್ ವರ್ಷಗಳ ಹಿಂದೆ ಅಡ್ಗೆ ಮನೆಲಿ ನೆಲು ಇಲ್ಲದ ಮನೆನೇ ಇತ್ಲೆ. ಅಡ್ಗೆ ಮನೆಗೆ ಅದೊಂದ್ ಆಕರ್ಷಣೆ ಆಗಿತ್ತ್. ಇದ್ಕೆ ತುಳುಲಿ ಬಲ ಅಲ್ಲರ್ ನೆಲವು ಅಂತ ಕರ್ದವೆ. ಮಲೆಯಾಳಂಲಿ ಮತ್ತೆ ಬ್ಯಾರಿ ಬಾಸೆಲಿ ಉರಿತಲೇ ಹೇಳುವೆ. ನೇತಾಡಿಸಿ ಇಸುದಕ್ಕೆ ಈ ಹೆಸ್ರ್ ಬಂದಿರ್ದು. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಲೆ ಮತ್ತೆ ಸಕ್ಲೇಶ್ಪುರ ಕಡೆ ಕಾಂಬಕೆ ಸಿಕ್ಕಿದೆ.

ನೊಜ ಹುಲ್ಲ್‌ನ ಬೊಳ್ಳಿಲಿ ಮಾಡ್ದ ನೆಲು ಗಟ್ಟಿನೂ ಜಾಸ್ತಿ, ನೋಡಿಕೂ ಲಾಯ್ಕ. ಅಜ್ಜಿಕ ತಮ್ಮ ಕೈ ಚಳಕಂದ ನೆಲು ಮಾಡಿವೆ. ನೊಜ ಹುಲ್ಲುನ ತಂದ್, ನೆರಳ್‌ಲಿ ಒಣ್ಗಸೊಕು. ಅದ್ ಹದಾ ಒಣಂಗಿದ ಮೇಲೆ ದೊಡ್ಡ ಸಿಂಪೆ ಮಾಡ್ದಂಗೆ ಒಂದ್ ಸಿಂಪೆ ಮಾಡಿವೆ. ಮತ್ತೆ ಸಣ್ಣ ಸಣ್ಣ ಮೂರೋ ನಾಕೋ ಸಿಂಪೆ ಮಾಡಿವೆ. ಮತ್ತೆ ನೊಜದ್ದೇ ಹಗ್ಗ ಮಾಡಿ ದೊಡ್ಡ ಸಿಂಪೆನ ಮೇಲೆ ಕಟ್ಟಿ ಅದರ ಕೆಳಗೆ ನಾಕ್ ಸಿಂಪೆಗಳ ಹಗ್ಗಲಿ ಕೋಸಿವೆ. ಅದರ ಕಾಲಿರುವ ನೆಲುತ ಕರ್ದವೆ. ಕೆಲವ್ ಒಂಟಿ ಸಿಂಪೆದ್ ನೆಲುನೂ ಇದ್ದದೆ.

ನೊಜದ ನೆಲುಗಿಂತಲೂ ಬೂತಾಳೆ (ರಕ್ಕಸ ಪಟ್ಟೆ) ನಾರ್‌ಂದ ಮಾಡ್ದ ನೆಲುದ್ ಬಾಳಿಕೆ ಜಾಸ್ತಿ. ಬೂತಾಳೆ ಪಟ್ಟೆದ್ ನಾರ್‌ತೆಗ್ದ್ ಹಗ್ಗ ಮಾಡಿ ಮಾಡುವ ನೆಲುಗೆ ಕೆಲ್ಸ ಜಾಸ್ತಿ. ಕೆಲವು ಕಡೆ ಮಾದ್ರಿ ಬೊಳ್ಳಿ, ಹಾಲ್ ಬೊಳ್ಳಿ, ಚೊಪ್ಪುನ ಬೊಳ್ಳಿ ಮತ್ತೆ ಹುರಿ ಮಾಡ್ದ ನಾರ್ಕಣೆ ಬೊಳ್ಳಿಲಿ ಮಾಡಿವೆ. ಪಾತ್ರೆ ಇಸುವಲ್ಲಿ ಹಞ ಬೊಳ್ಳಿನ ನೇಯ್ದ್ ಪಾತ್ರೆ ನಿಲ್ಲುವ ಹಾಂಗೆ ಮಾಡೊಕು.ಇದ್ ಒಸಿ ಗೊತ್ತಿದ್ದೊವು ಮಾಡಿಕೆ ಆದೆ. ಹೆಳ್ಮಕ್ಕ ಸಾ ಮಾಡಕ್.

ನೆಲುಲಿ ಮಾಸ ಗ್ಯೆಪುದ್ ಚೆಟ್ಟಿ ಇಲ್ಲರೆ ಮೊಸ್ರ್, ಹಾಲ್, ತುಪ್ಪ, ಬೆಣ್ಣೆ ಈ ತರದ ಪದಾರ್ಥಗಳ ಇಸಿವೆ. ಕೊತ್ತಿಗಾಗಲಿ, ತುಡುಗುವ ಮಕ್ಕಳಿಗಾಗಲಿ ನೆಲುಂದ ತೆಗೆದು ಸುಲಾಬ ಅಲ್ಲ. **(ಎಂ.ಜಿ.ಕೆ., ಬಾ.ಜೋ.)**



ಪುಂಡಿ ಮಡ್ಕೆ

ಪುಂಡಿ ಬೇಸುವ ಮೊಣ್ಣ್‌ನ ಮಡ್ಕೆನ ಪುಂಡಿ ಮಡ್ಕೆಂತ ಹೇಳುವೆ. ಕೈಲಿ ಒತ್ತಿ ಒತ್ತಿ ಉಂಡೆ ಮಾಡ್ದ ಹಿಟ್ಟ್‌ಗೆ ಪುಂಡಿಂತೇಳುವೆ. ಹಾಂಗಾಗಿ ಅದರ ಬೇಸುವ ಮಡಿಕೆ ಪುಂಡಿ ಮಡಿಕೆಂತಾತ್. ಇದರ ಕೆಲವು ಕಡೆ ಹಿಟ್ಟ್‌ನ ಕಳ್ಳಿಗೆಂತಲೂ ಕರ್ದವೆ.

ತುಳುಲಿ ಪುಂಡಿತಕರ. ಮಲೆಯಾಳಂಲಿ ಕಡಂಬು ಪಾತ್ರಂ, ಬ್ಯಾರಿ ಬಾಸೆಲಿ ಪಿಂಡಿ ಕಲಂತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್, ಹಾಸನ ಜಿಲ್ಲೆನ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ.

ನೋಡಿಕೆ ಇಡ್ಲಿ ಪಾತ್ರೆನ ಹಾಂಗೇ ಇದ್ದದೆ. ಆದರೆ ನಡೂಲಿ ತಟ್ಟೆ ಇಸುವ ಬದಲ್ ಮಡಿಕೆಲೇ ತಟ್ಟೆನ ಹಾಂಗೇ ಇದ್ದದೆ. ಅದರ್‌ಲಿ ದೊಡ್ಡ ದೊಡ್ಡ ಒಟ್ಟೆ ಇದ್ದದೆ. ಇದ್ ಸ ಸೆಕೆಲಿ ಬೇಯಿಸುವ ಹಿಟ್ಟ್. ಇಡ್ಲಿ ಪಾತ್ರೆಲೂ ಪುಂಡಿ ಬೇಯ್ಸಿಕೆ ಆದೆ. ಇದ್ಕೂ ಮುಚ್ಚಳ ಉಟ್ಟು. ಈ ಮಡಿಕೆನ ಮೂಲ್ಯ ಜನಂಗ ಮೋಣ್ಣ್‌ಂದಲೇ ಮಾಡುವೆ.

ಪುಂಡಿ ಕುಸ್ಲಕ್ಕಿ ಮತ್ತೆ ಬೆಂತೆಕ್ಕಿಂದ ಎಣ್ಣೆ ಇಲ್ಲದೇ ಮಾಡುವ ಹಿಟ್ಟ್. ಬೊಳ್ಪುನ ಪಲಾರಕ್ಕೆ ಪುಂಡಿ ಮಾಡುವೆ. ಪುಂಡಿ ತಿಂದರೆ ಹೊಟ್ಟೆ ಗಟ್ಟಿ. ಹಾಂಗಾಗಿ ಪುಂಡಿ ಮಾಡ್ವ ಕ್ರಮ ಬಾರೀ ಹಿಂದೆನೆ ಇತ್ತ್. ಹಂದಿ ಗೆಯ್ಪುಗೆ ಪುಂಡಿ ಹಿಟ್ಟ್ ಲಾಯ್ಕ್ ಆದೆ. ಸೆಕೆಲಿ ಬೆಯ್ಯುವ ಇಡ್ಲಿ, ಮೂಡೆ ಹಿಟ್ಟ್‌ನಂತದೆಲ್ಲಾ ಬೇಸಿಕೆ ಈ ಮಡ್ಕೆಲಿ ಆದೆ. **(ಎಂ.ಜಿ.ಕೆ.)**



ಬರ್ಣಿ

ಬರ್ಣಿ ಕೆಲವು ಸಾಮಾನ್‌ಗಳ ಹಾಕಿಸಿಕೆ ಆವ ಸೊತ್ತ್. ತುಳುಲಿ, ಮಲೆಯಾಳಂಲಿ ಬರಣಿಂತಲೇ ಹೇಳುವೆ. ದಕ್ಷಿಣ ಕನ್ನಡ ಉಡುಪಿ ಮತ್ತೆ ಕೊಡಗ್ ಜಿಲ್ಲೆಲಿ ಇದ್ ಇದ್ದದೆ. ಮೊಣ್ಣ್‌ನ ಬರ್ಣಿ ಮೊಣ್ಣ್‌ಂದ ಮಾಡ್ದು. ಇದರ್‌ಲಿ ಸಣ್ಣದ್ ದೊಡ್ಡದ್ ಇದ್ದದೆ. ಬಾಯಿ ಹಞ ಸಣ್ಣದಾಗಿದ್ದ್ ಮುಚ್ಚಳ ಸ ಇದ್ದದೆ. ಇದರ ಮೂಲ್ಯ ಜನಂಗ ಮಾಡುವೆ.

ಕುಪ್ಪಿ ಬರಣಿ ಪೊಯ್ಯೆ, ಜೇಡಿ ಮೊಣ್ಣ್, ರಂಜಕ ಎಲ್ಲ ಸೇರ್ಸಿ ಮಾಡ್ದು. ಕೆಲವು ಸೊತ್ತ್‌ಗಳ ಹಾಳಾಗದ ಹಾಂಗೆ ಇಸಿಕೆ ಇಂತಾ ಸಾಮಾನ್ ಬೇಕು. ಮಾಯಿನ ಕಾಯಿ ಉಪ್ಪನೆಕಾಯಿ ಮಾಡಿಕೆ ಇಂತಾ ಬರಣಿಲಿ ಉಪ್ಪು ಹಾಕಿಸುವೆ. ಹಲ್ಸ್‌ನ ಕಾಯಿ ತೋಳೆನ ಸ ಇದರ್‌ಲಿ ಉಪ್ಪುಲಿ ಹಾಕಿಸುವೆ. ಅದ್ಕೆ ನೀರ್ತೋಳೆ ತ ಹೇಳುವೆ. ಬೇರೆ ಮಡಿಕೆಲೂ ಉಪ್ಪನೆಕಾಯಿ, ನೀರ್ತೋಳೆ ಹಾಕಿಸಿಕೆ ಆದೆ.

ಹಿಂದೆನವು ಬೇರೆ ಬೇರೆ ಸೊತ್ತುಗಳ ಹಾಕಿಸಿಕೆ ಮತ್ತೆ ಬೇರೆ ಬೇರೆ ಅಡಿಗೆಗೆ ನಮೂನೆ ನಮೂನೆದ್ ಪಾತ್ರೆಗಳ ಇಸಿಕಾಂತಿದ್ದೊ. ಹೆಚ್ಚಾಗಿ ಉಪ್ಪನೆಕಾಯಿ ಹಾಕಿಕೆ ಬರಣಿ ಬೇಕಾದೆ. ಮಾಯಿನಕಾಯಿ, ಒಡ್ಡುಹುಳಿ, ನಿಂಬುಳಿ ಉಪ್ಪುಲಿ ಹಾಕಿಸಿಕೆ ಇದರ್‌ಲಿ ಲಾಯ್ಕಾದೆ. ಈ ಮಡ್ಕೆಲಿ ಮಳೆಗಾಲಕ್ಕೆ ತಿಂಬಕೆಂತ ಅಡಿಕೆನೂ ನೀರ್ಲಿ ಹಾಕಿಸುವೆ. ಅದ್ಕೆ ನೀರಡ್ಕೆಂತ ಹೇಳುವೆ. **(ಎಂ.ಜಿ.ಕೆ.)**

ಪಿಜಣಿ (ಪಿಂಗಾಣಿ) ಬರ್ಣಿಲಿ ಉಪ್ಪನಕಾಯಿ, ಕಾಸಿದ ಹಸ್‌ನ ತುಪ್ಪ, ಜೇನ್ ಇಂತದರೆಲ್ಲಾ ಅದರ್ಲಿ ತುಂಬಿ ಕಂಬತಿದ್ದೊ. ಪಿಜಣಿ ಗಟ್ಟಿ ಸೊತ್ತು ಹೌದು. ಆದರೆ ಅದ್ ಬಿದ್ದರೆ ಒಡ್ದೋದೆ.

ಬರಣಿಲಿ ಬೇರೆ ಬೇರೆ ಗಾತ್ರದ ಬರಣಿಗ ಒಳೊ.ಎಲ್ಲಾ ಬರಣಿಗಳಿಗೆ ಗಾತ್ರಕ್ಕೆ ತಕ್ಕಂಗೆ ಬಾವಡೆ ತರದ ಮುಚ್ಚೊಳ ಇದ್ದದೆ. ಬರಣಿದ್ ಮುಚ್ಚೊಳನ ಆಗಾಗ ತೆಗ್ದರೆ ಅದರೊಳಗೆ ಗಾಳಿ ನುಗ್ಗಿ ಸೊತ್ತು ಬೇಗ ಹಾಳಾದೆ. ಹಂಗಾಗಿ ದೊಡ್ಡ ಬರಣಿಲಿ ತುಂಬಿಕಂಡ ಉಪ್ಪನಕಾಯಿನ ಸಣ್ಣ ಬರಣಿಗೆ ತುಂಬಿಕಂಡ್ ಉಪಯೋಗ ಮಾಡ್ತಿದ್ದೊ. ದೊಡ್ಡ ಬರಣಿಗೆ ಮುಚ್ಚೊಳ ಹಾಕುದಲ್ಲದೆ ಅದರ ಬಾಯಿ ಕಟ್ಟ್‌ತಿದ್ದೊ.

ಬರಣಿದ್ ಬಾಯಿ ಅಗಾಲ ಇದ್ದದೆ. ಚಮಚಂದ ಹಾಕಂಬಕೆ ಒಳ್ಳದಾದೆ. ಬರಣಿದ್ ತೂಕ ಜಾಸ್ತಿ. ಹಂಗಾಗಿ ಮಡ್ಕೆಗಳ ಹೊತ್ತ್‌ಕಂಡ್ ಹೋಗಿ ಮಾರ್‌ವಂಗೆ ಬರಣಿಗಳ ಮಾರ್‍ತಿತ್‌ಲೆ. ಬೇಕೂತಾದರೆ ಅಂಗ್ಡಿಗೆ ಹೋಗಿ ತಕಂಬತಿದ್ದೊ. ಬಣ್ಣಬಣ್ಣದ ಬರಣಿಗ ನೋಡಿಕೆ ಪೊರ್ಲು. ನೆಲಕೆ ಬೀಳದೆ ಇದ್ದರೆ ಬರಣಿ ನೂರಾರ್ ವರ್ಸ ಹಂಗೇ ಇದ್ದದೆ. ತುಕ್ಕೂ ಹಿಡೆದುಲೆ, ಎಂತದೂ ಆದುಲೆ. ತುಂಬಾ ಬಿಸಿ ಇರ್‌ವ ನೀರ್‌ಲಿ ತೊಳ್ದರೆ ಒಡ್ದೋದೆ.

ಈಗೀಗಂತೂ ಬರಣಿ ಮೇಲೆ ತರಾವರಿ ಚಿತ್ರಗಳ ಬರ್ದ್ ನೋಡಿಕೆ ಬಾರೀ ಲಾಯ್ಕ್ ಕಂಡದೆ. ಚೀನಾ ದೇಶಲಿ ಸುರೂಗೆ ಪಿಂಗಾಣಿ ತಯಾರಾತ್ ತ ಹೇಳಿವೆ. ಸುಮಾರು 1707–1708 ರ್‌ಲಿ 'ರೋತ್ಸ್ ಪಿಂಗಾಣಿ' (ರೆಡ್ ಪಿಂಗಾಣಿ) ತಯಾರ್ ಆತ್‌ತ ಹೇಳಿವೆ. **(ಬಾ.ಜೋ.)**



ಬೀಸ್‌ಕಲ್ಲ್

ಅಕ್ಕಿ, ರಾಗಿ, ಗೋದಿ ಹುಡಿ ಮಾಡಿಕೆ ಇರುವ ಕಲ್ಲ್‌ಗೆ ಬೀಸ್‌ವ ಕಲ್ಲ್‌ತ ಹೇಳುವೆ. ತುಳುಲಿ ಬೀಸುನ ಕಲ್ಲ್‌ತ ಹೇಳುವೆ. ಮಲೆಯಾಳಂಲಿ ಆಟ್ ಕಲ್ಲ್, ಬ್ಯಾರಿ ಬಾಸೆಲಿ ಬೀಸ್‌ನ ಕಲ್ಲ್‌ತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ ಮತ್ತೆ ಕೊಡಗ್ ಜಿಲ್ಲೆಲಿ ಮತ್ತೆ ಹೆಚ್ಚಿನ ಕಡೆಲಿ ಇದ್ದದೆ.

ಉರ್‌ಟಾಗಿ ಚಪ್ಪಟೆ ಇರ್‌ವ ಎರಡ್‌ಕಲ್ಲ್ ಬೇಕು. ಅದ್ ಒಂದರ ಮೇಲೆ ಇನ್ನೊಂದು ಇರೊಕು. ಅಡಿಲಿರುವ ಕಲ್ಲಿಗೆ ನಡುಲಿ ಒಟ್ಟೆ ಮಾಡಿ ಅದ್ಕೆ ಅಡ್ಡ ಒಂದು ಗೂಟ ಹಾಕ್‌ವೆ. ಗೂಟ ಅಂದಾಜ್ ಒಂದ್ ಗೇಣ್‌ನಷ್ಟ್ ಇದ್ದ್ ಮೂರು ಬೆರಳ್‌ನಷ್ಟು ತೋರ ಇರೊಕು. ಇನ್ನೊಂದು ಕಲ್ಲ್ ನಡುಲಿ ಎರ್ಡ್ ಪುಡೆಗೂ ಕಾಂಬ ಹಾಂಗೆ ಒಟ್ಟೆ ಇದ್ದದೆ. ಅದರ ಕರೇಲಿ ಇನ್ನೊಂದು ಒಟ್ಟೆ ಇದ್ದ್ ಅದ್ಕೆ ಸಾ ಒಂದು ಗೂಟ ಸಿಕ್ಕಿಸ್‌ವೆ. ಈ ಗೂಟ ಅಷ್ಟೇ ತೋರ ಇದ್ದ್ ಹಙ ಉದ್ದ ಜಾಸ್ತಿ ಇರೊಕು. ಆ ಕಲ್ಲ್‌ನ ನಡೂಲಿ ಗೂಟ ಇರುವ ಕಲ್ಲ್‌ನ ಮೇಲೆ ಇಸೊಕು. ಅದರ ಒಟ್ಟೆ ಒಳಗೆ ಗೂಟ ಕುದ್ರೊಕು. ಮೇಲೆನ ಕಲ್ಲ್‌ನ ನಡುಲಿ ಇರ್‌ವ ಹಙ ದೊಡ್ಡ ಒಟ್ಟೆನ ಸುತ್ತಲೂ ಓರೆಗೆ ಗುಂಡಿ ಇದ್ದದೆ. ಆ ಗುಂಡಿಗೆ ಅಕ್ಕಿನೊ ರಾಗಿನೋ ಹಾಕಿ ಕರೆಲಿರುವ ಗೂಟಲಿ ಸುತ್ತಲೂ ತಿರ್ಗಿಸುವೆ (ಬೀಸುವೆ) ಆಗ ಎರಡ್ ಕಲ್ಲ್‌ಗಳ ನಡುಲಿ ಸಿಕ್ಕಿ ಹಾಕಿದ ಅಕ್ಕಿ, ರಾಗಿ ಹುಡ್ಯುಡಿ ಆದೆ. ಅಡಿಲಿರುವ ಕಲ್ಲ್‌ನ ಮೇಲ್ಪುಡೆಗೆ ಮತ್ತೆ ಮೇಲಿರುವ ಕಲ್ಲ್‌ನ ಅಡಿಪುಡೆಗೆ ಸಣ್ಣ ಸಣ್ಣ ಒಟ್ಟೆ ತರ ಮಾಡೊಕು. ಬೀಸಿಕನ ಎಡೆಗೆ ಸಿಕ್ಕಿದ ಅಕ್ಕಿ ರಾಗಿ ಕಲ್ಲ್‌ನ ಎಡೆಲಿ ಹೊಡಿ ಹೊಡಿ ಆದೆ. ಇದರ ಕಲ್ಲ್ ಕುಟ್ಟಿಗ ಜನಾಂಗದೊವು ಮಾಡುವೆ. **(ಎಂ.ಜಿ.ಕೆ.)**

ಸಾಮಾನ್ಯಾಗಿ ಕೊಡಗು ಬಾಗಲಿ ಒಂದೇ ಕಣ್ಣ್ ಇರ್‌ವ ಬೀಸ್ ಕಲ್ಲ್‌ಗಳೇ ಜಾಸ್ತಿ ಇರ್ತಿದ್ದದ್. ಎಲ್ಲೋ ಕೆಲವ್ ಕಡೆ ಎರಡ್ ಕಣ್ಣ್ ಇರ್‌ವ ಕಲ್ಲೂ ಇತ್ತ್. ಬೀಸ್‌ಕಲ್ಲ್ ಬೇರೆ ಬೇರೆತರದೂ ಇತ್ತ್. ಅಡಿಕಲ್ ದಪ್ಪ, ಮೇಲೆ ಕಲ್ಲ್ ಹಙ ತೆಳು, ಅಡಿಕಲ್ಲ್ ಮೇಲೆಕಲ್ಲ್ ಸಮ ಸಮ, ಅಡಿಕಲ್ಲ್ ಬೋಳು ಮೇಲೆ ಕಲ್ಲ್‌ಗೆ ಒಂದೇ ಒಂದು ದುಂಡು, ಇಲ್ಲರೆ ಮೇಲೆ ಕಲ್ಲ್‌ಗೆ ಎರಡ್ ದುಂಡು, ಅದಿಲ್ಲರೆ ಎರಡೂ ಕಡೆ ಬೋಳು– ಈ ತರ ಇದ್ದದೆ.

ಮೇಲೆ ಕಲ್ಲ್‌ಗೆ ದುಂಡು ಇದ್ದರೆ ಬೀಸಿಕೆ ಸುಲಾಬ. ಒಮ್ಮೆ ದುಂಡುನ ಹಿಡ್ದ್ ಸುರೂಗೆ ತಿರ್ಗಿಸಿಕೆ ಒಳ್ಳದಾದೆ. ಎತ್ತಿ ಎತ್ತಿ ಬೀಸಿಕೆ ಒಳ್ಳದಾದೆ. ಮೇಲೆ ಕಲ್ಲ್ ಹಿಡ್ಕಂಬಕೆ ಒಂದ್ ಮರದ ಗೂಟ ಕಲ್ಲ್‌ದ್ ಕರೇಲಿ ಇದ್ದದೆ. ಹಂಗೆ ಕೆಳಗಿನ ಕಲ್ಲ್ ನಡೂಲಿ ಗೂಟ ಇದ್ದದೆ. ಅದೂ ಸನ ಮರದ ಗೂಟನೇ ಆತಿದ್ದದೆ. ಕೆಲವು ಕಬ್ಬಿಣದ ಗೂಟ ಹಾಕಿದ್ದವೆ. ಕಬ್ಬಿಣದ್ ಇದ್ದರೆ ಮೇಲೆ ಕಲ್ಲ್‌ದ್ ತೂತ ಬೇಗ ಸಮ್‌ದದೆ. ಮೇಲೆ ಕಲ್ಲ್‌ಲಿರ್‌ವ ಗೂಟ ಬೀಸಿ ಬೀಸಿ ಆಕನ ಸಡ್ಲ ಆಗಿ ಕೈಗೇ ಬಂದ್ ಬುಟ್ಟದೆ. ಆಗ ಆ ಗೂಟನ ತೆಗ್ದ್ ಅದರ ಬುಡಕ್ಕೆ ಚೆಂಡಿ ಬಟ್ಟೆನ ತೆಳ್ಳಂಗೆ ಸುತ್ತಿ ಮೆಲ್ಲ ಮೆಲ್ಲ ಹೊಡ್ದ್ ಗಟ್ಟಿ ಮಾಡಿವೆ. ಮೆಲ್ಲ ಮೆಲ್ಲ ಯಾಕೆ ಹೊಡ್ದವೆತೇಳ್ರೆ ಕಲ್ಲ್ ಏನಾರ್ ಒಡ್ದ್ ಹೋದರೆ ತೇಳುವ ಜಾಗ್ರತೆಲಿ.

ಕಡೆವ ಕಲ್ಲಾಗಲಿ, ಬೀಸುವ ಕಲ್ಲಾಗಲಿ ಬೀಸಿ ಬೀಸಿ ಸಮ್ದದೆ. ಹಂಗಾಗಿ ಹಳ್ಳಿಗಳ ಮನೆ ಮನೆಗೆ ಕಲ್ಲಿಗೆ ಮುಳ್ಳು (ಉಳಿ) ಹಾಕಂವ ಬಾತಿತ್. 'ಕಲ್ಲ್ ಮುಳ್ಳೋ'ತ ಅಂವ ಹೇಳಿಕಂಡ್ ಬಾತಿತ್. ಸುಳ್ಯ ಬಾಗಲಿ ಅವರ ಕಲ್ಲ್ ಕುಟ್ಟಿಗ ಅಂತಾ ಕರೆತ್ತಿದ್ದೊ. ನಾಯಿಗ ಬೊಗ್‌ಳಿ ಅಂವನ ಸ್ವಾಗತ ಮಾಡ್ತಿದ್ದೊ. ಅಂವನ ಹೆಗ್ಲ್ ಮೇಲೆ ಒಂದ್ ಗೋಣಿಚೀಲ, ಕೈಲಿ ಮುಟ್ಟಿ ಮತ್ತೆ ಕಬ್ಬಿಣದ ಮುಳ್ಳು ಇರ್ತಿತ್. ಕಡೆವಕಲ್ಲ್, ಬೀಸುವ ಕಲ್ಲ್, ಅರೆವಕಲ್ಲ್ ಇದ್ದರೆ ಅದಕ್ಕೆಲ್ಲಾ ಮುಳ್ಳು ಹಾಕಿ ಗೋಣಿಂದ ಹೊಡ್ದ್ ದೂಳು ರಟ್ಟಿಸ್ತಿತ್. ಅಂವ ಮಾಡ್ದ ಕೆಲ್ಸಕೆ ಬತ್ತನೋ, ಅಕ್ಕಿಯೋ ಇಲ್ಲರೆ ದುಡ್ಡೋ ಕೊಡ್ತಿದ್ದೊ. ಬೀಸ್‌ಕಲ್ಲ್‌ನ ಉಮ್ಮಿ ಹಾಕಿ ಬೀಸಿ ಮತ್ತೆ ಲಾಯ್ಕ ತೊಳೆತಿದ್ದೊ. ಕಲ್ಲ್‌ನ ಒಣಂಗಿಸಿ ಬಟ್ಟೆಂದ ಹೊಡ್ದ್ ದೂಳುನೆಲ್ಲಾ ತೆಗದ್ ಅಕ್ಕಿ ಬೀಸ್‌ತಿದ್ದೊ. ಬೀಸ್‌ಕಲ್ಲಾಗಲಿ, ಕಡೆವಕಲ್ಲ್‌ನಾಗಲಿ ಸುಮ್ಮನೆ ಬೀಸಿಕಾಗದ್, ಸುಮ್ಮನೆ ಕಡೆಕಾಗದ್. ಹಂಗೆ ಮಾಡಿರೆ ಕಲ್ಲ್ ಸಮ್ದದೆ. ಕಲ್ಲ್‌ನ ಮೆಟ್ಟಿಕಾಗದ್. ಬೀಸಿಕೆ ಸುರ್ ಮಾಡ್‌ಕನ, ಬೀಸಿ ಆದ ಮೇಲೆ ಕಲ್ಲ್‌ಗೆ ನಮಸ್ಕಾರ ಮಾಡಿ ಅದ್ಕೆ ಗೌರವ ಕೊಟ್ಟವೆ. **(ಬಾ.ಜೋ.)**



ಬೋಗುಣಿ

ಮೊದೋಳ್ತಿಗೆ ಕೊಡುವ ಕಂಚ್ ಮುಟ್ಟುಗಳ್‌ಲಿ ಬೋಗುಣಿಯೂ ಒಂದ್. ವಯಸ್ಸಾದವು, ಕಾಯಿಲೆಂದ ಮಲ್ಗಿದವ್, ಬಾಣಂತಿ, ಸಣ್ಣ ಸಣ್ಣ ಮಕ್ಕ ಇರ್‌ವಲ್ಲಿ ಕಟ್ಲ್ ಕೆಳಗೆ ಬೋಗುಣಿನ ಇಸಿದ್ದವೆ.

ಮೊಕ ತೊಳೆಕೆ, ಕೈ ತೊಳೆಕೆ, ಬಾಯಿ ಮುಕ್ಕುಳ್ಸಿ ಉಗೆಕೆ ಅದ್ ಬೇಕಾದೆ. ಇರ್ಲ್ ಆಗಾಗ ಎದ್ದ್ ಉಚ್ಚೆ ಮಾಡಿಕೊ ಮತ್ತೊಂದಕ್ಕೊ ಹೋಕಾಗದಿದ್ದವು ಬೋಗುಣಿಗೆ ಉಚ್ಚೆ ಮಾಡಿವೆ. ಕೆಲವ್ ಮನೆಗಳ್‌ಲಿ ಮೂರ್ ಇಲ್ಲರ್ ನಾಕ್ ಕಾಲ್‌ಗಳ ಆದಾರ ಮಾಡಿ ಇಸಿದ್ದವೆ. ಉಂಬಕೆ, ಉಂಡ್ ಕೈ ತೊಳೆಕೆ ಅದ್ ಬೇಕಾದೆ. **(ಬಾ.ಜೋ.)**

ಮಜ್ಜಿಗೆ ಗುತ್ತಿ ಮತ್ತೆ ಕೋಲ್ ಮೊಂತ್

'ಕೊಟೆಗೆಲಿ ಹಸ್, ಮನೆಲಿ ಮಜ್ಜಿಗೆಗುತ್ತಿ' ತ್ತೇಳುವ ಮಾತುಟ್ಟು. ಆ ಮಾತ್ ಹಸ್ ಸಾಂಕುವ ಹಳ್ಳಿಗರ ಪಾಲಿಗೆ ಸತ್ಯನೂ ಹೌದು.ಮನೆ ಒಳಗೆ ಮಜ್ಜಿಗೆ ಕಡ್ದವೆತ್ತೇಳ್ದು ದರ್ ಬುರ್, ದರ್ ಬುರ್ ಸದ್ದ್‌ಂದೇ ಗೊತ್ತಾದೆ. ಆ ಸದ್ದ್ ಕೇಳ್ದೇ ಒಂದು ಕುಸಿ.

ದರ್ ಬುರ್ ಬೊಮ್ಮಕ್ಕ

ಮಜ್ಜಿಗೆ ಕಡೆವ ತಿಮ್ಮಕ್ಕ

ಬೆಣ್ಣೆತಿಂಬ ಮುದ್ದಪ್ಪ

ಕೋಳೇಲೆತ್ತುವ ಕೊಕ್ಕಾರ್ಚಿ

ಇದ್ ಪಂಡ್‌ಂದೇ ಹೇಳಿಕಂಡ್ ಬಾತಿರ್‌ವ ಜಾನಪದೀಯ ಹಾಡ್. ಮಜ್ಜಿಗೆ ಗುತ್ತಿ ಮಾಡ್ದೇ ಬೆದ್ರ್‌ಂದ. ಗುತ್ತಿ ಅಂದಾಜಿ ಮೂರಡಿ ಎತ್ತರ ಇದ್ದದೆ. ಬೆಳ್ದ ದಪ್ಪದಾದ ಮುಳ್ಳು ಬೆದ್ರ್ ಒಳ್ಳದ್. ಅದ್ ಒಳಗೆ ಅಗಲ ಇದ್ದ್ ಮಂದ ಇದ್ದದೆ. ಹಂಗೆ ಇರ್‌ವ ಗುತ್ತಿ ಬೇಗ ಒಡೆದುಲೆ. ಅಂತ ಬೆದ್ರ್ ಗುತ್ತಿನ ತಂದ್ ಹೊರಗೆನ ಗಂಟ್‌ನೆಲ್ಲಾ ಲಾಯ್ಕ ತಟ್ಟಿ, ಕೀಸಿ ನಯ್ಸ್ ಮಾಡಿವೆ. ಮತ್ತೆ ಗುತ್ತಿ ಒಳಗಿನ ತಡೆಗಳ್ನೆಲ್ಲಾ ಕುಟ್ಟಿ ತೆಗ್ದವೆ. ಕೆಳಗೆ ಮುಚ್ಚುವ ತಡೆ ಗಂಟ್‌ನ ಬುಟ್ಟವೆ. ಗುತ್ತಿನ ಹಿಡ್ಕಂಬಕೆ ಒಂದ್ ಗಂಟ್‌ನ 5,6 ಅಂಗಲದಷ್ಟ್ ಬುಟ್ಟಿದ್ದವೆ. ಮತ್ತೆ ಆ ಗುತ್ತಿನ ಒಂದ್ ಹತ್ತ್ ದಿನ ನೀರೊಳಗಿಸಿವೆ. ಅದರ ಹಸಿ ರಸ ಹೋದ ಮೇಲೆ ತಂದ್ ಲಾಯ್ಕ್ ತೊಳ್ದ್ ತಲೆ ಕೆಳಗೆ ಮಾಡಿ ನೆರಳ್‌ಲಿ ಇಸಿವೆ. ಬಿಸ್‌ಲ್‌ಲಿ ಇಸಿರೆ ಒಡ್ದೋದೆ. ನೀರೆಲ್ಲಾ ಇಳ್ದ ಮೇಲೆ ಮತ್ತೆ ಒಳಗೆ ಹೊರಗೆಲ್ಲಾ ತೊಳ್ದವೆ. ಮೊಸ್ರ್ ಹೊಯ್ದ್ ಮಂತ್ ಕೋಲ್‌ಂದ ಮಜ್ಜಿಗೆ ಕಡ್ದವೆ. ಮಂತ್ ಕೋಲುನ ಮಜ್ಜಿಗೆ ಕೋಲ್‌ತ ಕರ್ದವೆ. ಕೋಲು ತುದಿಗೆ ಅಪ್ಪದಿಟ್ಟ್ ಅಷ್ಟೇ ಅಗಲದ ಚಿಪ್ಪಿನ ಕೋಸಿದ್ದವೆ. ಆ ಚಿಪ್ಪಿಗೆ ಎರಡ್ ಮೂರ್ ಕಣ್ಣ್ ಮಾಡಿದ್ದವೆ. ಅದರ 'ಮಂತ್'ತ ಕರ್ದವೆ. ಕೋಲ್ ತುದಿಗೆ ಅದರ ಕೋಸಿರೆ ಮಂತ್‌ಕೋಲ್‌ತಾ ಆದೆ. ಕಮ್ಮುನ ತಟ್ಟೆ ಅಲ್ಲರ್ ಮರದ ಕೊಲ್‌ನ ಸಪೂರಕ್ಕೆ ಮಾಡಿ ಅದರ ಒಂದು ಕೊಡಿಗೆ ಚೂರು ಅಗಲಕ್ಕೆ ಇರುವ ಚಿಪ್ಪಿ ಅಲ್ಲರ್ ಸಣ್ಣ ಮರದ ಚಕ್ರದಂಗೆ ಮಾಡಿ ನಡುಗೆ ಒಟ್ಟೆ ಮಾಡಿ ಕೋಲುನ ಹುಗ್ಸೋಕ್.

ಮಜ್ಜಿಗೆ ಕಡ್ದ್ ಬೆಣ್ಣೆ ತೆಗೆಕನ ಮುಟ್ಟ ಮಕ್ಕ ಗುತ್ತಿ ಅಡಿಲಿ ಕುತ್ತ ಕುದ್ದ್‌ಕಂಡ್ ಬೆಣ್ಣೆಗಾಗಿ ಕಾದವೆ. ಅಂಗೈ ಮೇಲೆ ಬೆಣ್ಣೆ ಉಂಡೆ ಕುದ್ದಾಕನ ಅದರ ನೆಕ್ಕಿಕಂಡ್ ತಿಂದ್‌ಕಂಡ್ ಓಡಿಬುಟ್ಟವೆ. ಗುತ್ತಿಂದ ಬೆಣ್ಣೆತೆಗ್ದ್, ಮಜ್ಜಿಗೆನ ಮಣ್ಣ್‌ನ ಮಡಿಕೆಗೆ ಹೊಯ್ದ್ ಗುತ್ತಿನ ಬಿಸಿ ನೀರ್‌ಲಿ ತೊಳ್ದ್ ಅಡ್ಗೆಮನೆ ಮೂಲೆಲಿ ತಲೆ ಕೆಳಗೆ ಮಾಡಿ ಇಸಿವೆ. ಆಗ ಬೆದ್ರ್ ಮಜ್ಜಿಗೆಗುತ್ತಿ ಇತ್ತ್. ಈಗ ಸ್ಟೀಲ್‌ದ್ ಬಂದುಟು. **(ಬಾ.ಜೋ., ಎಂ.ಜಿ.ಕೆ.)**



ಮರ್ಗಿಲ್ – ಕೈ ಮರ್ಗಿಲ್

ದನ, ಹಂದಿಗ ಮಡ್ಡಿ ಕುಡೆಕೆ, ನಾಯಿಗ ತ್‌ಳಿ ಕುಡೆಕೆ ಮರದ್ದ್ ಇಲ್ಲರ್ ಬಳದ ಕಲ್ಲಿಂದ ಮಾಡ್ದ ಸೊತ್ತುನ ಮರ್ಗಿಲ್ ತ ಕರ್‌ದವೆ. ಹಂದಿಗಳ ಮರ್ಗಿಲ್‌ನ ಮರಂದ ಮಾಡಿವೆ. ಹಂದಿದ್ ಮರ್ಗಿಲೇ ಆಗಿರ್‌ಲಿ, ನಾಯಿದೇ ಮರ್ಗಿಲ್ ಆಗಿರ್‌ಲಿ ಅದರ್‌ನೆಲ್ಲಾ ಮನೆವೇ ಮಾಡಿ ಕಂಡವೆ. ಕೆಲವ್‌ಕೆ ಈ ಕೊಂತಣ ಕೆಲ್ಸ ತುಂಬ ಇಷ್ಟದ ಕೆಲ್ಸ.

ಹಂದಿ ಮರ್ಗಿಲ್‌ನ 'ದೋಣಿ'ತ ಸನ ಹೇಳಿವೆ. ಯಾವ್ದಾರ್ ಮರನ ಬಡ್ಡಿ ಅಂದಾಜ್ ಎರಡ್–ಮೂರಡಿ ಉದ್ದದ ಮರ್ಗಿಲ್ ಮಾಡಿವೆ. ಹಂದಿದ್ ದುಂಡು ಮುಳುಂಗುವಸ್ಟ್ ಆಳ ಇದ್ದದೆ. ಹಂದಿ ಮರಿಗ ಮನಿ ಇದ್ದರೆ ಮರ್ಗಿಲ್ ಒಳಗೆ ಇಳ್ಕಂಡ್ ಮಡ್ಡಿ ತಿಂದವೆ. ಮರ್ಗಿಲ್ ಅಲ್ಲಾಡದಂಗೆ ಆಚೆ ಈಚೆ ಗೂಟ ಹೊಡ್ದ್ ಗಟ್ಟಿಯಾಗಿರ್‌ವಂಗೆ ಮಾಡಿವೆ. ಕೆಲವ್ ಹಂದಿಗ ಮರ್ಗಿಲ್‌ನೇ ಮೊಗ್‌ಚಿ ಬುಟ್ಟವೆ. ಹಿಂದೆಲ್ಲ ಮರದ ಮರ್ಗಿಲೇ ಇರ್ತಿದ್ದದ್. ಮಡ್ಡಿ ಹೊಯ್ಯೊದು ತಡಾದರೆ ಹಂದಿಗ ಮರ್ಗಿಲ್‌ನೇ ಕಚ್ಚಿ ಹೊಡಿ ಮಾಡಿ ಬುಟ್ಟವೆ. ಹಂಗಾಗಿ ಹಂದಿ ಗೂಡೊಳಗೆ ಗಾರೆದೇ ಮರ್ಗಿಲ್ ಮಾಡಿವೆ. ಇನ್ನ್ ನಾಯಿಗಳಿಗೆ ಬೇಕಾದ ಮರ್ಗಿಲ್‌ನೂ ಕೆಲವ್ ಮರಂದ ಮಾಡಿವೆ. ಆದರೆ ಬೆದ್ರ್‌ಂದ ಮರ್ಗಿಲ್ ಮಾಡ್ದೇ ಸುಲಾಬ ಆದೆ. ದಪ್ಪ ಬೆದ್ರ್‌ನ ಗಂಟ್‌ಂದ ಗಂಟಿಗೆ ನಾಯಿ ಮುಸುಂಡು ನುಗ್ಗುವಸ್ಟ್ ಅಗಲ ಮಾಡಿವೆ. ನಾಯಿ ಕಟ್ಟುವಲ್ಲಿ ಆಚೆ ಈಚೆ ಗೂಟ ಹೊಡ್ದ್ ನಡೂಲಿ ಮರ್ಗಿಲ್‌ನ ಇಸಿವೆ. ಸಾಮಾನ್ಯಾಗಿ ಒಂದ್ ನಾಯಿಗೆ ಒಂದೇ ಮರ್ಗಿಲ್‌ತ ಮಾಡಿವೆ. ಅಲ್ಲಿಗೆ ತೆಳಿ, ನೀರ್ ಹೊಯ್ದರೆ ಕುಡ್ಕಂಡವೆ. ಮರ್ಗಿಲ್ ಮಾಡ್ದೂ ಸನ ಅಂದಿದ್ದ ಪಾರಂಪರಿಕ ಕಲೆ. **(ಬಾ.ಜೋ.)**

ಕೈ ಇರುವ ಮರ್ಗಿಲ್ ಕೈಮರ್ಗಿಲ್. ತುಳುಲಿ ಕೈ ಮರಾಯಿ. ಮಲೆಯಾಳಿಲಿ ಕೈ ಮರಿಂತ ಹೇಳ್‌ವೆ. ಇದ್ ಮರಂದಲೇ ಮಾಡ್ದ ಸೊತ್ತು. ಮರದ ಆಚಾರಿಗ ಇದರ ಮಾಡ್‌ವೆ. ಹಿಟ್ಟ್ ಕಲ್ಸಿಕೆ, ಬಂದ ಮಾಜಿಸಿ ಇದ್ಕೆ ಹಾಕಿ ಪುಂಡಿ ಮಾಡಿಕೆ ಕೈಮರ್ಗಿಲ್ ಲಾಯ್ಕ್ ಆದೆ. ಕೈಮರ್ಗಿಲ್ ಮರದ್ ಅಗಿರ್‌ದರ್‌ಂದ ಬಾರ ಇದ್ದ್ ಮರ್ಗಿಲ್ ಅತ್ತ ಇತ್ತ ಹೊಣ್ಕುದುಲೆ. ಇದ್‌ಕೆ ನಾರ್ ಮರನ ಉಪಯೋಗ್ಸಿರೆ ಲಾಯ್ಕ್ ಆದೆ. ಗಟ್ಟಿ ಮರ ಆದರೆ ಬೇಗ ಒಡ್ದ್ ಹೋವ ಅಪಾಯ ಉಟ್ಟು. ಇದರ್‌ಲಿ ದೊಡ್ಡದ್ ಸಣ್ಣದ್‌ಂತ ಇದ್ದದೆ. ಇದರ ಕೆತ್ತಿಕೆ ಬಾಜಿನ ಉಪಯೋಗ್‌ಸಿ ಹಿಂದೆನವು ಮಾಡ್ತಿದ್ದೊ. ಸಬೆಲಿ ಹುಗ್ಗೆ ಇಕ್ಕಿಕೆ ಇದ್ ಉಪಯೋಗ ಆಗ್ತಿತ್ತ್. ಕೋಳಿ ಕೊಂದ್ ಮಾಸ ಮಾಡಿ ಇಸ್‌ಕೆ ಸಾ ಆದೆ. ದೊಡ್ಡ ಜಂಬರದ ದಿನ ನಟ್ಟಿಕಾಯಿ ಕೊಯ್ದ್ ಹಾಕಿಕೂ ಇದ್ ಬೇಕಾದ್ದೆ. ದೊಡ್ಡ ಕೂಡು ಕುಟುಂಬದ ಮನೆಲಿ ತುಂಬಾ ಕೈ ಮರ್ಗಿಲ್ ಇರ್‌ತಿತ್ತ್. ಆಗ ಮನೆಲಿ ತಾಮ್ರ, ಹಿತ್ತಾಳೆ ಪಾತ್ರೆಗ ಬಾರಿ ಕಮ್ಮಿ ಇತ್ತ್. ಸುಬ ಕಾರ್ಯ, ಅಸುಬ ಕಾರ್ಯ ಎಲ್ಲಾಕಡೆ ಉಪಯೋಗ ಆತಿತ್ತ್. **(ಕು.ಶಿ., ಎಂ.ಜಿ.ಕೆ.)**

ಮರ್ಗಿಲ್ – ಸಾಂಬಾರ್ ಮರ್ಗಿಲ್

ತುಳುಲಿ ಮಲೆಯಾಳಂಲಿ ಸಾಂಬಾರ್ ಪಾತ್ರಂತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಉಟ್ಟು. ಇದರ ಮರಲೇ ಮಾಡ್ದು. ಇದರ್‌ಲಿ ಮೂರು ನಾಲ್ಕ್ ಅದೆ ಇದ್ದದೆ. ಇದ್ಕೆ ಮುಚ್ಚಳ ಸ ಇದ್ದದೆ. ಹೆಚ್ಚಾಗಿ ಹಲ್ಸ್‌ನ ಮರಲಿ ಮಾಡುವೆ. ಇದರ ಮರದ ಆಚಾರಿ ಜೆನಂಗಳೇ ಮಾಡ್ದು.

ಮನೆಲಿ ಜಂಬರ ಮಿನಿ ಇದ್ದರೆ ಬಗೆ ಬಗೆ ಗೆಯ್ಪು, ಉಪ್ಪುಕರಿ ಇದ್ದರೆ ಈ ಮರ್ಗಿಲ್‌ಲಿ ಹಾಕಿ ಇಕ್ಕಿಕೆ ಹೋದವೆ. ಹೋಟೇಲ್‌ಲಿ ಇದ್ ಹೆಚ್ಚಾಗಿ ಇದ್ದದೆ. ಇದರ ಅಡಿಗೆಗೆ ಬೇಕಾದ ಜೀರಿಗೆ, ಮೆಂತೆ, ಸಾಸಿವೆ, ಕೊತ್ತಂಬರಿ ತರದ ಸಾಂಬಾರು ವಸ್ತುಗಳ ಹಾಕಿಸಿಕೆ ಜಾಸ್ತಿಯಾಗಿ ಉಪಯೋಗಿಸುವೆ. ಇಂತದ್ ತಾಮ್ರ, ಹಿತ್ತಾಳೆ ಮತ್ತೆ ಸ್ಟೀಲ್ ಪಾತ್ರೆಗ ಸ ಇದ್ದದೆ. **(ಎಂ.ಜಿ.ಕೆ.)**



ಮರ್ಗಿಲ್ – ಸುಳಿ ಮರ್ಗಿಲ್

ದನ ಕರ್‌ಗಳ್‌ಗೆ ನೀರ್, ಗಂಜಿತೆಳಿ, ಕಲ್ಗಚ್ಚಿ ಕುಡೆಕೆ ಇಸಿಕೆ ಹಇ ಗುಂಡಿ ಇರ್‌ವ ಮರಂದ ಮಾಡ್ದ ಸೊತ್ತು. ನಡೂಲಿ ಹಇ ಸುರುಂಟಿದ ಹಾಂಗೆ ಕಾಂಬೊದಿಕೆ ಇದರ ಸುಳಿ ಮರ್ಗಿಲ್‌ಂತೇಳುವೆ. ತುಳುಲಿ ಇದ್ಕೆ ಸುಳಿ ಮರಾಯಿ, ಓಡ ಮರಾಯಿಂತಲೂ, ಮಲೆಯಾಳಂಲಿ ಕಇಕಲಂತ ಹೇಳ್‌ವೆ. ದಕ್ಷಿಣ ಕನ್ನಡ ಮತ್ತೆ ಉಡುಪಿ, ಕೊಡಗು ಜಿಲ್ಲೆಲಿ ಸಕ್ಲೇಶಪುರ ಕಡೆಲಿ ಇದರ ಬಳ್ಸುವೆ.

ಸುಳಿ ಮರ್ಗಿಲ್ ಮರಂದ ಮಾಡ್ವ ಸೊತ್ತ್. ಇದರ್ಲಿ ತಾಮ್ರದ್ ಸ ಇದ್ದದೆ. ಮರದ ಮರ್ಗಿಲ್‌ನ ಮರದ ಆಚಾರಿಗ ಮಾಡ್ದು. ಅಲ್ಲದೆ ಕೆತ್ತನೆ ಕೆಲ್ಸ ಗೊತ್ತಿದ್ದವು ಯಾರ್ ಸ ಮಾಡ್‌ವೆ. ತಾಮ್ರದ ಮರ್ಗಿಲ್ ತಾಮ್ರದ ಕೆಲಸ ಮಾಡೊವು ಮಾಡ್‌ವೆ. ಅಡಿಗರದ ಹಾಂಗೆ ಇದರ್‌ಲಿ ಸಾ ಗಂಜಿ ಬೊಗ್ಸಿಕೆ ಆದೆ. ಸುಳಿ ಮರ್ಗಿಲ್ ಎರಡು ಕಡೆ ಅಗಲ ಇದ್ದ್ ನಡುಲಿ ಸಪುರ ಇರ್ವ ಕಾರಣ ಅಡಿಗೆರದ ಬದ್‌ಲ್ ಇದರ್ಲಿ ಗಂಜಿ ಬಾಗ್ಸಕ್. **(ಎಂ.ಜಿ.ಕೆ.)**

ಮೊಣ್ಣ್‌ನ ಚಟ್ಟೆ ಮತ್ತೆ ಕುರ್ಚಟೆ

ಉಂಬಕ್ಕೆ ಬೇಕಾದ ಚಟ್ಟಿ ಮತ್ತೆ ಕುರ್ಚಟೆ. ತುಳುಲಿ ಗದ್ದಗ, ಪಲ್ಲಾಯಿತ ಹೇಳುವೆ. ಮಲೆಯಾಳಂಲಿ ಮಂಗಣ ಕುಇಣಂತ ಹೇಳುವೆ. ಬ್ಯಾರಿ ಬಾಸೆಲಿ ಬಯಡೆ, ಕುಇ ಬಯಡೆತ ಹೇಳುವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಹಾಂಗೇ ಸಕ್ಲೇಶ್ಪುರ ಕಡೆಲೆಲ್ಲ ಬಳಕೆಲಿ ಇತ್ತ್. ಇದ್ ಮೊಣ್ಣ್‌ಂದಲೇ ಮಾಡ್ದ್. ಇದರ ಮೂಲ್ಯ ಜನಂಗ ಮಾಡ್ದು. ಚಟ್ಟಿ (ಗದ್ದಗ) ಹುಗ್ಗೆ ಅಲ್ಲರ್ ಗಂಜಿ ಹಾಕಿಕೆ, ಕುರ್ಚಟೆ ಗೆಯ್ಪು ಹಾಕಿಕೆ ಇರ್ದು. ಹಿಂದೆನವು ಇದರ್‌ಲೆ ಉಂಬೊತಿದ್ದೊ. ಚಟ್ಟೆಲಿ ಮಕ್ಕಳಿಗೆ ಮೊಣ್ಣಿ ಅರೆಕೂ ಆದೆ. **(ಎಂ.ಜಿ.ಕೆ.)**



ಮೊಣ್ಣ್‌ನ ಬಾವುಡೆ

ಗಂಜಿ ಮಡಿಕೆ, ಗೆಯ್ಪುನ ಮಡಿಕೆಗೆ ಮುಚ್ಚುವ ಮೊಣ್ಣ್‌ನ ಪಾತ್ರೆಗೆ ಬಾವುಡೆತ ಹೆಸ್ರ್. ತುಳುಲಿ ಬಾವಡೆ, ಮಲೆಯಾಳಂಲಿ ಅಡ್ಪು ಪಾತ್ರಂ, ಬ್ಯಾರಿ ಬಾಸೆಲಿ ಮಣ್ಣ್ ಕಲ ಮೂಡ್‌ತ ಹೇಳುವೆ.

ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಉಟ್ಟು. ಅಂದರೆ ಮೊಣ್ಣ್‌ನ ಪಾತ್ರೆ ಎಲ್ಲೆಲ್ಲಿ ಉಪಯೋಗ ಉಟ್ಟೋ ಅಲ್ಲೆಲ್ಲಾ ಬಾವುಡೆ ಇದ್ದದೆ. ಮಡಿಕೆ ಮಾಡುವ ಜೆನಂಗ ಇದರ ಮಾಡ್ದು.

ಬಿಸಿ ಇದ್ದ ತೆನಸ್ ತಣ್ಣಗಾಗದ ಹಾಂಗೆ ಅಲ್ಲರ್ ತಿಂಬ ಸೊತ್ತಿಗೆ ಏನಾರ್ ಬೀಳದ ಹಾಂಗೆ ಮುಚ್ಚಿ ಇಸಿಕೆ ಬಾವುಡೆ ಬೇಕ್. ಮತ್ತೆ ದೋಸೆ ಕಾವುಲಿ, ರೊಟ್ಟಿ ಕಾವುಲಿಗೂ ಮುಚ್ಚಿಕೆ ಬಾವುಡೆ ಬೇಕ್.

ಬೇರೆ ಬೇರೆ ಪಾತ್ರೆಗೆ ಬೇರೆ ಬೇರೆ ಬಾವುಡೆ ಬೇಕು. ಗಂಜಿ ಮಡಿಕೆನ ಬಾವುಡೆ ಗೆಯ್ಪುನ ಪಾತ್ರೆಗೆ ಆಕಿಲೆ. ಗೆಯ್ಪುನ ಮಡಿಕೆದ್ ಬಾವುಡೆ ಗಂಜಿ ಮಡಿಕೆಗೆ ಆಕಿಲೆ. ಯಾಕೆಂತೇಳಿರೆ ಗೆಯ್ಪುನ ಅಳೆಗೆನ ಬಾಯಿ ಅಗಲ ಇದ್ದದೆ ಗಂಜಿ ಮಡಿಕೆದ್ ಅಗಲ ಕಮ್ಮಿ ಇದ್ದದೆ. **(ಎಂ.ಜಿ.ಕೆ.)**

ಮೊಣ್ಣ್‌ನ ತೂರಿ

ತೂರಿ ತೇಳಿರೆ ಮೊಣ್ಣ್‌ನ ಹೂಜಿ. ತುಳುಲಿ ಮಣ್ಣ್‌ದ ಊಜಿ, ಬ್ಯಾರಿ ಬಾಸೆಲಿ ಮಣ್ಣ್‌ಂಡೆ ಹೂಜಿ ತ ಹೇಳುವೆ. ಇದ್ ಮೊಣ್ಣ್‌ಂದ ಮಾಡ್ದ ಒಂದು ಸಣ್ಣ ಮಡ್ಕೆ ಇದರ ಕುತ್ತಿಗೆ ಸಪೂರ ಆಗಿ ಇದ್ದದೆ. ಇದ್ಕೆ ಮುಚ್ಚಿಕೆ ಮುಚ್ಚಳ ಸ ಉಟ್ಟು. ಇದರ ಮಡ್ಕೆ ಮಾಡುವ ಮೂಲ್ಯ ಜೆನಂಗದೊವು ಮಾಡುವೆ.

ಇದ್ ಕುಡೆವ ನೀರ್ ತುಂಬಿಸಿ ಇಸಿಕೆ ಬೇಕಾದ ಸೊತ್ತು. ಬೇಸಗೆಲಿ ತಣ್ಣಂಗೆ ನೀರ್ ಕುಡೆಕೆ ಬೇಕಾಗಿ ಇದರ್‌ಲಿ ತುಂಬಿಸಿ ಇಸುವೆ. ಎಷ್ಟೇ ಬಿಸ್ಲ್ ಇದ್ದರೂ ಇದರ್‌ಲಿ ಇರುವ ನೀರ್ ತಣ್ಣಂಗೆ ಇದ್ದರೆ. ಕುತ್ತಿಗೆ ಸಪೂರ ಇದ್ದಾರ್‌ಂದ ಮೇಲೆ ಎತ್ತಿ ಬೊಗ್ಗಿಸಿ ಕುಡೆಕೆ ಆದೆ. ಇದರ್‌ಲಿ ಪೊರ್ಲು ಕಾಂಬಕೆ ಬೇಕಾಗಿ ಚಿತ್ರ ಸ ಬುಡ್ಸುವೆ. **(ಎಂ.ಜಿ.ಕೆ.)**



ಮೊಣ್ಣ್‌ನ ಮಡ್ಕೆ ಮತ್ತೆ ಚೆಟ್ಟಿ – ಅಳೆಗೆ

ಗೆಯ್ಪು ಮಾಡ್ವ ಮಣ್ಣಿನ ಮಡಿಕೆಗೆ ಅಳೆಗೆಂತ ಹೇಳ್ವೆ. ತುಳುಲಿ ನೆಸಳೆ, ಮಲೆಯಾಳಂಲಿ ಕರಿಕಲಂ, ಬ್ಯಾರಿ ಬಾಸೆಲಿ ಕರಿಚಟ್ಟಿತ ಹೇಳ್ವೆ.

ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಅಳೆಗೆ ಬಳಕೆಲಿ ಉಟ್ಟು. ಇದರ ಅವೆ ಮೊಣ್ಣ್‌ಂದ ಮಾಡ್ವೆ. ಬಾಯಿ ಅಗಲ ಆಗಿ ಸುತ್ತ ದಪ್ಪದ ಕಂಟ ಇದ್ದದೆ. ಹೆಚ್ಚ್ ಎತ್ತರ ಇರ್ದುಲೆ. ಇದರ್‌ಲೂ ಸಣ್ಣದ್ ದೊಡ್ಡದ್ ಅಳೆಗೆಗ ಒಳೊ.

ಗೆಯ್ಪು ಮಾಡಿಕೆ ಇಂತಾ ಪಾತ್ರೆ ಆಕು. ಮನೆಗಳ್‌ಲಿ ನೆಟ್ಟಿಕಾಯಿ ಗೆಯ್ಪು, ಮೀನ್ ಮಾಸ ಗೆಯ್ಪು ಮಾಡಿಕೆಂತ ಬೇರೆ ಬೇರೆ ಅಳೆಗೆಗ ಬೇಕ್. ಮೂಲ್ಯರ್ ಅಳೆಗೆನ ಮಾಡ್ವೆ.

ಅಳೆಗೆಗೆ ಒಮ್ಮೊಮ್ಮೆ ಅಡಿ ಹಿಡೆದು ಉಟ್ಟು. ಅದರ ಕೆರ್ಸಿ ತೊಳ್ದವೆ. ಹೀಂಗೆ ಕೆರ್ಸಿಕನ ನಾಯಿಗ ತಿಂಬಕೆ ಸಿಕ್ಕಿದೆ ತ ಹಕ್ಕಲೆ ಬಂದವೆ. ಅದ್ಕೆ 'ಕರೆಕನ ಬಾರದ ನಾಯಿ ಕೆರೆಕನ ಬಾತ್', 'ಸೆಲ್ಗೆ ಕೊಟ್ಟರೆ ನಾಯಿ ಅಳೆಗೆ ನೆಕ್ಕುದು', ಅಳೆಗೆ ಒಡ್ದರೆ ಕಕ್ಕೆಗೆ ಲಾಬ' ತ ಗಾದೆ ಉಟ್ಟು. **(ಎಂ.ಜಿ.ಕೆ.)**

ಈಗೊಂದು ನಲ್ವತ್ತ್ ಐವತ್ತ್ ವರ್ಸಗಳ ಹಿಂದೆ ಅಡ್ಗೆ ಮನೆಲಿ ಇದ್ದದ್ ಮಣ್ಣ್‌ನ ಪಾತ್ರೆಗಳೆ. ಅದೂ ಹೆಚ್ಚೇನೂ ಇರ್ತಿತ್ಲೆ. ಒಂದೇ ಒಂದ್ ಅನ್ನದ ಮಡಿಕೆ, ಗೈಪು ಮಾಡಿಕೆ ಒಂದೆರ್ಡ್ ಚೆಟ್ಟಿ, ಮಡ್ಡಿಗೊಂದ್, ಬಿಸಿ ನೀರಿಗೊಂದ್, ಕಾಪಿ ಕಾಸಿಕೊಂದ್, ಹಾಲಳಗೆ, ಮೊಸ್ರು, ಮಜ್ಜಿಗೆಗೆತ ಒಂದೊಂದು, ನೀರ್‌ತಾಕೆ ಚೊಂಬು, ಗಡಿಗೆ ಆತ್ ಅಡಿಗೆ ಮನೆ ಸಂಪತ್ತ್! ಬೂದಿ ಹಾಕಿ ಪಾತ್ರೆ ಬೆಳಗ್‌ತಿದ್ದೊ. ಅಡಿಗೆ ಮನೆಲಿ ಪಾತ್ರ ಬೀಳ್ತಿತ್ಲೆ. ಪಾತ್ರೆ ಒಡ್ದೋತು, ನಗ್ಗಿ ಹೋತು ತೇಳ್ದೆ ಇತ್ಲೆ. ಅಟ್ಟ್ ಸೂಕ್ಷ್ಮತೆ ಇತ್ತ್. ಮಣ್ಣ್‌ನ ಪಾತ್ರಲಿ ಮಾಡ್ದ ಅಡ್ಗೆನ ಉಂಡ್ ಸೀದ ಗದ್ದೆಗೋ ತೋಟಕೋ ಹೋತಿದ್ದೊ. ಆಸ್ಪತ್ರೆಗೆ ಅಲ್ಲ. ಸಾವ್ರಾರ್ ವರ್ಸಗಳ ಇತಿಹಾಸ ಇರ್‌ವ ಮಣ್ಣ್‌ನ ಪಾತ್ರೆಗಳಿಗೆ ಅದರ್ದೆ ಆದ ಗೌರವ ಉಟ್ಟು.

ಕುಂಬಾರರ್ ಮಣ್ಣ್‌ನ ಪಾತ್ರೆಗಳ ಕುಕ್ಕೆಲಿಸಿಕಂಡ್ ತಲೆ ಮೇಲೆ ಹೊತ್ತ್‌ಕಂಡ್ ಮನೆ ಮನೆಗೆ ಹೋಗಿ ಮಾರ್ತಿದ್ದೊ. ಮಡಿಕೆ ಮಾಡಿ ಹೊತ್ತ್‌ಕಂಡ್ ತಿರ್‌ಗಿ ಮಾರ್‌ವ ಮುಟ್ಟ ಅವರ ಜವಾಬ್ದಾರಿಕೆ. ತಕಂಡವು ಅದೆಷ್ಟೋ ವರ್ಸ ಮುಟ್ಟ ಕಾಪಾಡಿ ಕಂಬದು ಮನೆಯವರ ಜವಾಬ್ದಾರಿಕೆ. ಮಡಿಕೆ ತಕಂಡ್ ವ್ಯಾಪಾರಿಗೆ ಬತ್ತನೋ ಅಕ್ಕಿನೋ ಕೊಡ್ತಿದ್ದೊ.

ಮಣ್ಣ್‌ನ ಮಡ್ಕೆ ಮತ್ತೆ ಚೆಟ್ಟಿಲಿ ಮಾಡ್ದ ಅಡಿಗೆ ತುಂಬ ರುಚಿತ ಕೆಲವ್ ಹಿರಿಯವು ಈಗಳೂ ಹೇಳಿವೆ. ಮಣ್ಣ್‌ನ ಚಟ್ಟಿಲಿ ಉಂಬೊತಿದ್ದೊ, ಮಣ್ಣ್‌ನ ಚಟ್ಟಿಲಿ ಗಂಜಿ ಅರೆತಿದ್ದೊ.

ಸೌದೆ ಒಲೆ, ಒಲೆ ತಿಂಟೆ, ಬೆಸಗೆ ಇವೆಲ್ಲ ಕೈ ಬುಟ್ಟ್ ಹೋದಂಗೆ ಮಣ್ಣ್‌ನ ಪಾತ್ರೆಗ ಸನ ಊರ್ ಬುಟ್ಟೊಳೊ.

ಕೊಡಗ್‌ನ ವಿರಾಜಪೇಟೆ ತಾಲೂಕ್‌ಲಿ 'ಮಡಿಕೆ ಬೀಡು' ತ್ತೇಳುವ ಜಾಗೆ ಮಣ್ಣ್‌ನ ಸೊತ್ತುಗಳ ತಯಾರಿಕೆಗೆ ತುಂಬಾ ಹೆಸ್ರ್ ಪಡ್ದ ಊರಾಗಿತ್ತ್.

'ಹಳ್ತೆಲ್ಲಾ ಚಿನ್ನ' ತ ಹೇಳುವಂಗೆ ಕೆಲವು ಈಗೀಗ ಮಣ್ಣ್‌ನ ಪಾತ್ರೆಗಳ ಅಡ್ಗೆನ ಕುಸಿ ಪಡ್ತಾ ಒಳೊ. ಸೌದೆ ಒಲೆಲಿ ಮಾಡ್ದ ಅಡಿಗೆನೇ ಬೇಕುತ್ತೇಳುವ ಮಾತ್ ಕೇಳಿ ಬರ್ತಾ ಉಟ್ಟು. ಕೋವಿಡ್–19 ಬಂದ ಮೇಲಂತೂ ಮಣ್ಣ್‌ನ ಪಾತ್ರೆಗಳಿಗೆ ಬೇಡಿಕೆ ಜಾಸ್ತಿ ಆಗ್ತಾ ಉಟ್ಟು. ಹಂಗೇ ಅದರ ರೇಟೂ ಕೂಡ. ಕೆಲವು ಸರ್ತಿ ಅದ್ಕೆ ಕೊಡುವ ದುಡ್ಡುಂದೊಳು ಆರೋಗ್ಯ ಮುಕ್ಯ ಅಲ್ಲಾ ?

ಮಣ್ಣ್ ಸೊತ್ತುಗ ಬೇರ ಬೇರೆ ತರದ್ ಉಟ್ಟು. ಮಣ್ಣ್ ಹೂಜಿ, ಲೋಟ, ಅಗಸ್ಟಿಕೆ, ಸಾಂಬ್ರಾಣಿ ಹೊಗೆ ಕುಂಡ, ಹೂವು ಕುಂಡ..... ಹಿಂಗೆ ಹತ್ತಾರ್ ಸೊತ್ತುಗ ಇಂದ್ ಸಂತೆಲಿ ಸಿಕ್ಕಿದೆ. **(ಬಾ.ಜೋ.)**



ರೊಟ್ಟಿ ಕಾವುಲಿ

ರೊಟ್ಟಿ ಮಾಡ್‌ವ ಕಾವುಲಿಗೆ ರೊಟ್ಟಿ ಕಾವುಲಿ ತ ಹೇಳುವೆ. ತುಳುಲಿ ರೊಟ್ಟಿತ ಕಾವೊಲಿತ ಹೇಳುವೆ. ರೊಟ್ಟಿನ ಬೇರೆ ಬೇರೆ ರೀತಿಲಿ ಮಾಡುವೆ. ಓಡ್‌ರೊಟ್ಟಿ, ತಟ್ಟು ರೊಟ್ಟಿ, ಪೊಕ್ಕುಳ ರೊಟ್ಟಿತ ನಮೂನೆ ನಮೂನೆ ರೊಟ್ಟಿ ಉಟ್ಟು. ಆದರೆ ಇದ್ ಕಾವುಲಿ ರೊಟ್ಟಿ, ಬಡ್ಡ್ ರೊಟ್ಟಿಂತಲೂ ಹೇಳುವ ಒಂದು ಬಗೆ ರೊಟ್ಟಿ. ಇದರ ಬಳದ ಕಲ್ಲ್‌ಂದ ಮಾಡುವೆ. ಬಳವು ತೇಲ್ರೆ ಕಾಡ್ಲಿ ಸಿಕ್ಕುವ ಒಂದು ಜಾತಿನ ಮೆತ್ತಂಗೆ, ನುಣ್ಣಂಗೆ ಇರುವ ಕಲ್ಲ್. ಇದರ ಗರ್ಗಸ್‌ಲಿ ಕೊಯ್ಯಕೆ, ಉಳಿಲಿ ಕೆತ್ತಿಕೆ ಸುಲಾಬಲಿ ಆದೆ. ಬೇಕಾದಷ್ಟು ಅಗಲಕ್ಕೆ, ಅಂದಾಜ್ ಒಂದು ಒಂದೂವರೆ ಅಂಗುಲದಷ್ಟು ದಪ್ಪಕ್ಕೆ ಕೊಯ್ದ್ ತಂದ್ ಉರೂಂಟುಗೆ ಕೆತ್ತಿ ಕಾವುಲಿ ಮಾಡುವೆ. ಈ ಕಾವುಲಿನ ಯಾರೂ ಮಾಡಿಕಾದೆ. ಕೊಯ್ಯಕೆ ಕೆತ್ತಿಕೆ ಹತ್ಯಾರ್ ಬೇಕಷ್ಟೇ. ಮತ್ತೆ ಹನೀಸ್ ಚಾತುರ್ಪು ಬೇಕು. ಈ ಕಾವುಲಿ ರೊಟ್ಟಿ ಮಾಡಿಕೆ ಮಾತ್ರ. ಮತ್ತೆ ಇದೇ ಕಲ್ಲ್‌ಲಿ ಅಪ್ಪುದಿಟ್ಟ್ ಕಾವುಲಿ ದೋಸೆ ಕಾವಲಿ ಸ ಮಾಡಿಕಾದೆ. ಆದರೆ ಎಣ್ಣೆ ಹಾಕೊಕು ಅಷ್ಟೇ

ಬಳದ ಕಾವುಲಿಲಿ ಮಾಡ್ದ ರೊಟ್ಟಿ ತಿಂಬಕೆ ಬಾರೀ ರುಚಿ. ಮಾಡಿಕೆ ಎಣ್ಣೆ ಬೇಡ. ಹಾಂಗಾಗಿ ಜೀವಕ್ಕೆ ಒಳ್ಳದ್. ದೋಸೆ, ಅಪ್ಪುದಿಟ್ಟ್ ಮಾಡಕಾರ್ ಎಣ್ಣೆ ಬೇಕು. ರೊಟ್ಟಿ ಮಾಡಿಕೆ ಮೊಣ್ಣ್‌ನ ಕಾವುಲಿ ಸ ಉಟ್ಟು. ಆದರೆ ಬಳದ ಕಾವುಲಿಲಿ ಮಾಡ್ದ ರೊಟ್ಟಿದ್ ರುಚಿ ಅದರ್‌ಲಿ ಇಲ್ಲೆ. ಈ ರೊಟ್ಟಿ ಕೋಳಿ ಸಾರ್‌ಗೆ ಹೇಳಿ ಮಾಡ್ದ್.

ಇದ್ ಹೆಚ್ಚಾಗಿ ಸುಳ್ಯದ ಕಡೆ ಇದ್ದದೆ. ಹಿಂದೆಲ್ಲಾ ಮನೆಗೆ ನೆಂಟ್ರ್ ಬಾಕನ ಕೋಳಿ ಗೈಪು ರೊಟ್ಟಿ ಮಾಡ್ರೆ ಅದ್ ದೊಡ್ಡ ಸಮ್ಮಾನಂತ ಲೆಕ್ಕ. **(ಎಂ.ಜಿ.ಕೆ.)**



ಸೂಂಪೆ

ಸೂಂಪೆ ತೇಳಿರೆ ಅಡಿ ಸಮ ಇಲ್ಲದ, ಅಡಿ ಸಪಾಯಿ ಇಲ್ಲದ ಉರುಟು ಇರುವ ಪಾತ್ರೆಗಳ ಮತ್ತೆ ಮೊಣ್ಣ್‌ನ ಪಾತ್ರೆಗಳ ನೆಲಲಿ ಇಸಿಕೆ ಆಗುವ ಸೊತ್ತು. ಕಾಡ್ ಬೊಳ್ಳಿಗಳ ಚಕ್ರದ ಹಾಂಗೆ ಉರುಂಟು ಮಾಡಿ ಸುತ್ತಿ ಸುತ್ತಿಕಟ್ಟಿ ಮಾಡ್ದ ಸೊತ್ತು. ತುಳುಲಿ ತೆರಿಯೆ, ಮಲೆಯಾಳಂಲಿ ತೆರಿಯ, ಬ್ಯಾರಿ ಬಾಸೆಲಿ ತೆರಿಯೆತ ಹೇಳುವೆ. ಇದ್ ಸಾದಾರಣ ಎಲ್ಲಾ ಊರ್‌ಲೂ ಇರುವಂತದ್ದೆ.

ಇದರ ಬೇರೆ ಬೇರೆ ಸೊತ್ತ್‌ಗಳ್‌ಂದ ಮಾಡ್‌ವೆ. ಬೆತ್ತಂದ ಮಾಡ್ದ ಸೂಂಪೆ, ಕಾಡ್ ಬೊಳ್ಳಿಂದ ಮಾಡ್ದ ಸೂಂಪೆ, ಬಿಳ್ಗಿಲ್‌ಂದ ಮಾಡ್ದ ಸೂಂಪೆ, ಬಾಳೆ ಚಾಂಬಾರಂದ ಮಾಡ್ದ ಸೂಂಪೆ, ಅಡಿಕೆ ಸೋಗೆಂದ ಮಾಡ್ದ ಸೂಂಪೆ ಮತ್ತೆ ಹಳೆ ಸೀರೆಂದ ಮಾಡ್ದ ಸೂಂಪೆಂತ ಉಟ್ಟು. ಬೊಳ್ಳಿನ ಚಕ್ರದ ಹಾಂಗೇ ನೇಯೊಕು. ಚಾಂಬಾರ್, ಸೋಗೆ, ಬಿಳ್ಗಿಲ್, ಸೀರೆಂತಾದರೆ ಚಕ್ರದ ಹಾಂಗೇ ಸುತ್ತಿಕನ್ ಹೋಕ್. ಮತ್ತೆ ಅದ್ಕೆ ಯಾವ್‌ದೇ ಬೊಳ್ಳಿನ ಸುತ್ತಿ ಕಟ್ಟೊಕು.

ಬೊಳ್ಳಿನ ಸೂಂಪೆನ ಅಜಲರ್, ಮಾಯ್ಲರ್, ಕೊರಗಜನರ್ ಮಾಡ್‌ವೆ. ಬೇರೆ ಜೆನಂಗಸ ಮಾಡುವೆ. ಬಿಳ್ಗಿಲ್, ಸೋಗೆ, ಬಾಳೆ ಚಾಂಬಾರ್, ಬಟ್ಟೆಂದ ಮಾಡಕ್. ಯಾವ್ದೇ ಪಾತ್ರೆನ ಬೊರಿ ನೆಲಲಿ ಇಸಿಕೆ ಆದುಲೆ. ಮೊಣ್ಣ್‌ನ ಮಡಿಕೆ, ಮೊಣ್ಣ್‌ನ ಅಳೆಗೆ, ಮೊಣ್ಣ್‌ನ ಪಾತ್ರೆಗ ನೆಲಲಿ ಹಾಂಗೇ ಇಸಿರೆ ಅದ್ ಒರ್ದ ನಿಲ್ಲುದು. ತುಂಬಿದ ಪಾತ್ರೆನ ಹಾಂಗೇ ಇಸಿರೆ ಅದರ್‌ಲಿ ಇದ್ದದೆಲ್ಲ ತೂಸುದು. ಮತ್ತೆ ಪಾತ್ರೆಲಿ ಏನಾರ್ ಇದ್ದರೆ ಬಾರಕ್ಕೆ ಒಡೆಕೂ ಸಾಕ್. ಸೂಂಪೆನ ಉಪಯೋಗ ಪಾತ್ರೆಗ ಸುರು ಆಕನನೇ ಇದ್ದಿರ್ದು. **(ಎಂ.ಜಿ.ಕೆ.)**

ಬತ್ತದ ಹುಲ್ಲುನ ಸುರ್‌ಟಿ ಬಾಳೆ ನಾರ್‌ಂದ ಅಲ್ಲಲ್ಲಿ ಕಟ್ಟಿರೆ ಸಿಂಪೆ ಆತ್. ಹತ್ತ್ ನಿಮ್ಸದ ಒಳಗೆ ಒಂದ್ ಸಿಂಪೆ ಮಾಡಕ್. ಅದೂ ಸನ ಹೆಣ್ಮಕ್ಕಳ ಕೈ ಚಳಕಂದ. ಬತ್ತದ ಹುಲ್ಲು ಸಿಂಪೆದ್ ಬಾಳಿಕೆ ತುಂಬ ಕಮ್ಮಿ. ಬಾಳಿಕೆ ಹೆಚ್ಚ್ ಬೇಕೋ ನೊಜ ಹುಲ್ಲುದ್ ಸಿಂಪೆನೇ ಆಕು. ನೊಜ ಹುಲ್ಲು ಸಿಕ್ಕುದೇ ಕಮ್ಮಿ. ಆದರೂ ಹುಡಿಕ್ಕಂಡ್ ಹೋಗಿ ತಂದವೆ. ಆ ಹುಲ್ಲು ಎಷ್ಟ್ ಗಟ್ಟಿತೇಳ್ರೆ ಆನೆಗೂ ಅದರ ತುಂಡು ಮಾಡಿ ತಿಂಬಕಾಲೆ!

ನೊಜ ಹುಲ್ಲುನ ಕೊಯ್ದ್ ತಂದ್ ಹದಾ ಒಣ್‌ಂಗಿಸಿ ಸಿಂಪೆ ಮಾಡಿವೆ. ಕೆಲ ಹೆಣ್ಮಕ್ಕ ಸಿಂಪೆ ಮಾಡಕನ ಒಳಗೆ ಗಿಲಿ ಗಿಲಿ ಕಾಯಿನ ಇಸಿ ಮಾಡಿವೆ. ಹಂಗೆ ಮಾಡಿ ಸಿಂಪೆನ ಅಲ್ಲಾಡ್ಸಿರೆ ಗಿಲಿ ಗಿಲಿ ಸದ್ದ್ ಕೇಳ್ದೆ. ಅದ್ ಆಗ ಏನೋ ಒಂತರದ ಕುಸಿ ಕೊಟ್ಟದೆ. ಹೆಣ್ಮಕ್ಕ ನೀರಿಗೆ ಹೋಕನ ಗಿಲಿಗಿಲಿ ಸಿಂಪೆನೇ ಆಸೆ ಪಟ್ಟವೆ. ತತ್ಕಾಲಕ್ಕೆ ಬಾಳೆ ತರ್‌ಗ್ ಸೊಪ್ಪುಗಳ ಸರ್‌ಸಿ ಸಿಂಪೆ ಮಾಡಿಕಂಡವೆ. ಕೆಲವಂತೂ ಬಟ್ಟೆನ ಸುತ್ತಿ ಸಿಂಪೆ ಮಾಡಿಕಂಬ ಸುಲಾಬ ಉಪಾಯನೂ ಉಟ್ಟು.

ಸಿಂಪೆನ ಸಾಮಾನ್ಯಾಗಿ ಹೆಣ್ಮಕ್ಕಳೇ ಜಾಸ್ತಿ ಉಪಯೋಗ ಮಾಡುದ್ದು. ಯಾಕೆತೇಳ್ರೆ ಹೆಣ್ಮಕ್ಕ ಹೊರೆ ಹೊರ್ದು ತಲೆಲೆ ತಾನೆ? ನೀರ್ ಬಿಂದಿಗೆ ಹೊರ್‌ಕನ, ಸೌದೆ ಹೊರ್‌ಕನ, ಗದ್ದೆಗೆ ಗೊಬ್ಬರ ಹೊರ್‌ಕನೆಲ್ಲಾ ನೆತ್ತಿಮೇಲೆ ಸಿಂಪೆ, ಸಿಂಪೆ ಮೇಲೆ ಹೊರೆ ಹೊತ್ತವೆ. ಗಂಡ್ ಜನ ಹೊರೆ ಹೊರ್ದು ಹೆಗ್‌ಲ್‌ಲಿ. ಅವು ಸಿಂಪೆ ಇಸುದು ಕಮ್ಮಿ. ಇಲ್ಲೇಲೆತೇಳ್ರೂ ಆದು.

ಸಿಂಪೆ ಮೇಲೆ ನೀರ್ ಹಂಡೆ ಇಸಿವೆ. ಹಂಗೆ ಇಸಿರೆ ನೀರ್ ಹಂಡೆ ನಗ್ಗುದ್ದೆ. ಅನ್ನದ ಮಡಿಕೆ ಚೆಟ್ಟಿನೆಲ್ಲಾ ಸಿಂಪೆ ಮೇಲೆ ಇಸಿವೆ. ಆಗ ಪಾತ್ರ ಹೊಣ್ಕುಲ್ಲೆ. ಬಿಸಿ ಕೆಳಗೆ ಇಳೆದ್ದೆ. ಇಂತದಕ್ಕೆಲ್ಲಾ ಹುಲ್ಲುದು ಸಿಂಪೆನೇ ಒಳ್ಳೆದ್. ಮೊದೊಳ್ತಿ ಗದ್ದೆಗೆ ಗೊಬ್ಬರ ಕುಕ್ಕೆನ ಹೊರ್‌ಕನ, ಸುರೂಗೆ ನೀರ್ ಬಿಂದಿಗೆ ಹೊತ್ತ್ ತಾಕನ ಸಿಂಪೆಗೆ ಎಲ್ಲಿಲ್ಲದ ಮಹತ್ವ ಉಟ್ಟು. **(ಬಾ.ಜೋ.)**



ಹಪ್ಪಳ ಒತ್ತುವ ಮಣೆ

ಹಪ್ಪಳ ಮಾಡುವ ಮಣೆನ ತುಳುಲಿ ಹಪ್ಪಳದ ಮಣೆ, ಮಲೆಯಾಳಂಲಿ ಪಪ್ಪಡಂ ಪಲ ತ ಹೇಳ್‌ವೆ. ಇದ್ ದಕ್ಷಿಣ ಕನ್ನಡ ಮತ್ತೆ ಉಡುಪಿ ಜಿಲ್ಲೆಲಿ ಇದ್ದದೆ. ಒಂದು ಒಂದೂವರೆ ಅಂಗುಲದಷ್ಟು ದಪ್ಪ ಇರ್‌ವ ಒಳ್ಳೆ ಜಾತಿ ಹಲಗೆಲಿ ಇದರ ಮಾಡ್‌ವೆ. ಹಲಗೆನ ಉರುಂಟು ಕೆತ್ತಿ ಒಂದು ಕರೆಲಿ ಬಿಜಾಗ್ರಿ ಹಾಕಿ ಕಾಗಡೆ ಮೇಗಡೆ ಮಾಡಿಕೆ ಆವ ಹಾಂಗೆ ಮಾಡಿಕಾಂಕು. ಈ ಮಣೆನ ಮರದ ಆಚಾರಿಗ ಮಾಡುವೆ.

ಹಪ್ಪಳ ಮಾಡಿಕೆ ಸೀ ಗೆಣ್ಸ್, ಮರಗೆಣ್ಸ್, ಅಲ್ಲರ್ ಹಲ್ಸನ ಕಾಯಿ ಬೇಕ್. ಅದರ ಬೇಸಿ ಒಸಿ ಇಂಗ್, ಉಪ್ಪು ಸೇರ್ಸಿ ಕಾಂಕು. ಮತ್ತೆ ಅದರ ಕಡ್ಕಲ್ಲ್‌ಲಿ ಗುದ್ದಿ ಉಂಡೆ ಮಾಡಿಕಾಂಕು. ಮೇಲೆನ ಹಲಗೆನ ಎತ್ತಿ ಬಾಡ್ಸಿದ ಬಾಳೆಲೆ ಕೀಂತ್‌ಗೆ ಎಣ್ಣೆ ಉಜ್ಜಿ ಅಡಿಲಿರುವ ಮಣೆಲಿ ಇಸಿ ಅದರ ಮೇಲೆ ಉಂಡೆ ಇಸಿಕಾಂಕು. ಉಂಡೆ ಮೇಲೆ ಇನ್ನೊಂದು ಬಾಡ್ಸಿದ ಎಲೆ ಕೀಂತ್ ಇಸಿ ಅದರ ಮೇಲೆ ಮೇಲೆನ ಹಲಗೆನ ಒತ್ತೊಕು. ಆಗ ಅದರ ಬಾರಕ್ಕೆ ಉಂಡೆ ಉರುಟಾಗಿ ಇದ್ದದ್ ಚಪ್ಪಟೆ ಆದೆ. ಅದರ ಮತ್ತೆ ಬಿಸ್‌ಲ್‌ಲಿ ಒಳುಂಗುಸೊಕು. ಹಪ್ಪಳ ಮಾಡಿಕೆ ಇದುವೇ ಆಕುಂತ ಇಲ್ಲೆ. ಎರ್ಡ್ ಕುದ್ರುವ ಮಣೆ ಇದ್ದರೆ ಸಾಕ್. **(ಎಂ.ಜಿ.ಕೆ.)**

ಹೊಸೆಕ್ಕಿ ಗಂಜಿ ಮಡ್ಕೆ

ವರ್ಸಕೊಮ್ಮೆ ಹೊಸ ಬೆಳೆ ತೆಗ್ದ ಮೇಲೆ ಹೊಸೆಕ್ಕಿ ಗಂಜಿ ಮಾಡುವ ಕ್ರಮ ಉಟ್ಟು. ಗದ್ದೆ ಬೇಸಾಯ ಇದ್ದೊವು ಪ್ರತೀ ಹೊಸ ಅಕ್ಕಿ ಗಂಜಿ ಬೇಯಿಸಿಕೆ ಮನೆಲಿ ಅದ್ಕೆಂತಲೇ ಒಂದು ದೊಡ್ಡ ಮೊಣ್ಣ್‌ನ ಮಡಿಕೆ ಇಸಿಕಂದವೆ. ಅದ್ಕೆ ಹೊಸೆಕ್ಕಿ ಗಂಜಿ ಮಡ್ಕೆ ತೇಳಿ ಕರ್ದವೆ.

ತುಳುಲಿ ಪುದ್ವಾರ್‌ದ ಗಂಜಿ ಬೆಯ್ಪಾಪುನ ಕರ, ಮಲೆಯಾಳಂಲಿ ಪುದಿಯ ಕಲಂ, ಬ್ಯಾರಿ ಬಾಸೆಲಿ ಪುದಿಯರಿ ಕಲ ತ ಹೇಳುವೆ. ಇದ್ ಹೆಚ್ಚಾಗಿ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಇದ್ದದೆ. ಈ ಮಡ್ಕೆ ಬೇರೆ ಮಡ್ಕೆನ ಹಾಂಗೆ ಅಲ್ಲ ಒಸಿ ಆಕಾರಲಿ ಬದಲಾಗಿದ್ದದೆ. ಇದರ ಮಡ್ಕೆ ಮಾಡುವ ಮೂಲ್ಯ ಜೆನಾಂಗದೊವು ಮಾಡ್ದು.

ಹೊಸೆಕ್ಕಿ ಗಂಜಿ ಮಾಡುವ ದಿನ ಮಡ್ಕೆನ ಒಲೆಗೆ ಇಸಿಕೆ ಮುಂದೆ ಅದರ್‌ಲಿ ರಂಗೋಲಿ ತರ ಚಿತ್ರ ಬರ್ದವೆ. ಒಲೆಗೆ ಇಸಿಕಾಕನ ಅಲಂಕಾರ ಮಾಡ್‌ವೆ. ಈ ಅಲಂಕಾರನ ಬೇರೆ ಯಾವ ಮಡ್ಕೆಗೂ ಮತ್ತೆ ಬೇರೆ ಯಾವ ದಿನನೂ ಮಾಡ್ದುಲೆ. ಒಲೆಗೆ ಇಸಿದ ಮೇಲೆ ಅದ್ಕೆ ಕೈ ಮುಗ್ದ್ ಅಕ್ಕಿ ಹಾಕುವ ಕ್ರಮ ಉಟ್ಟು. ಈ ಮಡ್ಕೆಲಿ ಹೊಸ್ತು ಅಲ್ಲದೇ ಬೇರೆ ಯಾವ ಕಾರಣಕ್ಕು ಗಂಜಿ ಮಾಡ್ದುಲೆ. **(ಎಂ.ಜಿ.ಕೆ.)**



ಹೊಸೆಕ್ಕಿ ಗಂಜಿ ಇಕ್ಕುವ ಸೆಡೆ

ಹೊಸ್ತ್‌ನ ದಿನ ಹೊಸ ಅಕ್ಕಿ ಬೇಸುವ ಮಡ್ಕೆಗೆ ಹಾಕುವ ಮತ್ತೆ ಹೊಸೆಕ್ಕಿ ಗಂಜಿನ ಇಕ್ಕ್‌ವ ಸೆಡೆ. ತುಳುಲಿ ಇದ್ಕೆ ಪುದ್ವಾರ್ ಗಂಜಿ ಬಳಸುನ ಕೈಲ್‌ತ ಹೇಳ್‌ವೆ. ಮಲೆಯಾಳಂಲಿ ಪುದಿಯ ಕೈಲ್, ಬ್ಯಾರಿ ಬಾಸೆಲಿ ಪುದಿಯಕಯಲ್‌ತ ಹೇಳ್‌ವೆ. ಇದ್ ಹೆಚ್ಚಾಗಿ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಬಳಕೆಲಿ ಉಟ್ಟು.

ಇಡೀ ಸೆಡೆ ಒಂದೇ ಮರಂದಲೇ ಮಾಡ್‌ವೆ. ಬೇರೆ ಸೆಡೆನ ಹಾಂಗೆ ಇದ್ ಇಲ್ಲೆ. ಹನಿಸ್ ಅಗಲ ಆಗಿ ಸೆಟ್ಟನ ಹಾಂಗೇ ಇದ್ದದೆ. ಪೊಲ್ಲುರ್ ಕಾಂಬಕೆ ಬೇಕಾಗಿ ಇದರ್‌ಲಿ ಚಿತ್ರ ಸ ಕೆತ್ತುವೆ. ಒಳ್ಳೆ ಜಾತಿ ಮರಲಿ – ಹಲಸ್, ಹೆಬ್ಬಲಸ್, ಮರಲಿ ಇದರ ಮರದ ಆಚಾರಿಗ ಮಾಡುವೆ.

ಹೊಸಕ್ಕಿ ಮಡ್ಕೆಗೆ ಅಕ್ಕಿ ಹಾಕಿ ಅದ್ ಬೇಯಕಾಕನ ಕಾಯಿ ಹೆರ್ದ್ ಹಾಕುವೆ. ಮತ್ತೆ ಉಪ್ಪು ಹಾಕುವೆ. ಹೀಂಗೆ ಅದ್ಕೆ ಎಲ್ಲಾ ಹಾಕಿದ ಮೇಲೆ ಮೊಗ್ಚಿಕೆ ಈ ಸೆಡೆ ಬೇಕಾದೆ. ಮತ್ತೆ ಹೊಸಕ್ಕಿ ಗಂಜಿ ಇಕ್ಕಿ ಕಾಕನ ಸ ಇದೇ ಸೆಡೆಲಿ ಇಕ್ಕುವೆ, ಯಾಕೆಂತೇಳ್ರೆ ಹೊಸಕ್ಕಿ ಗಂಜಿಲಿ ನೀರ್‌ನಂಶ ಕಮ್ಮಿ ಇದ್ದ್ ಅಂಟ್ ಅಂಟಾಗಿ ಇದ್ದದೆ. ಈ ಸೆಡೆಗೆ ಅದು ಅಂಟುದುಲೆ. **(ಎಂ.ಜಿ.ಕೆ.)**

ಅಳತೆ ಸೊತ್ತುಗ



ಕಳ್‌ಸಿಗೆ

ಬತ್ತ, ರಾಗಿ, ಅಕ್ಕಿ ಇಂತದರ ಅಳೆವ ಹತ್ಯಾರ್. ತುಳುಲಿ ಕಳಸೆ, ಮಲೆಯಾಳಂಲಿ ಪರ, ಬ್ಯಾರಿ ಬಾಸೆಲಿ ಕಳಸೆ ತ ಹೇಳುವೆ. ಇದ್ ಸಕ್ಲೇಶ್ಪುರ ಕಡೆಲಿ ಮತ್ತೆ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಲೆಲ್ಲ ಇದ್ದದೆ. ಇದರ ಬೆದ್ರ್‌ಲಿ, ಮರಲಿ ಮಾಡುವೆ. ಇದರ ಅಡಿ ಬಾಗಲಿ ನೆಲಲಿ ಲಾಯ್ಕ್ ಕುದ್ರಿಕೆ ಸಣ್ಣಕಾಲ್ ಇದ್ದದೆ. ಇದ್ನೂ ಪೊರ್ಲುಲಿ ಸೆಗಣಿ ಮೊಣ್ಣ್ ಬೆರ್ಸಿ ಪೂಜುವೆ.

ಬೆದ್ರ್‌ನ ಕಳಸೆನ ಮಾಯ್ಲರ್, ಕೊರಗ ಸಮುದಾಯದವು ಮಾಡಿರೆ, ಮರದ ಕಳಸೆನ ಮರದ ಆಚಾರಿಗ ಮಾಡುವೆ. ಒಂದ್ ಕಳಸೆಲಿ 14 ಸೇರ್ ಅಕ್ಕಿ / ಬತ್ತ ಹಿಡ್ಡದೆ. ಇಂತಾ ಮೂರು ಕಳಸೆ ಇದ್ದರೆ ಒಂದು ಮುಡಿ (42 ಸೇರ್) ಆದೆ. ಕೆಲವು ಕಡೆ 21 ಸೇರ್‌ನ ಬೆದ್ರ್‌ನ ಕಳಸೆನೂ ಬಳಕೆಲಿ ಉಟ್ಟು. ಇದ್ ಅಕ್ಕಿ, ಬತ್ತ, ರಾಗಿ ಅಳೆಕೆ ಬೇಕಾದೆ. ಹಿಂದೆನ ಕಾಲಲಿ ಗದ್ದೆ ಅಳತೆನ ಒಂದ್ ಕಳಸೆ ಗದ್ದೆ, ಒಂದು ಮುಡಿ ಗದ್ದೆತ ಹೇಳುತ್ತಿದ್ದೊ. ಅಂದರೆ ಒಂದ್ ಮುಡಿ ಬಿತ್ತ್‌ನ ಬತ್ತ ಹಿಡಿವಷ್ಟ್ ದೊಡ್ಡ ಗದ್ದೆತ ತಿಳ್ಕೊನೊಕು. **(ಎಂ.ಜಿ.ಕೆ.)**


2Kg

ಚಿಂತಾಲ್

ಚಿಂತಾಲ್ ವಸ್ತ್‌ಗಳ ತೂಕ ಮಾಡಿಕೆ ಇರುವ ಸೊತ್ತ್. ಇದ್ಕೆ ತ್ರಾಸ್ ತೇಳಿ ಸಹ ಕರ್‍ದವೆ. ಹಿಂದೆ ಸೇರ್, ಪಾವು, ಮಾನಗಳ ಜಾಸ್ತಿ ಆಗಿ ಬತ್ತ, ಅಕ್ಕಿ, ರಾಗಿ ಇಂತ ವಸ್ತ್‌ಗಳ ಅಳ್ತೆ ಮಾಡಿಕೆ ಬಿಳ್ಸುತ್ತಿದ್ದೊ. ನೆಟ್ಟಿಕಾಯಿ, ಚಾದೊಡಿ, ಬೀಜ, ಸಕ್ರೆ, ಅಡ್ಕೆ, ಬೆಲ್ಲ ಇಂತ ಸೊತ್ತ್‌ಗಳ ತೂಕ ಮಾಡಿಕೆ ಸೇರ್ ಪಾವ್‌ಲಿ ಆದುಲೆ. ಅದ್ಕೆ ಚಿಂತಾಲೇ ಬೇಕು.

ತ್ರಾಸ್‌ಗಳ್‌ಲಿ ಬೇರೆ ಬೇರೆ ತರ ಉಟ್ಟು. ಚಿನ್ನ, ಬೆಳ್ಳಿ, ನಶ್ಯ ತೂಗಿಕೆ ಹಿತ್ತಾಳೆಟಿ ತ್ರಾಸ್‌ಗಳ ಬಳ್ಸ್‌ತ್ತಿದ್ದೊ. ಸಾಮಾನ್‌ಗಳ ತೂಗುವ ದೊಡ್ಡ ತ್ರಾಸ್‌ಗಳ್‌ಲಿ 20 ಕೆ.ಜಿ. ವರೆಗೆ ತೂಗಿಕೆ ಆದೆ. ತೂಕ ಮಾಡಿಕೆ ಉಕ್ಕ್‌ನ ಕಲ್ಲ್‌ಗಳ ಬಳ್ಸುವೆ. ಅದಲ್ಲಿ 50ಗ್ರಾಂ, 100ಗ್ರಾಂ, 200ಗ್ರಾಂ, 500ಗ್ರಾಂ, 1ಕೆಜಿ, 2ಕೆಜಿ, 5ಕೆಜಿ, 10ಕೆಜಿ ಮತ್ತು 20ಕೆಜಿ ನ ಆರ್ ಮುಖಗ ಇರುವ ಕಲ್ಲ್‌ಗ ಇದ್ದವೆ. ಈ ತೂಕದ ಕಲ್ಲ್‌ಗಳ ಒಂದು ಪುಡೆಲಿ ಸಣ್ಣ ಗುಳಿ ಇದ್ದದೆ. ದಿನನಿತ್ಯ ಕಲ್ಲ್‌ಗಳ ತೂಕ ಮಾಡಿಕೆ ವ್ಯಾಪಾರಸ್ತರ್ ಬಳ್ಸುವ ಕಾರಣ, ಅವು ಸವ್‌ದ್ ಹೋಗಿ ತೂಕ ಕಮ್ಮಿ ಬಂದದೆ. ಅದ್ಕೆ ತೂಕಲಿ ಹೆಚ್ಚ್ ಕಮ್ಮಿ ಆಕೆ ಬೊತ್ತ್ ತೇಳಿ, ಸವ್‌ದ ಹೋಗಿ ಕಲ್ಲ್‌ನ ತೂಕ ಎಷ್ಟ್ ಕಮ್ಮಿ ಆವುಟೊ ಅಷ್ಟೆ ತೂಕದ ಸೀಸನ ಎಲ್ಲಿ ಆ ಗುಳಿಗೆ ಹೊಯ್ದ್, ಆ ದಿನದ ತಾರೀಕ್‌ನ ಸೀಲ್ ಹಾಕುವೆ. ಈ ಕೆಲ್ಸನ ಸರ್ಕಾರದ 'ಅಳತೆ ಮತ್ತು ಮಾಪನ' ಇಲಾಖೆವು ಮಾಡುವೆ.

ತ್ರಾಸ್‌ಲಿ ಎರ್ಡ್ ಬಟ್ಲ್‌ಗ ಇದ್ದವೆ. ಒಂದು ಕಡೆ ತೂಕದ ಕಲ್ಲ್ ಹಾಕಿಕೆ, ಮತ್ತೊಂದು ಕಡೆ ತೂಗುವ ಸಾಮಾನ್ ಹಾಕಿಕೆ. ಆ ಎರ್ಡ್ ಬಟ್ಲ್‌ಗಳ ನೇತಾಡ್ಸಿಕೆ ಕಬ್ಬಿಣದ ಸಂಕೋಲೆ ಇದ್ದದೆ. ಕೆಲವು ಜನ ವ್ಯಾಪಾರಸ್ತರ್ ತೂಕಲಿ ಮೋಸ ಮಾಡಿಕೆ ಬೇರೆ ಬೇರೆ ಉಪಾಯಗಳ ಮಾಡ್ತಿದ್ದೊ. ಈ ತ್ರಾಸ್‌ಲಿ ತೂಕ ನೂರಕ್ಕೆ ನೂರು ಸರಿ ಬಾದುಲೆ.

ನ್ಯಾಯಾಂಗ ವ್ಯವಸ್ತೆಲಿ, 'ಹೆಣ್ಣ್‌'ನ ಕಣ್ಣಿಗೆ ಬಟ್ಟೆಕಟ್ಟಿ ತ್ರಾಸ್ ಕೈಲಿ ಹಿಡ್ಕಂಡಿರುವ ಚಿತ್ರ (ಸೂಚಕ) ಕಾಂಬಕೆ ಸಿಕ್ಕಿದೆ. ಇಂದ್ ತೂಕ ಮಾಡಿಕೆ ಡಿಜಿಟಲ್ ತ್ರಾಸ್‌ಗ ಬಂದೊಳ. ಅದರ್ಲಿ ಗ್ರಾಂ, ಮಿಲಿಗ್ರಾಂ ಸಾ ತೂಕ ಮಾಡಿಕೆ ಆದೆ. ಹಂಗಾಗಿ ಸಂಕಲೆ ಇರುವ ತ್ರಾಸ್‌ನ ಬಳಕೆ ಬಾರೀ ಕಮ್ಮಿ ಆವುಟು. **(ಮ.ಕೆ.ವಿ)**





ತಾಮ್ರದ ಸೇರ್

ಅಳತೆ ಮಾಡಿಕಾವ ತಾಮ್ರದ ಸೊತ್ತುಗ. ತುಳುಲಿ ಇದ್ಕೆ ಸೇರ್, ಅರ್ದಸೇರ್, ಪಾವು, ಕೊಂಡೆತ ಹೇಳುವೆ. ಮಲೆಯಾಳಂಲಿ ಇಡಂಗಾಯಿ, ಚೆರಂಗಾಯಿ, ಪಾವು, ಕೊಂಡೆ, ಬ್ಯಾರಿ ಬಾಸೆಲಿ ಸೇರ್, ಅರೆಸೇರ್, ಪಾವು, ಕೊಂಡೆತ ಹೇಳುವೆ.

ಇದ್ ಹೆಚ್ಚ್ ಕಮ್ಮಿ ನಮ್ಮ ರಾಜ್ಯದ ಎಲ್ಲಾ ಕಡೆಲೂ ಇದ್ದಿರ್ದು. ಹಿಂದೆನವು ಗದ್ದೆ, ತೋಟಲಿ ಬೆಳ್ಸಿದ ಬೆಳೆನ ಸೇರ್, ಅರ್ದಸೇರ್, ಪಾವು, ಕೊಂಡೆ ಇದರ್‌ಲೆಲ್ಲ ಅಳತೆ ಮಾಡ್ತಿದ್ದ. ಇದರ ತಾಮ್ರದ ಕೆಲಸ ಮಾಡುವ ಜನಂಗ ತಾಮ್ರಂದಲೇ ಮಾಡ್ತಿದ್ದೊ. ತಾಮ್ರದ ತೆಳ್ಳನೆ ಹಾಳೆನ ಕತ್ರಿಸಿ ಬೆಸಿಗೆ ಹಾಕಿ ಮಾಡುವೆ.

ಇದರ್‌ಲಿ ಬತ್ತ, ರಾಗಿ, ಜೋಳ, ಅಕ್ಕಿ ಎಲ್ಲ ಅಳತೆ ಮಾಡ್ತಿದ್ದೊ. ಬೀಜ, ಉಪ್ಪು, ಹುಳಿ, ಮೆಣ್ಸ್, ಹೀಂಗೆ ಎಲ್ಲಾ ಸೊತ್ತುಗಳ ಅಳತೆ ಮಾಡ್ತಿದ್ದೊ. ಹಿಂದೆನವು ಹಂದಿ, ಕುರಿ, ಆಡ್ ಮಾಸ ಅಳತೆ ಮಾಡ್ತಿದ್ದೊ. 1 ಸೇರ್‌ತೇಳಿರೆ 2 ಅರ್ದ ಸೇರ್, 1 ಸೇರ್ಗೆ 4 ಪಾವು, 1 ಪಾವುಗೆ 2 ಕೊಂಡೆ ಹಿಂದೆನವರ ಲೆಕ್ಕಾಚಾರ. **(ಎಂ.ಜಿ.ಕೆ.)**

ಮರ ಮತ್ತೆ ಬೆದ್ರ್‌ನ ಸೇರ್

ಅಳತೆ ಮಾಡಿಕಾವ ಸೊತ್ತುಗ. ಪಿರಾಕ್ಲಿ ಜನ ಗದ್ದೆ, ತೋಟಲಿ ಬೆಳ್ಸಿದ ಬೆಳೆನ ಸೇರ್, ಅರ್ದ ಸೇರ್, ಪಾವು, ಕೊಂಡೆ ಇದರ್‌ಲೆಲ್ಲ ಅಳತೆ ಮಾಡ್ತಿದ್ದ.

ತುಳುಲಿ ಇದ್ಕೆ ಸೇರ್, ಅರ್ದ ಸೇರ್, ಪಾವು, ಕೊಂಡೆತ ಹೇಳುವೆ. ಮಲೆಯಾಳಂಲಿ ಇಡಂಗಾಯಿ, ಚೆರಂಗಾಯಿ, ಪಾವು, ಕೊಂಡೆ, ಬ್ಯಾರಿ ಬಾಸೆಲಿ ಸೇರ್, ಅರೆ ಸೇರ್, ಪಾವು, ಕೊಂಡೆತ ಹೇಳುವೆ. ಇದ್ ಹೆಚ್ಚ್ ಕಮ್ಮಿ ನಮ್ಮ ರಾಜ್ಯದ ಎಲ್ಲಾ ಕಡೆಲೂ ಇದ್ದಿರ್ದು.

ಬೆದ್ರ್‌ನ ಕಡ್ದ್ ಕೊಂಡೆ ಮಾಡ್‌ವೆ. ದೊಡ್ಡ ಬೆದ್ರ್‌ಲಿ ಸೇರ್ ಮಾಡ್‌ವೆ. ಮರನ ಕೆತ್ತಿ ಸೇರ್, ಪಾವು, ಕೊಂಡೆ ಮಾಡುವೆ. ಸೇರ್‌ನ ಉರುಂಟು ಕೆತ್ತಿಯೂ ಮಾಡ್‌ವೆ. ಕೆಲವು ಸೇರ್‌ಗೆ ಅಡಿಲಿ ಕಾಲ್ ಸ ಇದ್ದದೆ. ಬೆದ್ರ್‌ನ ಹತ್ಯಾರ್ ಹಇ ಗೊತ್ತಿದ್ದೊವು ಮಾಡಿಕಾದೆ. ಮರದ್ದ್ ಮಾತ್ರ ಮರದ ಆಚಾರಿಗಳೇ ಮಾಡ್ದು.

ಇದರ್‌ಲಿ ಹಿಂದೆನವು ಬತ್ತ, ರಾಗಿ, ಜೋಳ, ಅಕ್ಕಿ ಎಲ್ಲ ಅಳತೆ ಮಾಡ್ತಿದ್ದೊ. ಬೀಜ, ಉಪ್ಪು ಹುಳಿ ಮೆಣ್ಸ್, ಹೀಂಗೆ ಎಲ್ಲಾ ಸಾಮಾನ್‌ಗಳ ಇದರ್‌ಲೆ ಅಳತೆ ಮಾಡ್ತಿದ್ದೊ. ಹಂದಿ ಮಾಸ ಸ ಇದರ್‌ಲೆ ಅಳತೆ ಮಾಡ್ತಿದ್ದೊ. **(ಎಂ.ಜಿ.ಕೆ., ಪು.ಕೆ.ವಿ)**



ಮಾನ

ಮಾನ ಅಳತೆ ಮಾಡುವ ಒಂದು ಹತ್ಯಾರ್. ಇದ್ ಸಕ್ಲೇಶ್ಪುರ ಕಡೆಲಿ ಮತ್ತೆ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಲೆಲ್ಲ ಇದ್ದದೆ.

ಇದರ ಮರಂದ ಮಾಡ್‌ವೆ. ನೆಲಲಿ ಸಮ ಕುದ್ರಿಕೆ ಅಡಿಗೆ ಕಾಲ್ ಸ ಇದ್ದದೆ. ಮರದ ಆಚಾರಿಗ ಇದರ ಮಾಡ್‌ವೆ. ಇದರ್‌ಲಿ ಅಕ್ಕಿ, ಬತ್ತ, ರಾಗಿ ಎಲ್ಲ ಅಳೆಕೆ ಆದೆ. ಮಾನಂತೇಳಿರೆ ಮೂರುವರೆ ಸೇರ್ ಅಕ್ಕಿ/ಬತ್ತ ಹಿಡೆವ ಒಂದು ಪಾತ್ರೆ. **(ಎಂ.ಜಿ.ಕೆ.)**

ಕೃಸಿ ಸಲಕರಣೆಗ



ಅಡಿಕೆ ಕುಕ್ಕೆ

ತೋಟಲಿ ಬಿದ್ದ ಅಡಿಕೆ ಹೆರ್ಕಿಕೆ ಬೇಕಾದ ಕುಕ್ಕೆ. ಹಾಂಗಾಗಿ ಇದರ ಅಡಿಕೆ ಕುಕ್ಕೆತ ಹೇಳುವೆ. ತುಳುಲಿ ಬಜ್ಜೇಯಿದ ಕುರ್ವೆ. ಮಲೆಯಾಳಂಲಿ ಅಡಕ ಕುರಿಯ, ಬ್ಯಾರಿ ಬಾಸೆಲಿ ಅಡಕೆ ಕುರುಯ ಅಂತ ಹೇಳುವೆ.

ಇದರ ಬೆತ್ತಂದ ಮಾಡುವೆ. ಮಾದ್ರಿ ಬೊಳ್ಳಿಂದಲೂ ಮಾಡಿಕಾದೆ. ಬೆತ್ತದ ಬಾಸ್‌ಲಿ ಅಲ್ಲರ್ ಮಾದ್ರಿ ಬೊಳ್ಳಿಲಿ ಇದರ ಮುಡೆಕು. ಮುಡೆಕೆ ಗೊತ್ತಿದ್ದೊವು ಎಲ್ಲಾ ಜಾತೀಲಿ ಒಳೊ ಯಾರೂ ಮುಡ್ದವೆ. ಕುಕ್ಕೆ ಮುಡೆವ ಮಾಯ್ಲರ್, ಕೊರಗರ್, ಮಲೆ ಕುಡಿಯರ್ ಇದರ ಮಾಡುವೆ.

ಅಡಿಕೆ ಹೆರ್ಕಿಕೆ ತೋಟಕೆ ಹೋಕನ ಇಂತಾ ಕುಕ್ಕೆ ಬೇಕ್. ಅಡಿಕೆ ಹೆರ್ಕಿ ಇದರ್ಲಿ ಹಾಕುದರ್‌ಂದಾಗಿ ಇದ್ಕೆ ಅಡಿಕೆ ಕುಕ್ಕೆಂತ ಹೆಸ್ರಾತ್. ಹೆಸ್ರ್ ಅಡಿಕೆ ಕುಕ್ಕೆಂತಾದರೂ ಇದರ್ಲಿ ಬೀಜ ಹಾಕಿಕೂ ಆದೆ. ಒಳ್‌ಂಗಿದ ಅಡ್ಕೆ ಚೊಲ್ಲಿ ಇದ್ಕೆ ಹಾಕಿಕೂ ಆದೆ. ಬೇರೆ ಏನಾರ್ ಸ ಹಾಕಿಕೆ ಆದೆ. **(ಎಂ.ಜಿ.ಕೆ.)**

ಏಲಕ್ಕಿ / ಯಾಲಕ್ಕಿ ಹಣ್ಣ್‌ನ ಕೊಯ್ದ್ ಹಾಕಂಬಕಿರ್‌ವ ಕುಕ್ಕೆನ 'ಯಾಲ ಕುಕ್ಕೆ' ತ ಕರ್ದವೆ. ಯಾಲ ಕೊಯ್ದ್ ಯಾವ್ದೇ ಕುಕ್ಕೆಗೆ ಹಾಕಣಕ್. ಆದರೆ ಅದಕ್ಕಾಗಿಯೇ ತಯಾರ್ ಮಾಡ್ದ ವಿಸೇಸ ಕುಕ್ಕೆ ಉಟ್ಟು. ಅಂತಾ ವಿಸೇಸ ಕುಕ್ಕೆನ ಹಿಡ್ದ್ ಯಾಲ ತೋಟಕ್ಕೆ ಹೋಕೆ ಕುಸೀ ಆದೆ.

ಅದ್ ಬೆತ್ತಂದ ಮಾಡ್ದ ವಿಸೇಸ ಕುಕ್ಕೆ. ಮಳೆ ಇರಕನೇ ಆಗಲಿ, ಬಿಸ್ಲ್ ಇರಕನೇ ಆಗಲಿ ಬೆತ್ತಂದ ಮಾಡ್ದ ಆ ಕುಕ್ಕೆನೇ ಒಳ್ಳೆದ್. ಬೆತ್ತದೇ ಯಾಕೆ ಒಳ್ಳೆದ್‌ತೇಳ್ರೆ ಆ ಕುಕ್ಕೆ ಬೇಗ ಕುಂಬಾದುಲೆ. ಕುಕ್ಕೆ, ಒಂದ್ರಿ, ಕಡಿಕೆ, ಕೊಮ್ಮೆ ಮಾಡವ್ವೇ ಯಾಲ ಕುಕ್ಕೆನ ಮಾಡಿವೆ.

ಬೆತ್ತನ ಸೀಳಿ, ಬಾಸ್ ಮಾಡಿ, ಬೆಂಡ್ ತೆಗ್ದ್ ಹೆಣ್ದವೆ. ಕುಕ್ಕೆನಂಗೆ ಅಗಾಲ ಬಾಯಿ ಅಲ್ಲ. ಬಾಕಿ ಕುಕ್ಕೆಗಳಂಗೆ ಎರ್ಡ್ ಹಿಡಿಯೂ ಅಲ್ಲ. ಕಿಣಿ ಬೆರ್ಳ್ ಅಗಲದ ಬೆತ್ತದ ಬಾಸ್‌ನ ದೋಣಿನಂಗೆ ಹೆಣ್ದ್ ಮಾಡಿವೆ. ಮತ್ತೆ ಕುಕ್ಕೆದ್ ಒಂದ್ ತುಟಿಂದ ಮತ್ತೊಂದ್ ತುಟಿಗೆ ಒಂದ್ ಹಿಡಿನ ಎಳ್ದ್ ಪೋಣಿಸ್‌ವೆ. ತೋಟಲಿ ಅಂತದರ ಹಿಡ್ಕಂಡ್ ಓಡಾಡಿಕೆ ಬಜ ಆದ್ಲೆ. ಯಾಲ ಕೊಯ್ದ್ ಹಾಕಂಬಕೆ ಸುಲಾಬ ಆದೆ. ಆಚೆ ಈಚೆ ರಟ್ಟಿ ಹೋದುಲೆ. ಕೆಲ್ಸ ಮಾಡ್‌ಕನ ಮಳೆ ಬಂದರೆ ಕುಕ್ಕೆಂದ ನೀರ್ ಸೋರಿ ಹೋದೆ. ಹಣ್ಣ್ ತೂತಂದ ಜಾರಿ ಬೀಳ್ದುಲೆ. ಐದಾರ್ ಸೇರ್ ಹಣ್ಣ್ ತುಂಬಿದೆ.

ಕೆಲ್ಸೆಲ್ಲ ಆಗಿ ಕುಕ್ಕೆನ ಒಣಂಗಿಸಿ ಇಸಿರೆ ಅದ್ ಕುಂಬಾಗಿ ಹಾಳಾಗ್‌ವ ಪ್ರಶ್ನೆನೇ ಇಲ್ಲೆ. **(ಬಾ.ಜೋ.)**



ಅಡ್ಕೆ ಕತ್ರಿ

ಹಣ್ಣಡಿಕೆ, ಹಾಂಗೆ ಒಣ್‌ಗಿದ / ಗೋಂಟು ಅಡ್ಕೆನ ಕತ್ರ್‌ಸಿ ತುಂಡುಮಾಡುವ ಕತ್ರಿಗೆ ಅಡ್ಕೆಕತ್ರಿ ತೇಳಿ ಕರ್ದವೆ. ಕತ್ತಿಲಿ ಒಣ್‌ಗಿದ ಅಡ್ಕೆನ ಹೋಳು ಮಾಡಿಕೆ ಕಷ್ಟ ಆದೆ. ಅಡ್ಕೆ ಕತ್ರಿಲಿ ಅಡ್ಕೆ ಎಷ್ಟೆ ಗೆಟ್ಟಿ ಇದ್ರೂ ಒಡೆಕೆ ಬಾರೀ ಸುಲಬ ಆದೆ. ಇದರ ಹೆಚ್ಚಾಗಿ ಕಾರ್ಕಾನೆಗಲ್ಲಿ ಮಾಡ್ದು. ಚೂರಿ, ಕತ್ತಿ ಮಾಡುವ ಆಚಾರಿಗಳಿಗೂ ಮಾಡಿಕೆ ಆದೆ. ನಮ್ಮ ಹಿಂದೆನವು ನಮ್ಮಂದೊಳೂ ಎಷ್ಟ್ ಬುದ್ಧಿವಂತರಾಗಿದ್ದೊ ತೇಳಿ ಇದರ ನೋಡ್‌ಕನ ಗೊತ್ತಾದೆ. ಇದ್ ಮನೆಗಳಲಿ ಎಲೆ ಅಡಿಕೆ ತಿಂಬೊವುಕೆ ಅಡಿಕೆ ಹೋಳು ಮಾಡಿಕೆ ಅಗತ್ಯ ಬೇಕಾದೆ. ಆದರೆ ಇದರ ಹೆಚ್ಚು ಅಗತ್ಯ ಇರ್ದು ಅಡ್ಕೆ ಯಾಪಾರಿಗಳಿಗೆ ಕೃಸಿಕರ್ ಮಾರಿಕೆ ತಂದ ಅಡ್ಕೆ ಒಣ್‌ಗಿಟೊ ಇಲ್ಲೆನಾ ಅಂತ ನೋಡಿಕೆ ಮತ್ತೆ ಒಳಗೆ ಕುಂಬು ಮೊನಿ ಆವುಟಾ ಅಂತ ನೋಡಿಕೆ ಸುಲ್ದ್ ತಂದ ಅಡ್ಕೆ ರಾಶಿಂದ ಎಂಟ್‌ತ್ತ್ ಅಡ್ಕೆಗಳ ಕತ್ರ್‌ಸಿ ನೋಡಿ, ಆ ಅಡ್ಕೆಗೆ ಕೇಜಿಗೆ ಎಷ್ಟ್ ದುಡ್ಡು ಕೊಡಕ್ ಅಂತ ನಿರ್ದಾರ ಮಾಡುವೆ.

ಈ ಅಡ್ಕೆ ಕತ್ರಿನ ಸ್ಟೀಲ್ ಇಲ್ಲರ್ ಹಿತ್ತಾಳೆಂದ ಮಾಡುವೆ. ಇದರ್ಲಿ ಬೇರೆ ಬೇರೆ ತರದ ಆಕಾರ ಇರ್ವ ಕತ್ರಿಗ ಒಳೊ. ಸಂಕ್ರಾಂತಿ ಹಬ್ಬ ಆಚರಿಸುವ ಊರ್‌ಗಳ್‌ಲಿ ಬೆಲ್ಲ ಕತ್ರಿಸಿಕೆ ಸಹ ಈ ಕತ್ರಿ ಬೇಕಾದೆ. ಸುಮಾರ್ 350 ವರ್ಷಗಳ ಹಿಂದೆನೇ ಈ ತರದ ಕುಸುರಿ ಕೆಲ್ಸ ಮಾಡ್ದ ಪೊರ್ಲುನ ಕತ್ರಿಗ ಇದ್ದ ತೇಳುವ ವಿಷಯ ಕಂಡ್ ಬಂದದೆ. **(ಪು.ಕೆ.ವಿ)**



ಅಡ್ಕೆ ಮಣೆ

ಅಡ್ಕೆ ಮಣೆ ತೇಳ್ರೆ ಕೊಮ್ಮಿಗೆ ಹತ್ತಿಕೆ ಇರ್ವ ಮಣೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಅಡಿಕೆ ಕೃಷಿ ಮಾಡುವ ಹೆಚ್ಚಿನ ಕಡೆಲಿ ಇದ್ದದೆ. ಇದರ ಮಾಡಿಕೆ ಗಟ್ಟಿ ಮರದ ಹಲಗೆ ಮತ್ತೆ ಚೆಪ್ಪುನ ಹುರಿಬೊಳ್ಳಿ ಬೇಕ್. ಹಲಸ್‌ನ ಮರದ ತೋರದ ಬೇರ್, ಬೊಳ್ಳಿ ಕಾಯರ ಮರಲೂ ಮಾಡ್ವೆ. ಅಂದಾಜ್ ಮೂರು ಗೇಣ್‌ನ ಉದ್ದ, ಒಂದ್ ಗೇಣ್‌ನಷ್ಟು ಅಗಲ, ಒಂದೂವರೆ ಅಂಗುಲದಷ್ಟು ದಪ್ಪ ಇರ್ವ ಮರದ ಹಲಗೆಲಿ ಮಾಡ್ವೆ. ಮರನ ಪೊರ್ಲು ಕೀಸಿ ಮೂಲೆಲಿ ದೂಂಚಿ ಇಲ್ಲದ ಹಾಂಗೆ ಮಾಡಿಕಾಂಕು. ನಡೂಲಿ ಒಂದು ಒಟ್ಟೆ ಮಾಡೊಕು. ಅಂದಾಜ್ ಎರಡ್ ಮಾರ್ ಉದ್ದದ ದಪ್ಪದ ಹುರಿ ಬೊಳ್ಳಿನ ಎರಡ್ ಮಡಿಕೆ ಮಡಿ ಒಟ್ಟೆಲಿ ಸುರ್ದ್ ಅಡಿಬಾಗಲಿ ಗಂಟ್ ಹಾಕಿ ಪೀಂಕದ ಹಾಂಗೆ ಮಾಡಿರೆ ಅಡಿಕೆ ಮಣೆ ತಯಾರ್ ಆದೆ. ಇದರ ಮರದ ಆಚಾರಿಗ ಮಾಡ್ವೆ, ಕೆಲವರ್ ಮರಕ್ಕೆ ಹತ್ತೊವು ಅವ್ಕವ್ಕೆ ಬೇಕಾದ ಮಣೆನ ಅವ್ವವ್ವೆ ಮಾಡಿಕಂಡವೆ.

ಕೊಮ್ಮಿಗೆ ಹತ್ತೊವು ಮಣೆಲಿರುವ ಬೊಳ್ಳಿನ ಕೊಮ್ಮಿಗೆ ಒಂದು ಸುತ್ತು ತಂದ್ ಬೊಳ್ಳಿನ ಕೊಡಿಲಿರುವ ಎರಡ್ ಎಳೆನ ನಡೂಲಿ ಮಣೆನ ಹುಗ್ಗ್‌ಸಿ ಎಳ್ದವೆ. ಆಗ ಕೊಮ್ಮುಲಿ ಮಣೆ ನೇತಾಡ್ದೆ. ಮರ ಹತ್ತೋವು ಕಾಲಿಗೆ ಹಾಳೆಂದ ಮಾಡ್ದ 'ತಳೆನ' (ದಳೆ) ಹಾಕಿ ಕಂಡವೆ. ತಳೆತೇಳ್ರೆ ಒಂದು ಬೊಳ್ಳಿನ ಎರಡ್ ಕಡೆಲಿ ಒಟ್ಟು ಸರ್‌ಸಿ ಗಂಟ್ ಹಾಕಿದ ಒಂದು ಹತ್ಯಾರ್. ಅದ್ ಕೊಮ್ಮನ ತೋರ ಮತ್ತೆ ಎರಡ್ ಪಾದದ ಅಳತೆನಷ್ಟು ಇರೊಕು. ಅದರೊಳಗೆ ಕಾಲ್ ಹಾಕಿ ಕೊಮ್ಮಿಗೆ ಕಾಲ್ ಕೊಡಿಕೆ ಆವಷ್ಟು ಇರೋಕು. ಒಂದು ಕೈಲಿ ಕೊಮ್ಮುನ ಹಿಡ್ಕಂಡ್ ಮತ್ತೊಂದು ಕೈಲಿ ಬೊಳ್ಳಿನ ಹಗೂರಲಿ ಮೇಲೆ ನೂಕಿಕನ ಮೇಲೆ ಮೇಲೆ ಹೋದವೆ. ಬೇಕಾದಷ್ಟು ಎತ್ತರಕೆ ಹೊದ ಮೇಲೆ ಪುಕುಳಿ ಅಡಿಗೆ ಮಣೆನ ತಂದ್ ಅದರ್ಲಿ ಅಚೆ ಈಚೆ ಕಾಲ್ ಹಾಕಿ ಕುದ್ದವೆ. ಆಗ ಬೊಳ್ಳಿ ಗಟ್ಟಿ ಆಗಿ ಕೊಮ್ಮುಲಿ ಹಿಡ್ಕಂದೆ. ಇದ್ ಅಡ್ಕೆ ತೆಗೆವ್ಕೆ, ಮೊದ್ದು ಬುಡೊವ್ಕೆ ಅತೀ ಅಗತ್ಯ, ಮರ ಹತ್ತಿದವಂಗೆ ಜಾರ್ವ, ಬೀಳ್ವ ಹೆದ್ರಿಕೆ ಇರ್ದುಲೆ. **(ಎಂ.ಜಿ.ಕೆ)**



ಒಚ್ಚಿಮರ

ಕತ್ತಿ, ಬಾಜಿ, ಚೂರಿ, ಹರ್‌ತ ಮಾಡ್‌ವ ಮರಂದ ಮಾಡ್ದ ಒಚ್ಚಿಮರ. ಹಿಂದೆ ಮುಂದೆ ಕೂಸ್‌ನ ಒಚ್ಚುವ ಹಂಗೆ ಕತ್ತಿನ ಒಚ್ಚಿ ಹರಿತ ಮಾಡುವ ಕಾರಣ ಒಚ್ಚಿ ಮರಂತ ಹೆಸ್ರ್ ಬಂದಿರ್ದು. ತುಳುಲಿ ಒಚ್ಚಿ ಮರಂತ ಕರ್‌ದವೆ. ಇದ್ ದಕ್ಷಿಣ ಕನ್ನಡ ಮತ್ತೆ ಉಡುಪಿ ಜಿಲ್ಲೆಲಿ ಇರುವಂತದ್ದ್.

ಕೋಳಿ ಬಾಳ್ ಮೊಸೆವ ಒಚ್ಚಿ ಮರ ಕಾಯರ ಮರದ ಬೇರ್‌ಲಿ ಮಾಡ್‌ವೆ. ಇದರ ಕೆತ್ತಿಕೆ ಗೊತ್ತಿದ್ದೊವು ಯಾರೂ ಸ ಮಾಡಕ್. ಮರದ ಅಚಾರಿಗ ಹಞ ಲಾಯ್ಕ್ ಮಾಡ್‌ವೊ. ಇದ್ ಕಲ್ಲ್‌ಲಿ ಸ ಇದ್ದದೆ. ಇದರ ಕಲ್ಲ್ ಕುಟಿಗರ್ ತಯಾರ್ ಮಾಡ್‌ವೆ. ಬೊಳ್ಗಲ್ಲ್‌ನ ಕುಟ್ಟಿ ಪೊಡಿ ಮಾಡಿ ಒಚ್ಚಿ ಮರದ ಮೇಲೆ ಹಾಕಿ ಕತ್ತಿನ ಒಚ್ಚೊಕ್.

ಬಾಳ್, ಕತ್ತಿ, ಬಾಳ್ಕತ್ತಿ, ಕೊಡಾರಿ, ಮೊಚ್ಚಿ ಮೊಸೆಕೆ ಒಚ್ಚಿ ಮರ ಬೇಕ್. ಆದರೆ ಆ ಒಚ್ಚಿಮರ ಹೀಂಗೆ ಇರ್ದುಲೆ. ಅದ್ ಉದ್ದ ಇದ್ದ್ ದಪ್ಪ ಸ ಇದ್ದದೆ. ಆದರೆ ಮರದ ಒಚ್ಚಿಲಿ ಬಾಳ್ ಲಾಯ್ಕ್ ಮೊಸೆಕಾದೆ ಗಡ **(ಎಂ.ಜಿ.ಕೆ.)**



ಒಣ್ಕೆ

ಒನ್ಕೆ ಅಂದಾಜ್ ಐದ್ ಆರ್ ಪೀಟ್ ಉದ್ದ ಇದ್ದದೆ. ಇದ್ ಕಡೆ ಮತ್ತೆ ಕೊಡಿಲಿ ಹಂಞ ತೋರ ಇದ್ದ್ ನಡುಲಿ ಸಪೂರ ಇದ್ದದೆ. ಇದರ ಒಂದು ಕೊಡಿಲಿ ಕಬ್ಬಿಣಂದ ಮಾಡ್ದ ಬಳೆ ಇದ್ದದೆ. ಅದ್ಕೆ ಕಂಕಣ ಇಲ್ಲರ್ ಒಣ್ಕೆ ತೊಡಿ ಅಂತ ಹೇಳುವೆ. ಒನ್ಕೆನ ಹೆಚ್ಚಾಗಿ ಚಾಳೆ, ತಾಳಿ, ಬೀಟಿ ಮರಂದ ಮಾಡುವೆ. ಅದ್ ಅಲ್ಲರ್ ಗಟ್ಟಿ ಇರುವ ಕೆಲವು ಮರಂದಲೂ ಮಾಡುವೆ. ಇದರ ಮರದ ಆಚಾರಿಗ ಮಾಡುವೆ.

ಬತ್ತಂದ ಅಕ್ಕಿ ಮಾಡಿಕೆ ಬೇಸಿ ಒಳ್ಂಗಿಸಿದ ಬತ್ತನ ನರ್ಗುಳಿ (ಮೊಣ್ಣೊಂದ ಇಲ್ಲರ್ ಕಲ್ಲ್ಂದ ಮಾಡ್ದ್, ಇದ್ ಸುಮಾರ್ ಒಂದುವರೆ ಗೇಣ್‌ನಷ್ಟ್ ಅಗಲ, ಒಂದು ಗೇಣ್‌ನಷ್ಟ್ ಗುಂಡಿ ಇದ್ದದೆ)ಗೆ ಹಾಕಿ ಇದರ್‌ಲಿ ಮಿಜೇದು. ಮಿಜೇದುಂತೇಳಿರೆ ನೆರ್ಗುಳಿ ಬತ್ತ ಹಾಕಿ ಒನ್ಕೆನ ಎತ್ತಿ ಎತ್ತಿ ಕುಟ್ಟುದು, ಒಬ್ಬನೇ ಕುಟ್ಟದು ಇಬ್ಬೊರು ಕುಟ್ಟುದು ಮೂರುಜನ ಕುಟ್ಟುದೂ ಉಟ್ಟು.

ಒನಕೆನ ಬಾರ ಜಾಸ್ತಿ ಇರುವ ಮರಗಳ್ಂದ ಮಾಡಿವೆ. ಕೆಲವು ಮನೆಯವೇ ಮಾಡಿ ಕಂಬದುಟ್ಟು. ಹೆಚ್ಚ್‌ನ ಜನ ಆಚಾರಿಗಳ ಕೈಂದ ಮಾಡ್ಸಿ ಕಂಡವೆ. ಒನಕೆದ್ ನಡೂ ಬಾಗ ಸಣ್ಣದಿದ್ದದೆ. ಹಿಡ್ಕಂಬಕೆ ಒಳ್ಳದಾದೆ. ಅದರ ಎರಡೂ ತುದಿ ಕಡೆದಪ್ಪ ಇದ್ದದೆ. ತುದಿಗೆ ಕಬ್ಬಿಣದ ಬಳೆ (ತೊಡಿ/ಕಡಗ) ಇದ್ದದೆ.

ದೇವರಜಾತ್ರೆಲಿ ಅವುಲಕ್ಕಿ ಕುಟ್ಟುದು ಒನಕೆಂದಳೆ. ಮದೆನಾಡ್ ಕಡೆಲೆಲ್ಲ ಶ್ರೀ ಮಾದೂರಪ್ಪ ದೇವರ ಹಬ್ಬಲಿ ಬೇಸಿದ ಬತ್ತನ ಒಂದ್ ಹದಾಲಿ ಕುಟ್ಟಿ ಅವುಲಕ್ಕಿ ಮಾಡಿವೆ. ಆ ಕಾರಣಂದ ಊರೊಳಗೆ ಒನಕೆ ಉಟ್ಟು.

ಚಿತ್ರದುರ್ಗದ ಕೋಟೆನ ರಕ್ಷಣೆ ಮಾಡ್ದ್ ಒನಕೆಂದಳೇ ತೇಳ್ವ ಕತೆ ಒಂದ್ ಐತಿಹಾಸಿಕ ಸತ್ಯಕತೆ ಉಟ್ಟು. ಓಬವ್ವತೇಳ್ವ ಗಟ್ಟಿಗಿತ್ತಿ ಒಮ್ಮೆ ಕೋಟೆಗೆ ನುಗ್ಗುತ್ತಿದ್ದ ಶತ್ರುಗಳ ಒನಕೆಂದಳೇ ಹೊಡ್ದ್‌ಕೊಂದ್ ಕೋಟೆ ನರಕ್ಷಣೆ ಮಾಡ್ತ್‌ಗಡ.

ಕೆಲವು ಸೂಕ್ಷ್ಮ/ ಜಿಪುಣ ಆಗಿ ಇರೋವುಕೆ 'ಅವ ಒನಕೆಂದ ನಾರ್ ಬೇಕಾರೆ ತೆಗೆದಪಾ' ತ ಹೇಳ್ದುಟ್ಟು.

ಒನ್ಕೆ ಬತ್ತ ಮಿಜೆಕೆ ಬೇಕಾದ ಹತ್ಯಾರ್. ತುಳುಲಿ ಇದ್ಕೆ ಉಜ್ಜೆರ್‌ತ ಹೇಳುವೆ. ಮಲೆಯಾಳಂಲಿ ಒಲಕ, ಬ್ಯಾರಿ ಬಾಸೆಲಿ ಒಲೆಕೆ ತ ಹೇಳುವೆ. ಇದ್ ಹೆಚ್ಚ್‌ಕಮ್ಮಿ ನಮ್ಮ ರಾಜ್ಯದ ಎಲ್ಲಾ ಊರ್‌ಲೂ ಇರುವಂತದ್ದ್. 'ಆಗಸದಲ್ಲಿ ಹಾರೋ ಗಿಡ್‌ಗ ಅದರ ಕಾಲ್‌ಗೆ ಬೆಳ್ಳಿ ಕಡ್‌ಗ ಅದರ ಮಾಡ್ತ್ ಬಡಗಿ ಹುಡ್‌ಗ' ತೇಳುವ ಒಡ್ಸೋ ಕತೆನೂ ಉಟ್ಟು

(ಬಾ.ಜೋ., ಎಂ.ಜಿ.ಕೆ.)



ಒಣ್ಕೆ ಮುಂಡಿ

ಅಡ್ಗೆ ಕೋಣೆಲಿ ಇರುವ ಅಗತ್ಯದ ಸೊತ್ತ್‌ಗಳ್‌ಲಿ ಒಣ್ಕೆ ಮುಂಡಿನೂ ಒಂದು. ಒಣ್ಕೆ ಉದ್ದ ಇದ್ದರೆ, ಇದ್ ಅದರ ಅರ್ದದಷ್ಟು ಉದ್ದ ಇದ್ದ್, ಚೂರು ತೋರ ಇದ್ದದೆ. ಒಣ್ಕೆಂದ ಅರ್ದದಷ್ಟು ಸಣ್ಣದಿರ್ವ ಕಾರಣ ಇದ್ಕೆ ಒಣ್ಕೆ ಮುಂಡಿ (ತುಂಡು) ಅಂತ ಹೆಸರಿಸಿರ್ವ. ಕರಾವಳಿ ಮತ್ತೆ ಕೊಡುಗು ಪ್ರದೇಶದ ಎಲ್ಲಾ ಊರ್‌ಗಳಲಿ ಇದ್ ಹಿಂದೆ ಬಳಕೆಲಿ ಇತ್ತ್. ಮಿಕ್ಸಿ, ಗ್ರೈಂಡರ್ ಬಂದ ಮೇಲೆ ಇದ್ ಮಾಯ ಆವುಟು.

ಅಡ್ಕೆ ಮನೆಲಿ ಇದರ ಕೆಲ್ಸ ಜಾಸ್ತಿ. ಮೆಣ್ಸ್ ಗುದ್ದಿಕೆ, ಬೆಳ್ಳುಳ್ಳಿ ಗುದ್ದಿಕೆ, ಮಸಾಲೆ ಗುದ್ದಿಕೆ, ಹೊರ್ದ ಸಾಸಿವೆ – ಕೊತ್ತಂಬ್ರಿ ಗುದ್ದಿಕೆ ಇದ್ ಬೇಕಾದೆ. ಇಡೀ ಅರ್ಸಿನ ಕೊಂಬುನ, ಒಣಗಿಸಿದ ಓಟೆಹುಳಿನ ಎಸ್‌ಳ್‌ನ ಗುದ್ದಿಕೆ, ಉಪ್ಪಣ (ಒಣಗಿದ ಮಾಸ) ಗುದ್ದಿಕೆ, ಒಣ್‌ಗಿಲ್ (ಚರಂಡಿ – ಬೊಳ್ಳಿಕಾರ್) ಮೀನ್ ಗುದ್ದಿಕೆ ಇದ್ ಬೇಕಾದೆ. ಉಪ್ಪನಕಾಯಿ ಹಾಕಿಕೆ ಮಸಾಲೆ ಗುದ್ದಿಕೆ ಸ ಬೇಕಾದೆ. ಹೆಚ್ಚಾಗಿ ಹೆಬ್ಬಲಸ್, ಮೊತ್ತಿ, ಹುಣ್ಸೆ, ಉಂಡೆಹುಳಿ ಮರಗಳ್‌ಂದ ಈ ಮುಂಡಿನ ತಯಾರ್ ಮಾಡುವೆ. ಇದ್ಕೆ ಮರದ ಆಚಾರಿಗಳ ಅಗತ್ಯ ಇಲ್ಲೆ. ಹೆಞ ಮರದ ಕೆಲ್ಸದ ಹಿಕ್‌ಮಂತ್ ಗೊತ್ತಿದ್ದವು ಯಾರು ಸಾ ಮಾಡಕ್. ಇದರ್ಲಿ ಸಣ್ಣ ಮುಂಡಿ ದೊಡ್ಡ ಮುಂಡಿ ತೇಳಿ ಬೇರೆ ಬೇರೆ ಇದ್ದದೆ. ಹೆಞ ಏನಾರ್ ಗುದ್ದಿಕೆ ಇದ್ದರೆ ಕಡ್ಕಲ್‌ಗೆ ಹಾಕಿ ಸಣ್ಣ ಮುಂಡಿಲಿ ಗುದ್ದುದು. ಗುದ್ದಿಕೆ ಜಾಸ್ತಿ ಇದ್ದರೆ ದೊಡ್ಡ ಮುಂಡಿಲಿ ಗುದ್ದುವೆ. **(ಪು.ಕೆ.ವಿ)**



ಕಡ್ಕೆ

ಬತ್ತ ಅಲ್ಲರ್ ಅಡಿಕೆನ ತುಂಬಿಸಿ ಇಸಿಕೆ ಆವ ಒಂದು ಬಗೆ ಹತ್ಯಾರ್‌ನ ಕಡ್ಕೆ, ಕದಿಕೆ ಇಲ್ಲರ್ ಕಡಿಕೆಂತೇಳಿ ಕರ್ದವೆ. ಗದ್ದೆ ಬೇಸಾಯ ಮಾಡುವ ಮನೆಗಳ್‌ಲಿ ಇದ್ ಇರೊಕಾದ ಸೊತ್ತು. ಬೆದ್ರ್‌ಂದ ಅಲ್ಲರ್ ಅಮೆ ಓಟೆಂದ ಇದರ ಮಾಡಿಕಾದೆ.

ಸುರುಲಿ ಬೆದ್ರ್‌ನ ಹಞ ತೋರ ಇರುವ ಹಾಂಗೆ ಎರಡ್ ಸಲಿಕೆ ಮಾಡಿಕಾಂಕು. ಬಾಗ ಮಾಡ್ದ ಬೆದ್ರ್‌ನ ಅಂದಾಜ್ ಒಂದು ಅಂಗುಲದಷ್ಟು ಸೀಳಿ ತೆಳ್ಳಂಗೆ ಕೀಸಿ ಪೊರ್ಲು ಮಾಡಿಕಾಂಕು. ಅದರ ಮೊಂದ್ರಿನ ಹಾಂಗೆ ಸೆರೆ ಇಲ್ಲದ ಹಾಂಗೆ ಮುಡೆಕು. ಹೀಂಗೆ ಮುಡೆಕನ ಅದರ ಎರಡೂ ಕಡೆಲೂ ಸುರೂಲಿ ಮಾಡ್ದ ಸಲಿಕೆ ಇರುವ ಹಾಂಗೆ ಮಾಡಿಕಾಂಕು. ಹೀಂಗೆ ಮುಡೆಕನ ಸಲಿಕೆ ಮೊಂದ್ರಿನ ಎರಡೂ ಕಡೆಲೂ ಹಞ ಜಾಸ್ತಿ ಇರುವ ಹಾಂಗೆ ನೋಡಿಕಾಂಕು. ಕದಿಕೆ ಅಂದಾಜ್ ಐದ್ ಅಡಿ ಅಗಲ ಹತ್ತ್ ಅಡಿ ಉದ್ದ ಇದ್ದದೆ. ಹೀಂಗೆ ಮುಡ್ದ ಮೇಲೆ ಅದರ ಎರಡೂ ಪುಡೆಗೂ ಸೆಗಣಿ ಮೆತ್ತುವೆ. ಸೆಗಣಿಗೆ ಮೊಣ್ಣ್ ಬೆರ್‌ಸಿನೂ ಮೆತ್ತುವೆ.

ಇದರ ಕೊರಗರ್, ಅಜಲರ್, ಮಲೆಕುಡಿಯ ಸಮುದಾಯದವು ಮಾಡುವೆ. ಬೇರೆ ಸಮುದಾಯದ ಜನಗ ಸ ಮಾಡುವೆ.

ಇದ್ ಕೆಯ್ಯಿನ ಹೊಡ್ಡ್ ಬತ್ತನ ಹೊಡ್ಕಿ ಬಿಸ್ಲ್‌ಲಿ ಒಣಂಗಿಸಿ ದಾಸ್ತಾನ್ ಇಸಿಕಾಕನ ಬೇಕಾದೆ. ಬತ್ತ ಹಾಳಾಗದ ಹಾಂಗೆ ಜಾಗ್ರತೆಲಿ ಇಸಿಕೆ ಕದಿಕೆ ಬೇಕು. ಮನೆ ಒಳಗೆ ಬೆಚ್ಚಂಗೆ ಇರುವ ಕೋಣೆಲಿ ಬಿಳ್ಗ್‌ಲ್‌ನ ದಪ್ಪಕ್ಕೆ ಹರ್‌ಂಡಿ ಕದಿಕೆ ಕಟ್ಟುವೆ. ಬತ್ತ ತುಂಬಿಸಿಕೆ ಬೇಕಾದಷ್ಟು ದೊಡ್ಡದ್ ಮಾಡಿ ಕದಿಕೆ ಕಟ್ಟುವೆ. ಕದಿಕೆನ ಬುಡ್ಲಿ ಹರ್‌ಂಡಿದ ಬಿಳ್ಗ್‌ಲ್ ಮೇಲೆ ನಿಲ್ಲಿಸಿರೆ ಕದಿಕೆ ತಯಾರ್ ಆದೆ. ಅದರ ಎರಡೂ ಪುಡೆಲಿರುವ ಸಲಿಕೆನ ಹಕ್ಕಲೆ ಮಾಡಿ ಎಳ್ದ್ ಕಟ್ಟೊಕು. ಮತ್ತೆ ಅದರೊಳಗೆ ಬತ್ತನ ಸರ್ದವೆ. ಬತ್ತ ತುಂಬಿಸಿ ಆದ ಮೇಲೆ ಮೇಲೆಂದ ಮತ್ತೆ ಬಿಳ್ಗ್‌ಲ್ ಹರ್‌ಂಡುವೆ. ಹೀಂಗೆ ಮಾಡಿರೆ ಬತ್ತ ಬೆಪ್ಪಂಗೆ ಇದ್ದ್ ಹಾಳಾದುಲೆ.

ಈ ಕಡ್ಕೆನ ಮನೆಲಿ ಜಂಬರ ಇರಿಕನ ಚಪ್ಪರದ ಸುತ್ತೊಳು ಮದೆ ಮಾಡಿ ಕೂಡಾ ಕಟ್ಟ್‌ತಿದ್ದೊ, ಬೂತದ ಕೊಡಿಯಡಿನ ಸುತ್ತೂಲು ಕಟ್ಟ್‌ತಿದ್ದೊ. ಬತ್ತ ಬೇಸಾಯ ಕೈದ್ ಆದ ಮೇಲೆ ಕದಿಕೆಲಿ ಅಡ್ಕೆ ತುಂಬಿಸುತ್ತಿದ್ದೊ. ಈಗಲೂ ಬತ್ತ ಬೇಸಾಯ ಇದ್ದೊವು, ಅಡ್ಕೆ ತೋಟದವು ಕದಿಕೆನ ದಾಸ್ತಾನ್ ಮಾಡಿಕೆಂತ ಬಳಸ್‌ವೆ. **(ಎಂ.ಜಿ.ಕೆ.)**



ಕಿಡಿಂಜೋಳು, ಪಣೆ ಮತ್ತೆ ಗೊರಗ್

ಕಿಡಿಂಜೋಳು, ಪಣೋಳಿ, ಗೊರಗ್ ತೇಳಿರೆ ಮಳೆ ಬಾಕನ ಚೆಂಡಿ ಆಗದಂಗೆ ತಲೆಗೆ ಹಾಕಿ ಕೆಲ್ಸ ಮಾಡಿಕಾವ ಒಂದ್ ಸೊತ್ತು.

ಕಿಡಿಂಜೋಳ್‌ಗೆ ಅರೆಬಾಸೆಲಿ ಮತ್ತೆ ತುಳುಲಿ ಕೆಡೆಂಜೋಳುತ ಹೇಳ್ರೆ ಕನ್ನಡಲಿ ಗೊರಬೆತ ಹೇಳ್ವೆ. ಮಲೆಯಾಳಂಲಿ ಕೊರಂಬ, ಬ್ಯಾರಿ ಬಾಸೆಲಿ ಕಿಡಿಂಜಳ್ ತ ಹೇಳ್ವೆ.

ದಕ್ಷಿಣ ಕನ್ನಡ, ಉಡುಪಿ, ಕೊಡಗ್, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಲಿ ಇದರ ಉಪಯೋಗ ಮಾಡ್‌ವೆ.

ಕಿಡಿಂಜೋಳುನ ಚಾಳೆ ಮಡ್ಲ್‌ಂದ ಮಾಡ್ದು. ಇದ್ದರ್‌ಲಿ ಒಳ್ಳ ಬೆಳ್ದ ದೊಡ್ಡ ಮಡಲ್‌ನ ತೆಗ್ದ್ ಕಿಚ್ಚಿಲಿ ಬಾಡ್ಸಿ ಅದರ ಬುಡ್ಸಿ ಸೂಂಪೆನ ಹಾಂಗೆ ಸುತ್ತಿ ಒಳ್‌ಂಗಿಕೆ ಇಸ್‌ವೆ. ಕಿಡಿಂಜೋಳು ಮಾಡಿಕಾಕನ ಒಳ್‌ಂಗಿದ ಮಡ್ಲ್‌ನ ನೀರ್‌ಲಿ ಕಂತ್ಸಿ ಬುಡ್ಸಿಕಾಂಕು. ಒಂದೂವರೆ ಗೇಣ್‌ನಸ್ಟ್ ಬೆದ್ರ್ ನಾಲ್ಕೈದ್ ಕಡ್ಡಿನ ಪೊರ್ಲುಳ್ ಕೀಸಿ ಬಾಸ್ ಮಾಡಿ ಒಂದು ಕೊಡಿ ಚೂಪು ಮಾಡಿಕಾಂಕು. ಇನ್ನೊಂದು ಕಡೆಲಿ ಅಂದಾಜ್ ಎರಡಿಂಚಿನಸ್ಟ್ ಸೀಳಿಕಾಂಕು. ಇದ್ಕೆ ನಾರ್ಕಣೆತ ಹೇಳ್ವ ಒಂದು ಜಾತಿ ದೆಯ್ಯಿನ ಚೋಲಿ ತೆಗ್ದ್ ಒಳ್‌ಂಗಿಸಿ ಮಾಡ್ದ ಗಟ್ಟಿ ಬೊಳ್ಳಿ ಬೇಕು. ಗಟ್ಟಿ ಇರ್‌ವ ಬೇರೆ ಬೊಳ್ಳಿನು ಸಾ ಆದೆ.

ಮೆತ್ತಂಗೆ ಆದ ಮಡ್ಲ್‌ನ ಬುಡ್ಸಿಕಾಂಕು. ಸುರೂಗೆ ಎರಡ್ ಮಡ್ಲ್‌ನ ಒಟ್ಟಿಗೆ ಒಂದರ ಮೇಲೆ ಒಂದು ಇಸಿಕಾಂಕು. ಕಡ್ಡಿ ಇರ್‌ವಲ್ಲಿ ನಡೂಲಿ ಮಡ್ಚಿದ್ ಅದರ ಎಡೆಲಿ ಇನ್ನೆರಡ್ ಬುಡ್ಸಿದ ಮಡ್ಲ್‌ನ ಇಸಿದ್ ಬೆದ್ರ್ ಕಡ್ಡಿಲಿ ಅಂದಾಜ್ ಮುಕ್ಕಾಲ್ ಗೇಣ್‌ಗೆ ಒಂದರ ಹಾಂಗೆ ಕುತ್ತಿಕಾಂಕು. ಈ ಬೆದ್ರ್‌ನ ಕಡ್ಡಿಗೆ ಬಾಸ್ ತೇಳಿ ಕರ್ದವೆ. ಎಲ್ಲಾ ಮಡ್ಲ್‌ನ ಕಡೆ ಒಂದೇ ಸಮ ಇರ್‌ವ ಹಾಂಗೆ ಇಸೊಕು. ಮತ್ತೆ ಅದರ ಎಡೆಗೆ ಇನ್ನೆರಡ್ ಮಡ್ಲ್‌ನ ಜೋಡ್ಸಿ ಕುತ್ತಿಕಂಡ್ ಹೋಕು. ಹೀಂಗೆ ಕಡ್ಡಿನ ಮುಕ್ಕಾಲ್ ಬಾಗ ಕುತ್ತಿದ ಮೇಲೆ ಕಡ್ಡಿನ ಕಡೆಲಿ ಸೀಳ್ ಮಾಡ್ದರ ಒಳಗೆ ಬೊಳ್ಳಿನ ಸುರ್‌ದ್ ಕಡ್ಡಿನ ಎಳೆಕು. ಮತ್ತೆ ಮಡ್ಲ್‌ನ ಎಡೆಗೆ ಮಡ್ಲ್ ಸೇರ್ಸಿಕಂಡ್ ಹೋಗಿ ಎಸ್ಟ್ ದೊಡ್ಡ ಕಿಡಿಂಜೋಳು ಬೇಕೋ ಅಸ್ಟ್ ಮಡ್ಲ್ ಜೋಡ್ಸೊಕು. ಅಕೇರಿಗೆ ಸುರೂಲಿ ಮಾಡ್ದ ಹಾಂಗೇ ಎರಡ್ ಮಡ್ಲ್‌ನ ಸಿಕ್ಕಿಸಿ ಮುಗ್ಸೊಕು. ಎಲ್ಲಾ ಕಡೆಲೂ ಮಡ್ಲ್ ಲಾಯ್ಕ್‌ಲಿ ಒಂದರ ಒಳಗೆ ಇನ್ನೊಂದು ಸರಿ ಕುದ್ದುಟೋ ಅಂತ ನೋಡಿ ಎಳ್ದ್ ಸರಿ ಮಾಡಿಕಾಂಕು. ಎರಡೂ ಪುಡೆಗೂ ಬೆತ್ತ ಅಲ್ಲರ್ ಬೆದ್ರ್‌ನ ಅಂದಾಜ್ ಒಂದು ಅಂಗುಲದಸ್ಟ್ ಅಗಲ ಇರುವಾಂಗೆ ಉದ್ದಕ್ಕೆ ಸೀಳಿ ಕೀಸಿ ಲಾಯ್ಕ್ ಮಾಡಿ ಕಿಡಿಂಜೋಳುನ ಉದ್ದಕ್ಕೆ ಇಸಿ ಉಳ್ದ ಬೊಳ್ಳಿನ ಮಡ್ಚಿ ಮಡ್ಲ್‌ನ ಸುರಿಯೊಕು. ಆಗ ಕಿಡಿಂಜೋಳು ನೆಟ್ಟಂಗೆ ನಿಲ್ಸಿಕೆ ಆದೆ. ಮತ್ತೆ ಅದರ ಕೊಡಿಗೆ ದಬ್ಬಣಕ್ಕೆ ಬೊಳ್ಳಿ ಸುರ್ದ್ ಹೊಲಿಗೆ ಹಾಕೊಕು. ಹೊಲಿಗೆ ಹಾಕಿ ಆದ ಮೇಲೆ ಉಳ್ದ ಮಡ್ಲ್‌ನ ಕತ್ರ್‌ಸಿ ಬುಡೊಕು.

ಪಣೆ: ಕಿಡಿಂಜೋಳುನ ಹಾಂಗೇ ಪಣೆಂತೇಳುವ (ತಾಳೆ ಜಾತಿಗೆ ಸೇರ್ದ ಮರ) ಮರದ ಸೋಗೆಲಿ ಸ ಮಾಡುವೆ. ಆದರೆ ಇಂತಹ ಕಿಡಿಂಜೋಳುನ ಮೊಡ್ಚಿಕೆ ಆದುಲೆ. ಕಿಡಿಂಜೋಳುನ ಎಲ್ಲಾ ಜಾತಿ ಜನಾಂಗದವು ಮಾಡ್‌ವೆ. ಹೆಳ್ಮಕ್ಕ ಸ ಮಾಡ್ವೆ. ಮಳೆ ಬಾಕನ ಕಿಡಿಂಜೋಳುನ ತಲೆಗೆ ಹಾಕಿ ಸೊಪ್ಪು, ಹುಲ್ಲು, ಗದ್ದೆ ಕೆಲ್ಸ, ತೋಟದ ಕೆಲ್ಸ ಎಲ್ಲ ಮಾಡಿಕಾದೆ.

ಹಿಂದೆನ ಕಾಲಲಿ ಎಲ್ಲೊವುಕೂ ಕಿಡಿಂಜೋಳು ಬೇಕಾಗಿತ್ತ್. ಮಕ್ಕ ಸಾಲೆಗೆ ಹೋಕೆ ಸ ಕಿಡಿಂಜೋಳೇ ಬೇಕಾಗಿತ್ತ್. ಮಳೆಗಾಲ ಚಂಡಿ ಆದ ಕಿಡಿಂಜೋಳುನ ಕತ್ತಲೆಗೆ ಮಲ್ಗಿಕೆ ಮುಂದೆ ಬೆಸೆಗೆಲಿ ಅಲ್ಲರೆ ಒಲೆ ಚಿಂಟೆಲಿ ಇಸುತ್ತಿದ್ದೊ. ಹಾಂಗೆ ಇಸಿರೆ ಬೊಳ್ಪಾಕನ ಕಿಡಿಂಜೋಳು ಪೊರ್ಲುಳ್ ಒಳ್‌ಂಗಿದೆ. ಲಾಯ್ಕ್ ಒಳ್‌ಂಗಿರೆ ಅದ್ ಜಾಸ್ತಿ ಬಾಳ್ತರ ಬಂದದೆ.

ನಮ್ಮ ಹಿಂದೆನ ತಲೆಮಾರ್‌ನವು ಬೇಸಾಯನ ಮಾಡಿಕಂಡ್ ಬಂದೊವು. ಅವು ಚಳಿ, ಮಳೆ, ಗಾಳಿ, ಬಿಸ್ಲ್‌ಂತ ನೋಡದೆ ಇಡೀ ದಿನ ಗೆಯ್ಯೋದೆ ಬೊದ್ಕಾಗಿತ್ತ್. ಆಗಲೇ ಮಳೆಗಾಲ ಗದ್ದೆ, ತೋಟದ ಕೆಲ್ಸಕ್ಕೆ ಕಿಡಿಂಜೋಳು ಮಾಡಿಕಂಡಿರ್‌ವೊ.

ಗೊರ್ಗು (ಗೊರಗ್): ಇದರ ದಪ್ಪ ಸೊಪ್ಪು ಇರುವ ಒಂದು ಜಾತಿ ಮರದ ಸೊಪ್ಪುಂದ ನೆಯಿದ್ ಮಾಡ್ದ್. ಇದರ ಹಾಕಿಕನ್ ಹೋಕನ ಪೆಂಗ್ವಿನ್ ಹಕ್ಕಿಗ ನಡ್ಕಂಡ್ ಹೋದಂಗೆ ಕಂಡದೆ. **(ಎಂ.ಜಿ.ಕೆ.)**



ಕೂಂಟೆಗೆ

ಕೂಂಟೆಗೆ ತೇಳ್ರೆ ನೀರ್ ಓಟೆಲಿ ಮಾಡ್ದ, ಹೆಡೆಗೆನ ಆಕಾರಲೇ ದೊಡ್ಡದಿರುವ, ಕಾಡ್‌ಂದ ಹಟ್ಟಿಗೆ ದರ್ಗ್ (ಒಣ್‌ಗಿ ಬಿದ್ದ ಮರದ ಎಲೆ) ತಾಕೆ ಇರುವ ಸೊತ್ತ್. ಅರೆಗಾಲಲಿ ಕಾಡ್‌ಲಿ ಮರಗಳಿಂದ ಒಣ್‌ಗೆ ಬಿದ್ದ ದರ್ಗ್‌ನ ರಾಶಿ ಮಾಡಿ ಕೂಂಟೆಗೆಲಿ ತುಂಬಿಸಿ ಹೊತ್ತ್‌ಕಂಡ್ ಬಂದ್ ದನಗಳ ಹಟ್ಟಿಗೆ ಇಲ್ಲರ್ ತೋಟಲಿ ರಾಶಿ ಹಾಕುವೆ. ದರ್ಗ್ ಹಗ್‌ರ ಇರ್‍ವ ಕಾರಣ ಬೊಳ್ಳಿಲಿ ಹೊರೆಕಟ್ಟಿ ಹೆಚ್ಚ್ ದರ್ಗ್ ತಾಕೆ ಆದುಲೆ. ಕೂಂಟೆಗೆಲಿ ಆದರೆ ಒತ್ತಿ ಒತ್ತಿ ತುಂಬ್‌ಸಿ ತುಂಬ ದರ್ಗ್ ತಾಕೆ ಆದೆ.

ಹಳ್ಳದ ಕರೆಗಳ್‌ಲಿ ನೀರ್ ಓಟೆ ತೇಳಿ ಸಿಕ್ಕದೆ. ಇದರ ಅಮೆ ಓಟೆಂದ (ಸಣ್ಣ ಜಾತಿನ ಮುಳ್ಳಿಲ್ಲದ ಬೆದ್ರ್) ಮತ್ತೆ ಬೆದ್ರ್‌ಂದ ಸಾ ಮಾಡುವೆ. ಇದರ ತಟ್ಟೆ ದಪ್ಪ ಕಮ್ಮಿ ಇರ್‍ವ ಕಾರಣ ಹಸಿ ವಾಟೆನ ಕಡ್ಡ್ ಕೂಂಟೆಗೆ ಮುಡೆಕೆ ಸುಲಬ ಆದೆ. ಬೆತ್ತ, ಇಂಜಿರ್, ಮಾದ್ರ್ ಬೊಳ್ಳಿಗಳ್‌ಲಿ ಕೂಂಟೆಗೆ ಮಾಡಿಕೆ ಅದ್ರೂ ಸ ಬಾರ ಇದ್ದದೆ. ಆದರೆ ನೀರ್ ವಾಟೆ ಕೂಂಟೆಗೆ ಹಗ್‌ರ ಇರ್ದರ್‌ಂದ ಜಾಸ್ತಿ ದರ್ಗ್ ಹೊತ್ತ್‌ಕಂಡ್ ಬಾಕೆ ಆದೆ.

ಕೂಂಟೆಗೆಲಿ ಎರಡ್ ತರ ಉಟ್ಟು. ಒಂದು ಉದ್ದ ಇರುವ ಕೂಂಟೆಗೆ, ಇನ್ನೊಂದು ಅದಂರ್ದ ಅರ್ದ ದಷ್ಟ್ ಇದ್ದದೆ. ಸಣ್ಣ ಕೂಂಟೆಗೆನ ಕೋಳಿ ಸಾಂಕೊವು ಹೇಂಟೆ ಮತ್ತೆ ಪಿಳ್ಳೆಗಳಿಗೆ ಬತ್ತ/ಅಕ್ಕಿ ಹಾಕಿ ಮುಚ್ಚಿ ಹಾಕಿಕೆ ಬಳ್ಸುವೆ. ಕೂಂಟೆಗೆ ಹಗ್‌ರ ಇರ್ದಂದರ ಹೇಂಟೆ ಕೋಳಿ ಅದರ ಮೊಗ್ಚಿ ಹಾಕಿಕೆ ಬೊತ್ತು ತೇಳಿ, ಕೂಂಟೆಗೆನ ಮೇಲೆ ಕಲ್ಲ್ ಇಲ್ಲರ್ ಬಾರದ ಮರದ ತುಂಡುನ ಇಸುವೆ. ಸಣ್ಣ ಕೂಂಟೆಗೆನ ಮಕ್ಕಳಿಗೆ ದರ್ಗ್ ಹೊರಿಕೂ ಕೊಟ್ಟವೆ. **(ಪು.ಕೆ.ಎ)**



ಕೆಯ್ಯಿ ಹೊರುವ ಪೊಡಿ

ಗದ್ದೆ ಬೇಸಾಯ ಇರೊವು ಗದ್ದೆಲಿ ಕೊಯ್ದು ಕೆಯ್ಯಿನ (ಕೊಯ್ದು ಭತ್ತದ ಪೈರ್) ಮನೆಗೆ ಹೊತ್ತ್‌ಕಂಡ್ ಬಾಕೆ ಈ ಪೊಡಿನ ಬಳ್ಸುವೆ. ಗದ್ದೆಲಿ ಹೆಚ್ಚಾಗಿ ಕೈಯಿನ ಕೊಯ್ಯೊವು ಹೆಳ್ಮಕ್ಕ. ಅದರ ಮನೆಗೆ ಹೊತ್ತುಕಂಡ್ ಹೋವು ಹೆಚ್ಚಾಗಿ ಗಳ್ಮಕ್ಕ. ಅದರ ಹಲ್ಲ್ ಕತ್ತಿಲಿ ಕೊಯ್ದ್ ಸಣ್ಣ ಸಣ್ಣ ಸೂಡಿ ಮಾಡುವೆ. ಆ ಸೂಡಿಗಳ ಈ ಪೊಡಿನ ಮೇಲೆ ಮೇಲೆ ಇಸಿ ಎರಡೂ ಕಡೆಂದ ಬೊಳ್ಳಿಲಿ ಎಲ್ದ್ ಕಟ್ಟಿ, ಕೆಯ್ಯಿನ ಹೊರೆ ಮಾಡುವೆ. ಒಂದು ಹೊರೆಲಿ 20 ರ್‌ಂದ 40 ಸೂಡಿಗ ಇದ್ದವೆ. ಅದ್ ಹೊರುವವನ ತಾಕತ್ತ್‌ಗೆ ಬುಟ್ಟ ವಿಸಯ. ಗದ್ದೆಂದ ಮನೆಗೆ ದೂರ ಇದ್ದರೆ ಕಮ್ಮಿ ಸೂಡಿಗಳ ಹೊರೆ ಮಾಡುವೆ. ಪೊಡಿ ಮೇಲೆ ಇಸಿ ಹೊರೆ ಹೊರ್ದ್‌ಂರ್ದ ಹೊರವವರ ತಲೆಗೆ ಒತ್ತುದುಲೆ ಹಾಂಗೆನೇ ಹೊತ್ತ್‌ಕಂಡ್ ಹೋಕನ ಹೊರೆಂದ ಬೀಳುವ ಬತ್ತ ಪೊಡಿಲೇ ಇದ್ದದೆ. ಪೊಡಿ ಇಲ್ಲದೆ ಹಂಗೆ ಹೊರೆ ಕಟ್ಟಿರೆ ಹೊತ್ತ್‌ಕಂಡ್ ಹೋಕನ ದಾರಿಲಿ ಬತ್ತ ಬಿದ್ದ್ ನಷ್ಟ ಆದೆ.

ಈ ಪೊಡಿ ಬತ್ತ ಬೇಸಾಯ ಮಾಡುವ ಎಲ್ಲರೊಟ್ಟಿಗೂ ಇರ್ದುಲೆ. ಈಗಂತೂ, ನೋಡಿಕೇ ಅಪ್‌ರೂಪ. ಇದರ ಬೆತ್ತಲಿ ನೆಯ್ದ್ ಮಾಡುವೆ. ಬೆತ್ತದ ಸೊತ್ತುಗಳ ಮಾಡೋವು ಯಾರ್ ಬೇಕಾರ್ ಇದರ ತಯಾರ್ ಮಾಡಕ್. **(ಪು.ಕೆ.ವಿ)**



ಕೊಮ್ಮೆ

ಬತ್ತ, ರಾಗಿ ಹಾಕಿಸುವ ದೊಡ್ಡ ಕುಕ್ಕೆ. ತುಳುಲಿ ಕೊಮ್ಮೆ, ಮಲೆಯಾಳಂಲಿ, ಬ್ಯಾರಿ ಬಾಸೆಲಿ ಕುರಿಯಂತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲೆಲ್ಲ ಇದ್ದದೆ. ಇದ್ ಬೆದ್ರ್‌ನ ಬಾಸ್ಲಿ ಅಲ್ಲರ್ ಬೆತ್ತದ ಬಾಸ್ಲಿ ಮಾಡ್ದ ಕುಕ್ಕೆ. ಇದರ ಮಾಯ್ಲರ್, ಅಜಲರ್, ಮಲೆಕುಡಿಯರ್ ಮಾಡುವೆ.

ಇದರ ಒಳಗೆ ಗಾಳಿ ಹೋಗದ ಹಾಂಗೆ ಒಳ ಪುಡೆಗು ಹೊರ ಪುಡೆಗೂ ಸೆಗ್ಣಿ ಉಜ್ಜಿ ಲಾಯ್ಕ್ ಮಾಡುವೆ. ಸೆಗಣಿನ ಒಟ್ಟಿಗೆ ಮೊಣ್ಣುನ ಬೆರ್ಸುವೆ. ಇದರ್‌ಲಿ ಬತ್ತ, ರಾಗಿ, ಅಕ್ಕಿ ಯಾವ್ದ್ ಬೇಕಾರ್ ಹಾಕಿಸಿ ಮುಚ್ಚಿಸಿರೆ ಎಷ್ಟು ದಿನಕೂ ಹಾಳಾಕಿಲೆ. ಬೆಪ್ಪಂಗೆ –ಬೆಚ್ಚಂಗೆ ಇದ್ದದೆ. ಇದರ್‌ಲಿ ಸುಮಾರ್ 5 ಕಳಸೆ ಅಕ್ಕಿ/ಬತ್ತ ಹಿಡ್ದದೆ. ಬೇಸಾಯ ಮಾಡುವ ಎಲ್ಲಾ ಊರ್‌ಲೂ ಇದ್ ಇದ್ದದೆ. ಇದರ ನೊಡೂಲಿ ದೊಡ್ಡದಾಗಿ ಕಾಂಬೊದರ್‌ಂದ ದೊಡ್ಡ ಹೊಟ್ಟೆವುಕೆ ಕೊಮ್ಮೆ ಬಂದುಟುತ ತಮಾಸೆ ಮಾಡ್ದು ಉಟ್ಟು. **(ಎಂ.ಜಿ.ಕೆ.)**

ಕೊರಿಂಗೆ

ನಾರ್ ಜಾತಿ ಮರಂದ ಕೊರಿಂಗೆ ಮಾಡ್‌ವೆ. ಕೆಲವು ಜನಂಗ ಬೈನೆ ಹಾಳೆನ ವಣ್ಗಿಸಿಯೂ ಮಾಡ್‌ವೆ. ಮರಂದ ಮಾಡ್ದ ಕೊರಿಂಗೆ ಹೆಚ್ಚ್ ಸಮಯ ಬಾಳ್ತರ ಬಂದದೆ. ಇದ್ ನೋಡ್ಕನ ಕೈ ಮರ್‍ಗ್ಗಿಲ್‌ನಂಗೆ ದೂರಕೆ ಕಂಡದೆ. ಆದರೆ ಇದರ ಬಾಯಿಪುಡೆ ನೀರ್ ಚೊಂಪುಕೆ ಸುಲಬ ಆವಂಗೆ ಬಾಜಿಲಿ ಕೆತ್ತಿ ಮಾಡ್‌ವೆ. ಹಿಂದೆ ಅಡಿಕೆ ತೋಟಕೆ ಬುಡ್ ನೀರ್ ಇರ್‌ವ ಕಡೆ ನೀರ್ ಚೊಂಪಿಕೆ ಉಪಯೋಗ ಆತಿತ್. ಡ್ರಿಪ್, ಸ್ಪ್ರಿಂಕ್‌ಲರ್ ಬಂದ ಮೇಲೆ ಇದ್ ನಿತ್ ಹೋತ್. ಕೆಲವು ಮನೆಗಳ್‌ಲಿ ಕೊಟೆಗೆ ಅಟ್ಟಲಿ ಹಳೆ ಕೊರಿಂಗೆಗ ಕಂಡವೆ. ಈ ಕೊರಿಂಗೆಗೆ ಎದ್ರ್‌ಲಿ ಒಟ್ಟೆ ಮಾಡಿ ಬೊಳ್ಳೀ ಕಟ್ಟಿ ಎಡ್ದ ಕೈಲಿ ಹಿಡ್ದ್ ಬಲ್ದ ಕೈಲಿ ಕೊರಿಂಗೆನ ಹಿಡಿಲಿ ಹಿಡ್ದ್ ನೀರ್‌ನ ಚೋಂಪುದು ಒಂದು ಚಾಲಾಕ್‌ನ ಕೆಲ್ಸ. ಅಬ್ಬೆಸ ಮಾಡ್ತ್‌ಲೆತ್ತಾರ್ ಕೊರಿಂಗೆಲಿ ನೀರ್ ಚೋಂಪಿಕೆ ಸಾದ್ಯನೆ ಇಲ್ಲೆ. ಹಿಂದೆನವು ಸುಲಬ ರೀತಿಲಿ ಯಾಂತ್ರಿಕ ಉಪಯೊಗನ ಮಾಡ್ತಿದ್ದೊತ ಹಿಂಗೆ ನಮ್ಮ ಗಮನಕ್ಕೆ ಬಂದದೆ. ದೊಡ್ಡ ಮಟ್ಟಲಿ ಚೊಂಟೆಲಿ ನೀರ್ ಮೊಗ್ಚುದು ಹಿಂದೆ ಇತ್. ಕೊರಿಂಗೆ ಅದರ ಸುಲಬ ಮತ್ತೆ ಸರಳ ರೂಪ. **(ಕು.ಶಿ.)**



ಚೊಂಟೆ ಮರ್ಗಿಲ್

ನೀರ್ ಮೇಲೆ ಎತ್ತಿ ತಾಕೆ ಆವ ಒಂದು ಸೊತ್ತು. ಇದ್ಕೆ ಚೊಂಟೆದ್ ಮರ್ಗಿಲ್‌ತ ಹೇಳ್‌ವೆ. ಈ ಮರ್ಗಿಲ್‌ನ ಸತ್ತ ಚಾಳೆ, ಬೈನೆ ಅಲ್ಲರ್ ತಾಳೆ ಮರದ ಬುಡನ (ನೆಲದ ಒಳಗೆಂದಲೇ) ಕಡ್ದ್ ಕೆತ್ತಿ ಮಾಡ್ದು. ಈ ಮರ್ಗಿಲ್‌ಗೆ ಸತ್ತ ಮರ ಆದರೆ ಅದರ ಒಳಗಿದ್ದದರ ತೆಗೆಕೆ ಸುಲಾಬ ಆದೆ. ಮರ್ಗಿಲ್‌ನ ನಡುಲಿ ಅಡಿ ಪುಡೆಗೆ ಒಟ್ಟೆ ಮಾಡಿ ಅದ್ಕೆ ಮರದ ತುಂಡುನ ಗೂಟದ ಹಾಂಗೆ ಹುಗ್ಸಿ ಗಟ್ಟಿ ಮಾಡಿಕಾಂಕು. ಅದರ ಒಳ ಪುಡೆಲಿ ಗೂಟಕ್ಕೆ ಸುತ್ತೊಳು ಕೈ ತಾಂಗ್‌ನ ಹಾಂಗೆ ಇಸಿ ಗಟ್ಟಿ ಮಾಡಿಕಾಂಕು. ಆ ಗೂಟದ ಮರದ ತುಂಡುನ ಮರ್ಗಿಲ್‌ನ ಬಾಯಿಂದ ಹಞ ಮೇಲೆಂದ ತುಂಡು ಮಾಡಿ ಅದ್ಕೆ ಒಟ್ಟೆ ಮಾಡಿ ಕಂಡವೆ. ಇದರ ಚಿಮುಣೆಣ್ಣೆ ಡಬ್ಬಿಂದಲೂ ಮಾಡಿಕಾದೆ. ಇದರ ಮಾಡಕರ್ ಮರದ ಆಚಾರಿಗಳೇ ಬೇಕು.

ಗುಂಡಿಲಿ ಇರುವ ನೀರ್‌ನ ಮೇಲೆ ಎತ್ತಿ ತಾಕೆ ಹಿಂದೆನವು ಚೊಂಟೆಂತೇಳುವ ಒಂದು ಸೊತ್ತುನ ಮಾಡಿಕಂಡಿದ್ದ. ಆ ಚೊಂಟೆಲಿ ನೀರ್‌ನ ಮೇಲೆ ಎತ್ತಿ ತರೋಕುಂತಾದರೆ ಅದ್ಕೆ ಮರ್ಗಿಲ್ ಬೇಕು. ಮೊನ್ಸರ್ ಬೇಸಾಯ ಮಾಡಿಕೆ ಸುರು ಮಾಡಿಕನವೇ ಕಲ್ತಿರುವ ಕೆಣಿ. ಹಳ್ಳಿಲಿ ಅಲ್ಲಲ್ಲಿ ಚೋಡಿ, ಹಳ್ಳ ಪಳ್ಳಗ ಎಲ್ಲ ಇದ್ದದೆ. ಅದರ್‌ಂದ ನೀರ್ ಎತ್ತರದ ಜಾಗೆಗೆ ಹೊತ್ತ್‌ಕಂಡ್ ಹೋಕೆ ಹಞ ಬಂಗ ಆದೆ. ಅದ್ಕೆ ಈ ಕೆಣಿ ಕಲ್ತಿರೋಕು.

ಹಳ್ಳ ಪಳ್ಳದ ನಡೂಗೆ ಆಗುವ ಹಾಂಗೆ ಅದರ ಎರಡೂ ಕರೆಲಿ ಕಂಬ ಹಾಕಿ ಅದರ ಕೊಡಿಲಿ ಅದ್ಕೆ ಅಡ್ಡಕ್ಕೆ ಒಂದು ಮರ ಅಲ್ಲರ್ ಕೊಮ್ಮುನ ಕಟ್ಟೋಕು. ಅಲ್ಲಿಂದ ಎತ್ತರದ ಪುಡೆಗೆ ಒಂದು ತೋಳುನಸ್ಟ್ ಅಗಲಕ್ಕೆ ಪಾಲ ಹಾಕೊಕು. ಪಾಲದ ಕರೆಲಿ ಒಂದು ದಂಬೆನ ಎತ್ತರಲಿರುವ ಮತ್ತೊಂದು ಕಡೆಗೆ ಜೋಡ್ಸುವೆ. ಮತ್ತೆ ಎತ್ತರದ ಪುಡೆಲಿ ಹಳ್ಳದ ಕರೆಲಿ ಎತ್ತರದ ಎರಡ್ ಕಂಬ ಹಾಕಿ ಅದ್ಕೆ ಅಡ್ಡ ಕಟ್ಟೊಕು. ಆ ಅಡ್ಡಕ್ಕೆ ನಡೂಲಿ ಉದ್ದದ ಕೊಮ್ಮು ಅಲ್ಲರ್ ಸಪೂರದ ಮರದ ಕಂಬನ ಇಸಿ ಜಾರದ ಹಾಂಗೆ ಕಟ್ಟೊಕು. ಆ ಅಡ್ಡ ಕಂಬದ ಮತ್ತೊಂದು ಕೊಡಿಗೆ ಬಾರದ (ತೂಕ) ಕಲ್ಲ್ ಕಟ್ಟೊಕು. ಕಲ್ಲ್ ಕಟ್ಟಿಕನ ಅದರ ಮತ್ತೊಂದು ಕೊಡಿ ಮೇಲೆ ಹೋಕು. ಆಗ ಅದ್ ತ್ರಾಸ್‌ನ ಹಾಂಗೆ ಕಂಡದೆ. ಮೇಲೆ ಹೋದ ಕೊಡಿಗೆ ಸಪೂರದ (ಓಟೆ ಇಲ್ಲರ್ ಬೆದ್ರ್‌ಂದ ಮಾಡ್ದ) ಗಳೆನ ನೇತಾಡುವ ಹಾಂಗೆ ಕಟ್ಟೊಕು. ಆ ಗಳೆ ಎಳೆಕನ ನೀರಿಗೆ ತಾಂಗುವ ಹಾಂಗೆ ನೇತಾಡಿಕನ್ ಇರೋಕು. ನೇತಾಡುವ ಗಳೆನ ಕೊಡಿಗೆ ಮರ್ಗಿಲ್ ಅಲ್ಲರ್ ಡೊಬ್ಬಿನ ನೊಡುಲಿರುವ ಮರದ ಒಟ್ಟೆಗೆ ಕೀಲ್ ಹಾಕಿ ಜೋಡ್ಸಿಕಾಂಕು.

ಕಲ್ಲ್‌ನ ಬಾರಕ್ಕೆ ಚೊಂಟೆನ ಕಡೆ ನೆಲಕ್ಕೆ ತಾಂಗಿದೆ. ಹಳ್ಳ ಅಲ್ಲರ್ ಚೋಡಿನ ನಡುಗೆ ಎತ್ತರಲಿರುವ ಪಾಲಲಿ ನಿಂತ್ ಗಳೆನ ಎಳ್ದ್ ನೀರಿಗೆ ಕಂತ್ಸಿ ಮರ್ಗಿಲ್‌ಗೆ ನೀರ್ ತುಂಬುಸೊಕು. ನೀರ್ ತುಂಬಿದ ಮೇಲೆ ಏತನ ಮೇಲೆ ಎತ್ತೊಕು. ಮೇಲೆ ಎತ್ತಿಕೆ ಬಜ ಆದುಲೆ ಯಾಕೆಂತೇಳಿರೆ ಕಡೆಲಿ ಕಲ್ಲ್‌ನ ಬಾರಕ್ಕೆ ಅದ್ ಸುಲಾಬಲಿ ಮೇಲೆ ಹೋದೆ. ನೀರ್ ಮೇಲೆ ಬಾಕನ ಮರ್ಗಿಲ್‌ನ ಬೊಗ್ಗಿಸಿ ದಂಬೆಗೆ ನೀರ್‌ನ ಮೊಗ್ಚೊಕು. ನೀರ್ ದಂಬೆಲಿ ಹರ್ದ್ ಹೋಗಿ ಅದರ ಕೊಡಿಲಿ ಮಾಡ್ದ ಗುಂಡಿಗೆ ಬಿದ್ದದೆ. ಅಲ್ಲಿಂದ ಮತ್ತೆ ಬೇಕಾದಲ್ಲಿ ತೆಕನ ಹೋಗಿ ಹೊಯ್ಯಾಂಕ್. ಇಂತದೇ ಮರ್ಗಿಲ್‌ಲಿ ಹಿಂದೆ ಅಂಗಡಿಗಳಿಲಿ ಉಪ್ಪು ತುಂಬಿಸಿ ಇಸ್‌ತಿದ್ದೊ. **(ಎಂ.ಜಿ.ಕೆ.)**



ಜೇನ್ ಯಂತ್ರ

ಜೇನ್ ಎರಿನ ಕೈಂದಳೇ ಹಿಂಡುದು ಹಳೇ ಪದ್ದತಿ. ಹುತ್ತಂದ, ಮಡ್ಕೆಂದ, ಮರದ ಪೋಟೆಂದ (ಒಟ್ಟೆಂದ) ತೆಗೆವ ತುಡುವೆ ಜೇನ್ ಎರಿ, ದೊಡ್ಡ ಜೇನ್‌ಎರಿ (ಹೆಜ್ಜೇನ್‌ಎರಿ), ಕೋಲ್ ಜೇನ್‌ಎರಿ, ಮುಜೆಂಟಿ ಜೇನ್ ಎರಿನೆಲ್ಲಾ ಈಗಲೂ ಹಿಂಡಿವೆ. ಆದರೆ ತುಡುವೆ ಜೇನ್‌ನ ಪೆಟ್ಟಿಗೆಲಿ ಸಾಂಕಿವೆ. ಹೊಸ ಮಾದರಿಲಿ ಸಾಂಕುವ ಈ ಪದ್ದತಿ ಸುರಾಗಿ ತುಂಬಾ ವರ್ಸ ಆಗುಟು.

ಯಾಗ ಪೆಟ್ಟಿಗೆಲಿ ಜೇನ್ ಸಾಂಕುವ ಪದ್ದತಿ ಬಾತೋ ಅದರೊಟ್ಟಿಗೆ ಯಂತ್ರನೂ ಬಂದದ್ ಬಾರೀ ಒಳ್ಳೆದಾವುಟು. ಕಬ್ಬಿಣದ ತಗಡ್, ಕೀಜ್‌ನ(ಅಲ್ಯುಮಿನಿಯಂ) ತಗಡ್‌ಂದೆಲ್ಲಾ ತಯಾರ್ ಮಾಡ್ದ ಜೇನ್ ಯಂತ್ರ ತುಂಬ ಅನುಕೂಲ ಮಾಡಿಟು. ಸುಮಾರ್ ಒಂದೂ ಕಾಲಡಿ ಎತ್ತರದ ಯಂತ್ರದ ಬಾಯಿ ಒಂದಡಿ ಅಗಲ ಇದ್ದದೆ. ಆ ಯಂತ್ರದ ಸರೀ ನಡುಲಿ ಚಕ್ರಕ್ಕೆ ಕೂಡಿ ಕಂಡ ಒಂದ್ ಹಿಡಿ ಹೊರಗೆ ಇದ್ದದೆ. ಅದ್ ಕಬ್ಬುಣದಾಗಿದ್ದದೆ. ಮತ್ತೆ ಆ ಚಕ್ರದ ಹಇ ಕೆಳಗೆ ಐದ್ ಒಳಪಟ್ಟಿ ಇದ್ದದೆ. ಆ ಪಟ್ಟಿಯೊಳಗೆ ಪೆಟ್ಟಿಗೆಲಿ ಸಾಂಕಿದ ಜೇನ್ 'ಪ್ರೇಮ್'ನ ಇಸಿವೆ. ಮತ್ತೆ ಚಕ್ರದ ಹಿಡಿನ ತಿರ್ಗಿಸಿರೆ ಗರ್‌ಗರ್‌ತ ಸದ್ದ್ ಮಾಡಿಕಂಡ್ ತಿರ್ಗಿದೆ. ಹಂಗೆ ತಿರ್ಗಕನ ಒಳಗೆನ ಗಾಳಿಗೆ ಜೇನೆಲಿ ಇರ್‌ವ ಜೇನ್ ಸೊರ್‌ರ್ತ ಕೆಳಗೆ ಇಳ್ದದೆ. ಯಂತ್ರದ ಕೆಳಗೆನ ತೂಬುಂದ ಜೇನ್ ಒಂದ್ ಪಾತ್ರೆಗೆ ಬಿದ್ದದೆ. ಪಾತ್ರೆಗೆ ಬಾಯಿ ಕಟ್ಟುದೋ – ಇಲ್ಲರೆ ಅರ್ವೆನ ಇಸಿರೆ ಸುದ್ದ ಆದ ಜೇನ್ ಸಿಕ್ಕಿದೆ.

ಪೆಟ್ಟಿಗೆ ಜೇನ್ ತೆಗೆದು ಹಿಂಬೊತ್ತ್ ನಾಕ್ ಗಂಟೆ ಮೇಲೆ ಹಇ ಬಿಸ್ಲ್ ಕಾರ ಕಮ್ಮಿ ಆಕು. ಪೆಟ್ಟಿಗೆದ್ ಮುಚ್ಚೊಳ ತೆಗ್ದ್ ಜೇನ್ ಎರಿನ ಮೆಲ್ಲ ಮೆಲ್ಲ ತಟ್ಟೊಕು. ಎಲ್ಲಾ ಎರಿಗಳ ಹೊರಗೆ ಇಸಿಕಂಡ್ ಹರ್ತ ಚಾಕ್‌ಂದ (ಚೂರಿ) ಎರಿನ ಹೊರ ಬಾಗನ ತೆಳೂ ಆಗಿ ಕೀಸೊಕು. ಮತ್ತೆ ಯಂತ್ರದೊಳಗೆ ಇಸಿ ಸುತ್ತ್‌ಸಿರೆ ಆ ಎರಿಲಿದ್ದ ಜೇನ್ ತೊಟ್ಟು ಇಲ್ಲದಂಗೆ ಬಿದ್ದದೆ. ಎರಿಗೂ ಪೆಟ್ಟಾದುಲೆ, ಜೇನೂ ಸುದ್ದ ಆಗಿದ್ದದೆ. ನೆಳ (ನೊಣ)ಗಳಿಗೂ ಪೆಟ್ಟಾದುಲೆ. ಇಂದ್ ಸ್ಟೀಲ್‌ದ್ ಜೇನ್‌ಯಂತ್ರ ಬಂದುಟು. (**ಬಾ.ಜೋ.**)



ತೊಡಜ್

ಕತ್ತಿ ಕೆಲ್ಸ ಮಾಡವು ಸೊಂಟಕ್ಕೆ ಕಟ್ಟಿಕಂಡ 'ಕೊಕ್ಕೆ' ನ ತೊಡಜ್ ಇಲ್ಲರ್ ಚೊಡೊಂಕ್ ತೇಳಿ ಹೇಳುವೆ. ಕತ್ತಿ ನೇಕೆ ನಂಗೆ ಸೊಂಟದ ಕೊಕ್ಕೆಗೆ ಕತ್ತಿನ ಸಿಕ್ಕಿಸಿ ಕಂಡವೆ. ಅದ್ ಕಬ್ಬಿಣದ ಕೊಕ್ಕೆ, ಸೊಂಟದ ಸರೀ ನಡುಲಿರುವಂಗೆ ಕಟ್ಟಿಕಂಡವೆ. ಹೆಚ್ಚಾಗಿ ಕೊಕ್ಕೆ ಕತ್ತಿನೇ ಸೆಕ್ಕಿಕಂಬೊದು ಜಾಸ್ತಿ. ಬೇಲಿ ಗಿಡ ಕಡೆಕನ ಬೇಲಿ ಕಟ್ಟಕನ ಒಮ್ಮೆ ಕಡೆದು, ಹಿಂದೆ ಸಿಕ್ಕುಸುದು. ಇಲ್ಲರೆ ಯಾವ್ದಾರ್ ಮರಕ್ಕೆ ಕೊಡ್ಪಿವೆ. ಅಥವಾ ಬೇಲಿ ಕರೆಲಿಯೋ ನೆಲವೋ ಬಡ್ಕತ ಕತ್ತಿನ ಹಾಕಿ "ಎಲ್ಲಿ ಹಾಕಿ ಬುಟ್ಟೆಪ್ಪಾ" ಕತ್ತಿನ ಹುಡ್ಕುದೇ ದೊಡ್ಡ ಕೆಲ್ಸ ಆಗಿ ಬುಟ್ಟದೆ. ಕೆಲ ಸರ್ತಿ ಕತ್ತಿ ಸಿಕ್ಕುದೇಲೆ. ತೊಡಜ್‌ತ ಇದ್ದರೆ ಕತ್ತಿ ಎಲ್ಲಿನೂ ತೊಪ್ಪಿ ಹೋದುಲೆ. ಸುಳ್ಯ ಬಾಗಲಿ ಇದ್ಕೆ ಚೊಡೊಂಕು ತೇಳಿಕದ್ದವೆ. ಹಟ್ಟಿಗೆ ಸೊಪ್ಪು ತಾಕೆ, ಮನೆಗೆ ಸೌದೆ ತಾಕೆ ಕಾಡಿಗೆ ಹೋಕನ ಚೊಡೊಂಕು ಕತ್ತಿನ ಸಿಕ್ಕಿಸಿಕಂಡ್ ಹೋದವೆ. ಬೇಲಿ ಕಟ್ಟಿಕನ ಕತ್ತಿನ ಸಿಕ್ಕಿಸಿಕೆ ಚೊಡುಂಕು ಬೇಕಾದೆ.

ಮರ ಹತ್ತಿ ಕಳ್ಳ್ ಇಳ್ಸವು ಕೊಂಬು ಕೊಯ್ಯಕೆ ಉಪಯೋಗ ಮಾಡ್‌ವ ಕತ್ತಿನ ತೊಡಜ್‌ಲಿ ಇಸಿಕಂಡೆ ಮರ ಹತ್ತಿವೆ, ಇಳ್ದವೆ. **(ಬಾ.ಜೋ., ಪು.ಕೆ.ವಿ.)**

ನೇಗ್‌ಲ್

ಗದ್ದೆ ಬೇಸಾಯ ಮಾಡಿಕಾಕನ ಎತ್ತ್ ಅಲ್ಲರ್ ಕೋಣಗಳ ಹೆಗ್ಲಿಗೆ ಇಸಿದ ನೋಗದ ನಡುಗೆ ಕಟ್ಟುವ ಸೊತ್ತು. ತುಳುಲಿ ಇದ್ಕೆ ನಾಯೆರ್ ಅಂತ ಹೇಳುವೆ.

ಇದರ ಪ್ರಯೋಜನ ಗದ್ದೆ ಬೇಸಾಯ ಮಾಡುವ ಎಲ್ಲಾ ಕಡೆಲೂ ಇದ್ದದೆ. ಆದರೆ ಊರುಂದ ಊರಿಗೆ ಇದರ ರೂಪಲಿ ಯತ್ಯಾಸ ಕಂಡದೆ. ದಕ್ಷಿಣ ಕನ್ನಡ ಮತ್ತೆ ಉಡುಪಿ ಜಿಲ್ಲೆಲಿ ನೇಗಿಲ್ ಹೀಂಗೆ ಇದ್ದದೆ. ಇದ್ ಗದ್ದೆಗೆ ಎತ್ತ್ ಕಟ್ಟಿಕೆ ಸುರು ಆಕನವೇ ಇದ್ದ ಸೊತ್ತು. ಇದರ್‌ಲಿ ಎರಡ್ ಬಾಗ ಉಟ್ಟು. ಒಂದು ನೊಗಕ್ಕೆ ಜೋಡ್ಸುವ ಉದ್ದದ ಮರದ ಬಡಿಗೆ. ಇದ್ ಅಂದಾಜ್ ಒಂದೂವರೆ ಮಾರ್ ಉದ್ದ ಇದ್ದ್ ಕೈ ತೋಳುಂದ ಹಿಳಿ ಸಪೂರ ಇದ್ದದೆ. ಇನ್ನೊಂದು ಸುಮಾರ್ ಒಂದು ಮಾರುದ್ದದ ನೇಗಿಲ್. ನೇಗಿಲ್‌ನ ಇದ್ಕೆ ಜೋಡ್ಸುವೆ. ನೇಗಿಲ್ ಕೊಡಿಲಿ ದೂಂಚಿ ಇದ್ದ್ ಒಸಿ ಒಸಿಯೇ ಒಂದೂವರೆ ಗೇಣ್‌ನಷ್ಟು ಉದ್ದಕ್ಕೆ ಅಗಲ ಆಗ್ತಾ ತ್ರಿಕೋನಾಕಾರಕ್ಕೆ ಹೋದೆ. ಮತ್ತೆ ಸಪೂರ ಆಗ್ತಾ ಹೋಗಿ ಕಡೆಲಿ ಹಿಳಿ ಬೊಗ್ಗಿಸಿ ಹಿಡೆಕೆ ಕೈನ ಹಾಂಗೆ ಮಾಡುವೆ. ಕೊಡಿನ ಅಡಿ ಪುಡೆಲಿ ದಂಬೆನ ಹಾಂಗೇ ಕೆತ್ತುವೆ. ಮೇಲ್ಪುಡೆಲಿ ಒಂದೂವರೆ ಗೇಣ್‌ನಷ್ಟು ಕೆತ್ತಿ ಒಂದೂವರೆ ಅಂಗುಲದಷ್ಟು ಚಪ್ಪಟೆ ಮಾಡುವೆ. ಇದ್ ಪಣ್ಣೋಳು ಇಸಿಕೆ. ಪಣ್ಣೋಳುಂತೇಳಿರೆ ಕಬ್ಬಿಣಂದ ಉಳಿನ ಹಾಂಗೆ ತೆಳ್ಳಂಗೆ ಮಾಡ್ದ ಒಂದು ಸೊತ್ತು. ಇದರ ಕೊಡಿ ಉಳಿನ ಬಾಯಿನ ಹಾಂಗೆ ಸರ್ತ ಇದ್ದದೆ. ಕಡೆಲಿ ಒಂದು ಅಂಗುಲದಷ್ಟು ಸಪೂರ ಮಾಡಿ ಬೊಗ್ಗಿಸಿ ಚೂಪು ಇದ್ದದೆ. ನೇಗಿಲ್‌ನ ಕೊಡಿಗೆ ಪಣ್ಣೋಳುನ ಕೊಡಿ ಇಸಿ ಕಡೆಲಿರುವ ಚೂಪುನ ನೇಕಿಲ್ಗೆ ಹೊಡ್ದ್ ಇಸುವೆ. ಪಣ್ಣೋಳುನ ಕೊಡಿಲಿ ಹಿಳಿ ಬುಟ್ಟು ಒಂದು ಒಟ್ಟೆ ಇದ್ದದೆ. ಆ ಒಟ್ಟೆಗೆ ಆಣಿ ಹೊಡ್ದವೆ.

ಇದರ ಮರದ ಆಚಾರಿಗ ಮಾಡುವೆ. ಬೇರೆ ಜನಂಗಸ ಮಾಡೊವು ಒಳ. ನಾರ್ ಇರುವಂತಾ ಮರಲಿ ತೇಳಿರೆ ಗೇರ್ದಮರ, ಕಾಯರ ಮರ ಇಂತದರ್ಲಿ ಮಾಡುವೆ. ಗದ್ದೆಲಿ ಎತ್ತ್ ಕಟ್ಟಿಕೆ ನೊಗ ಇಸಿದ ಮೇಲೆ ನೇಗಿಲ್ ಜೋಡ್ಸಿ ಎತ್ತ್‌ಗಳ ಹೊಡ್ದವೆ. ಆಗ ನೇಗಿಲ್‌ನ ನೆಲಕ್ಕೆ ಕುತ್ತುವೆ. ಎತ್ತ್‌ಗ ಎಳೆಕನ ನೇಗಿಲ್‌ಲಿ ಮೊಣ್ಣ್ ಸೀಳಿ ಮೇಲೆ ಬಂದದೆ. ಆಗ ಮೊಣ್ಣ್ ನುಸುಳಾದೆ. ಗದ್ದೆಗೆ ಹಾಕಿದ ಸೊಪ್ಪು, ಗೊಬ್ಬರ ಎಲ್ಲ ಅಡಿ ಮೇಲಾದೆ. ಮತ್ತೆ ಮತ್ತೆ ಹೀಂಗೇ ಮಾಡಿ ಮೊಣ್ಣ್‌ನ ಹದ ಮಾಡುವೆ. ಆಗ ನೇಜಿ ನಡಿಕೆ ಅಲ್ಲರ್ ಬಿತ್ತ್ ಬಿತ್ತಿಕೆ ಒಳ್ಳೆದ್ ಆದೆ. ಟ್ರಾಕ್ಟರ್, ಟಿಲ್ಲರ್ ಬಂದ ಮೇಲೆ ನೊಗ ನೇಗಿಲ್‌ಗ ಅಟ್ಟಕ್ಕೆ ಸೇರೆಲೋ. **(ಎಂ.ಜಿ.ಕೆ.)**



ನೇಗ್ಲ್

ನಮ್ಮ ಪರಂಪರೆಂದ ಬಂದ ನೇಗ್ಲ್‌ಗ ಎರಡ್. ಒಂದ್ ತುಳು ನೇಗ್ಲ್. ಎರಡ್ನೆದ್ ಕುಂಟೆ ನೇಗ್ಲ್. ಸಾಮಾನ್ಯಾಗಿ ತುಳು ನೇಗ್ಲ್‌ನೇ ಉಪಯೋಗ ಮಾಡ್ದು ಜಾಸ್ತಿ.

ತುಳು ನೇಗ್ಲ್‌ನ ಕುಂಬುಳಿ ಮರ ಮತ್ತೆ ನೊಗ ಮರಂದ ಮಾಡಿವೆ. ಈ ಮರಗ ಹಗುರ ಮತ್ತೆ ಬಾಳಿಕೆ ಜಾಸ್ತಿ. ಈ ನೇಗ್ಲ್‌ನ ಒಂದೇ ಮರದ ತುಂಡುನ ಬಡ್ಜಿ ಮಾಡಿವೆಯಲ್ಲದೆ ಬೇರೆ ಮರನ ಜೋಡ್ದುದ್ಲೆ. ಅದೇ ಆ ನೇಗ್ಲ್‌ದ್ ವಿಸೇಸ. ಆದರೆ ಉಯ್ಯಪಾರ್ ಮಾತ್ರ ಅಗತ್ಯವಾಗಿ ಬೇರೆದೇ ಬೇಕಾದೆ. ಉಯ್ಯಪಾರ್ ತೇಳ್ರೆ ನೇಗ್ಲ್‌ಂದ ನೊಗಕ್ಕೆ ಸೆಕ್ಕುವ ಮರ. ನೇಗ್ಲ್ ತುದಿಗೆ ಕಬ್ಬಿಣದ ಗುಳ ಇದ್ದದೆ. ಗುಳನ ಮಾತ್ರ ಸಂತೆಂದ ತಂದದೆ. ಬಾಕಿ ಎಲ್ಲನೂ ರೈತನೇ ಮಾಡಿಕಂಡದೆ.

ಕುಂಟೆ ನೇಗ್ಲ್‌ನ ತಡ್ಸಿಲ್ ಮರಂದ ಮಾಡಿವೆ. ಆ ಮರ ತೂಕದ್ದ್. ನೇಗ್ಲ್ ತುಳು ನೇಗ್ಲಂಗೆ ಅಗಲ ಇರ್ದುಲೆ. ಕುಂಟೆ ನೇಗ್ಲ್‌ಲೆ ಮೂರ್ ಬೇರೆ ಬೇರೆ ಬಾಗಗ ಇದ್ದವೆ. ಅದರ ಹಿಡಿನ 'ಮೇಣ'ತ ಕರ್ದವೆ. ಮೇಣನ ನೇಗ್ಲ್‌ಗೆ ಜೋಡ್ಸೊಕು. ನೇಗ್ಲ್‌ಂದ ಉಯ್ಯಪಾರ್ ಬೇರೆ ಸೇರ್‍ಸೊಕು. ಗುಳ ಹೆಂಗೂ ಕಬ್ಬಿಣದೇ ಆಗಿದ್ದದೆ.

ಉಯ್ಯಪಾರ್ ತೇಳ್ರೆ ಮರದ ಒಂದ್ ಪಟ್ಟಿ. ಬೈನೆ ಮರದ ಪಟ್ಟಿ ಗಟ್ಟಿ. ಆದರೆ ಆ ಮರ ಎಲ್ಲ ಕಡೆ ಇರ್ದುಲೆ. ಹಂಗಾಗಿ ಬೇರೆ ಯಾವ್ದಾರ್ ಮರನ ರೀಪರ್‌ನಂಗೆ ಮಾಡಿ ಮೂರ್‍ನಾಕ್ ಚೌಕ ಮಾಡಿ ನೇಗ್ಲ್‌ಗೆ ಸೇರ್ಸಿವೆ. ನೇಗ್ಲಿಗೆ ಸೇರ್‌ವಲ್ಲಿ ಒಂದ್ ಆಪು ಹೊಡ್ದ್ ಗಟ್ಟಿ ಮಾಡಿವೆ. ನೇಗ್ಲ್‌ಂದ ಹೊರಟ ಉಯ್ಯಪಾರ್‌ನ ನೊಗದ ನಡುಗೆ ಬಳ್ಳಿಗೆ ಸೆಕ್ಕಿವೆ. ನೇಗ್ಲ್ ಆಳಕ್ಕೆ ಇಳೆದು, ಮೇಲೆ ಹೋಗುವಂಗೆ ಮಾಡೊಕುತಾದರೆ ಉಯ್ಯಪಾರ್ ಕರ್ಚೆಗೆ ಮುಕ್ಯ. ಆಳಕ್ಕೆ ನೇಗ್ಲ್ ಇಳೆಕುತಾದರೆ ಹಿಂದೆನ ಕರ್ಚೆಗೆ ನೊಗದ ಬಳ್ಳಿನ ಸೆಕ್ಕಿರೆ ಆತ್.

ರೈತ ಮನ್ಸ್ ಬಂದಂಗೆ ಎತ್ತ್ ಕಟ್ಟುದ್ಲೆ. ಒಂದೋ ಉಗಾದಿ ದಿನ ಶಾಸ್ತ್ರಕ್ಕೆ ಗದ್ದೆನ ಒಂದ ದೂರ ಹೂಡಿವೆ. ಅದ್ ಬುಟ್ಟರೆ ಬಿಸು ಸಂಕ್ರಮಣದಂದ್ ಗದ್ದೆಗೆ ಎತ್ತ್ ಕಟ್ಟಿವೆ. ಹಿಂಗೆ ಆ ಎರ್ಡ್ ದಿನ ಹೂಡುವ ಶಾಸ್ತ್ರ ಮಾಡಿರೆ ಮತ್ತೆಯಾಗ ಬೇಕಾರೂ ಎತ್ತ್ ಕಟ್ಟುಕ್. ಆಗ 'ಕರಣ' ನೋಡೊಕುತ್ತಿಲ್ಲೆ. ಆದರೆ ಯಾವ್ದೇ ಕಾರಣಕ್ಕೂ ಸೋಮಾರ ಎತ್ತ್ ಕಟ್ಟಂಗಿಲೆ. ಅಂದ್ ದನ ಹುಟ್ಟಿದ ದಿನತೇಳಿ ರೈತನ ನಂಬಿಕೆ. ಕೈಲ್‌ಪೋದ್ ಇಲ್ಲರೆ ಆಯುದ ಪೂಜೆ ದಿನ ನೊಗ ನೇಗ್ಲ್ ತೊಳ್ದ್ ಪೂಜೆ ಮಾಡಿ, ಎತ್ತ್‌ಗಳ ಮೀಸಿ ತೊಳ್ಸ್‌ನ ಹಿಟ್ಟ್ ತಿನ್ಸಿವೆ. ನೇಗ್ಲ್‌ನ ಕೊಟೆಗೆ ಅಟ್ಟಲಿ ಗೌರವಂದ ಇಸಿವೆ. **(ಬಾ.ಜೋ.)**



ನೇಕೆ

ಕತ್ತಿ, ಚಿಪ್ಪಿನ ಸೆಡೆ ಹಾಂಗೆ ಸೀರೆನ ನೇಲ್ಸಿ ಇಸುವ ಹತ್ಯಾರ್‌ನ ನೇಕೆ, ಅಳ್ಕೆ ಇಲ್ಲರ್ ಜೋಲೆಂತೇಳಿ ಕರ್ದವೆ ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಲಿ ಇರುವಂತದ್ದ್.

ತುಳುಲಿ ಕತ್ತಿಕೋಲು, ಕನ್ನಾಜೆ ಅಂತ ಹಳುವೆ. ನೇಕೆನ ಸಪೂರದ ಬೆದ್ರ್ ಅಲ್ಲರ್ ಅಮೆ ಓಟೆಲಿ ಮಾಡಿಕಾದೆ. ಎರಡ್ ಅಲ್ಲರ್ ಮೂರು ಗಂಟ್ ಇರುವ ಓಟೆ ಅಲ್ಲರ್ ಬೆದ್ರ್ ತಕನ್ ಅದರ ಎರಡ್ ಪುಡೆಗೆ ಗಂಟ್‌ಂದ ಗಂಟಿಗೆ ಕತ್ತಿ ಹೋವಷ್ಟು ಸೀಳಿ ತೆಗೆಕು. ಮತ್ತೆ ಅದರ ಬೊಳ್ಳಿಲಿ ಎತ್ತರಲಿ ನೇತಾಡಿಸಿ ಕಟ್ಟುವೆ. ಇದರ ಯಾರೂ ಮಾಡಕ್.

ಗದ್ದೆ ತೋಟ ಬೇಸಾಯ ಮಾಡುವ ಮನೆಲಿ ಕೆಯ್ಯಿಕೊಯ್ಯಕೆ ಹಲ್ಲ್‌ಕತ್ತಿ (ಗರಗಸದ ಹಾಂಗೇ ಹಲ್ಲ್ ಇರುವ ಕತ್ತಿ) ಹಾಂಗೇ ಸೊಪ್ಪು ಹೆರೆಕೆ ಹಲ್ಲಿಲ್ಲದ ಒಂದು ಕತ್ತಿ, ಹುಲ್ಲು ಹೆರೆಕೆ ಒಂದು ಹಞ ಸಣ್ಣಕತ್ತಿ, ಸೌದೆ ಕಡೆಕೆ ದೊಡ್ಡಕತ್ತಿ (ಕಡ್ಪತ್ತಿ) ಹೀಂಗೇ ನಮೂನೆ ನಮೂನೆದ್ ಕತ್ತಿ ಇದ್ದದೆ. ಇದರ ಅಡಿಲಿ ಇಸಿರೆ ಮೊಣ್ಣ್‌ಕಾರ್‌ದೆ. ಅದ್ಕೆ ಬೇಕಾಗಿ ಕತ್ತಿ ನೇಕೆಲಿ ಕತ್ತಿನ ನೇತಾಡ್ಸಿ ಇಸುವೆ. ಹಾಂಗೆ ಮನೆಗಳ್‌ಲಿ ಬಗೆ ಬಗೆನ ಚಿಪ್ಪಿ ಸೆಡಗ ಇದ್ದವೆ. ಗಂಜಿ ಇಕ್ಕುವ ಸೆಡೆ, ಗೈಪು ಇಕ್ಕುವ ಸೆಡೆ, ಪೊಜ್ಜಿ ಇಕ್ಕುವ ಸೆಡೆ, ಪಾಯಸ ಇಕ್ಕುವ ಸೆಡೆ, ಹಾಲ್ ಕಾಯಿಸುವ ಸೆಡೆ ಹೀಂಗೆ ತರತರದ್ ಇದ್ದದೆ. ಅದರ ಸ ನೇಕೆಲೇ ಇಸುದು. **(ಎಂ.ಜಿ.ಕೆ.)**

ಕತ್ತಿ ನೇಕೆನ ಎಲ್ಲಿನೂ ಮಾರ್ದುಲೆ. ಅದರ ಮನೆ ಮನೆವೇ ಮಾಡಿಕಂಡವೆ. ಸಾಮಾನ್ಯಾಗಿ ಕತ್ತಿ ನೇಕೆನ ಬೆದ್ರ್‌ಂದೇ ಮಾಡ್ದು ಜಾಸ್ತಿ. ಅದ್ ಮತ್ತೆ ಸುಲಾಬನೂ ಕೂಡ. ನೇಕೆ ಎಷ್ಟಾರೂ ಉದ್ದದ್ ಮಾಡಕ್. ಕೊಟ್ಟು, ಹಾರೆ, ಪಿಕಾಸಿ, ಕೊಡ್ಲಿ, ಬಾಚಿ, ಉಳಿ, ಮುಟ್ಟಿ, ಅಡ್ಡಮುರಿ ಇಂತದರೆಲ್ಲಾ ಕೊಟೆಗೆಲಿ ಇಲ್ಲರೆ 'ಸಂಗ್ರಹ ಕೋಣೇಲಿ' ಲಿ ಇಸಿವೆ. ಅಲ್ಲೇ ಕತ್ತಿ ನೇಕೆ ಮತ್ತೆ ಸೀರೆ ನೇಕೆಗ ಇದ್ದವೆ. ಮನೆಗಳ ಅಡಿಗೆ ಕೋಣೆಲಿ ಸೆಡೆ ನೇಕೆ ಇದ್ದದೆ.

ಕತ್ತಿಗಳ್‌ಲಿ ಸುಮಾರ್ ತರದ್ ಉಟ್ಟಲ್ಲ. ಕೊಕ್ಕೆ ಕತ್ತಿ, ಮಂಡಗತ್ತಿ, ಹಲ್ಲ್‌ಕತ್ತಿ, ಬಾಳ್ಗತ್ತಿ, ಎರಡ್ ಕಡೆ ಬಾಯಿ ಇರ್‌ವ 'ದಬ್ಬೆಕತ್ತಿ' ಹಿಂಗೆ ಅದರ್ನೆಲ್ಲಾ ಒತ್ತರೆ ಇಸೊಕರೆ ಅದ್ಕೆ ನೇಕೆ ಬೇಕೇ ಬೇಕು.

ನೇಕೆಲಿ ಕತ್ತಿ ಕೋಸುದು ಒಳ್ಳ ಕ್ರಮನೂ ಹೌದು. ಎಷ್ಟೋ ಮನೆಗಳ್‌ಲಿ ನೇಕೆನೇ ಇರ್ದುಲೆ. ಕೆಲ್ಸ ಮಾಡಿತಂದ್ ಎಲ್ಲೆಲ್ಲೋ ಇಸಿವೆ. ಏಣಿ ಕಾಲಡಿಲಿ, ಕಟ್ಲ್ ಕೆಳಗೆ, ಬೆಂಚ್ ಕೆಳಗೆ, ಗೋಡೆ ಕರೆಲಿ ಹಿಂಗೆಲ್ಲಾ ಇಸುದು ಉಟ್ಟು. ಅದ್ ಅಪಾಯಕೂಡ. ಕೆಲವಂತೂ ಕತ್ತಿ ಬಾಯಿನ ಈ ಕಡೆ ಮಾಡಿ ಇಸಿವೆ. ಕಾಲ್‌ಗೆ ಮನಿ ತಾಂಗಿರೆ ಕ್ಯೊದು ಹೋದೆ.

ನೇಕೆ ಇದ್ದರೆ ಉದ್ದೋಕೆ ಕೋಸಿ ಬೇಕಾದರ ತಕಂಡ್ ಹೋಕೆ ಒಳ್ಳದಾದೆ. ಅಪಾಯನೂ ಇಲ್ಲೆ. ಮಕ್ಕಳ ಕೈಗೂ ಸಿಕ್ಕುದ್ಲೆ. ದಪ್ಪ ಬೆದ್ರ್‌ನ ಉದ್ದ ಎಷ್ಟ್ ಬೇಕೋ ಅಷ್ಟ್ ನೋಡಿಕಂಡ್ ಗಂಟ್‌ಂದ ಗಂಟ್‌ಗೆ ನಡೂಲಿ ಒಟ್ಟೆ ಮಾಡಿ ನೇತ್ ಹಾಕಿರೆ ಅದ್ ನೇಕೆ. ಕತ್ತಿನ ಅದ್ಕೆ ಕೋಸಿರೆ ಅದ್ 'ಕತ್ತಿ ನೇಕೆ'. ರೈತನ ಮನೆಲಿ ಇರಕಾದ ಮುಕ್ಯ ಸೊತ್ತುಗಳ್ಲಿ ಅದೂ ಒಂದ್. **(ಬಾ.ಜೋ.)**



ನೊಗ

ಗದ್ದೆ ಹೂಡಿಕನ ಎರಡ್‌ಎತ್ತ್ ಅಲ್ಲರ್ ಕೋಣಗಳ ಹೆಗ್ಲ್‌ಗೆ ಕಟ್ಟುವ ಮರದ ಸೊತ್ತು. ಇದರ ತುಳುಲಿ ನುಗ ತ ಹೇಳುವೆ. ಗದ್ದೆ ಬೇಸಾಯ ಮಾಡುವ ಎಲ್ಲಾ ಊರ್‌ಲೂ ಇದರ ಪ್ರಯೋಜನ ಪಡ್ದವೆ. ದಕ್ಷಿಣ ಕನ್ನಡ ಮತ್ತೆ ಉಡುಪಿ ಜಿಲ್ಲೆಲಿ ಇಂತ ನೊಗ ಇದ್ದದೆ. ಬೇರೆ ಕಡೆ ಹಞ ಬೇರೆ ರೀತಿಲಿ ಇದ್ದದೆ. ಗದ್ದೆ ಬೇಸಾಯ ಮಾಡಿಕೆ ಸುರು ಆಕನವೇ ಇದ್ ಇದ್ದಿರ್ದು.

ಇದರ ಹೆಚ್ಚಾಗಿ ಗಟ್ಟಿ ಇರುವ ಹಗುರದ ಮರಲೇ ಮಾಡುವೆ. ಬೇರೆ ಮರಲಿ ಮಾಡಿರೆ ಬೇಗ ತುಂಡಾದೆಗಡ. ಮರದ ಆಚಾರಿಗಳೇ ಇದರ ಮಾಡ್ದು. ಗೊತ್ತಿದ್ದೊವು ಬೇರೆ ಜನಂಗ ಸ ಮಾಡುವೆ. ಇದ್‌ಗದ್ದೆ ಹೂಡಿಕನ ಎರಡ್ ಎತ್ತ್‌ಗಳ ಹೆಗ್ಲ್‌ಗೆ ಇಸಿ ಕಟ್ಟುವೆ. ಹಾಂಗೆ ಮಾಡಿರೆ ಎತ್ತ್‌ಗ ಒಟ್ಟಿಗೆ ಹೋದವೆ. ಮತ್ತೆ ಇದರ ನೆಡುಗೆ ನೇಗ್ಲ್ ಕಟ್ಟಿಕೆ ಬೇಕಾದೆ. ಕೋಣಂಗಳ್ಗೂ ಹೀಂಗೇ ನೊಗ ಕಟ್ಟ್‌ವೆ. ಹಿಂದೆ ಎತ್ತ್‌ನಗಾಡಿ ಇತ್ತ್. ಆ ಗಾಡಿ ಎಳೆಕೆ ಎರಡ್ ಎತ್ತ್ ಇದ್ದದೆ. ಎತ್ತ್‌ಗಳ ಕುತ್ತಿಗೆಗೆ ನೊಗ ಕಟ್ಟಿ ಅದ್ಕೆ ಗಾಡಿನ ಕಟ್ಟ್‌ವೆ. ಗದ್ದೆಲಿ ಕೋಣಗಳ ಓಡ್ಸುವ ಆಟ– ಕಂಬಳ ದಕ್ಷಿಣ ಕನ್ನಡ, ಕಾಸರಗೋಡು ಮತ್ತೆ ಉಡುಪಿ ಜಿಲ್ಲೆಲಿ ಉಟ್ಟು. ಕಂಬ್ಳದ ಕೋಣಂಗಳ್ಗೂ ನೊಗ ಬೇಕು. ಕೆಲವು ಜೆನ ನೊಗನ ಬಾರೀ ಪೊರ್ಲುರ್ ಕೆತ್ತುವೆ. ಅದರ್‌ಲಿ ಚಿತ್ರ ಕೆತ್ತಿ ಲಾಯ್ಕ್ ಮಾಡುವೆ. **(ಎಂ.ಜಿ.ಕೆ.)**



ಪಾರೆಂಗಿ

ಪಾರೆಂಗಿ ತೇಳ್ರೆ ಗುಂಡಿ ತೆಗೆಕೆ, ದೈಯಿ ಎಳ್ಕ್‌ಸಿಕೆ ಕಬ್ಬಿಣಂದ ಮಾಡ್ದ ಕೃಸಿಕರಿಗೆ ಬೇಕಾದ ಒಂದು ಅಗತ್ಯ ಸೊತ್ತು. ಇದ್ಕೆ ಹಾರೆಂಗಿ ತೇಳಿ ಸ ಕರ್ದವೆ. ಸುಮಾರ್ ನಾಲ್ಕ್ ಅಡಿನಷ್ಟು ಉದ್ದ ಇರುವ ಈ ಪಾರೆಂಗಿನ ಒಂದು ಕಡೆಲಿ ಒಂದೂವರೆ ಗೇಣ್‌ನಷ್ಟೆ ಉದ್ದ ಮುಕ್ಕಾಲ್ ಗೇಣ್‌ನಷ್ಟು ಅಗಲಕ್ಕೆ ಚಟ್ಟೆ (ಬಾಯಿ) ಮಾಡಿಕಂದವೆ. ಇದ್ ನೋಡಿಕೆ ದೊಡ್ಡ ಉಳಿನಂಗೆ ಕಂಡದೆ.

ಹಿಂದೆ ಕಮ್ಮುನ ದೈಯಿ, ಚಾಳೆ ದೈ ನ ಬಿತ್ತ್ ಇಸಿ ದೈಯಿ ಆದ ಮೇಲೆ ಒಟ್ಟ ಹಾಕಿ ಇಸುತ್ತಿದ್ದೊ. ಅದರ 6 ತಿಂಗ ಇಲ್ಲರ್ ಒಂದು ವರ್ಸ ಆದ ಮೇಲೆ ತೆಗ್ದ್ ನೆಡ್‌ತ್ತಿದ್ದೊ. ಈಗನಂಗೆ ಪ್ಲಾಸ್ಟಿಕ್ ತೊಟ್ಟೆಲಿ ಬಿತ್ತ್ ಹಾಕಿ ದೈಯಿ ಮಾಡ್ತ್ತಿಲೆ. ಮೊಣ್ಣುನ ಕಳಮಾಡಿ ಬಿತ್ತ್ ಹಾಕ್‌ತ್ತಿದ್ದದ್. ಆಗ ಕಮ್ಮು-ಬಾಳೆ ದೈಯಿಗಳ ಬೇರ್ ಮೊಣ್ಣುನ ಅಡಿಗೆ ಹೋಗಿ, ತೆಗ್ದ್ ನೆಡ್‌ಕನ ಬೇರ್ ತುಂಡು ಆಗಿ ದೈಯಿಗಳಿಗೆ ಬೇನೆ ಆತಿತ್. ದೊಡ್ಡ ಬೇರ್ (ತಾಯಿ ಬೇರ್) ತುಂಡಾದರೆ ತೆಗ್ದ್ ನೆಟ್ಟ ದೈಯಿಗ ಸತ್ತ್ ಹೋದವೆ. ಅದ್ಕೆ ಪಾರೆಂಗಿಲಿ ಜಾಗ್ರತೆಲಿ ದೈಯಿನ ಸುತ್ತ ಎಳ್ಳಿ, ಗೆಂಡೆ-ಬೇರ್ ಮುತ್ತನೆ ಪೊಕ್ಕ್‌ಸಿ ತೆಗ್ದ್ ನೆಡ್ತ್‌ದ್ದೊ. ದೊಡ್ಡ ಬಾಳೆ ಹಿಂಡ್ಲಂದ ಕುರ್ಳೆಗಳ ತೆಗ್ದ್ ನೆಡ್‌ಕೆ ಸಹ ಈ ಪಾರೆಂಗಿಲಿ ಲಾಯಿಕ್ ಆದೆ. ಕೊಟ್ಟು ಪಿಕಾಸಿಲಿ ತೆಗ್ದರೆ ಗೆಂಡೆ-ಬೇರ್‌ಗಳಿಗೆ ಪೆಟ್ಟಾದೆ. ಸಣ್ಣ ಬರೆ ಜೆರ್ಸಿಕೂ ಇದ್ ಬೇಕಾದೆ.

ಅಡ್ಕೆ, ಚಾಳೆ, ಬಾಳೆ ಕೃಸಿಕರ ಮನೆಲಿ ಈಗೊಳು ಪಾರೆಂಗಿ ನೋಡಿಕೆ ಸಿಕ್ಕದೆ. ಹಟ್ಟಿ ಕೆಟ್ಟಿಕೆ ಮತ್ತೆ ಚಪ್ಪರ ಮಾಡಿಕೆ ಕಂಬ ಹಾಕಕ್‌ನ ಗುಂಡಿ ತೆಗೆಕೆ, ಅದರ ನಾಲ್ಕ್ ಕರೆಗಳ ಬಾರ್ಪಿಕೆ ಸಹ ಇದ್ದಲ್ಲಿ ಒಳ್ಳೆದಾದೆ. ಇದರ ಬಾರ ಸುಮಾರ್ 5 ಕೆ.ಜಿ.ನ ಒಳಗೆ ಇದ್ದದೆ. **(ಪು.ಕೆ.ವಿ.)**



ಪೊಡಿಮಂಚ

ಕೆಯ್ಯಿ ಹೊಡೆಕೆ ಬೇಕಾದ ಸೊತ್ತು. ಮಂಚದ ಹಾಂಗೇ ಇದ್ದದರ್‌ಂದ ಇದ್ಕೆ ಪೊಡಿ (ಪಡಿ) ಮಂಚ ಅಂತ ಹೆಸ್ರಾತ್.

ತುಳುಲಿ ಇದ್ಕೆ ಪಡಿ ಮುಕ್ಕಾಲೆ ಅಂತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ. ನಮ್ಮ ರಾಜ್ಯದ ಎಲ್ಲಾ ಕಡೆಲೂ ಇರುವಂತದ್ದದೇ. ಗದ್ದೆ ಬೇಸಾಯ ಸುರು ಆದ ಮೇಲೆ ಮೊನ್ಸ ಕೆಯ್ಯಿ ಹೊಡೆಕೆ ಇಂತಾ ಪಡಿಮಂಚನ ಮಾಡಿಕೊಂಡೊಳೊ. ಇದ್ ಮರದ ಆಚಾರಿಗ ಮಾಡ್ದ್. ಇದ್ ಬತ್ತದಕೆಯ್ಯಿ ಹೊಡೆಕೆ ಬೇಕಾದೆ. ಗದ್ದೆಂದ ಕೆಯ್ಯಿ ಕೊಯ್ದು ಮೇಲೆ ಕೆಯ್ಯಿಂದ ಬತ್ತ ಬೇರೆ ಮಾಡೊಕಾರೆ ಕೆಯ್ಯಿನ ಹೊಡೆಕು. ಹಾಂಗೆ ಹೊಡೆಕೆ ಈ ಮಂಚ ಬೇಕಾದೆ.

ಪೊಡಿ ಮಂಚನ ಹಿಂದೆನವು ಇನ್ನೂ ಸುಲಬಲಿ ಆಗುವ ಹಾಂಗೆ ಮಾಡ್ತಿದ್ದೊ. ಸಮತಟ್ಟ್ ಇರುವ ನೆಲಲಿ ಅಂದಾಜ್ ಒಂದು ಗಜದ ಎತ್ತರದಷ್ಟು ನಾಲ್ಕ್ ಮರದ ಗೂಟ ಹಾಕೊಕು. ಅದ್ ಅಂದಾಜ್ ಒಂದು ಗಜ ಅಗಲ ಮೂರು ಅಲ್ಲರ್ ನಾಲ್ಕ್ ಗಜ ಉದ್ದ ಇರೊಕು. ಆ ಗೂಟಕ್ಕೆ ಸುತ್ತೊಳು ಕೊಮ್ಮುನ ಸಲಕೆ ಅಲ್ಲರ್ ಸಪೂರದ ಮರನ ಕಟ್ಟೊಕು. ಅದರ ಮೇಲೆ ದೂರ ದೂರಕ್ಕೆ ಸಲಕೆನ ಇಸಿ ಕಟ್ಟೊಕು. ಮತ್ತೆ ಮಾದ್ರಿ ಬೊಳ್ಳಿ ಅಲ್ಲರ್ ಇಂಜಿರ್ ಬೊಳ್ಳಿನ ಸಲಿಕೆಗೆ ನೇಯ್ಯೋಕು. ಆಗ ಅದ್ ಮಂಚನ ಹಾಂಗೇ ಆದೆ. ಕೆಯ್ಯಿ ಹೊಡೆಕೆ ಮುಂದೆ ಪಡಿ ಮಂಚಕ್ಕೆ ಕಾಯಿ ಹೊಡೆವ ಕ್ರಮ ಉಟ್ಟು. ಇನ್ನ್ ಕೆಲವು ಕಡೆ ಇಂಜಿರ್ ಇಲ್ಲರ್ ಮಾದ್ರ್ ಬಳ್ಳಿನ ಕಮ್ಮುನ ತಟ್ಟೆಗೆ ನೈದ್ ಅದರ ಅಗಲದ ಬೆಂಚಿನ ಮೇಲೆ ಇಸಿ ಕಟ್ಟಿ ಕೆಯ್ಯಿ ಹೊಡೆತ್ತಿದ್ದೊ. **(ಎಂ.ಜಿ.ಕೆ.)**



ಪೊಳ್ಮನೆ – ಮುಟ್ಟಿ

ಜಾಲ್ ಹದ ಮಾಡಿ ಹೊಡೆಕೆ, ಗೋಡೆ ಹೊಡೆಕೆ ಇದ್ ಬೇಕಾದೆ. ತುಳುಲಿ ಪೊಲಿಮಣೆ, ಮಲೆಯಾಳಂಲಿ ನೆಲಂ ತಲ್ಲಿ, ಬ್ಯಾರಿ ಬಾಸೆಲಿ ಪೊಳಿಮಣ, ಮುಟ್ಟಿತ ಹೇಳ್ವೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಉಟ್ಟು.

ಇದರ್‌ಲಿ ಎರಡ್ ನಮೂನೆ ಉಟ್ಟು. ಒಂದ್ ಸಣ್ಣದ್ ಕೈ ಮುಟ್ಟಿ. ಅದ್ ಅಡಿ ಸಪಾಯಿ ಇದ್ದ್ ಹಿಡ್ಕಂಕೆ ಕೈ ಇದ್ದದೆ. ಇದ್ ಮೊಣ್ಣ್‌ನ ಗೋಡೆ ಕಟ್ಟಿಕನ ಗೋಡೆ ಸಪಾಯಿ ಮಾಡಿಕೆ ಬೇಕಾದೆ. ಇದರ್‌ಲಿ ಹೊಡ್ದರೆ ಗೋಡೆ, ನೆಲ ಗಟ್ಟಿಯಾದೆ. ಇನ್ನೊಂದು ಆನೆ ಮುಟ್ಟಿ. ಇದ್ ಉರ್‌ಟ್ ಇರ್‌ವ ಮರದ ತುಂಡ್‌ನ ಒಂದ್‌ಕಡೆ ಸಪಾಯಿ ಮಾಡಿ ಅದ್ಕೆ ಹಿಡೆಕೆ ಹಿಡಿ ಹಾಕ್‌ವೆ. ಇನ್ನೊಂದು ರೀತಿಲಿ ಎರಡೂ ಪುಡೆಲಿ ಸಪಾಯಿ ಮಾಡಿ ನಡೂಲಿ ಒಟ್ಟೆ ಮಾಡಿ ಅದ್ಕೆ ಹಿಡಿ ಹಾಕಿದ್ದ್ ಸ ಉಟ್ಟು. ಇದ್ ಬಾರ ಜಾಸ್ತಿ. ಇಜ್ಜಾಲ್‌ಲಿ ಕಲ್ಲ್ ಮಿನಿ ಇದ್ದರೆ ಗುದ್ದಿ ಒಳಗೆ ಮಾಡಿಕಾದೆ. ಇದರ ಹೆಚ್ಚಾಗಿ ಕಾಯರ ಮರಲಿ ಮರದ ಆಚಾರಿಗ ಲಾಯ್ಕ್ ಮಾಡುವೆ.

ಮಳೆಗಾಲ ಜಾಲ್ ಮಳೆ ನೀರ್ ಬಿದ್ದ್ ಹೊಂಡ ಗುಂಡಿ ಆತದ್ದದೆ. ಅರೆಗಾಲ ಜಾಲ್‌ಲಿ ಬತ್ತ ಅಡಿಕೆ ಹರ್‌ಂಡಕಾರ್ ಜಾಲ್ ಸಪಾಯಿ ಇರೋಕು. ಅದ್ಕೆ ಜಾಲ್‌ನ ಹಸಿ ಹಸಿ ಇರಿಕನೇ ಇದರ್‌ಲಿ ಹೊಡ್ದ್ ಸಪಾಯಿ ಮಾಡುವೆ. ಜಾಲ್‌ಲಿ ಕಲ್ಲ್ ಮಿನಿ ಇದ್ದರೆ ಆನೆಮುಟ್ಟಿಲಿ ಹೊಡ್ದ್ ಸಪಾಯಿ ಮಾಡಿಕಾದೆ. ಇದರ್‌ಲಿ ಗೋಡೆ ಹೊಡೆಕೆ ಆದುಲೆ. ಅದ್ಕೆ ಪೊಳ್ಮನೇ ಬೇಕಾದೆ. **(ಎಂ.ಜಿ.ಕೆ.)**

ಪೊಳಿಮನೆನ ಮರದ ಒಂದೇ ತುಂಡುಂದ ಮನೆಯವೇ ಮಾಡಿಕಂದವೆ. ಅದರ ಹಿಡಿ ಹಿಡ್ಕಂಬಕೆ ಅನುಕೂಲ ಆಗುವಷ್ಟು ದಪ್ಪ ಇದ್ದದೆ. ಆದರೆ ತುದಿ ದಪ್ಪ ಮತ್ತೆ ಎರಡ್ ಅಂಗೈ ಅಗಲ ಇದ್ದದೆ. ಮತ್ತೆ ಕೆಲವು ತುದಿ ಉರ್‌ಟೂ ಇರ್ದುಟ್ಟು.

ಮಣ್ಣ್‌ನ ಗೋಡೆ, ಮಣ್ಣ್‌ದೇ ನೆಲದ ಮನೆ ಮಾಡ್‌ಕನ ಪೊಳಿಮಣೆ ಬೇಕೇ ಬೇಕು. ಮಣ್ಣ್‌ನ ಗೋಡೆ ಮಾಡಕನ ಮಣ್ಣ್‌ನ ಕಲ್ಸಿ ಹುಳಿ ಬರ್ಸಿ ಮಾರ್‍ನೆಗೆ ಪುನಾ ಮಣ್ಣ್‌ನ ಮೆಟ್ಟಿ ಮೆಟ್ಟಿ ಹದಬರ್ಸಿ ಉಂಡೆಕಟ್ಟಿವೆ. ಕೆಲವು ಕಡೆ ಒಂದೇ ಅಳ್ತೆನ ಕುಕ್ಕೆಗೆ ಮಣ್ಣ್‌ನ ತುಂಬಿವೆ. ಆ ಮಣ್ಣ್‌ನ ಮೇಲೆ ಮೇಲೆ ಮೆತ್ತಿಕಂಡ್ ಹೋತಿದ್ದಂಗೆ ಪೊಳಿಮಣೆಂದ ತಟ್ಟಿಕಂಡ್ ಮತ್ತೆ ಪೊಳಿಮಣೆಂದ ಹೊಡ್ದ್ ಹೊಡ್ದ್ ಮೇಲೆ ಮೇಲೆ ಕಟ್ಟಿಕಂಡ್ ಹೋದವೆ. ಹಸಿ ಇದ್ದಂಗೆ ಹೊಡ್ದಸ್ಟ್ ಗೋಡೆ ಗಟ್ಟಿ ಆದೆ. ಹಂಗೆ ಹೊಡ್ದ್ ಕಟ್ಟಿದ ಗೋಡೆ ಲಾಯ್ಕ್ ಒಣಂಗಿದ ಮೇಲೆ ಅದರ ಅಸ್ಟ್ ಸುಲಬಕ್ಕೆ ಕಡ್ದೋ ಹೊಡ್ದೋ ಒಡೆಕೆ ಆದುಲೆ. ನೆಲಕೂ ಹಂಗೇ ಹೊಡ್ದ್ ಹೊಡ್ದ್ ಗಟ್ಟಿ ಮಾಡಿರೆ ಅಂತಾ ನೆಲಕೆ ನೀರ್ ಬಿದ್ದರೂ ನೀರ್ ಇಂಗುದುಲೆ ಅದೇ ಮಣ್ಣ್ ನೆಲದ ಗುಣ. ಪೊಳಿಮಣೆಂದ ಹೊಡ್ದ್ ಹದ ಮಾಡ್ದ ಗೋಡೆಗೆ ಸಿಮೆಂಟ್‌ದ್ ಸಾರಣೆ ಮಾಡಿರೆ ಆಣಿ ಹೊಡ್ದರೂ ಆಣಿ ಬಗ್ಗುದು!

ಕೊಳ ಮಾಡಿ ಕೊಳದ ನಾಕ್ ಗೋಡೆಗೆ ಮಣ್ಣ್‌ಕಲ್ಸಿ ಮೆತ್ತಿ ಪೊಳಿಮಣೆಂದ ಹೊಡ್ದ್ ಹದ ಮಾಡಿ ಸಾರ್ಸಿರೆ ಬಿರ್‌ಕೂ ಬಾದುಲೆ, ನೀರೂ ಸೋರ್‍ದ್‌ಲೆ. ಹಂಗೆ ಕೊಳದ ನೆಲನ ಲಾಯ್ಕ ಕಲ್ಸಿ ಪೊಳಿಮಣೆಂದ ಬಡ್ದ್ ಸಾರ್ಸಿರೆ ನೀರ್ ಇಂಗುದುಲೆ. ಮದೆನಾಡ್‌ನ ಮದೆ ಮಹೇಶ್ವರ ಇಸ್ಕೂಲ್‌ಲಿ ಈಜ್ ಕೆರೆಂತ ಮಾಡ್ಡೊ. ಅದರ ನಾಕ್ ಕಡೆ ಗೋಡೆಗೆ ಮಣ್ಣ್ ಮೆತ್ತಿದೊ. ಮತ್ತೆ ನೆಲನ ಅಗ್ದ್ ಕಲ್ಸಿ ಪೊಳಿಮಣೆಂದ ಹೊಡ್ದ್ ಹೊಡ್ದ್ ಗಟ್ಟಿ ಮಾಡ್ಡೊ. ಚರಂಡಿಂದ ನೀರ್ ತಂದ್ ತುಂಬಿದೊ. ಒಂದೇ ಒಂದ್ ತುಳಿ ನೀರ್ ಸೋರ್ತ್‌ಲೆ. ಆದರೆ ಅದೇ ಕೊಳನ ದೊಡ್ಡದ್ ಮಾಡಿ ಸುತ್ತ ಕಲ್ಲ್ ಕಟ್ಟಿ ಸಿಮೆಂಟ್‌ದ್ ಸಾರಣೆ ಮಾಡ್ಡೊ. ಒಂದೆರ್ಡ್ ವರ್ಸಲೇ ಗೋಡೆ ಬಿರ್ಕ್ ಬಾತ್. ಒಂದಡಿ ನೀರ್ ಸ ಏರ್ತ್‌ಲೆ.

ಕಳಲಿ ಮದೆ ಇಸ್‌ಕನ ಪೊಳಿಮಣೆಂದ (ಹಗುರ ಮಣೆ ಸಾಕ್) ಬೆಳೆನ ತಟ್ಟಿಕಂಡ್ ಮೇಲೆ ಮೇಲೆ ಹೋತಿದ್ದಂಗೆ ಮೆದೆ ಲಾಯ್ಕ್ ಕಂಡದೆ. ಮೆದೆ ಮಾಲಿ ಕಂಬೊದುಲೆ. **(ಬಾ.ಜೋ.)**




ಬರೆಕಲ್ಲ್

ಬರೆಕಲ್ಲ್ ಅಂದರೆ ಬರೆ ಹಾಕುವ ಕಲ್ಲ್. ಇದ್ಕೆ ಕುರುಂಟ್ ಕಲ್ಲ್‌ತ ಹೇಳುವೆ. ಗದ್ದೆ ಬೇಸಾಯ ಮಾಡೋವುಕೆ ಇದ್ ಬೇಕಾದೆ.

ದಕ್ಷಿಣ ಕನ್ನಡ ಉಡುಪಿ ಜಿಲ್ಲೆಲಿ ಇದ್ ಇದ್ದದೆ. ಇದ್ ಕರ್ಗಲ್ಲ್‌ಂದ ಮಾಡ್ದ ಕಲ್ಲ್. ಹೆಚ್ಚ್ ಕಮ್ಮಿ ಕಡ್ಕಲ್‌ನ ಗುಂಡು ಕಲ್ಲ್‌ಗಳ್‌ನ ಹಾಂಗೇ ಇದ್ದದೆ. ಹಞ ಸಪೂರ ಆಗಿದ್ದ್ ಕೊಡಿಲಿ ಒಟ್ಟೆ ಇದ್ದದೆ. ಈ ಒಟ್ಟೆ ಬೊಳ್ಳಿ ಹಾಕಿ ಎಳೆಕೆ ಇರುವಂತದ್ದ್. ಇದರ ಕಲ್ಲ್ ಕುಟ್ಟಿಗರ್ ಮಾಡ್ದು.

ಗದ್ದೆಗೆ ಎತ್ತ್‌ಕಟ್ಟಿ ಗೋರಿ ಮಾಡಿ ಪುಂಡಿ ಬಿತ್ತುವೆ ಅಲ್ಲರ್ ಬಿತ್ತ್ ಹಾಕುವೆ. ಹೀಂಗೆ ಮಾಡಿಕನ ಗದ್ದೆಲಿ ನೀರ್ ನಿಲ್ಲಿಕಾಗದ್. ಗದ್ದೆಲಿರುವ ನೀರ್ ಎಲ್ಲ ಇಳ್ದ್ ಹೋಕು. ಹಾಂಗೆ ಇಳ್ದ್ ಹೋಕರ್ ಗದ್ದೆಲಿ ಸಣ್ಣಕೆ ಕಣಿಮಾಡೊಕು. ಕಣಿ ಮಾಡಕರ್ ಬರೆಕಲ್ಲ್‌ನ ಒಂದು ಬೊಳ್ಳಿಗೆ ಕಟ್ಟಿ ಎಳ್ದವೆ. ಆಗ ಗದ್ದೆ ತುಂಬಾ ಕಣಿ ಆದೆ. ಆ ಕಣಿಲಿ ಗದ್ದೆಲಿದ್ದ ನೀರೆಲ್ಲ ಇಳ್ದ್ ಹೋದೆ. ಆ ಕಣಿ ಗದ್ದೆಲಿ ಬರೆ ಹಾಕಿದಂಗೆ ಕಂಡದೆ. ಹಾಂಗಾಗಿ ಇದ್ಕೆ ಬರೆಕಲ್ಲ್‌ಂತ ಹೇಳುವೆ. **(ಎಂ.ಜಿ.ಕೆ.)**

ಬೀಜ ಗುದ್ದುವ ಮರದ ಸುತ್ತಿಗೆ

ಬೀಜ ತೇಳಿರೆ ಗೇರ್ದಬೀಜ. ಇದರ ಕಿಚ್ಚಿಗೆ ಹಾಕಿ ಇಲ್ಲರ್ ಹೊರ್ದ್ ಗುದ್ದಿ ಬೆಂಡ್ ತೆಗೆಕೆ ಇರುವ ಮರಂದ ಮಾಡ್ದ ಸೊತ್ತುನ ಬೀಜ ಗುದ್ದುವ ಸುತ್ತಿಗೆಂತ ಹೇಳುವೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಬಳ್ಸುವೆ. ಸಣ್ಣ ಮರದ ತುಂಡ್‌ನ ಒಂದು ಕಡೆ ಸಪಾಯಿ ಮಾಡಿ ಮತ್ತೊಂದು ಕೊಡಿ ದೂಂಚಿ ಮಾಡಿಕಾಂಕು. ಕೆಲವ್ ಮತ್ತೊಂದು ಕೊಡಿಲಿ ಸ ಸಪಾಯಿ ಇದ್ದದೆ. ಅದರ ನೊಡುಲಿ ಒಟ್ಟೆ ಮಾಡಿ ಅದ್ಕೆ ಅಂದಾಜ್ ಒಂದೂವರೆ ಗೇಣ್‌ನಷ್ಟ್ ಉದ್ದದ ಹಿಡಿ ಹಾಕಿಕಾಂಕು. ಮರದ ಆಚಾರಿಗ ಇದರ ಮಾಡುವೆ. ಉಳಿ ಸಾಮಾನ್ ಇದ್ದರೆ ಬಾಕಿದ್ದೊವುಕೂ ಮಾಡಿಕಾದೆ. ಹಞ ಕೆಣಿ ಗೊತ್ತಿರೊಕು.

ಹಿಂದೆನ ಕಾಲಲಿ ಮಳ್ಗಾಲದ ಮಳೆ ಜೋರಾಕನ ಏನಾರ್ ತಿನೊಕುಂತ ಆದೆ. ಆಗ ಅಟ್ಟಲಿ ಇಸಿದ ಗೇರ್ದ ಬೀಜ ನೆಂಪಾದೆ. ಮರದ ಸುತ್ತಿಗೆಲಿ ಹಗುರಲಿ ಗುದ್ದಿರೆ ಲಾಯ್ಕ್‌ಲಿ ಇಡೀ ಬೀಜದ ಬೆಂಡ್ ಸಿಕ್ಕಿದೆ. ಬೀಜ ಗುದ್ದಿಕೆ ಲಾಯ್ಕ್‌ನ ಕಲ್ಲ್‌ಸ ಆದೆ, ಆದರೆ ಜಾಗ್ರತೆಲಿ ನಿದಾನ ಗುದ್ದೋಕು. **(ಎಂ.ಜಿ.ಕೆ.)**






ಬೆದ್ರ್‌ನ ಕೇರ್ಪು

ಇದ್ ಬೆದ್ರ್‌ನ ಏಣಿ, ಅಟ್ಟಕ್ಕೆ ಹತ್ತಿಕೆ ಬೇಕಾದ ಸೊತ್ತು. ತುಳುಲಿ ಏಣಿ, ಲೆಂಚಿತ ಕರ್ದವೆ. ಇಂತ ಏಣಿ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲೆಲ್ಲ ಇದ್ದದೆ.

ಬೆದ್ರ್‌ಂದಲೇ ಮಾಡ್‌ವೆ. ದೊಡ್ಡ ಬೆದ್ರ್‌ಲಿ ಗಂಟ್‌ನ ಹಕ್ಕಲೆ ಕಾಲ್ ಇಸಿಕೆ ಆವ ಹಾಂಗೇ ಲಾಯ್ಕ್ ಕೊಯ್ದ್ ಏಣಿ ಮಾಡ್‌ವೆ. ಇದರ ಯಾರೂ ಮಾಡಿಕಾಂಕ್.

ಏಣಿನ ಬೇರೆ ಬೇರೆ ನಮೂನೆಲಿ ಮಾಡ್‌ವೆ. ಎರಡ್ ಬೆದ್ರ್‌ಗೆ ಒಂದೇ ಅಳ್ತೆಗೆ ಗಂಟ್‌ನ ಹಕ್ಕಲೆ ಸಣ್ಣ ಸಣ್ಣ ಒಟ್ಟೆ ಮಾಡಿ ಅಡ್ಡಕ್ಕೆ ಬೆದ್ರ್‌ನ ಅಲ್ಲರ್ ಕೊಮ್ಮುನ ಗಟ್ಟಿ ತಟ್ಟೆನ ಒಂದೇ ಅಳ್ತೆಗೆ – ಅಂದಾಜ್ ಅರ್ದ ಗಜದಸ್ಟ್ ತುಂಡು ಮಾಡಿ ಒಟ್ಟೆಗೆ ಎರ್ಡ್ ಬೆದ್ರ್‌ಗೆ ಹುಗ್ಗಿಸಿ ಕಟ್ಟಿರೆ ಏಣಿ ತಯಾರ್ ಆದೆ. ಕೆಲವ್ ಕಡೆ ಮರದ ಏಣಿ ಇದ್ದದೆ. ಕೊಮ್ಮಿಗೆ ಚಾಳೆಗೆ ಹತ್ತಿಕೆ ಬೆದ್ರ್‌ನ ಗೆಲ್ಲ್‌ನ ಕಾಲ್ ಇಸಿಕೆ ಬೇಕಾದಷ್ಟೇ ಬುಟ್ಟ್ ತುಂಡು ಮಾಡಿ ಏಣಿ ಮಾಡ್‌ವೆ. ಅದ್ಕೆ ಕೇಪುರ್ಂತ ಹೇಳ್‌ವೆ. ಇದ್ ಮರಂದ ಒಳ್ಳೆ ಮೆಣಸು ಕೊಯ್ಯಕೆ ಮನೆಲಿ ಅಟ್ಟಕ್ಕೆ ಹತ್ತಿಕೆ ಅಲ್ಲರ್ ಎತ್ತರಕ್ಕೆ ಹತ್ತಿಕನ ಬೇಕಾದೆ. ಇತ್ತೀಚೆಗೆ ಕೀಜಿನ ಏಣಿ ಮತ್ತೆ ಕೀಜಿನ ಕೇರ್ಪು ಹೆಚ್ಚಾಗಿ ಬಳಕಗೆ ಬಂದ್ ಬೆದ್ರ್ – ಮರದ ಏಣಿಗ ಕಾಂಬಕೆ ಸಿಕ್ಕುದು ಅಪರೂಪ. (ಎಂ.ಜಿ.ಕೆ.)





ಮಿಜ

ಮೀನ್‌ನ ಗೋರಿನ ಹಾಂಗೇ ಕಾಂಬ ಒಂದು ಸೊತ್ತ್. ತುಳುಲಿ ಸೂಪು, ಮಲೆಯಾಳಂಲಿ ಮೆರಂ ತ ಹೇಳುವೆ. ದಕ್ಷಿಣ ಕನ್ನಡ'ಉಡುಪಿ ಕೊಡಗ್ ಜಿಲ್ಲೆ ಹಾಂಗೇ ಸಕ್ಲೇಶ್ಪುರ ಕಡೆಲೆಲ್ಲ ಇದ್ ಇದ್ದದೆ.

ಇದರ ಬೆತ್ತದ ಬೊಳ್ಳಿಂದ ಮಾಡುವೆ. ಹಿಂದೆನ ಪುಡೆ ಎತ್ತರ ಇದ್ದ್ ಎದ್ರ್ ಪುಡೆ ತಗ್ಗ್ ಇರುವ ಒಣಲೆನ ಹಾಂಗೇ ಮಾಡ್ದ ಒಂದು ಹತ್ಯಾರ್. ಇದರ ಬೆತ್ತಂದ ಅಲ್ಲರ್ ಬೆದ್ರ್‌ನ ಬಾಸ್‌ಂದಲೂ ಮಾಡಿಕಾದೆ. ಇದರ ಕೊರಗರ್, ಮಾಯ್ಲರ್ ಮಾಡುವೆ.

ಮನೆ ತುಂಬಿಸಿಕೆ ಮಿಜ ಬೇಕ್. ಯಜಮಾನ ಮನೆ ತುಂಬಿಸಿಕೆ ಬೇಕಾದ ಸೊತ್ತುಗಳ ಇದರ್‌ಲಿ ಮನೆಗೆ ತಾದು. ಹಿಂದೆ ಮಳೆಗಾಲ ಕಳ್ದ ಮೇಲೆ ಅಂದರೆ ಆಟಿ ಕಳ್ದ್ ಸೋಣ ತಿಂಗಳ್‌ಲಿ ಚೌತಿಗೆ ಮುಂದೆ ಹೊಸ್ತು ಮಾಡುವ ಕ್ರಮ ಇತ್ತ್. ಅದ್ಕೆ ಮುಂದೆ ಮನೆ ತುಂಬುಸುವ ಕ್ರಮವೂ ಇತ್ತ್. ಅದ್ಕೆ ಬೇಕಾಗಿ ಹೆಳ್ಮಕ್ಕ ಎಲ್ಲ ಸೆರಿಕಂಡ್ ಮನೆಲಿ ಅಟ್ಟ ಅಡಿ ಹೊಗೆ, ಕರಿ, ಬಲೆ, ಗುಡ್ಸಿ ಮನಾರ ಮಾಡಿ ಕಂಡವೆ. ನೆಲಕ್ಕೆ ಸಗಣಿ ಕೆರ್ದ್ ಲಾಯ್ಕ್ ಮಾಡುವೆ. ಅದಾದ ಮೇಲೆ ಬೊಳ್ಪುಗೆ ಮನೆ ಯಜಮಾನ ಮೀದ್ ಸುದ್ದ ಆಗಿ ಗದ್ದೆಗೆ ಹೋಗಿ ಬತ್ತದ ಕದ್ರ್ ಕೊಯ್ದ್ ಅದರ ಈ ಮಿಜಲಿ ಇಸಿಕಂಡ್ ಮಳ್ಗಾಲ ಬೆಳ್ಸಿದ ನಟ್ಟಿಕಾಯಿ – ಸೋಂತೆಕಾಯಿ, ಹೀರೆಕಾಯಿ, ಕುಂಬಳ, ಕೆಂಬುಡೆ ಹೀಂಗೆ ಎಲ್ಲ ಕೊಯ್ದ್ ತುಂಬಿಸಿ ಅದರೊಟ್ಟಿಗೆ ಹಿಂಟೆಂಗೆ (ಇಟ್ಟೋವು) ಸೊಪ್ಪು, ದಡ್ಡಲ್ ಮರದ (ಗಬ್ಬಲ್ ಮರದ) ತೊಪ್ಪೆದ್ ಬೊಳ್ಳಿ ಎಲ್ಲ ತಕಂಡ್ ಮನೆಗೆ ಬಂದದೆ.

ಯಜಮಾನ ಮನೆಗೆ ಬಾಕನ ಮನೆ ಯಜಮಾಂತಿ ಮೆಟ್ಲ್‌ಲಿ ಅವನ ಕಾಲಿಗೆ ನೀರ್ ಹೊಯ್ಯಕೆ ಉಟ್ಟು. ಮತ್ತೆ ಯಜಮಾನ ಮಿಜಲಿ ತಂದ ಎಲ್ಲಾ ಸೊತ್ತುಗಳ ದೇವರ ಕೋಣೆಲಿ ದೇವರ ಎದ್ರ್ ಇಸಿ, ದೀಪಕ್ಕೆ ಅಕ್ಕಿ ಹಾಕಿ, ಕೈ ಮುಗ್ದ್ ಬೇಡಿಕಾಂದೆ. ಮನೆವು ಎಲ್ಲಾ ದೇವ್ರುಗೆ ಕೈ ಮುಗ್ದವೆ. ಅದಾದ ಮೇಲೆ ಹಿಂಟೆಂಗೆ ಸೊಪ್ಪುಲಿ ಬತ್ತದ ತೆನೆನ ಸುತ್ತಿ (ಕೆಲವು ಕಡೆಲಿ ಬತ್ತದ ತೆನೆನ ಮಾಯಿನ ಎಲೆಲಿ ಸುತ್ತಿ) ದಡ್ಡಲ್ ಬೊಳ್ಳಿಲಿ ಕಟ್ಟಿ, ನೊಗ ನೇಗ್ಲ್‌ಗಳಿಗೆ, ಮನೆ ಬಾಗ್ಲ್‌ಗೆ, ಕಿಟ್ಗೆಗೆ, ಮೇಜಿ–ಕುರ್ಚಿ ಕಾಲ್‌ಗಳಿಗೆ, ಕವಾಟಿಗೆ, ಕೇರ್ಪಿಗೆ, ಬೆಸೆಗೆಗೆ, ನೆಲುಗೆ, ವಾಹನ ಅಲ್ಲರ್ ಯಂತ್ರಗಳೇನಾರ್ ಇದ್ದರೆ ಮತ್ತೆ ಬೇಸಾಯಕ್ಕೆ ಬೇಕಾದ ಎಲ್ಲಾ ಹತ್ಯಾರ್‌ಗೆ ಕಟ್ಟಿಕೆ ಉಟ್ಟು. ಇದ್ಕೆ ಮನೆ ತುಂಬುಸುದುಂತ ಹೇಳ್ದು. ಮಿಜ ಇತ್ಲರ್ ತಡ್ಪೆ ಅಲ್ಲರ್ ಒಣಲೆನೂ ಆದೆ. **(ಎಂ.ಜಿ.ಕೆ.)**



ಮುಡಿ ಮತ್ತೆ ಕುದೆಂಟಿ

ಅಕ್ಕಿ ಅಲ್ಲರ್ ಬತ್ತ ಹಾಳಾಗದ ಹಾಂಗೆ ಬಿಳ್ಗ್‌ಲ್‌ಲಿ ಕಟ್ಟಿ ಇಸುದರ ಮುಡಿತೇಳಿ ಹೇಳುವೆ. ಮುಡಿ ಕಟ್ಟ್‌ಕನ ಅದರ ಉರುಂಟು ಮಾಡಿಕೆ ಹೊಡೆವ ಮರದ ತುಂಡುನ ಕುದಂಟಿ ತ ಕರ್ದವೆ, ಅದರ ಹುಣಿಸೆ ಮರಂದ ಮಾಡುವೆ.

ತುಳುಲಿ ಸ ಮುಡಿಂತಲೇ ಹೇಳುವೆ. ಮುಡಿಕಟ್ಟಿ ಇಸುವ ಕ್ರಮ ದಕ್ಷಿಣ ಕನ್ನಡ ಮತ್ತೆ ಉಡುಪಿ ಜಿಲ್ಲೆಲಿ ಉಟ್ಟು. ಗದ್ದೆ ಬೇಸಾಯ ಸುರು ಆಕನವೇ ಮುಡಿ ಕಟ್ಟುವ ಕ್ರಮ ಸುರು ಆಗಿರ್ದು. ಸುರುಲಿ ಉದ್ದ ಇರುವ ಲಾಯ್ಕ್‌ನ ಬಿಳ್ಗ್‌ಲ್‌ನ ಕೊಮ್ಮನಷ್ಟ್ ದಪ್ಪಕ್ಕೆ ಸೂಡಿ ಕಟ್ಟಿಕನೊಕು. ಅಂದಾಜ್ ಕಾರ್‌ನ ಚಕ್ರ ದಷ್ಟ್ ದೊಡ್ಡ ಬೆತ್ತ ಅಲ್ಲರ್ ಮಾದ್ರಿ ಬೊಳ್ಳಿನ ಚಕ್ರ ಮಾಡಿ ನೆಲಲಿ ಇಸೊಕು. ಅದರ ಮೇಲೆ ಸೂಡಿನ ಕೊಡೆ ಬುಡ್ಸಿದ ಹಾಂಗೆ ಪೊರ್ಲುಲಿ ಬುಡ್ಸಿ ಇಸೊಕು. ಬಿಳ್ಗ್‌ಲ್‌ನ ಕಡೆ ನಡುಲಿ ಬರುವ ಹಾಂಗೆ ಮಾಡೊಕು. ಬುಡ್ಸಿಕನ ಎಲ್ಲಾ ಬಿಳ್ಗ್‌ಲ್ ಸುತ್ತಲೂ ಹರ್‌ಂಡಿದೋಸೆನ ಹಾಂಗೆ ಉರುಂಟು ಆಕು. ಬಿಳ್ಗ್‌ಲ್‌ನ ಕಡೆ ಮೇಲ್ಬುಡೆಗೆ ಬರೊಕು. ಮತ್ತೆ ಅದರ ಕಡೆನ ಸ ಬುಡ್ಸಿ ಮೆಟ್ಟಿ ಮೆಟ್ಟಿ ನೆಲಕ್ಕೆ ಸಮ ಮಾಡಿಕಾಂಕು. ಎಲ್ಲಿಯೂ ಸೆರೆ ಕಾಣದ ಹಾಂಗೆ ಅದರ ಮೇಲೆ ಬಿಳ್ಗ್‌ಲ್‌ನ ಹರ್‌ಂಡೊಕು. ಎಲ್ಲಾ ಕಡೆಲೂ ಬಿಳ್ಗ್‌ಲ್ ಸರಿ ಕುದ್ದ ಮೇಲೆ ಜಾಗ್ರತೆಲಿ ಅದರ ಒಳಗೆ ನಿಂತ್ಕನ್ ಅಡಿಲಿದ್ದ ಚಕ್ರನ ಮೇಲೆ ಮೇಲೆ ಎತ್ತಿ ಒಳಗೆ ಗುಂಡಿ ಆಗುವ ಹಾಂಗೆ ಮಾಡೊಕು. ಒಳಗೆ ಇದ್ದ ಬಿಳ್ಗ್‌ಲ್ ಉದ್ರದ ಹಾಂಗೆ ನೋಡಿಕಂಡ್ ಮೆಲ್ಲ ಹೊರಗೆ ಬಂದ್ ಅದರ ಒಳಗೆ ಬತ್ತ ಅಲ್ಲರ್ ಅಕ್ಕಿ ತುಂಬುಸೊಕು. ಅಕ್ಕಿ ತುಂಬಿಸಿದ ಮೇಲೆ ಸುತ್ತೊಳು ಒಳೆಗಿಂದ ಬಿಳ್ಗ್‌ಲ್‌ನ ಇಸಿದ್ ಎಲ್ಲಿಯೂ ಸೆರೆಕಾಣದ ಹಾಂಗೆ ಮಾಡಿಕಾಂಕು. ಕೊಡಿಲಿ ಇದ್ದ ಬಿಳ್ಗ್‌ಲ್‌ನ ಸುತ್ತಿ ಸುತ್ತಿ ಅದರೊಳಗೆ ಒತ್ತಿ ಒತ್ತಿ ಇಸೊಕು. ಈ ಕೆಲ್ಸ ಮಾಡಿಕೆ ಇಬ್ರೊರು ಬೇಕು.

ಮುಡಿಕಟ್ಟಿಕೆ ಬಿಳ್ಗ್‌ಲ್‌ಂದಲೇ ಮಾಡ್ದ ಬೊಳ್ಳಿ ಬೇಕು. ಬಿಳ್ಗ್‌ಲ್‌ನ ಹುರಿ ಮಾಡಿ ಬೊಳ್ಳಿ ಮಾಡುವೆ. ಬೊಳ್ಳಿನ ಮುಡಿಗೆ ಸುತ್ತಿ ಸುತ್ತಿ ಕಟ್ಟೊಕು. ಕಟ್ಟಿ ಆದ ಮೇಲೆ ಚಕ್ರನ ತೆಗ್ದವೆ. ಮುಡಿ ಉರುಂಟಾಗಿ ಬರೊಕು. ಉರುಂಟು ಬಾಕೆ ಕುದೆಂಟಿಲಿ ಮೆಲ್ಲ ಮೆಲ್ಲ ತಟ್ಟುವೆ. ಆಗ ಮುಡಿ ಗಟ್ಟಿನೂ ಆದೆ.

ಮುಡಿ ಕಟ್ಟುದು ಹಇ ಬಜ ಉಟ್ಟು. ಬೇಸಾಯ ಮಾಡೊವುಕೆ ಮುಡಿ ಕಟ್ಟಿಕೆ ಗೊತ್ತಿದ್ದದೆ. ಕೆಲವು ಜನ ಬಾರೀ ಲಾಯ್ಕಲಿ ಮುಡಿ ಕಟ್ಟುವೆ.

ಅಕ್ಕಿ ಬತ್ತ ಹಾಳಾಗದ ಹಾಂಗೆ ಮುಡಿಕಟ್ಟಿ ಇಸುವೆ. ಬಿಳ್ಗ್‌ಲ್ ಅರ್ಕಿಲ್, ಮಳ್ಗಾಲ ಬೆಪ್ಪಂಗೆ ಇದ್ದದೆ. ಮುಡಿಕಟ್ಟಿಕೆ ಒಂದು ಜಾತಿ ಮರದ ತೊಪ್ಪೆ ತೆಗ್ದ್ ಅದರ ತೆಳ್ಳಂಗೆ ಸಿಗ್ದ್ ಬೊಳ್ಳಿ ಮಾಡುವೆ.

ಮುಡಿ ಅಕ್ಕಿ ಗಂಜಿ ಉಂಬಕೆ ಬಾರೀ ರುಚಿ. ಒಂದು ಮುಡಿಂತೇಳಿರೆ ಮೂರು ಕಳಸೆ. ಒಂದು ಕಳಸೆಂತೇಳಿರೆ ಹದ್‌ನಾಲ್ಕ್ ಸೇರ್. ಸೇರ್ಗೆ ನಾಕ್ ಪಾವು. ಒಂದು ಪಾವಿಗೆ ಎರಡ್ ಕುಡ್ತೆ. ಮುಡಿ ಅಕ್ಕಿನು ಗಾಳದ ಮೀನ್‌ನೂ ಸರಿ ಆದೆಂತ ಒಂದು ಗಾದೆ ಮಾತ್ ಉಟ್ಟು. **(ಎಂ.ಜಿ.ಕೆ.)**



ಮೆಟ್ಟ್‌ಕತ್ತಿ

ಮಣೆಮೇಲೆ ಕುದ್‌ಕಂಡ್ ಅಡ್ಕೆ ಚೊಲ್ಲಿಕೆ ಬಳ್ಸುವ ಮಣೆಗೆ ಹೊಡ್ಡ ಕತ್ತಿನ ಮೆಟ್ಟ್‌ಕತ್ತಿ ತೇಳಿ ಕರ್ದವೆ. ಇದ್ ಹೆಚ್ಚಾಗಿ ಅಡ್ಕೆ ಬೆಳೆವ ಎಲ್ಲಾ ಊರ್‌ಗಳಲಿ ಕಂಡ್ ಬಂದದೆ. ತುಳುಲಿ ಮೊಟ್ಟುಕತ್ತಿ ಅಂತ ಹೇಳುವೆ. ಕೊಕ್ಕೆ ಇರುವ ಕೊಡಿ ದೂಂಚಿ ಇರುವ ಹಿಡಿ ಹಾಕದ ಕತ್ತಿನ ಕಬ್ಬಿಣದ ಆಚಾರಿಗಳ ಕೈಲಿ ಮಾಡ್ಸಿ, ಅದರ ಮರದ ಆಚಾರಿಗ ಮಾಡ್ದ ಮಣೆಗೆ ಆಣಿ ಹಾಕಿ ಹೊಡೆಕು.

ಒಣ್‌ಗಿದ ಅಡ್ಕೆ ಚೊಲ್ಲಿಕೆ ಈಗೊಳು ಮೆಟ್ಟ್‌ಕತ್ತಿನೇ ಬೇಕು. ಅದರ ಚೊಲ್ಲಿಕೆ ಇತ್ತೀಚೆಗೆ ಯಂತ್ರ ಬಂದ್ರೂ, ಮೆಟ್ಟ್‌ಕತ್ತಿಲಿ ಚೊಲ್ಲಿದಷ್ಟು ಒಳ್ಳೆದ್ ಆದುಲೆ. ಇದರ್ಲಿ ದಿನಕ್ಕೆ ಒಂದು ಕಿಂಟಾಲ್ ಅಡ್ಕೆ ಚೊಲ್ಲೊವು ಒಳೊ. ಈ ಮೆಟ್ಟ್‌ಕತ್ತಿಲಿ ಹಲ್ಸ್‌ನ ಹಣ್ಣ್ ಕೊಯ್ಯಕೆ ಬಾರೀ ಲಾಯ್ಕ್ ಆದೆ. ಹಂಗೆ ಜಂಬರದ ಮನೆಗಳ್‌ಲಿ ಕೇನೆಗೆಂಡೆ ತುಂಡು ಮಾಡಿಕೆ, ಸೊಂತೆಕಾಯಿ ತುಂಡು ಮಾಡಿಕೆ ಸಹ ಬಳ್ಸುವೆ. ಹಳ್ಳಿಲಿ ಎಲ್ಲಾ ಮನೆಗಳ್‌ಲಿ ಈಗೊಳು ಈ ಮೆಟ್ಟ್‌ಕತ್ತಿ ನೋಡಿಕೆ ಸಿಕ್ಕಿದೆ. **(ಪು.ಕೆ.ಐ.)**



ಮೆಂಟೆ – ತಟ್ಟೆ

ದನಗಳ ಕುತ್ತಿಗೆಗೆ ಕಟ್ಟ್‌ವ ಬೆದ್ರ್‌ನ ಗಂಟೆ ಮೆಂಟೆ. ತುಳುಲಿ ಮೊಂಟೆತ ಹೇಳ್‌ವೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಬಳಕೆಲಿ ಉಟ್ಟು. ತೋರ ಇರ್‌ವ ಬೆದ್ರ್‌ನ್ರ ಒಂದು ಗಂಟ್ ಇರ್‌ವ ಹಾಂಗೆ ಅಂದಾಜ್ ಒಂದೂವರೆ ಗೇಣ್‌ನಸ್ಟ್ ತುಂಡು ಮಾಡಿಕಾಂಕು. ಗಂಟ್‌ನ ಮೇಲೆ ಪೊರ್ಲು ತುಂಡು ಮಾಡಿ ಕೆರ್ಸಿ ಲಾಯ್ಕ್ ಮಾಡಿಕಾಂಕು. ಎರಡ್ ಪುಡೆಲಿ ಕಾಗಡೆಂದ ಮೇಲೆ ಮುಟ್ಟ ಗಂಟ್‌ನ ಹಕ್ಕಲೆ ಮೂರು ಅಂಗುಲದಸ್ಟ್ ಬುಟ್ಟ್‌ದ್ ಉದ್ದಕ್ಕೆ ಒಂದು ಬೆರಳ್‌ನಸ್ಟ್ ಅಗಲಕ್ಕೆ ಕೊಯ್ದ್ ತೆಗೆಕು. ಅದರ ಕೊಡಿಲಿ ಒಂದು ಸಣ್ಣ ತ್ರಿಕೋನದಸ್ಟ್ ಕೊಯ್ದ್ ತೆಗೆಕು. ಗಂಟ್‌ನ ಹಕ್ಕಲೆ ಹಾಂಗೇ ಬುಟ್ಟ ಜಾಗಲಿ ಬೊಳ್ಳಿ ಕಟ್ಟಿಕೆ ಆವ ಹಾಂಗೆ ಚಡಿ ಮಾಡಿಕಾಂಕು. ಇನ್ನ್ ಒಳಗೆನ ಗೋಳಿ ಸಪೂರ ಇರುವ ಕಡೆ ಬೆದ್ರ್ ತುಂಡ್ ಎರಡ್ ಬೇಕ್. ಅದ್ ಅಂದಾಜ್ ನಾಲ್ಕ್ ಅಂಗುಲ ಉದ್ದ ಇರೊಕು. ಅದ್ಕೆ ಒಂದು ಗಂಟ್ ಇರೊಕು. ಅದರ ಗಂಟ್‌ಂದ ಕಾಗಡೆ ಕೆರ್ಕಿ ಕೆರ್ಕಿ ಸಪೂರ ಮಾಡಿಕಾಂಕು. ಮತ್ತೆ ಗಂಟ್‌ನ ನಡುಲಿ ಒಟ್ಟೆ ಮಾಡೊಕು. ಆ ಒಟ್ಟೆಗೆ ಗಟ್ಟಿ ಇರುವ ಸಪೂರದ ಬೊಳ್ಳಿನ ಹೊಗ್ಸಿ ಅದರ ಗಂಟ್‌ನ ಕಾಗಡೆ ಗಂಟ್ ಹಾಕಿ ನೇತಾಡ್ಸೊಕು. ಬೊಳ್ಳಿ ತೋರದ ಬೆದ್ರ್‌ನಸ್ಟ್ ಉದ್ದ ಇರೊಕು. ಈಗ ತೋರದ ಬೆದ್ರ್‌ಗೆ ಚಡಿ ಮಾಡ್ದಲ್ಲಿಗೆ ಹಞ ತೋರದ ಬೊಳ್ಳಿನ ಕಟ್ಟಿಕಾಂಕು. ಅದ್ ದನದ ಕುತ್ತಿಗೆಗೆ ಕಟ್ಟಿಕೆ ಆಗುವ ಹಾಂಗೆ ಇರೋಕು. ಅದರ ಕಟ್ಟಿದ ಮೇಲೆ ಎರಡೂ ಪುಡೆಗೂ ಕೊಯ್ದ್ ತೆಗ್ದ ಪುಡೆ ಬುಟ್ಟ್ ಸಪೂರದ ಬೊಳ್ಳಿಲಿ ನೇತಾಡ್ಲಿಕೆ ಆವ ಹಾಂಗೆ ಮಾಡ್ದ ಬೆದ್ರ್‌ನ ಬೊಳ್ಳಿಲಿ ಕಟ್ಟೊಕು. ಈಗ ಮೆಂಟೆ ತಯಾರ್ ಆತ್.

ದನಗಳಿಗೆ ಮೆಂಟೆ ಕಟ್ಟಿರೆ ಅದ್ ಹೋಕನ ಬಾಕನ ಗಂಟೆನ ಹಾಂಗೆ ಟಾಂಕ್ ಟಾಂಕ್ ಟಾಂಕ್‌ತ ಸಬ್ದ ಕೇಳ್ತಾ ಇದ್ದದೆ. ಕೆಲವು ದನಂಗ ತೋಟಕ್ಕೆ ಗದ್ದೆಗೆ ಬಂದ್ ಬಾಳೆ, ನಟ್ಟಿ ದೆಯ್ಯಿ, ಬೆಳೆ ಎಲ್ಲಾ ಕದ್ದ್ ತಿಂದವೆ. ಅವು ತಿಂಬಕನ ಮೆಂಟೆ ಸಬ್ದ ಕೇಳಿ ದನಂಗ ಬಂದೊಳತ ಅದರ ಬೆರ್ಸಿಕೆ ಸುಲಬ ಆದೆ. ಇನ್ನೊಂದು ರೀತಿಲಿ ಸ ಮೆಂಟೆನ ಮಾಡುವೆ. ಇದ್ ಸಣ್ಣ ಪೆಟ್ಟಿಗೆನ ಹಾಂಗೇ ಇದ್ದದೆ. ಅದರ ಕುತ್ತಿಗೆಲಿ ನೇತಾಡ್ಸಿ ಕಟ್ಟಿಕೆ ಆವ ಹಾಂಗೆ ಒಟ್ಟೆ ಇದ್ದದೆ. ಇದರ ಮರಂದಲೇ ಮಾಡ್ದು. ತೆಳ್ಳನೆ ಹಲಗೆಲಿ ಈ ಪೆಟ್ಟಿಗೆ ಮಾಡುವೆ. ಅದರ ಒಳಗೆ ಗಟ್ಟಿ ಇದ್ದ ಕಲ್ಲ್, ಸಣ್ಣ ಜಲ್ಲಿ ಕಲ್ಲ್ ಹಾಕುವೆ. ದನ ಕುತ್ತಿಗೆನ ಆಡ್ಸ್‌ಕನ ಇದರ ಒಳಗೆ ಇರುವ ಕಲ್ಲ್ ಪೆಟ್ಟಿಗೆಗೆ ತಾಂಗಿ ಸಬ್ದ ಬಂದದೆ. **(ಎಂ.ಜಿ.ಕೆ.)**

'ತಟ್ಟೆ' ತ್ತೇಳ್ರೆ ದನಗಳ ಕುತ್ತಿಗೆಗೆ ಕಟ್ಟ್‌ವ ಗಂಟೆತ್ತೇಳಕ್. ಗಂಟೆತ್ತೇಳ್ರೆ 'ಡಣ್‌ಡಣ್' ತ ಸದ್ದ್ ಬಾವಂತದ್ದ್. ಆದರೆ ಇದ್ ಹಂಗಲ್ಲ 'ತಟ ಪಟ' 'ಲಟ ಪಟ' ತ ಸದ್ದ್‌ದ್.. ತಟ್ಟೆಗೂ ಮೆಂಟೆಗೂ ವ್ಯತ್ಯಾಸ ಉಟ್ಟು. ಮರಂದ ಮಾಡ್ದರ ತಟ್ಟೆತ್ತೇಳ್ರೆ ಬೆದ್ರ್‌ಂದ ಮಾಡ್ದರ ಮೆಂಟೆತ್ತೇಳಿವೆ. ಕುಂಬುಳಿ ಮರದ ತಟ್ಟೆ ಸದ್ದ್ ಜಾಸ್ತಿ. ದೂರಕೆ ಅದರ ಸದ್ದ್ ಕೇಳ್ದೆ. ದನಗ ಕತ್ತಲಾಕನ ಹಟ್ಟಿ ಕಡೆಗೆ ಬಾವ ಸದ್ದ್‌ನ ಮನೆವು ಆಲ್ಸಿ ಅದ್ ತಮ್ಮ ದನಗಳ್ದೇತ ಗೊತ್ತು ಮಾಡಿವೆ. ಒಂದ್ ಸಮೆ ದನಗ ಹಟ್ಟಿಕಡೆ ಬಾರದೆ ಎಲ್ಲೋ ಕಾಡ್‌ಲೇ ಪೋಲಿ ಬಿದ್ದಿದ್ದವೆ. ಮನೆವು ತಟ್ಟೆ ಸದ್ದ್‌ನೇ ಆಲ್ಸಿಕಂಡ್ ಹೋಗಿ ಹಟ್ಟಿಗೆ ಹೊಡ್ಕಂಡ್ ಬಂದವೆ.

ಹಸಿ ಕುಂಬುಳಿ ಮರ ಇಲ್ಲರೆ ಯಾವ್ದೇ ಹಗುರ ಮರದ ಒಂದ್ ಸಣ್ಣ ತುಂಡುನ ಆಚೆ ಈಚೆ ಬಡ್ಚಿ (ಕೆತ್ತಿ) ಮತ್ತೆ ಒಳಗೆ ಪೊಟ್ ಮಾಡಿ ತೂತ ಮಾಡಿವೆ. ಮತ್ತೆ ಸರಿ ನಡೂಗೆ ಕಣ್ಣಿ ಕರ್ದ್ ತಟ್ಟೆದ್ ಗಾತ್ರಕ್ಕೆ ತಕ್ಕಂಗೆ ಎರ್ಡ್ ತುಂಡು ಕೋಲುಗಳ ತಂತಿಗೆ ಚುರ್ದವೆ. ಆ ಸಣ್ಣ ಕೋಲುಗ ಅಲಾಡ್‌ಕನ ತಟಪಟ ಸದ್ದ್ ಮಾಡ್ದೆ. ಪೊಟ್ಟ್ ಒಳಗೆಂದ ಸುರೂಲಿ ಮಾಡ್ದ ತೂತಂದ ಹಗ್ಗ ಹಾಕಿ ದನದ ಕುತ್ತಿಗೆಗೆ ಕಟ್ಟಿವೆ. ದನ ಮೇಯಕನ, ತಲೆ ಆಡ್ಸಕನ ತಟ್ಟೆ ಅಲ್ಲಾಡ್ದೆ. ತಟ್ಟೆ ಒಣಂಗಿದಷ್ಟ್ ಸದ್ದ್ ಜಾಸ್ತಿ. ನೋಡಿಕೆ ತಟ್ಟೆ ಸಣ್ಣ ಸೊತ್ತು. ಆದರೆ ಮಾಡಿಕೆ ಅಷ್ಟೇ ಕಷ್ಟ ಉಟ್ಟು. 'ಅತಿಬುದ್ಧಿ'ವಂತರ್ ಮೇಯಿತಿರ್‌ವ ದನಗಳ ಕುತ್ತಿಗೆಂದ ತಟ್ಟೆನ ಬಿಚ್ಚಿ ತಮ್ಮ ದನಗಳ ಕುತ್ತಿಗೆಗೆ ಕಟ್ಟಿವೆ. ಸಾಮಾನ್ಯಾಗಿ ಸುಮ್ಮನೆ ಜಗಳಕೆ ಬರೋವಿದ್ದವಲ್ಲ, ಅಂತವುಕೆ' ಬಂದ್ ಬುಡ್ತ್ ತಟ್ಟೆ ಆಡ್ಸಿಕಂಡ್'ತ ಹೇಳಿವೆ. **(ಬಾ.ಜೋ.)**



ಮೊಡ್ಪಳೆ

ಗದ್ದೆ ಕೆಲ್ಸಕ್ಕೆ ತೋಟದ ಕೆಲ್ಸಕ್ಕೆ ಹೋಕನ ತಲೆಗೆ ಇಸುವ ಹಾಳೆಟೊಪ್ಪಿನ ಮೊಡ್ಪಳೆ ಅಂತ ಕರ್ದವೆ. ತುಳುಲಿ ಮುಟ್ಟಪಾಳೆ/ ಮುಟ್ಟಾಲೆತ ಹೇಳುವೆ. ಮಲೆಯಾಳಂಲಿ ಪಾಳತೊಪ್ಪಿ ತ ಹೇಳುವೆ. ಬ್ಯಾರಿ ಬಾಸೆಲಿ ಸ ಮುಟ್ಟಪ್ಪಾಳೆಂತಲೇ ಹೇಳುವೆ. ಇದರ ದಕ್ಷಿಣ ಕನ್ನಡ ಮತ್ತೆ ಉಡುಪಿ ಜಿಲ್ಲೆಲಿ ಕೃಷಿಕರು ತಲೆಲಿ ಸೊಪ್ಪು ಸೌದೆ ಹೊರ್‌ಕನ ಇಸಿಕಂದವೆ. ಕೊಮ್ಮುನ ಹಾಳೆಂದ ಇದರ ಮಾಡ್ದು. ಒಳ್‌ಂಗಿದ ಹಾಳೆನ ನೀರ್‌ಲಿ ಹಾಕಿಸಿ ಮೆತ್ತಂಗೆ ಆದ ಮೇಲೆ ನಡೂಲಿ ಅದರ ಬೇಕಾದ ಹಾಂಗೆ ಮಡ್ಚಿ ಕಡೆ ಕೊಡಿ ಒಂದು ಮಾಡಿ ಕಟ್ಟಿ ಹೊಲ್ದ್ ಮೊಡ್ಪಾಳೆ ಮಾಡುವೆ. ಬೈನೆ ಮರದ ಸೋಗೆನ ಕೊತ್ತಳಿಂಗೆ ಬುಡಲಿ ಗಟ್ಟಿಯಾಗಿ ಕೊತ್ತಳಿಂಗೆನ ಹಿಡ್ಕಂಗೆ ಕಪ್ಪ್ ಬಣ್ಣದ ನೂಲು ಇದ್ದದೆ. ಅದು ಬಾರಿ ಗಟ್ಟಿ ಇದ್ದದೆ ಆ ನೂಲುನ ತೆಗ್ದ್ ಮಡ್ಪಳೆ ಮುಡ್ದ್‌ವೆ. ಇದ್ಕೆ ಕನ್ನಿ ಬಳ್ಳಿ ಹೇಳುವೆ. ಇದರ ಅಜಲ ಜನಂಗದೋವು ಮಾಡುವೆ.

ತೋಟದ ಕೆಲಸ, ಗದ್ದೆ ಕೆಲಸಕ್ಕೆ ಹೊವವ್ಕೆ ತಲೆಗೆ ಇಸಿಕೆ ಇದ್ ಬೇಕೆ ಬೇಕು. ಬಿಸ್ಲ್‌ಗು ಆದೆ. ಸೊಪ್ಪುನಕಟ್ಟ, ಹುಲ್ಲುನ ಕಟ್ಟ, ಸೌದೆ ಕಟ್ಟ ತಲೆ ಮೇಲೆ ಹೊರಿಕೆ ಇದ್ ಬೇಕಾದೆ. ಮತ್ತೆ ತೂಕದ ಹೊರೆನ ಹೊರಿಕೆ ಸ ಬೇಕು. ದಿನ್ನದ ಸಾಮಾನ್ ತಲೆ ಮೇಲೆ ಇಸಿಕನ್ ಹೋಕನ ತಲೆಗೆ ಒತ್ತುದುಲೆ. **(ಎಂ.ಜಿ.ಕೆ.)**





ಮೊರ – ತೊಡ್ಪೆ

ಕುಞಿಮೊರ, ದೊಡ್ಡ ಮೊರ, ಬೀಸುವ ಮೊರತ್ತೇಳಿ ಮೊರಗಳ್‌ಲಿ ಮೂರ್‌ತರ ಉಟ್ಟು. ಕ್ರಿಸಿಕರ ಮನೆಗಳ್‌ಲಿ ಇರಕಾದ ಅಗತ್ಯ ಸೊತ್ತುಗಳ್‌ಲಿ ಮೊರನೂ ಒಂದ್.

ಕುಞಿ ಮೊರತೇಳ್ರೆ ಸಣ್ಣ ಮೊರ. ಸಂತೆಂದ ತಾವ ಜೀರಿಗೆ, ಮೆಂತೆ, ಎಳ್ಳ್ ಇಂತವುಗಳ ಕೇರಿಕೆ ಉಪಯೋಗ ಮಾಡಿವೆ. ದೊಡ್ಡ ಮೊರ ಇದ್ ಸಾಮಾನ್ಯಾಗಿ ಎಲ್ಲರ ಮನೆಲೂ ಇದ್ದದೆ. ಅಕ್ಕಿ, ರಾಗಿ, ಗೋದಿ, ಕುಡು ಇಂತದರೆಲ್ಲ ಕೇರಿಕೆ ಬಳ್ಸಿವೆ. ಕಾಪುಂದ ಕೋಳಿ ಪಿಳ್ಳೆಗಳ ಇಳ್ಸಿಕೆ, ಮತ್ತೆ ಕೆಲವು ಶಾಸ್ತ್ರ ಮಾಡಿಕೆಲ್ಲ ಬೇಕಾದೆ. ದದ್ದ್ ಮೊರ ಊರ್‌ನ ಮಾರಿ ನೀಕಕನೂ ಬೇಕಾದೆ. ಕಳಲಿ ಬತ್ತದ ಒಕ್ಲು ಸಮೆಲಿ ಉಕ್ಕುಡೆ ಹಿಡೆಕೂ ಬೇಕಾದೆ, ಬತ್ತ ಪಾತಿಕೂ ಬೇಕಾದೆ.

ಇನ್ನೊಂದು ಬೀಸುವ ಮೊರ. ಅದ್ ಗೊರ್ಗದ ರೀತಿಲಿದ್ದದೆ. ಆದರೆ ಗೊರ್ಗದಸ್ಟ್ ಅಗಲ ಇರ್ದುಲೆ, ಗೊರ್ಗದಸ್ಟ್ ಉದ್ದ ಇರ್ದುಲೆ. ಅದ್ ಬತ್ತದ ಒಕ್ಲು ಸಮೆಲಿ ಅಗತ್ಯವಾಗಿ ಬೇಕ್. ಬತ್ತ ಪಾತಿದ ಮೇಲೆ ಅದರ ದೂಳು ರಟ್ಟಿಸಿಕೆ ಬೀಸುವ ಮೊರನ ಉಪಯೋಗ ಮಾಡಿವೆ.

ಬತ್ತ ಪಾತುದು ತೇಳ್ರೆ ಬತ್ತದ ಒಕ್ಲು ಆದ ಮೇಲೆ ಬತ್ತನೆಲ್ಲಾ ಒಂದ್ ಗುಡ್ಡೆ ಮಾಡಿವೆ. ಗುಡ್ಡೆ ಮಾಡ್ದ ಬತ್ತನ ಬೇಟಿ ಕಂಬದ ಈಚೆಂದ ಬೇಟಿ ಕಂಬದ ಆಚೆಗೆ ಮೊರಲಿ ಬತ್ತ ತಕಂಡ್ ಹಞ ಎತ್ತರದ ಒಂದ್ ಕ್ರಮಲಿ ಎರಚಿವೆ. ಇಡೀ ಗುಡ್ಡೆದ್ ಬತ್ತ ಬೇಟಿ ಆಚೆ ಕಾಮನ ಬಿಲ್ಲ್‌ನಂಗೆ ಬಿದ್ದಿದ್ದದೆ. ಆಗ ಬೀಸು ಮೊರಂದ ಬೀಸಿರೆ ಬತ್ತದ ಸುತ್ತ ಬಿದ್ದಿದ್ದ ದೂಳು ಪೂರಾ ರಟ್ಟಿದೆ. ಮತ್ತೆ ಅಂಗಳನೆಲ್ಲಾ (ಕಳ) ಗುಡ್ಸಿ ಬತ್ತನ ಒಣಂಗಿಕೆ ಹರ್‌ಂಡಿವೆ. ಒಂದ್ ಮೈ ಒಣ್‌ಂಗಿದ ಮೇಲೆ ಬತ್ತನೆಲ್ಲಾ ಗುಡ್ಡೆ ಮಾಡಿ ಮೊರಲಿ ತುಂಬಿಸಿ ಪರೆಗೆ ಸರ್ದವೆ. ಪರೆಂದ ಒಂದೋ ದೊಡ್ಡ ಕುಕ್ಕೆಗೆ ಇಲ್ಲರೆ ಗೋಣಿ ಚೀಲಕೆ ತುಂಬಿವೆ. ಹಂಗೆ ತುಂಬಿ ತಕೊಂಡೋಗಿ ಒಂದೋ ಕಡ್ಕೆಗೆ ಇಲ್ಲರೆ ಪತ್ತಾಯಕೆ, ಅದಿಲ್ಲರೆ ಚೀಲಲೇ ಕಟ್ಟಿಸಿವೆ.

ಮೊರಗಳ ನೀರ್‌ವಾಟೆ ಇಲ್ಲರೆ ಬೆತ್ತಂದ ಮಾಡಿವೆ. ಬೆತ್ತ ಎಲ್ಲಾ ಕಡೆ ಸಿಕ್ಕುಲೆ. ಆಗ ಬೆದ್ರ್‌ಂದ ಮಾಡಿವೆ. ಬೆದ್ರ್‌ಕಿಂತ ವಾಟೆ ಒಳ್ಳೆದ್. ವಾಟೆಗಿಂತ ಬೆತ್ತ ಒಳ್ಳೆದ್. ಬೆತ್ತದ ಮೊರ ಬಾಳಿಕೆ ಜಾಸ್ತಿ. ವಾಟೆ ಇಲ್ಲರ್ ಬೆತ್ತನ ತಂದ್ ಸೀಳಿ ಕೀಸಿ ಬಾಸ್ ಮಾಡಿಕಂಡವೆ. ಮತ್ತೆ ಆ ಬಾಸ್‌ನ ನೆಯ್ದುವೆ. ಬೆದ್ರ್‌ನ ಒಡ್ದ್ ಬಾಸ್ ಮಾಡಿ ಅದರ ಬಿಳಿ ಬೆಂಡ್‌ನ ಲಾಯ್ಕ್ ಕೀಸಿವೆ. ಆದರೆ ವಾಟೆ ಮಾತ್ರ ಬೆತ್ತದಷ್ಟೇ ಲಾಯ್ಕಾಗಿ ಬಾಸ್ ಬಳ್ಕುದ್ಲೆ. ಗಂಟ್‌ಂದ ಬೇಗ ಮುರ್ದೋದೆ.

ಮೊರ ಜಾಸ್ತಿ ಬಾಳಿಕೆಲಿ ಇರ್ಲಿತ ಸಗಣಿ ಸರ್ಸಿವೆ. ಮತ್ತೆ ಕೆಲವು ಉದ್ದು ಮತ್ತೆ ಮೆಂತೆ ನೊಟ್ಟ್‌ಗೆ ಕಾಗದನ ಪದ್‌ನಿಸಿ ಬಂದದಂಗೆ ಕಡ್ದ್ ಮೊರನ ಲಾಯ್ಕ್ ಸರ್ಸಿ ನೆರಳ್‌ಲಿ ಒಣಂಗಿಸಿವೆ. ಅದಂತೂ ಸಗಣಿ ಸರ್ಸಿದಕ್ಕಿಂತ ಜಾಸ್ತಿ ಬಾಳಿಕೆ ಬಂದದೆ. ಒಂದ್ರಿ (ವನಲೆ) ಕುಕ್ಕೆ, ಮೊರ, ಬರ್ಜಿ (ಬಳಂಜಿ), ಗರ್ಗ ಇಂತದರೆಲ್ಲ ಮಾಡ್ದು ಮೇದರ್. ಇದ್ ಮೇದರ ಸಮುದಾಯದ ಮುಕ್ಯ ಕಸುಬು. **(ಬಾ.ಜೋ.)**



ವನಲೆ

ತಡ್ಪೆನ ಹಾಂಗೆ ಸಣ್ಣದಾದ ಸೊತ್ತು. ತುಳುಲಿ ಮತ್ತೆ ಬ್ಯಾರಿ ಬಾಸೆಲಿ ಕಂಚಡ್ಪೆಂತೇಳ್‌ವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಮತ್ತೆ ಸಕ್ಲೇಶ್ಪುರ ಕಡೆಲಿ ಬಳ್ಸ್‌ವೆ. ಇದರ ಬೆತ್ತಂದ ಮಾಡ್ದು. ಒಣಲೆಲಿ ಎರಡ್ ನಮೂನೆಗ ಇದ್ದದೆ. ಒಂದು ಒಣಲೆಗೆ ನಡೂಲಿ ಒಟ್ಟೆ ಇದ್ದದೆ. ಇನ್ನೊಂದು ಹಳ ದೊಡ್ಡದಿದ್ದ್ ನಡುಲಿ ಒಟ್ಟೆ ಇರ್ದುಲೆ. ಒಟ್ಟೆ ಇರ್ವ ಒಣಲೆಲಿ ಒಟ್ಟೊಟ್ಟೆ ಇರೊಕಾರ್ ಅದರ ಮುಡೆಕನ ನೊಡುಲಿ ಬೆತ್ತನ ಹಳ ದೂರ ದೂರ ಇರುವಾಂಗೆ ಮಾಡೊಕು.

ಬೆತ್ತಂದ ಮಾಡುವ ಸೊತ್ತುಗಳ ಮುಡೆವ ಕೊರಗರ್, ಅಜಲರ್, ಮಲೆಕುಡಿಯರ್ ಒಣಲೆನ ಮುಡ್ದವೆ. ಒಣಲೆಲಿ ಬತ್ತನ ಮಿದ್ದ್ ತೆಗ್ದವೆ. ಒಣಲೆಲಿ ತೌಡ್ ಬೇರೆ ಅಕ್ಕಿ ಬೇರೆ ಮಾಡಿಕೆ ಆದೆ. ರಾಗಿಲಿ ಕಲ್ಲ್, ಕಾಡ್ ಮಿನಿ ಇದ್ದರೆ ಒಟ್ಟೆ ಇಲ್ಲದ ಒಣಲೆ ಅಲ್ಲರ್ ತಡ್ಪೆಲಿ ಹೊಡ್ಕೊಕು. ಒಟ್ಟೊಟ್ಟೆ ಇರ್ವ ವನಲೆಗಳ ಕಬ್ಬಿಣದ ತಗಡ್ಂದ ಸ ಮಾಡ್ವೆ **(ಎಂ.ಜಿ.ಕೆ.)**.

ಕನ್ನಡದ ಜರಡಿ ಎಂಬ ಪದಕ್ಕೆ ಅರೆಬಾಸೆಲಿ ವನಲೆ, ಒಂದ್ರಿತೆಲ್ಲ ಹೇಳಿವೆ. ಒಂದ್ರಿಲಿ ಎರಡ್ ತರ ಉಟ್ಟು. ಒಂದು ಸಣ್ಣ ಕಣ್ಣ್ ಒಂದ್ರಿ. ಇನ್ನೊಂದು ದೊಡ್ಡ ಕಣ್ಣ್ ಒಂದ್ರಿ. ವಾಟೆ, ಬೆತ್ತ ಅದಿಲ್ಲರೆ ಬೆದ್ರ್‌ಂದ ಒಂದ್ರಿ ಮಾಡಿವೆ. ಮೊರ ಮಾಡಕನ ಹೆಂಗೆ ವಾಟೆ, ಇಲ್ಲರ್ ಬೆತ್ತನ ಸೀಳಿ, ಕೀಸಿ ಬೆಂಡ್‌ನೆಲ್ಲಾ ತೆಗ್ದವೊ ಹಂಗೆ ಒಂದ್ರಿ ಮಾಡಕನೂ ಮಾಡಿಕಂಡವೆ. ಬೆತ್ತಂದ ಮಾಡ್ದ ಒಂದ್ರಿ ಬಾಳಿಕೆ ಜಾಸ್ತಿ, ನೋಡಿಕೂ ಲಾಯ್ಕ್. ಒಂದ್ರಿನ ಸೆಗಣ ಸರ್ಸಿ ಇಸಿಕಂಡವೆ. ಅದಿಲ್ಲರೆ ಉದ್ದು, ಕಾಗದನೆಲ್ಲಾ ಪದ್‌ನಿಸಿ ಬಂದ ಕಡ್ದಂಗೆ ಕಡ್ದ್ ಸರ್ಸಿ ನೆರಳ್‌ಲಿ ಒಣಂಗಿಸಿಕಂಡ್‌ಸ ಉಪಯೋಗ ಮಾಡಿರೆ ಎಷ್ಟೋ ವರ್ಷ ಮುಟ್ಟ ಹಾಳಾದ್ಲೆ.

ಸಣ್ಣಕಣ್ ಒಂದ್ರಿಲಿ ಅಕ್ಕಿ ಒಂಚಿರೆ ಕಡೆ ಅಕ್ಕಿ ಮತ್ತೆ ನುಚ್ಚೆ ಬಿದ್ದದೆ. ಸಣ್ಣ ಕಣ್ಣ್ ಒಂದ್ರಿ ತಯಾರ್ ಮಾಡ್ದು ಹಳ ಕಷ್ಟದ ಕೆಲ್ಸ. ದೊಡ್ಡ ಕಣ್ಣ್ ಒಂದ್ರಿಲಿ ಒಂಚಿರೆ ಕಡ್ಡಿ, ಮೊಣ್ಣ್ ಉಂಡೆ, ದಪ್ಪಕಲ್ಲ್ ಇದೆಲ್ಲ ಸಿಕ್ಕಿಕಂಡದೆ. ಸಾಮಾನ್ಯಾಗಿ ಬತ್ತ, ಗೋದಿ ಇಂತದರೆಲ್ಲ ಒಂಚಿವೆ.

ಹಲ್ಸ್‌ನ ಹಣ್ಣ್‌ಂದ ಮಾಂಬಳ ತೆಗಕೆ ದೊಡ್ಡಕಣ್ಣ್ ಒಂದ್ರಿ ಒಳ್ಳದಾದೆ. ಮೇಲೆ ಬೀಜ ನಿತ್ತದೆ ಮಾಂಬಳ ಲಾಯ್ಕ್ ಇಳ್ದದೆ. ಮೆಣ್ಸ್, ಒಣಂಗಿಲ್ ಮೀನ್‌ನ ಇಂತದರೆಲ್ಲ ಒಣ್‌ಂಗಿಸಿಕೆ ಒಂದ್ರಿನ ಬಿಸ್ಲಿಗೆ ಇಸಿವೆ. ಮೈಮೇಲೆ ಹಲ್ಲಿ ಬಿದ್ದರೆ ಚಿನ್ನದ ವಾಲೆ, ಮೂಗುಬೊಟ್ಟು, ಉಂಗುರ ಯಾವ್ದಾರ್ ಒಂದರ ಒಂದ್ರಿ ಮೇಲೆ ಹಿಡ್ದ್, ಹಲ್ಲಿ ಬಿದ್ದವನ ಕೆಳಗೆ ಕರ್ಸಿ ಅದರ ಮೇಲೆ ನೀರ್ ಹೊಯ್ದ್ ಶಾಸ್ತ್ರ ಮಾಡಿವೆ. ಅದರ ಒಂದ್ರಿ ಶಾಸ್ತ್ರಂತ ಹೇಳಿವೆ. ಮಳೆ ನಾಕಾರ್ ಹನಿ ಬಿದ್ದ್ ಹೋಬುಟದೆ. ಆಗ 'ಮಳೆ ಬಾತ್, ಒಂದ್ರಿ ಆಡ್ಸಿ ಹೋತ್'ತ ಹೇಳಿವೆ. **(ಬಾ.ಜೋ.)**



ಸಬ್ಬಲ್

ಇದ್ ಕೃಷಿಕರಿಗೆ ಮೊಣ್ಣ್ ಎಳ್ಳಿಕೆ ಬೇಕಾದ ಒಂದು ಕಬ್ಬಿಣದ ಹತ್ಯಾರ್. ನೋಡಿಕೆ ಪಾರೆಂಗಿನ ಹಂಗೆ ಇರುವ ಉದ್ದದ ಕಬ್ಬಿಣದ ಸಲ್ಕೆ. ಸುಮಾರ್ 5 ರಂದ 6 ಅಡಿ ಉದ್ದ ಇರುವ ಈ ಕಬ್ಬಿಣದ ತುಂಡು ಸುಮಾರ್ ಒಂದುವರೆ ಇಂಚ್ ದಪ್ಪ ಉರುಂಟ್‌ಲಿ ಇದ್ದದೆ. ಒಂದು ಕಡೆಲಿ ಮೊಣ್ಣು ಎಳ್ಳಿಕೆ ಬೇಕಾಗಿ ಚಪ್ಪಟೆ ಬಾಯಿ ಮಾಡುವೆ.

ಜೆ.ಸಿ.ಬಿ ಮತ್ತೆ ಬೇರೆ ಬೇರೆ ಮೊಣ್ಣ್ ಎಳ್ಳುವ, ಬರೆ ಜರ್ಸುವ ಯಂತ್ರಗ ಬಾಕೆ ಮುಂದೆ ದೊಡ್ಡ ದೊಡ್ಡ ಗುಡ್ಡೆಗಳ ಜೆರ್ಸಿ ನೆಲ ತಟ್ಟ್ ಮಾಡಿಕೆ ಈ ಸಬ್ಬಲ್‌ನ ಉಪಯೋಗಿಸುತ್ತಿದ್ದೊ. ಇದ್ ಸುಮಾರ್ 10ಕೆಜಿಂದಲೂ ಜಾಸ್ತಿ ಬಾರ ಇದ್ದದೆ. ಮೊಣ್ಣು ಎಳ್ಳಿಕೆ ಪಿಕಾಸ್‌ನ ಬಳ್ಸುವೆ, ಆದರೆ ಬರೆ ಜರ್ಸಿಕೆ ಸಬ್ಬಲ್‌ಲಿ ಬಾರೀ ಸುಲಬ ಆದೆ. ಹಿಂದೆಲ್ಲ ಗದ್ದೆ-ತೋಟಗಳಿಗೆ ದನಂಗ ಬಾರದಂಗೆ ಉದ್ದಕ್ಕೆ ಅಮೆ ವಾಟೆ ಬೇಲಿ ಕಟ್ಟ್‌ತ್ತಿದ್ದೊ. ಬೇಲಿ ಕಟ್ಟಿಕೆ ಸುಮಾರ್ 3 ಅಡಿಗೆ ಒಂದರಂಗೆ ಚೂಣ (ಮರದ ಸಪೂರದ ಸಣ್ಣ ಕಂಬ) ಹಾಕ್‌ತ್ತಿದ್ದೊ. ಗಟ್ಟಿ ಇರುವ ನೆಲಕೆ ಚೂಣ ಹಾಕಿಕೆ ಸಬ್ಬಲ್‌ಲಿ ಗುಂಡಿ ಮಾಡಿರೆ ಸುಲಬ ಆದೆ. ಈಗ ತಂತಿ ಬೇಲಿ ಬಂದ ಮೇಲೆ ವಾಟೆ ಬೇಲಿನ ಯಾರೂ ಹಾಕುದುಲೆ. ವಾಟೆ ಬೇಲಿ ಒಂದು ವರ್ಸಂದ ಜಾಸ್ತಿ ಬಾಳ್ತರ ಸ ಬಾದುಲೆ. ಹಂಗಾಗಿ ಕೃಷಿಕರ ಮನೆಲಿ ಈಗ ಸಬ್ಬಲ್ ಕಾಂಬಕೆ ಸಿಕ್ಕುದು ಅಪುರೂಪ. ಈಗಿನ ಮಕ್ಕಳಿಗೆ ಸಾಧಿಸಿದರೆ ಸಬ್ಬಳ ನುಂಗಕ್ ತೇಳುವ ಗಾದೆ ಮಾತ್ರ ಗೊತ್ತುಟು, ಆದರೆ ಸಬ್ಬಳ (ಸಬ್ಬಲ್) ತೇಳಿರೆ ಎಂತ ತೇಳಿ ಗೊತ್ತಿಲೆ. **(ಪು.ಕೆ.ವಿ.)**



ಸೋರೆ ಬುರ್‌ಡೆ

ಸೋರೆ ಬುರ್‌ಡೆ ಇಲ್ಲರೆ ಸೋರೆ ಬುಂಡೆಂದ ಸುಮಾರ್ ಉಪಕಾರ ಉಟ್ಟು. ಸೋರೆ ಕಾಯಿಲಿ ಕಂಹಿ ಮತ್ತೆ ಸಿಂಹಿ ರುಚಿ ಇರ್‌ವ ಎರಡ್ ತರ ಉಟ್ಟು. ಆಕಾರಲಿ ಸುಮಾರ್ ತರ ಉಟ್ಟು. ಸಪೂರಾಗಿ ಉದ್ದ, ಸುರ್‌ಟಿದಂಗೆ ಇರ್‌ವ ದೊಡ್ಡ ಕ್ಯಾನೆ ಗೆಂಡೆಯಷ್ಟ್ ಅಗಲದ, ಹಿಡಿ ಗಾತ್ರದ, ಸಾದಾರಣ ಗಾತ್ರದ ಹಿಂಗೆ ಬೇರೆ ಬೇರೆ ಆಕಾರದ ಸೋರೆ ಕಾಯಿ ಉಟ್ಟು.

ಲಾಯ್ಕ ಬೆಳ್ದ ಸೋರೆಕಾಯಿನ ಒಣಂಗಿಸಿರೆ ಗಟ್ಟಿಯಾದೆ. ಅದ್ ಒಡ್ಡೋದಾಗಲಿ, ಹಾಳಾದಾಗಲಿ ಆದುಲೆ. ಹಗೂರಾದ ಆ ಸೋರೆ ಬುರ್‌ಡೆಂದ ಬೇರೆ ಬೇರೆ ಉಪಕಾರ ಉಟ್ಟು. ಬುರಡೆದ್ ಗಾತ್ರಕ್ಕೆ ತಕ್ಕಂಗೆ ಉಪಯೋಗ್ಸಿವೆ.

ಜೇನ್ ತೆಗೆಕನ ಎರಿನ ತುಂಬಿಕಂಬಕೆ ಮತ್ತೆ ಹಿಂಡಿಕಂಬಕೆ ಜೇನ್ ಕುರುಬರ್‌ಗೆ ಸೋರೆ ಬುರ್‌ಡೆ ಅಗತ್ಯ. ಅವರ ವಿಸೇಸ ಹಬ್ಬ ಬುಂಡೆ ಹಬ್ಬ. ಆ ಹಬ್ಬಲಿ ಬುಂಡೆ ಆಡ್ಸಿವೆ. ಬುಂಡೆತ್ತೇಳೀರೆ ಬುರ್‌ಡೆತ ಅರ್ತ. ಅವರ ಹಾಡಿಂದ ದೇವಸ್ತಾನ ಮುಟ್ಟ ಅದ್ ಎಷ್ಟೇ ದೂರ ಆದರೂ ಸನ ವೇಸ ಬದಲಿಸಿಕಂಡ್ ಜೇನ್‌ತುಪ್ಪಲಿ ಮೊಸಿನ ಅರ್ದ್ ಮೈಗೆಲ್ಲಾ ಪೂಜಿಕಂಡ್ ಬುರ್‌ಡೆನ ಆಡ್ಸಿಕಂಡ್ ಕೊಣ್ಕಂಡ್ ಹೋದು. ಮತ್ತೆ ಹಂಗೆ ಕೊಣ್ಕಂಡ್ ಕಂಡ ಕಂಡವ್ಕೆಲ್ಲಾ ಬಯ್ಕಂಡ್ ಹೋದೇ ಆ ಹಬ್ಬದ ವಿಸೇಸ. ಆ ಹಬ್ಬನ 'ಬೊಯ್ಗುಳದ ಹಬ್ಬ'ತ ಕೂಡ ಕರ್ದವೆ. ಅವು ಹಂಗೆ ಬೊಯ್ದೋತೇಳಿ ಯಾರೂ ಏನೂ ಮಾಡ್ದುಲೆ. ಅದ್ ಅವರ ಸಂಪ್ರದಾಯ ಆಗಿದ್ದದೆ.

ಕುರುಬರ್ ಮರದಡಿಲಿ ಪೂಜೆ ಮಾಡಿವೆ. ಮಂತ್ರ ಹೇಳಿವೆ. ಆಗ ಅವು ಮೊರಲಿ ಪೂಜೆ ಸಾಮಾನ್‌ನೆಲ್ಲಾ ಇಸಿದ್ದವೆ. ಅದರೊಟ್ಟಿಗೆ ಸೋರೆ ಬುರ್‌ಡೆನೂ ಇಸಿವೆ.

ಹಾವಾಡಿಗರ್ ಪುಂಗಿ ಊದಿವೆ. ನಾಗಿಣ ಪುಂಗಿತ ಸನ ಉಟ್ಟು. ಆ ಪುಂಗಿ ಮಾಡ್ದು ಸೋರೆ ಬುರ್‌ಡೆಂದಳೇ.

ದಾಸರ್ ತಾಳ ಹಾಕಂಡ್ ತಂಬೂರಿ ನುಡ್ಸಿವೆ. ಆ ತಂಬೂರಿ ಸೋರೆ ಬುರ್‌ಡೆದೇ ಆತದ್ದದೆ. ಅಕ್ಕಿ ಬೀಸುವ ಕಲ್ಲಷ್ಟಗಲದ ಸೋರೆ ಬುರ್‌ಡೆಂದ ತಂಬೂರಿ ಮಾಡಿವೆ. ಬುಂಡೆ ಬೆಸ್ತರಿಗೆ ಸೋರೆ ಬುರ್‌ಡೆ ಬೇಕೇ ಬೇಕ್.

ಒಣ್ಗಿದ ಸೋರೆಕಾಯಿಂದ ಬಾಟಲಿ ಮಾಡಿವೆ. ಪಾತ್ರೆನೂ ಸನ ಮಾಡಿವೆ. ತರಕಾರಿ ಬೀಜ ಇಂತ ಸೊತ್ತುಗಳ ಹಾಳಾಗದಂಗೆ ತುಂಬಿಕಂಬಕೆ ಅದ್ ಬೇಕಾದೆ. **(ಬಾ.ಜೋ.)**

ಸೋರೆ ಬುರುಡೆಂತೇಳಿರೆ ಸೋರೆ ಕಾಯಿನ ಓಡು. ತುಳುಲಿ ಸುರೆ ಬುರ್ದೆತ ಹೇಳುವೆ. ಸೋರೆಕಾಯಿ ಎಲ್ಲಾ ಊರ್‌ಲೂ ಬೆಳ್ಸುವೆ. ದಕ್ಷಿಣ ಕನ್ನಡ ಉಡುಪಿ ಮತ್ತೆ ಕೊಡಗು ಜಿಲ್ಲೆ ಲಿ ಅದರ ಓಡುನ ಒಳ್‌ಂಗಿಸಿ ಇಸಿಕಂಡವೆ. ಸೋರೆಕಾಯಿ – ಉರುಟಾಗಿ ನಾಳಿ ಇರುವ ಒಳ್ಳ ಬೆಳ್ದ ಸೋರೆನ ಕೊಯ್ದ್ ಬಿಸಿಲಿಗೆ ಇಸೊಕು. ಅದ್ ಲಾಯ್ಕ್ ಒಳ್‌ಂಗಿದ ಮೇಲೆ ಅದರ ಕುತ್ತಿಗೆನ ಅಡ್ಡಕ್ಕೆ ಪೊರ್ಲುಲಿ ಕೊಯ್ಯೊಕು ಮತ್ತೆ ಅದರ ಒಳಗೆಂದ ಎಲ್ಲತೆಗ್ದ್ ಮನಾರ ಮಾಡಿಕಾಂಕು. ಇದ್ ಸುಮಾರ್ ವರ್ಸಕ್ಕೆ ಬಾಳ್ತರ ಬಂದದೆ.

ಇದರ್ಲಿ ಬಿತ್ತಿಗೆ ಇಸುವ ನೆಟ್ಟಿಕಾಯಿ ಬೀಜ ದಾಸ್ತಾನ್ ಮಾಡಿಕೆ ಲಾಯ್ಕ್ ಆದೆ. ಬಾಯಿಗೆ ಸರಿ ಆವ ಒಂದು ಮರದ ತುಂಡುನ ಅದ್ಕೆ ಬೂಚು ಮಾಡಿಕಾಂಕು. ಅದರೊಳಗೆ ಬಿತ್ತ್‌ನ ತುಂಬಿಸಿ ಬೂಚು ಮುಚ್ಚಿ ಬೆಸೆಗಡಿ ಇಸಿರೆ ಎಸ್ಟ್ ದಿನ ಆದ್ರೂ ಹಾಳಾದುಲೆ. ಅದರ ಮಾಡಿಕಾಂಕೆ ಹೆಣ್ಣಾಳ್ ಗಂಡಾಳ್ ಯಾರಿಗೂ ಆದೆ. **(ಎಂ.ಜಿ.ಕೆ.)**



ಹಲ್ಲ್ ಕತ್ತಿ

ಕೆಯ್ಯಿ ಕೊಯ್ಯುವ ಕತ್ತಿ. ಕತ್ತಿ ಬಾಯಿಲಿ ಗರಗಸದ ಹಾಂಗೆ ಹಲ್ಲ್ ಇರ್‌ದರ್‌ಂದ ಹಲ್ಲ್ ಕತ್ತಿಂತ ಹೇಳುವೆ. ತುಳುಬಾಸೆಲಿ ಪರ್ಕತ್ತಿ, ಪರುಕತ್ತಿ, ಪರ್ದತ್ತಿತ ಹೇಳುವೆ. ಈ ಕತ್ತಿ ದಕ್ಷಿಣಕನ್ನಡ, ಉಡುಪಿ, ಕೊಡಗ್ ಜಿಲ್ಲೆಲೆಲ್ಲ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ.

ಬತ್ತದ ಬೇಸಾಯ ಸುರು ಆಕನವೇ ಇಂತಾ ಕತ್ತಿ ಇದ್ದಿರ್ದು. ಇದ್ ನೋಡಿಕೆ ಮಾಮೂಲಿ ಕತ್ತಿನ ಹಾಂಗೇ ಉಟ್ಟು. ಆದರೆ ಹಞ ಎದ್ರ್‌ಗೆ ಬೊಗ್ಗಿಕನ್ ಇದ್ದದೆ. ಹಿಡೆಕೆ ಮರದ ಹಿಡಿ ಇದ್ದದೆ. ಕತ್ತಿನ ಬಾಯಿಲಿ ಗರಗಸದ ಹಲ್ಲ್‌ನ ಹಾಂಗೇ ಸಣ್ಣ ಸಣ್ಣ ಹಲ್ಲ್ ಇದ್ದದೆ. ಇದರ ಕಬ್ಬಿಣದ ಆಚಾರಿಗ ಮಾಡುವೆ.

ಇದರ್‌ಲಿ ಕೆಯ್ಯಿ ಕೊಯ್ಯೊಕೆ ಲಾಯ್ಕ್ ಆದೆ. ಕೆಯ್ಯಿ ಬುಟ್ಟೊರೆ ಹುಲ್ಲ್ ಕೊಯ್ಯಕೆ ಆದೆ. ಸೊಪ್ಪು ಸೌದೆಗೆ ಈ ಕತ್ತಿ ಆದುಲೆ. ಕೆಯ್ಯಿ ಕೊಯ್ಯೊಕೆ ಬೇರೆ ಮಾಮೂಲು ಕತ್ತಿನೂ ಆದೆ. ಹೆಚ್ಚ್ ಕಮ್ಮಿ ನಮ್ಮ ರಾಜ್ಯದ ಎಲ್ಲಾ ಊರ್‌ಲೂ ಇಂತದೇ ಕತ್ತಿ ಇರ್ದು. **(ಎಂ.ಜಿ.ಕೆ)**

ಬತ್ತದ ಬೆಳೆ ಕುಯ್ಲಿಗೆ ಬೇಕೇ ಬೇಕಾದ ಕತ್ತಿತ್ತೇಳ್ರೆ ಅದ್ ಹಲ್ಲ್‌ಕತ್ತಿ. ಗರಗಸದ ಹಲ್ಲ್ ಇದ್ದಂಗೆ ಬುಡಂದ ತುದಿ ಮುಟ್ಟ ಹಲ್ಲ್ ಇದ್ದದೆ. ಆದರೆ ಗರಗಸದ ಹಲ್ಲ್ ಹಞ ಆಚೆ ಈಚೆ ಬಗ್ಗಿದ್ದದೆ. ಹಲ್ಲ್ ಕತ್ತಿದ್ ಹಂಗಲ್ಲ. ಬುಡಂದ ತುದಿ ಮುಟ್ಟ ಒಂದೇ ಸಮ ಇದ್ದದೆ.

ಮರದ ಹಿಡಿ ಸಣ್ಣದಾಗಿದ್ದದೆ. ಬೆಳೆ ಕೊಯ್ಯಕನ ಕತ್ತಿ ಜಾರಿ ಕೈಗೆ ಬಾದುಲೆ. ಈಗೀಗ ಹಲ್ಲ್‌ಕತ್ತಿ ಕಮ್ಮಿ ಆಗ್ತಾ ಉಟ್ಟು. ಏನಿದ್ದರೂ ಸಣ್ಣ ಕೊಕ್ಕೆ ಕತ್ತಿನ ಬೆಳೆ ಕೊಯ್ಲಿಗೆ ಉಪಯೋಗ ಮಾಡಿವೆ. ಹಲ್ಲ್ ಕತ್ತಿಂದ ಬತ್ತದ ಬೆಳೆ ಮಾತ್ರ ಅಲ್ಲ, ರಾಗಿ ಕೊಯ್ಲಿಗೆ, ಗದ್ದೆ ಪುಣಿಲಿರುವ ಹುಲ್ಲು ಕೊಯ್ಯಕೆಲ್ಲ ಬಾರಿ ಒಳ್ಳದಾದೆ. ಕೆಲ್ಸ ಆದಂಗೆ ತಂದ್ ಕತ್ತಿನೇಕೆಲಿ ಕತ್ತಿನ ಕೋಸಿವೆ. **(ಬಾ.ಜೋ.)**



ಹಾಳೆ ಕಿಳ್ಳಿ

ಅಡಿಕೆ ಹಾಳೆನ ಮಡ್ಚಿ ಕಿಳ್ಳಿ ಕಟ್ಟಿದ ಒಂದು ಸೊತ್ತು. ತುಳುಲಿ ಇದರ ಪಾಳೆದ ಕಿಳ್ಳಿತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಇದ್ದದೆ.

ಇದರ ಮಾಡಿಕೆ ಬಜ ಇಲ್ಲೆ. ಅಗಲಕೆ ಇರುವ ಸುಮಾರ್ ಅರ್ದ ಮಾರ್ ಉದ್ದದ ಹಾಳೆನ ಕಡೆ ಕೊಡಿ ಪೊರ್ಲುಲಿ ಕೊಯ್ಯೊಕು. ಕಡೆ ಕೊಡಿಲಿ ಅಂದಾಜ್ ಒಂದು ಗೇಣ್‌ನಷ್ಟ್ ಒಳಪುಡೆಗೆ ಮಡ್ಚಿ ಗುಂಡಿ ಮಾಡಿಕಾಂಕು. ಮತ್ತೆ ಅದರ ಎರಡ್‌ಕರೆಲೂ ಮೊಡ್ಚಿ ಕಡೆ ಕೊಡಿಗೆ ಬೊಗ್ಗಿಸಿಕಾಂಕು. ಹಾಂಗೆ ಮೊಡ್ಚಿದ ಮೇಲೆ ಅದರ ಎಲ್ಲ ಸೇರ್‌ಸಿ ಚೂಪು ಮಾಡ್ದ ಬೆದ್ರ್‌ಕಡ್ಡಿ ಅಲ್ಲರ್ ಮರದ ಕಡ್ಡಿಂದ ಕುತ್ತಿಕಣೊಕು. ದೆವ್ವಕೆ ಹರಿಕೆ ಮಾಡಿಕನ ಬಾಳೆಲೆಂದ ದೊನ್ನೆ ಮಾಡ್ದ ಹಾಂಗೆ ಇದರ ಯಾರಿಗೂ ಮಾಡಿಕೆ ಆದೆ. ತೋಟಲಿ ಕೆಲಸ ಮಾಡೊವುಕೆ ಇದರ ಮಾಡಿಕೆ ಗೊತ್ತಿದ್ದದೆ.

ತೋಟಲಿ ನೀರ್ ಚೋಪಿಕೆ ಇದ್ ಬೇಕಾದೆ. ತೋಟಲಿ ಮಾಡ್ದ ಕಣಿಲಿ ಹರ್‍ದ್ ಬಾವ ನೀರಿಗೆ ಅಡ್ಡಕ್ಕೆ ದೊಡ್ಡ ಹಾಳೆನ ಒಂದು ಕಾಲ್‌ಗೆ ಒರ್ಗಿಸಿ ಇಸಿಕನ ಎರ್ಕಿದ ನೀರ್‌ನ ಹಾಳೆ ಕಿಳ್ಳಿಲಿ ಬೇಕಾದ ಕಡೆಗೆ ಚೋಂಪಿಕೆ ಆದೆ. ತೋಟಲಿ ಅಡ್ಕೆ ಹೆರ್ಕಿಕೆ, ಕೊಕ್ಕ ಕೊಯ್ದ್ ತುಂಬುಸಿಕೆ ಸ ಆದೆ.

ಹಾಳೆ ಕಿಳ್ಳಿಲಿ ನೀರ್‌ನ ಅಂದಾಜ್ ನಾಲ್ಕೈದ್ ಮಾರ್ ದೂರಕ್ಕೆ ಚೋಂಪಿಕೆ ಆದೆ. ದೆವ್ವಕೆ ಹರಿಕೆ ಮಾಡಿಕನ ಕುರ್ದಿ ನೀರ್ ಹಾಕಿಕೆ ಇಂತಾ ಹಾಳೆ ಕಿಳ್ಳಿ ಬೇಕಾದೆ. **(ಎಂ.ಜಿ.ಕೆ)**



ಹೆಡೆಗೆ

ಹೆಡೆಗೆ ಸಾಮಾನ್‌ನ ತುಂಬಿಸಿ ಹೊರಿಕೆ ಬೇಕಾರ್ ಬೊಳ್ಳಿಲಿ ದೊಡ್ಡ ಸೊತ್ತು. ತುಳುಲಿ ಇದ್ಕೆ ಕಾಂಟ್ಯತ ಹೇಳ್‌ರ್ರೆ ಮಲೆಯಾಳಂಲಿ ವಟ್ಟಿಂತ, ಬ್ಯಾರಿ ಬಾಸೆಲಿ ಬಟ್ಟಿತ ಹೇಳ್‌ವೆ. ಇದ್ ದಕ್ಷಿಣಕನ್ನಡ, ಉಡುಪಿ ಮತ್ತೆ ಕೊಡಗ್ ಜಿಲ್ಲೆಲಿ ಇರುವಂತ ಸೊತ್ತು.

ಹೆಡೆಗೆನ ಮಾದ್ರಿ ಬೊಳ್ಳಿಲಿ, ಇಂಜಿರ್ ಬೊಳ್ಳಿಲಿ ಮತ್ತೆ ಬೆತ್ತದ ಬೊಳ್ಳಿಲಿ ಮಾಡ್‌ವೆ. ಮಾದ್ರಿ ಬೊಳ್ಳಿನ ಸಿಗ್ದ್ ಎರಡ್ ಬಾಗ ಮಾಡಿ ಅಲ್ಲರ್ ಸಪೂರದ ಬೊಳ್ಳಿ ಆದರೆ ಹಾಂಗೇ ಮುಡ್ದವೆ. ಇಂಜಿರ್ ಬೊಳ್ಳಿ ಆದರೆ ತೋರದ ಬೊಳ್ಳಿನ ತೆಳ್ಳಂಗೆ ಸಿಗ್ದ್ ಮುಡ್ದವೆ. ಬೆತ್ತನ ಸಿಗ್ದ್ ಅದರ ಬೆಂಡ್ ತೆಗ್ದ್ ಅದರ ಬಾಸ್ಲಿ ಹೆಡೆಗೆ ಮಾಡ್‌ವೆ. ಇದರ ಎರಡ್ ಪುಡೆಲೂ ಕೈ ಇದ್ದದೆ. ಬೆತ್ತದ ಹೆಡೆಗೆನ ಬೆತ್ತದ ಬಾಸ್ಲಿ ಹಕ್ಕಲೆ ಹಕ್ಕಲೆ ಮುಡ್ದವೆ. ಇಂಜಿರ್ ಬೊಳ್ಳಿ ಹಕ್ಕಲೆ ಹಕ್ಕಲೆ ಇದ್ದದೆ. ಮತ್ತೆ ಬಾಸ್ ಹಞ ಅಗಲ ಇದ್ದದೆ. ಮಾದ್ರಿ ಬೊಳ್ಳಿದ್ ಬೆತ್ತದ ಹೆಡೆಗೆನ ಹಾಂಗೇ ಇದ್ದದೆ. ಹೆಡೆಗೆನ ಕೊರಗರೇ ಮುಡ್ಯೊದು. ಅಜಲರ್, ಮಾಯ್ಲರ್ ಮುಡ್ದವೆ. ಬಾಕಿದ್ದೊವು ಸ ಕಲ್ತ್‌ದ್ ಮಾಡಿಕಂಡವೆ.

ಮೊಣ್ಣ್ ತುಂಬಿಸಿಕೆ, ಅಡ್ಕೆ ತುಂಬಿಸಿ ತಾಕೆ ಮಾದ್ರಿ ಬೊಳ್ಳಿನ ಹೆಡೆಗೆ, ಬೆತ್ತದ ಹೆಡೆಗೆ ಆದೆ. ಇಂಜಿರ್ ಹೆಡೆಗೆಗೆ ಸೆಗಣಿ ಮೆತ್ತಿ ಅದರ ಸೆರೆ – ಕಣ್ಣ್ ಮುಚ್ಚಿರೆ ಬತ್ತರಾಗಿ ಅಕ್ಕಿ ಎಲ್ಲ ತುಂಬಿಸಿಕೆ ಆದೆ. ಬೆತ್ತ ಸಿಗ್ದ್ ಸಪೂರ ಮಾಡಿ ಮೆಡ್ದ ಹೆಡೆಗೆ ಹುಗ್ಗಿ ತೋಂಡಿಕೆ ಆದೆ. ಬೆತ್ತದ ಬಾಸ್ ಸಪೂರ ಮಾಡ್ದಷ್ಟ್ ಹೆಡೆಗೆ ಲಾಯ್ಕ್ ಕಂಡದೆ, ಮತ್ತೆ ಅದರ್‌ಲಿ ಸೆರೆ ಕಮ್ಮಿ ಇದ್ದದೆ. ಅಡ್ಕೆ ತೋಟಕ್ಕೆ ಮೊಣ್ಣು ಹಿಡ್ಸಿಕೆ, ಬೆತ್ತದ ಹಡೆಗೆಲಿ ಮೊಣ್ಣು ಹೊತ್ತವೆ. ತೋಟಗಳಿಗೆ, ಗದ್ದೆಗಳಿಗೆ ಹಟ್ಟಿ ಗೊಬ್ಬರ ಹೊರಿಕೆ ಹೆಚ್ಚಾಗಿ ಇಂಜಿರ್ ಇಲ್ಲರ್ ಮಾದ್ರ್ ಬೊಳ್ಳಿಲಿ ಮಾಡ್ದ ಹೆಡೆಗನ ಬಳ್ಸುವೆ. **(ಎಂ.ಜಿ.ಕೆ.)**

ನಿತ್ಯೋಪಯೋಗಿ ವಸ್ತ್ರಗ



ಇಸ್ತ್ರಿ ಪೆಟ್ಟಿಗೆ

'ಇಸ್ತ್ರಿ'ಗೆ ಸಾವ್ರಾರ್ ವರ್ಸದ ಇತಿಹಾಸ ಉಟ್ಟು. ಬಟ್ಟೆ ನಮ್ಮ ಮೈ ಮೇಲೆ ಯಾಗ ಬಾತೋ ಇದರೊಟ್ಟಿಗೆ ನಮ್ಮಲ್ಲಿ ಸೌಂದರ್ಯ ಪ್ರಜ್ಞೆನೂ ಬಾತ್. ಬಟ್ಟೆ ನೆರಿಗೆ ಬಾಕೆ ಬತ್ತ್. ಅದ್ಕೆಯಂತ ಮಾಡ್ದುತ ಮನ್ಸ ಗ್ಯಾನ ಮಾಡಿಕೆ ಸುರ್ ಮಾಡ್ತ್. ಹಂಗೆ ಗ್ಯಾನ ಮಾಡ್ದರ ಪಲ ಇಂದ್ ನಾವೆಲ್ಲ ಹೊಸ ಇಸ್ತ್ರಿ ಪೆಟ್ಟಿಗೆನ ಕಾಂಬಕಾತ್.

ಸುರೂಗೆ ಇಸ್ತ್ರಿ ಮಾಡಿಕೆ ಸುರ್ ಮಾಡ್ದವು ಗ್ರೀಕ್‌ನವು. ಕ್ರಿ.ಪೂ.400 ರ್‌ಲಿ ಲೋಹದ ಉಂಡೆನ ಕಿಚ್ಚ್‌ಲಿ ಕಾಸಿ ಬಟ್ಟೆ ಮೇಲೆ ಉರ್‌ಳ್‌ಸ್ತಿದ್ದೊ ಗಡ. ಇದಾದ ಮೇಲೆ ಕ್ರಿ.ಶ. 1ನೇ ಶತಮಾನಲಿ ಚೀನಾದವ್ಕೆ ಇಸ್ತ್ರಿ ಪೆಟ್ಟಿಗೆದ್ ಕಲ್ಪನೆ ಬಾತ್. ಅಗಾಲ ಬಾಯಿನ ಒಂದ್ ಪಾತ್ರೆ, ಅದ್ಕೆ ಹಿಡಿ ಇತ್ತ್. ಆ ಪಾತ್ರೆಗೆ ಕೆಂಡ ಇಲ್ಲರೆ ಬಿಸಿ ಹೊಯಿಗೆ ಹಾಕಿ ಬಟ್ಟೆ ಮೇಲೆ ಒತ್ತ್‌ತ್ತಿದ್ದೊ. ಯುರೋಪ್‌ನ ರೋಮನ್ ಆಡಳಿತಲಿ ಒಗ್ದ ಬಟ್ಟೆನ ಮರದ ಪಾರ್ ಮೇಲೆ ಹರ್‌ಂಡ್‌ತಿದ್ದೊ. ಅದರ ಮೇಲೆ ತೂಕದ ಇನ್ನೊಂದು ಮರದ ಪಾರ್‌ನ ಹಾಕಿ ಒತ್ತುತ್ತಿದ್ದೊ ಗಡ. 10ನೇ ಶತಮಾನಲಿ ಯುರೋಪ್‌ನವೇ ಕುಪ್ಪಿ(ಗಾಜ್)ದ್ ಒಂದ್ ಸೊತ್ತು ತಯಾರ್ ಮಾಡಿ ಕೆಳಗೆ ಅಳುಂಬುನಂಗೆ ಚಪ್ಪಟೆಯಾಗಿದ್ದ ಅದರ ಬಿಸಿ ಮಾಡಿ ಬಟ್ಟೆ ಮೇಲೆ ಉಜ್ಜುತ್ತಿದ್ದೊ ಗಡ. ಹಿಡ್ಕಂಬಕೆ ಉದ್ದದ ಹಿಡಿನೂ ಇತ್ತ್ ತೇಳ್ದು ವಿಸೇಸ. ಮತ್ತೆ ಕ್ರಿ.ಶ. 1300 ರ್‌ಲಿ ಕಬ್ಬ್‌ಣದ ತುಂಡು ಇಸ್ತ್ರಿಪೆಟ್ಟಿಗೆನ ಕಂಡ್ ಹಿಡ್ದೊ. ಅದರ ಬೆಂಕಿಗೆ ಹಿಡ್ದ್ ಬಿಸಿ ಮಾಡಿ ಬಟ್ಟೆ ಮೇಲೆ ಬಟ್ಟೆ ಹಾಕಿ ಉಜ್ಜುತ್ತಿದ್ದೊಗಡ. ಬಟ್ಟೆ ಮೇಲೆ ಬಟ್ಟೆ ಹಾಕಿದರ್‌ಂದ ಕೆಳಗಿನ ಬಟ್ಟೆಗೆ ಮಸಿ ತಾಂಗ್‌ತಿತ್ತ್‌ಲೆ.

ಇದಾಗಿ 15ನೇ ಶತಮಾನಲಿ ಟೊಳ್ಳಾದ ಪೆಟ್ಟಿಗೆನ ಕಂಡ್ ಹಿಡ್ದೊ.ಅದ್ಕೆ ಲೋಹದ ಹಿಡಿ ಇರ್‌ವಂಗೆ ಮಾಡ್ದೊ. ಪೆಟ್ಟಿಗೆ ಒಳಗೆ ಕೆಂಡ ಇಲ್ಲರೆ ಲಾಯ್ಕ್ ಕಾದ ಇಟ್ಟಿಗೆ ಇಲ್ಲರೆ ಬಿಸಿ ಮಾಡ್ದ ಲೋಹದ ಚೂರ್‌ಗಳ ಹಾಕ್‌ತಿದ್ದೊ. ಆಗ ಅದರ ಹಿಡಿ ಬಿಸಿಯಾಗಿರ್ತಿತ್. ಬಿಸಿಯಾದ ಪೆಟ್ಟಿಗೆನ ಹಿಡ್ಕಂಬಕೆ ಬಜ ಆತಿತ್ತ್. ಆದರೂ ಸನ ಶ್ರೀಮಂತರ್ ಇಸ್ತ್ರಿ ಮಾಡ್ದ ಬಟ್ಟೆನೇ ಹಾಕ್‌ತಿದ್ದೊ. ಕೈಗಾರಿಕಾ ಕ್ರಾಂತಿ ಆದ ಮೇಲೆ ಲೋಹದ ಹಿಡಿ ಇರ್‌ವ ಇಸ್ತ್ರಿಪೆಟ್ಟಿಗೆ ಬದ್ಲಿಗೆ ಮರಂದ ಮಾಡ್ದ ಹಿಡಿ ಇರ್‌ವ ಪೆಟ್ಟಿಗೆನ ಕಂಡ್ ಹಿಡ್ದೊ.

1820ರ್‌ಲಿ ಬೀಡು ಕಬ್ಬಿಣದ ಪೆಟ್ಟಿಗೆ ಬಾತ್. ಅದ್ 5 ಕಿಲೋ 300 ಗ್ರಾಮ್ ತೂಗ್‌ತಿತ್ತ್. 1920 ರ್‌ಲಿ ಸ್ವಯಂ ಉಷ್ಣನ ನಿಯಂತ್ರಣ ಮಾಡಿಕಂಬ ಪೆಟ್ಟಿಗೆ, 1926 ರ್‌ಲಿ ಸ್ಟೀಮ್ ಪೆಟ್ಟಿಗೆ, 1940 ರ್‌ಲಿ ಅಲ್ಯುಮಿಯಂ ಲೋಹ ಇರ್‌ವ ಪೆಟ್ಟಿಗೆ, 1984 ರ್‌ಲಿ ಬಿಸಿ ಆದಂಗೆ ತಾನಾಗೇ ಬಂದ್ ಆಗುವ ಪೆಟ್ಟಿಗೆ, 1995 ರ್‌ಲಿ 'ನಾನ್ ಸ್ಟಿಕ್' ಇಸ್ತ್ರಿ ಪೆಟ್ಟಿಗೆನ ಕಂಡ್ ಹಿಡ್ದೊ, ಹಿತ್ತಳೆ ಇಸ್ತ್ರಿ ಪೆಟ್ಟಿಗೆನೂ ಬಳಕೆಗೆ ಬಾತ್.

ಈಗಂತೂ ಯಾವ್ಯಾವ ಬಟ್ಟೆಗೆ ಎಷ್ಟೆಷ್ಟೇ ಬಿಸಿ ಬೇಕುತ್ತೇಳಿ ಪೆಟ್ಟಿಗೆನ ಬಿಸಿಗೆ ತಕ್ಕಂಗೆ ಇಸಿಕಂಬ ಕರೆಂಟಿನ ಇಸ್ತ್ರಿ ಪೆಟ್ಟಿಗೆ ಬಂದುಟು. ದೊಡ್ಡವ್–ಮಕ್ಕತ್ತಾಗಲಿ, ಶ್ರೀಮಂತ–ಬಡವುತ್ತಾಗಲಿ ಎಲವ್ಕೂ ಇಸ್ತ್ರಿ ಹಾಕಿದ ಬಟ್ಟೆನೇ ಬೇಕು. ಗರಿಗರಿ ಬಟ್ಟೆನೇ ಹಾಕೊಕುತ್ತೇಳುವ ಸೌಂದರ್ಯ ಪ್ರಜ್ಞೆನ ಮೆಚ್ಚೊಕೆ. ಇಸ್ತ್ರಿ ಮಾಡಿರೆ ನೆರಿನೆರಿ ಹೋದೆ. ಅಷ್ಟೇ ಅಲ್ಲ ಬಟ್ಟೆಲಿರ್‌ವ ಬ್ಯಾಕ್ಟೀರಿಯಾ, ಬೇರೆ ಬೇರೆ ತರದ ಸೂಕ್ಷ್ಮಾನುಕ್ರಿಮಿಗ ನಾಸ ಆದವೆ. ಆರೋಗ್ಯದ ದೃಷ್ಟಿಂದ ಇಸ್ತ್ರಿ ಮಾಡಿ ಬಟ್ಟೆ ಹಾಕಂಬದು ಒಳ್ಳದ್. ಮಳೆಗಾಲಲಿ ಅರ್ದ ಒಣ್‌ಗಿದ ಚೆಂಡಿ ಬಟ್ಟೆನ ಒಣ್ಗಿಸಿಕೆ ಇಸ್ತ್ರಿ ಹಾಕುದು ಒಳ್ಳ ಉಪಾಯ.

ಕೊಡಗ್‌ಲಿ ಒಂದ್ ಕಾಲಲಿ ಚೊಂಬಿಗೆ ಬಿಸಿನೀರ್ ತುಂಬಿಕಂಡ್ ಬಟ್ಟೆ ಮೇಲೆ ಉಜ್ಜುತ್ತಿದ್ದೊ. ಮತ್ತೆ ಕೆಲವು ದಿಂಬು ಅಡಿಲಿ ಬಟ್ಟೆನ ಮಡ್ಸಿ ಇಸ್‌ತಿದ್ದೊ. ಕುರ್ಸಿಲಿ ಕೂರ್‌ಕನ ಕುಂಡೆ ಅಡಿಲಿ ಸಾಲೆ ಮಕ್ಕ ಡ್ರೆಸ್‌ನ ಇಸಿ ಕುಂಡೆ ಇಸ್ತ್ರಿ ಮಾಡ್‌ತಿದ್ದೊ. ಕಾಲ ಬಂದಂಗೆ ಕೋಲ. ಕರೆಂಟ್ ಇದ್ದರೆ ಇಂದ್ ಇಸ್ತ್ರಿ ಉಟ್ಟು. **(ಬಾ.ಜೋ.)**



ಈಚಾರ್

ಈಚಾರ್ ತೇಳ್ರೆ ಕುರ್ಚಿ (ಕುರ್ಸಿ)ನಂಗೆ ಇರ್ವ ಕುದ್ದುಕಂಕೆ ಮಾಡ್ದ ಒಂದು ಮರದ ಹತ್ಯಾರ್. ಇದ್ಕೆ ಇಂಗ್ಲೀಷ್‌ಲಿ ಈಸಿ ಚೆಯರ್ ತೇಳುವೆ. ಹಂಗಾಗಿ ಬಹುಷ ಅರೆಬಾಸೆವು ಅದರ ಈಚಾರ್ ತೆಳಿ ಕರೆಕೆ ಸುರು ಮಾಡ್ದಂಗೆ ಕಂಡದೆ. ಇದ್ ಹೆಚ್ಚಾಗಿ ಎಲ್ಲಾ ಕಡೆಲೂ ಇದ್ದರೂ, ಸ್ಪಂಜಿನ ಕುಶನ್ ಕುರ್ಚಿಗ ಬಂದಮೇಲೆ ಉಪಯೋಗ ಕಮ್ಮಿ ಆವುಟು.

ಈಚಾರ್ ಬೇರೆ ಬೇರೆ ತರ ಇದ್ದದೆ. ಕುದ್ರಿಕೆ ಪ್ಲಾಸ್ಟಿಕ್ ಬೊಳ್ಳಿಲಿ ನೈದದ್, ಬೆತ್ತದ್, ಮತ್ತೆ ಅರಿವೆದ್ ಹೆಚ್ಚಾಗಿ ಇದ್ದದೆ. ಇತ್ತೀಚೆಗೆ ಪ್ಲಾಸ್ಟಿಕ್ ಈಚಾರ್ ಬಂದುಟು. ಹಿಂದೆಲ್ಲ ಆಟ (ಯಕ್ಷಗಾನ) ನೋಡಿಕೆ ಈಚಾರಲೇ ಕುದ್ದುಕಣ್‌ತ್ತಿದ್ದೊ. ಈಗ ಪ್ಲಾಸ್ಟಿಕ್ ಕುರ್ಚಿ ಬಂದ ಮೇಲೆ ಮರದ ಮತ್ತೆ ಕಬ್ಬಿಣದ ಈಚಾರ್‌ಗಳ ಯಾರು ಬಳ್ಸುದುಲೆ. ಈಚಾರ್‌ನ ದೊಡ್ಡ ಅನುಕೂಲ ತೇಳ್ರೆ ಅದರ ಬೇಡದಿದ್ದರೆ ಮೊಡ್ಚಿ ಕರೆಲಿ ಇಸಿಕೆ ಸಾ ಆದೆ. ಕೆಲವು ಈಚಾರ್ ಗಳ್‌ಲಿ ಹೆಚ್ಚು ಕಮ್ಮಿ 145 ಡಿಗ್ರಿಂದ 180 ಡಿಗ್ರಿ ಒರೆಗೆ ಕಾಲ್ ನೀಂಡಿ, ಬೆನ್ನ್ ಬೊಗ್ಗ್‌ಸಿ ಕುದ್ರಿಕೆ ಆದೆ. ಸೊಂಟ ಬೇನೆ ಇರೊವುಕೆ ಈಚಾರ್‌ಲಿ ಕುದ್ರಿಕೆ ಲಾಯ್ಕ್ ಆದೆ.

ಈದಾರ್ ಮಾಡಿಕೆ ಮರದ ಆಚಾರಿಗಳಿಗೆ ಗೊತ್ತಿದ್ದದೆ. ಮರದ ರೀಪುಗಳಿಗೆ ದೊಡ್ಡ ತಿರ್ಗಣೆ ಆಣಿಗಳ ಹಾಕಿ ಮರದ ಈಚಾರ್‌ಗಳ ಮಾಡುವೆ. ಕುದ್ರಿಕೆ ಒಂದು ಮೀಟರ್‌ನಷ್ಟು ದಪ್ಪದ ಬಟ್ಟೆನ ತಕಂಡ್ ಎರಡ್ ಕಡೆಲಿ ಉರುಂಟುನ ಮರದ ತುಂಡುಗಳ ಹುಗ್ಸಿಕೆ ಅವಂಗೆ ಹೊಲೆಕು. ಯಾರ್‍ಯಾರಿಗೆ ಎಸ್ಟೆಷ್ಟು ಬೆನ್ನ್ ಸೊಂಟ ಬೊಗ್ಗುಸಿ ಕುದ್ರೊಕು, ಅಷ್ಟಷ್ಟ್ ಗುಂಡಿ ಇಲ್ಲರ್ ಎತ್ತರ ಮಾಡಿಕೆ ಅದರ್‌ಲ್ಲಿ ಆದೆ. **(ಪು.ಕೆ.ವಿ)**



ಒಲಿ ಮೊಂದ್ರಿ

ಮೂಡೆಂಗ ಒಲಿಂದ ಮಾಡ್ದ ಮೊಂದ್ರಿ. ತುಳುಲಿ ಒಲಿತ ಪಜೆ ತೇಳಿ ಹೇಳ್‌ವೆ, ಕನ್ನಡಲಿ ಚಾಪೆ ತೇಳಿಕರ್‌ದವೆ. ಇದ್ ಪಿರಾಕ್ಲಿ ಇದ್ದ ಮೊಂದ್ರಿ. ದಕ್ಷಿಣಕನ್ನಡ, ಉಡುಪಿ ಜಿಲ್ಲೆಲಿ ಇರುವಂತದ್ದ್.

ಹಳ್ಳ ಅಲ್ಲರ್ ಚೋಡಿಕರೆಲಿ ಮುಂಡೇವು ತೇಳುವ ಒಂದು ಜಾತಿ ದೆಯ್ಯಿ ಇದ್ದದೆ. ಇದ್ಕೆ ಉದ್ದದ ಸೋಗೆ ಇದ್ದದೆ. ಆ ಸೋಗೆಲಿ ಉದ್ದಕ್ಕೂ ಮುಳ್ಳು ಇದ್ದದೆ. ಇದ್ ಹಿಂಡ್ ಹಿಂಡಾಗಿ ಇರುವಂತದ್ದ್. ಅದರ ಸೋಗೆನ ಬಾರೀ ಜಾಗ್ರತೆಲಿ ಕೊಯ್ದ್ ತರೊಕು. ಸೋಗೆನ ನಡುಲಿ ಸಣ್ಣ ಸಣ್ಣ ಮುಳ್ಳು ಇದ್ದದೆ. ಅದರ ಕತ್ತಿಲಿ ಕೊಯ್ದ್ ಕೀಸಿ ತೆಗೆಕು. ಮುಳ್ಳು ತೆಗ್ದ್ ನಡುಂದ ಸೀಳಿಕಂಡ್ ಬಿಸಿಲಿಗೆ ಒಣ್‌ಂಗಿಸಿಕಾಂಕು. ಮತ್ತೆ ಅದರ ನೇಯ್ದ್ ಮೊಂದ್ರಿ ಮಾಡುವೆ. ಇದರ ಕೊರಗ ಸಮುದಾಯದವು ಮಾಡುವೆ. ಬೇರೆ ಸಮುದಾಯದವೂ ಸ ಮಾಡುವೆ.

ಇದ್ ಮಲ್ಗಿಕೆ, ನೆಲಲಿ ಕುದ್ರಿಕೆ ಬೇಕಾದ ಸೊತ್ತು. ಅಲ್ಲದೆ ನಮ್ಮ ಸಮಾಜದ ಪ್ರತೀ ಕಾರ್ಯಲೂ (ಹುಟ್ಟು, ಸಾವು, ಮೊದುವೆ) ಇದ್ ಅಗತ್ಯ ಬೇಕಾದೆ. ಈ ದೆಯ್ಯಿ ಕೇದಗೆ ದೆಯ್ಯಿನ ಹಾಂಗೇ ಇದ್ದದೆ. ಅದರೆ ಕೇದಗೆ ಸೋಗೆ ಇದರಷ್ಟು ಉದ್ದ ಇರ್ದುಲೆ. ಹಿಂದೆನ ಕಾಲಲಿ ಮನೆಗೆ ನೆಂಟ್ರ್ ಬಂದರೆ ಅವುಕೆ ಕುದ್ರಿಕೆ ಮೊಂದ್ರಿ ಹಾಸುವ ಕ್ರಮ ಇತ್ತ್. ನೆಂಟ್ರ್ ಬಾಕನ ಅವುಕೆ ಕುದ್ರಿಕೆಂತಲೇ ಒಂದು ಮೊಂದ್ರಿ ಇಸಿಕಾಂತಿದ್ದೊ. ಮೊದುವೆ ಮನೆಲಿ ಮೊದು ಮಕ್ಕಳ ಕುದ್ರಿಸಿಕೆ ಇದ್ ಅಗತ್ಯ ಬೇಕಾದೆ. ಈಗ ಅದರ ಮುಡೆವ ಜನವೂ ಕಮ್ಮಿ. ಮುಂಡೇವುಯ್ಯಿ ಸ ಅಪರೂಪ ಆಗುಟು. ಹಿಂದೆನ ಕಾಲಲಿ ಬೈಲ್‌ಗದ್ದೆ ಕರೆಲಿ, ಚೋಡ್‌ಕರೆಲಿ ಬೇಕಷ್ಟ್ ಮುಂಡೇವು ದೈಗ ಇರ್ತಿದ್ದೊ. ಗದ್ದೆ ಹೋಗಿ ಅಡಿಕೆ ತೋಟ ಬಾಕನ ಎಲ್ಲ ಹೋತ್. ಒಲಿಮೊಂದ್ರಿ ಬದಲ್‌ಗೆ ಪ್ಲಾಸ್ಟಿಕ್ ಮೊಂದ್ರಿ ಬಾತ್. ಸಣ್ಣ ಮಕ್ಕಳ ಮಲಿಗಿಸಿಕೆ ಅವರ ತೊಟ್ಟಿಲ್ ಒಳಗೆ ಹಾಕಿಕೆ ಸಣ್ಣ ಮೊಂದ್ರಿನ ಮಾಡ್‌ತ್ತಿದ್ದೊ. ಅದ್ಕೆ 'ಚಕ್ಕಳ' ತೇಳಿ ಕರೆತ್ತಿದ್ದೊ. ಮೊಂದ್ರಿ ಮುಡೆಕನ ಒಲಿನ ಒಳಗೆ ಎಳೆಕೆ ಒಂದು ಕಡೆ ದೂಂಚಿ ಇರುವ ಕಬ್ಬಿಣದ ಕೋಲು ಬೇಕು. ಅದ್ಕೆ 'ಕುತ್ತೊಳು' ತೇಳಿ ಹೇಳ್ವೆ. (ಎಂ.ಜಿ.ಕೆ.)



ಕಬ್ಬಿಣದ ಪೆಟ್ಟಿಗೆ

ಕಬ್ಬಿಣದ ಪೆಟ್ಟಿಗೆನ 'ಟ್ರಂಕ್' ತ ಕರೆತಿದ್ದೊ. ಒಂದ್ ಕಾಲಲಿ ಟ್ರಂಕ್ ಮಾರ್‌ವ ಅಂಗಡಿಗಳೇ ತುಂಬಿ ಹೋಗಿದ್ದೊ. ಊರೊಳಗೆ ಮೊದುವೆ ಎಳ್ಗಿತ್ತ್‌ತಾದರೆ ಆ ಮನೆವು ಟ್ರಂಕ್ ತಾಕೆನೇ ಟೌನ್‌ಗಳ್‌ಗೆ ಓಡ್ತಿದ್ದೊ.

ಕಬ್ಬಿಣದ ಗಟ್ಟಿ ತಗಡ್‌ಂದ ಪೆಟ್ಟಿಗೆನ ಮಾಡ್ತಿದ್ದೊ. ಮನೆಗಳ್‌ಲಿ ಮುಕ್ಯ ಸೊತ್ತುಗಳ ಇಸಿಕಂಬಕೆತ್ತೇಳಿ ಅಂತ ಪೆಟ್ಟಿಗೆಗ ಇರ್ತಿದ್ದೊ. ಅದಿಕೆ ಬೀಗ ಹಾಕುವ ವ್ಯವಸ್ತೆನೂ ಇತ್ತ್. ಪೆಟ್ಟಿಗೆನ ಒಳಗೆ ಕೆಳ ಬಾಗಲಿ ಮಂದ ಬಟ್ಟೆ ಹಾಸಿ ಮೇಲೆ ಬೇರೆ ಬೇರೆ ಬಟ್ಟೆಗಳ ಮಡ್ಸಿ ಇಸ್ತಿದ್ದೊ. ಅಲ್ಲಲ್ಲಿ ನುಸಿ ಉಂಡೆನೂ (ಕರ್ಪೂರ ಉಂಡೆ) ಇರ್ತಿತ್ತ್. ದುಡ್ಡು, ಚಿನ್ನ ಚಿಗ್‌ರ್‌ನೆಲ್ಲಾ ಅಲ್ಲಿ ಇಸಿ ಬೀಗ ಹಾಕ್‌ತಿದ್ದೊ. ಯಾವ್ಯಾವ್ದ್ ಎಲ್ಲೆಲ್ಲಿ ಉಟ್ಟುತ ಯಜಮಾನ್ತಿಗೆ ಮಾತ್ರ ಗೊತ್ತಿರ್‌ತಿತ್ತ್. ಹಿಂದೆಲ್ಲಾ ದುಡ್ಡುನ ಬ್ಯಾಂಕ್‌ಲಿ ಮನಿ ಇಸ್‌ತಿತ್ಲೆ. ಅದೇನಿದ್ದರೂ ಮನೇಲಿ ಟ್ರಂಕ್‌ದ್ ಕೆಳಗೆ ಇರ್ತಿತ್ತ್. ಯಾಗಳೋ ಇಸಿದ ದುಡ್ಡುನ ಇನ್ಯಾಗಳೋ ತೆಗೆತಿದ್ದೊ. ಅದ್ ಆಗ ಕುಂಬು ಹಿಡ್ದ್ ಲೊಡ್ಡಾಗಿರ್ತಿತ್.

ಮೊದುವೆ ಮನೆಲಿ ಪೆಟ್ಟಿಗೆಗೆ ಎಲ್ಲಿಲ್ಲದ ಗೌರವ. ಮೊದುವೆ ದಿನ ಹತ್ರ ಬಾತಿದ್ದಂಗೆ ಗೂಡೆಗೆ ಕೊಡಿಕಿರ್ ವ ಟ್ರಂಕ್ ತಾಕೆ ಹೋದೇ ಒಂದ್ ಕೆಲ್ಸ ಆತರ್ತಿತ್. ಆ ಅಂಗ್ಡಿಗೆ ಹೋಗಿ ಅಲ್ಲಿ ನಾಕಾರ್ ಟ್ರಂಕ್‌ಗಳ ನೋಡಿ 'ಮತ್ತೆ ಬಂದವೆ' ತ್ತೇಳಿ ಬೇರೆ ಬೇರೆ ಅಂಗ್ಡಿಂದ ಅಂಗ್ಡಿಗೆ ಹೋಗಿ ಬೇಕಾದ್ದರ ತಕ್ಕಂಡ್ ಬೀಗ ಕೋಸಿಕಂಡೇ ಬಾತಿದ್ದೊ.

ಮೊದುವೆ ಚಪ್ಪರದ ಮುಕ್ಯ ಬಾಗ 'ದೇವ ಸಬೆ'ಲಿ ಪೆಟ್ಟಿಗೆ ತುಂಬುಸುದು ಮುಕ್ಯ ಶಾಸ್ತ್ರ. ಎದ್ರ್ ಬದ್ರ್ ಮೂರ್ ಮೂರ್‌ಗಂಡ್ ಜನ ತಲೆಗೆ ಚೌಕ ಹಾಕಂಡ್ ಕುದ್ದಿದ್ದವೆ. ಗೂಡೆಗೆ ಬಳುವಳಿಯಾಗಿ ಕೊಡುವ ಸೊತ್ತುಗಳ ಪಟ್ಟಿ ಮಾಡಿವೆ. ಹಂಗೆ ಪಟ್ಟಿ ಮಾಡಿಕಂಡ್ ಅಲ್ಲಿ ಕೂಡ್‌ದ ಜನಕೆ ಸೊತ್ತುಗಳ ಎತ್ತಿ ತೋರ್ಸಿಕಂಡ್ ತಮಾಸಿ ಮಾಡಿಕಂಡ್ ಒಂದೊಂದೇ ಸೊತ್ತುಗಳ ಪೆಟ್ಟಿಗೆಗೆ ಹಾಕಿವೆ. ಅದರ 'ಪೆಟ್ಟಿಗೆ ತುಂಬುವ ಶಾಸ್ತ್ರ' ತ ಕರ್ದವೆ. ಪೆಟ್ಟಿಗೆಗೆ ಹಾಕಿದ ಎಲ್ಲಾ ಸೊತ್ತುಗಳ ಪಟ್ಟಿ ಮಾಡಿ ಸಹಿ ಮಾಡಿ ಒಂದ್ ಪ್ರತಿನ ಮನೆಯವ್ ಇಸಿಕಂಡ್ ಮತ್ತೊಂದರ ಪೆಟ್ಟಿಗೆ ಒಳಗೆ ಹಾಕಿ ಬೀಗ ಹಾಕಿವೆ.

ಗೂಡೆ ಮನೆಲಿ 'ಪೆಟ್ಟಿಗೆ ತುಂಬುವ ಶಾಸ್ತ್ರ'ತ ಮಾಡಿರೆ ಹೈದನ ಮನೆಲಿ 'ಪೆಟ್ಟಿಗೆ ನೋಡುವ ಶಾಸ್ತ್ರ'ತ ಮಾಡಿವೆ. ಅಲ್ಲಿ ಪೆಟ್ಟಿಗೆದ್ ಮುಚ್ಚೊಳ (ಬಾಗ್‌ಲ್) ತೆಗ್ದ್ ಅದರ್ಲಿಸಿದ ಪಟ್ಟಿನ ಓದಿಕಂಡ್ ಎಲ್ಲಾ ಸೊತ್ತುಗ ಒಳೊನಾತ ನೋಡಿ ತಮಾಸಿ ಮಾಡಿಕಂಡ್ ಶಾಸ್ತ್ರ ಮುಗ್ಸಿವೆ. **(ಬಾ.ಜೋ.)**



ಕಡಾವು

ಪಾದುಕೆ–ಹಾವುಗೆ, ಪಾದರಕ್ಷೆ, ಜೋಡುತ್ತೆಲ್ಲಾ ಕರ್ದವೆ. ಅರೆಬಾಸೆಲಿ ಕಡಾವುತ್ತೇಳಿವೆ. ಅದರ ಮರಂದ ಮಾಡಿವೆ. ಅದ್ ತೆಳು ಮತ್ತೆ ಹಗೂರ ಆತಿದ್ದದೆ. ಮುಕ್ಯ ಆಗಿ ರ್‌ಸಿ ಮುನಿಗಳ ಪಾದರಕ್ಷೆ. ಈಗಲೂ ಮಠಗಳ್‌ಲಿ ಸ್ವಾಮೀಜಿಗ ಮರದ ಪಾದುಕೆನ ಹಾಕಂಡವೆ. ನಾವೆಲ್ಲವೂ ಹಾಕುದ್ಲೆ. ಹಾಕಿರೆ ಕಾಲ್‌ಲಿ ನಿಲ್ಲುದ್ಲೆ. ಹಾಕಿರೂ ಕಡಾವು ಮುಂದೆ, ಪಾದ ನೆಲಲಿ! ಕಡಾವಿಗೆ ಯಾವ್ದೇ ಬೆಲ್ಟ್ ಇಲ್ಲೆ. ಉಂಗುಸ್ಟ ಬುಗುರಿಯಂಗೆ ಇದ್ದದೆ. ಬೆರಳ್ ನುಗ್ಗಿಕೆ ಉಂಗುರ ಇಲ್ಲೆ. ಹಂಗಿದ್ದರೆ ಅದರ ಹಾಕಂಡ್ ನಡೆದಾದರೂ ಹೆಂಗೆ? ಅಬ್ಯಾಸ ಮಾಡಿರೆ ಎಲ್ಲನೂ ಆದೆ.

ಎಸ್ಟೋ ಮನೆಗಳ್‌ಲಿ ಚಾಂಪಂದರ್ ಹಾಕಿವೆ. ದಿನ ಪೂರಾ ಅಲ್ಲ. ಕತ್ತಲಾದ ಮೇಲೆ ಕಾಲ್ ಕೈ ತೊಳೆವ ಪೊದ್ದತಿತ ಉಟ್ಟು. ಹಂಗೆ ಕಾಲ್ ಕೈ ತೊಳ್ದ್ ಇಲ್ಲರೆ ಮೀದ್ ಬಂದ್ ಚಾಂಪ ಕಡಾವು ಹಾಕಂಡದೆ. ದೇವರ ದೀಪಕ್ಕೆ ಕೈ ಮುಗ್ದ್ ಇಬೂತಿ ಹಾಕಂಡ್ ಮತ್ತೆ ಕಡಾವು ಮೆಟ್ಟಿಕಂಡ್ ಉಂಬಕ್ಕೆ ಕುದ್ದ್, ಎರಡ್ ಬಾಯಿ ಉಂಡ್ ಮಲ್ಗಿಕೆ ಹೋಕನ ಮುಟ್ಟ ಕಾಲ್‌ಲಿ ಕಡಾವು ಇದ್ದದೆ. ಕಟ್ಲ್ ಕೆಳಗೆ ಕಡಾವು ಬುಟ್ಟ್ ಮಲ್ಗಿವೆ. ಬೆಳಿಗ್ಗೆ ಎದ್ದ್ ಕಡಾವು ಮೆಟ್ಟುದೆನೂ ಇಲ್ಲೆ. ಮತ್ತೆ ಅದರ ಮೆಟ್ಟುದು ಕತ್ತಲೆ ಆದ ಮೇಲನೆ. ಮನೆಲಿ ಹೆಣ್ಮಕ್ಕ ಕಡಾವು ಹಾಕೊಂಬುದು ರೂಡಿ ಇತ್ಲೆಂತ ಕಂಡದೆ.

ಶ್ರೀ ರಾಮನ ಚಿನ್ನದ ಕಡಾವುನ (ಪಾದುಕೆನ) ತಮ್ಮ ಭರತ ತಲೆ ಮೇಲೆ ಇಸಿದ ಬಂದ್ ಅಂಬಾರಿ ಆನೆ ಮೇಲಿಸಿ ಮೆರವಣ್‌ಗೆ ಮಾಡಿ ಮತ್ತೆ ಅಯೋದ್ಯನ ಸಿಂಹಾಸನ ಮೇಲಿಸಿದ್ ಹದ್ನಾಕ್ ವರ್ಸ ರಾಮನ ಪರವಾಗಿ ರಾಜ್ಯಬಾರ ಮಾಡ್ದ್ ರಾಮಾಯಣದ ಕತೆ. ಪುರಾಣ ಪುಣ್ಯ ಕತೆಗಳ್‌ಲಿ ಕಡಾವು ವಿಸೇಸ ಜಾಗೆ ಪಡ್ಕಂಡಿತ್ ತ ಇದರ್‌ಂದ ಗೊತ್ತಾದೆ. **(ಬಾ.ಜೋ.)**

ಮನೆ ಒಳಗೆ ಕಾಲಿಗೆ ಹಾಕುವ ಮರದ ಜೋಡು. ತುಳುಲಿ ಮರತ್ತಜೋಡು, ಮಲೆಯಾಳಂಲಿ ಮವ್ವಡಿ, ಬ್ಯಾರಿ ಬಾಸೆಲಿ ಮೆದೋಡಿತ ಹೇಳುವೆ. ಇದ್ ದಕ್ಷಿಣ ಕನ್ನಡ ಮತ್ತೆ ಉಡುಪಿ, ಕೊಡಗು ಜಿಲ್ಲೆಲಿ, ಸಕ್ಲೇಶಪುರ ಕಡೆಲಿ ಇದ್ದದೆ.

ಕಾಲಿಗೆ ಹಾಕಿಕೆ ಆವ ಹಾಂಗೆ ಒಳ್ಳ ಗಟ್ಟಿಜಾತಿ ಮರಂದ ಇದರ ಮಾಡುವೆ. ಇದರ್‌ಲಿ ಕಾಲ್‌ನ ಹೆಬ್ಬೆರಳ್ ಮತ್ತೆ ಉಂಗುಷ್ಟು ಬೆರಳ್‌ನ ನಡುಲಿ ಕುದ್ರುವ ಹಾಂಗೆ ಮಾಡ್ದ ಒಂದ್ ಕುಟ್ಟಿ ಇದ್ದದೆ. ಇದರ ಮರದ ಆಚಾರಿಗಳೇ ಮಾಡ್ದು.

ಮನೆಲಿ ಇರುವ ಹಿರಿಯರ್ ಅಂದರೆ ಮನೆ ಯಜಮಾನ ದೇವ್ರ ಕೋಣೆಗೆ ದೇವ್ರುಗೆ ದೀಪ ಇಸಿಕೆ ಹೋಕನ ಸುದ್ದೊಲಿ ಹೋವ ಕ್ರಮ ಉಟ್ಟು. ಕತ್ತಲೆ ಆಕನ ಮೀದ್ ಮೀವ ಕೊಟ್ಟಿಗೆಂದ ಕಾಲಿಗೆ ಈ ಜೋಡ್ ಹಾಕಿ ಬಂದವೆ. ಮೊಣ್ಣ್‌ನ ನೆಲಲಿ ಕಾಲ್‌ಲಿ ಪಸೆ ಇದ್ದರೆ ಕಾಲಿಗೆ ಮೊಣ್ಣ್ ಅಂಟಿದೆ. ಹಾಂಗಾಗಿ ಕಾಲಿಗೆ ಜೋಡು ಹಾಕುವೆ. ಅದ್ ಅಲ್ಲದೆ ಕೆಲವು ಜನಕ್ಕೆ ಮಳೆಗಾಲಲಿ ನೆಲಲಿ ಸೀತ ಆದೆಂತ ಇಂತ ಜೋಡು ಹಾಕಿಕಂಡವೆ. **(ಎಂ.ಜಿ.ಕೆ.)**





ಕರ್ಜನ

ದುಡ್ಡು, ಚಿನ್ನ ಹಾಕಿ ಇಸ್‌ವ ಕರ್‌ಡಿಗೆ. ತುಳುಲಿ ಇದ್ಕೆ ಕರ್ಜನಂತಲೇ ಹೇಳ್ದು. ಮಲೆಯಾಳಂಲಿ ಭಣ್ಣಾರಂ ಅಂತ ಹೇಳ್ವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಕರ್ಜನನ ಬಳ್ಸ್‌ವೆ.

ತಾಮ್ರದ ಲೋಹಲಿ ಕರ್ಜನನ ಮಾಡ್‌ವೆ. ಕರ್ಜನನ ಮುಚ್ಚಿಕೆ, ಬೀಗ ಹಾಕಿಕೆ ಆದೆ. ತಾಮ್ರದ ಕೆಲ್ಸ ಮಾಡೊವು ಇದರ ಮಾಡ್‌ವೆ. ಹಿಂದೆನ ಕಾಲಲಿ ನಗ ನಾಣ್ಯನ ಇದರ್‌ಲಿ ಹಾಕಿಸುತ್ತಿದ್ದೊ. ವೆಂಕಟ್ರಮಣ ದೇವ್ರ ಮುಡ್ಪು ಸ ಇಂತದೇ ಕರಡಿಗೆಲಿ ಹಾಕಿಸುತ್ತಿದ್ದೊ. ಕರ್ಜನಲಿ ಸಣ್ಣದ್ ದೊಡ್ಡದ್ ತ ಇದ್ದದೆ. **(ಎಂ.ಜಿ.ಕೆ.)**

ಕೀ ಕೊಡುವ ಗೋಡೆಗಡಿಯಾರ

ಗೊಡೆಲಿ ಗಂಟೆ ನೋಡಿಕೆ ನೇತ್ ಹಾಕುವ ಗಡಿಯಾರಕ್ಕೆ ಗೋಡೆಗಡಿಯಾರ ತೇಳುವೆ. ಗೋಡೆ ಗಡಿಯಾರ ಬೇರೆ ಬೇರೆ ಆಕಾರಲಿ ಒಳೊ. ಹಿಂದೆಲ್ಲ ಕೀ ಕೊಡುವ ಗೋಡೆಗಡಿಯಾರಗ ಇದ್ದೊ. ವಾರಕ್ಕೊಮ್ಮೆ ಅದ್ಕೆ ಕೀ ಕೊಡೊಕು. ಎರಡು ಕಡೆ ಕೀ ಕೊಡಿಕೆ ಉಟ್ಟು. ಒಂದು ಗಂಟೆ ಮತ್ತೆ ನಿಮಿಷದ ಮುಳ್ಳು ತಿರ್ಗಿಕೆ. ಇನ್ನೊಂದು ಗಂಟೆ ಹೊಡೆಕೆ. ವರ್ಷಕ್ಕೊಮ್ಮೆ ಈ ಗಡಿಯಾರಗಳಿಗೆ ಎಣ್ಣೆ ಕೊಟ್ಟ್, ರಿಪೇರಿ ಮಾಡೊಕು. ಗಂಟೆ ನಡ್ದದೆನೋ ಇಲ್ಲೆನೊ ತೇಳಿ ನೋಡಿಕೆ ಗಡಿಯಾರದ ಒಳಗೆ ನೇತಾಡುವ ಸೊವುಂಟುನಂಗೆ ಇರುವ ಲೋಲಾಕ್ ಆಚೆ ಈಚೆ ಒಚ್ಚುಕನ ಗೊತ್ತಾದೆ. ಅದ್ಕೆ ಅದರ ಟಿಕ್ ಟಿಕ್ ಗಡಿಯಾರಂತ ಕರ್ದವೆ.

ಇದರ್ಲಿ ಬೇರೆ ಬೇರಿ ರೀತಿಲಿ ಸೊರ ಹೊರ್ಡುಸುವ ಗಂಟೆ ಹೊಡೆವ ಗಡಿಯಾರಗ ಒಳೊ. ಬ್ರಿಟಿಷರ ಕಾಲಲಿ ಪೇಟೆನ ನೊಡುಲಿ ದೊಡ್ಡ ಗಡಿಯಾರ ಗೋಪುರಗಳ ಮಾಡ್ತಿದ್ದೊ. ಅದ್ ಗಂಟೆ ಹೊಡೆವ ಡಣ್ ಡಣ್ ಡಣ್ ತೇಳುವ ಸಬ್ದ ಕೇಳಿಕೆ ತುಂಬಾ ಖುಷಿ ಆದೆ. ಗಡಿಯಾರ ಗೋಡೆಗೆ ನೇತ್‌ಹಾಕ್‌ಕನ ಅದ್ ಸರಿಯಾಗಿ 90 ಡಿಗ್ರಿ ಇರ್‌ವಂಗೆ ನೋಡಿಕಂಕು. ಓರೆ ಆದರೆ ಅದರ ಪೆಂಡಲಮ್ (ಅತ್ತ-ಇತ್ತ ಒಚ್ಚುತ್ತಾ ಇರುವ ಸೆಡೆನಂಗೆ ಇರುವ ಕೊಲ್) ಒಚ್ಚುದ್ ನಿತ್ತ್ ಹೋಗಿ ಗಂಟೆ ನಡೆದುಲೆ.

ವಾಸ್ತ್ ಪ್ರಕಾರ ಗೋಡೆಗಡಿಯಾರ ಉತ್ತರ (ತೆಂಕ್) ದಿಕ್ಕ್‌ಲಿ ಇದ್ದರೆ ಒಳ್ಳೆದ್ ಅಂತ ಹೇಳುವೆ. ಇತ್ತೀಚೆಗೆ ಬೆಟ್ರಿ ಹಾಕುವ ಎಲೆಕ್ಟ್ರಾನಿಕ್ ಗಡಿಯಾರಗ ಬಂದ ಮೇಲೆ ಕೀ ಕೊಡುವ ಗೋಡೆಗಡಿಯಾರಗ ನೋಡಿಕೆ ಅಪರೂಪ ಆಗೊಲೊ. **(ಪು.ಕೆ.ವಿ)**



ಗುಗ್ಗೆ ಸೆಟ್ಟ್‌ಗ

ಗುಗ್ಗೆ ಸೆಟ್ಟ್‌ಗ ಮತ್ತೆ ಹಲ್ಲ್ ಕಡ್ಡಿ ಜೋಡಿ ಆಕಂಡಿದ್ದವೆ. ಚೆಂಚಿಲಿರುವ ವಸ್ತುಗಳ್‌ಲಿ ಗುಗ್ಗೆ ಸೆಟ್ಟ್‌ಗನೂ ಒಂದ್, ಕೆಲ್ಸ ಆಗಿ ಸುಮ್ಮನೆ ಕುದ್ದಿರಕನ ಕೆಬಿಂದ ಗುಗ್ಗೆ ತೆಗೆದೂ ಒಂದು ಕೆಲ್ಸತಾದರೆ ಕೆಲ್ಸ, ಹವ್ಯಾಸತಾದರೆ ಹವ್ಯಾಸ, ಕೆಬಿ ಯಾಕೊ ಬರಬರತೇಳ್ದೇ ತೇಳ್ಕಂಡ್ ಗುಗ್ಗೆ ಸೆಟ್ಟ್‌ಗನ ಹಾಕಿ ಕೆರ್ದ್‌ಕೆರ್ದ್ ಗುಗ್ಗೆ ತೆಗ್ದವೆ. ಗುಗ್ಗೆ ಇರ್‍ಲಿ ಬುಡಿ ಸೆಟ್ಟ್‌ಗ ಹಾಕ್‌ದೊಂದು ಅಬ್ಯಾಸ. ಕೆಲವ್ಕೆ ಕೆಬಿ ಗಾಯ ಆದೂ ಉಟ್ಟು. ಕೆಲವ್ಕೆ ಕೋಳಿಗರಿ ಹಾಕಂಡ್ ಬರಬರತ ತಿರ್‍ಗ್‌ಸುವ ಅಬ್ಯಾಸನೂ ಉಟ್ಟು.

ಇನ್ನ್ ಹಲ್ಲ್ ಕಡ್ಡಿಂದ ಹಲ್ಲ್ ಸೆರೆ ಸೆರೆಗೆ ಹಾಕುದೂ ಒಂದ್ ಅಬ್ಯಾಸ. ಹಲ್ಲ್ ಸೆರೆಗೆ ಕುತ್ತಿ ಕಡ್ಡಿನ ಬಿಸಾಕಿವೆ. ಮತ್ತೆ ಕೆಲವ್ ಜೋಬೊಳಗೆ ಇಸಿ ಕಂಡವೆ. ಇಲ್ಲರೆ ಬಟ್ಟೆಗೆ ಕುತ್ತಿ ಕಂಡವೆ. ಹಿಂದೆಲ್ಲಾ ಗುಗ್ಗೆ ಸೆಟ್ಟ್‌ಗ ಮತ್ತೆ ಹಲ್ಲ್‌ಕಡ್ಡಿನ ಬಿಸಾಕ್‌ತಿತ್ತ್‌ಲೆ. ಯಾಕೆ ತೇಳ್ರೆ ಅದ್ ತಾಮ್ರ, ಅಲ್ಯುಮಿನಿಯಂ ಗಳ್‌ಂದ ಮಾಡ್ದ ಲೋಹದ ವಸ್ತು. ಹೆಣ್ಮಕ್ಕ ಅದರ್‍ಲೂ ಚೆಂಚಿ ಕೋಸಿಕಂಡಿದ್ದವು ಹಲ್ಲ್ ಕಡ್ಡಿ ಮತ್ತೆ ಗುಗ್ಗೆ ಸೆಟ್ಟ್‌ಗನ ಜೋಪಾನ ಮಾಡಿಕಂಬತ್ತಿದ್ದೊ.

ಕೆಲ ವರ್ಷಗಳ ಹಿಂದೆ ಬಸ್‌ಸ್ಟ್ಯಾಂಡ್‌ಗಳ್‌ಲಿ, ಅಂಗ್ಡಿ ಮುಂದೆ 'ಗುಗ್ಗೆ ಗುಗ್ಗೆ'ತ ಹೇಳಿಕಂಡ್ ಒಬ್ಬ ಕುದ್ದಿರ್‌ತಿತ್. ಆಗ ಅಂವನ ಹತ್ರ ಹೋಗಿ ಕುದ್ದ್‌ಕಂಡ್ ಗುಗ್ಗೆ ತೆಗ್ಸಿಕಂಬತಿದ್ದೊ, ಅವೇ ಇವೇ ತಲ್ಲ. ಯಾರ್ ಬೇಕರೂ ಗುಗ್ಗೆ ತೆಗ್ಸಿಕಂಡ್ ಅಂವ ಕೇಳ್ದ ದುಡ್ಡುನ ಕೊಡ್ತಿದ್ದೊ, ಒಬ್ಬೊಬ್ಬರ ಕೆಬಿಂದ ಚಿಟ್ಟೆಗೋಲಿಯಷ್ಟ್ ದೊಡ್ಡ ಗುಗ್ಗೆ ಉಂಡೆನ ತೆಗ್ದ್ ತೋರ್ಸಿ ದುಡ್ಡು ಪೀಕ್ಸ್‌ತಿತ್, ಅದೆಂತ ಮಾಯಕನೋ ಏನೋ.. "ಇಲ್ಲಾದ ಗುಗ್ಗೆ ಅವಂಗೆ ಹೇಂಗೆ ಬಾತಿತ್" ತ ಗುಗ್ಗೆ ತೆಗ್ಸಿಕಂಡವು ಹೇಳಿಕಂಡ್ ಹಲ್ಲ್ ಬುಡ್ತಿದ್ದೊ. (**ಬಾ.ಜೋ.**)



ಗ್ಯಾಸ್ ಲೈಟ್

ಗಾಳಿ ಹಾಕಿ ಹೊತ್ತುಸುವ ಲೈಟ್. ತುಳುಲಿ, ಮಲೆಯಾಳಂಲಿ, ಬ್ಯಾರಿ ಬಾಸೆಲೂ ಗ್ಯಾಸ್‌ಲೈಟ್ ತ ಹೇಳ್ದು. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್‌ಜಿಲ್ಲೆಲಿ ಹಾಂಗೇ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ. ಹೆಚ್ಚಾಗಿ ತಾಮ್ರ ಇಲ್ಲರ್ ಕಬ್ಬಣದ ಗ್ಯಾಸ್‌ಲೈಟ್‌ನ ಟ್ಯಾಂಕ್‌ನ ಮಾಡ್ತುತ್ತಿದ್ದೊ. ಇದರ ಪೆಟ್ರೋ ಮ್ಯಾಕ್ಸ್ ಅಂತೇಳಿ ಸ ಕರ್ದವೆ. ಇದ್ ಹೊತ್ತಿಕೆ ಚಿಮುಣಿ ಎಣ್ಣೆ ಬೇಕು. ಮೆಂಟ್ಲ್ ಬೇಕು. ಅಡಿಲಿರುವ ಟಾಂಕಿಗೆ ಎಣ್ಣೆ ತುಂಬಿಸಿ ಟಾಂಕಿಲಿರುವ ಸಣ್ಣ ಪಂಪ್ಲಿ ಗಾಳಿ ಹಾಕಿರೆ ಎಣ್ಣೆ ಮೇಲೆ ಹಾರಿ ಮೆಂಟ್ಲ್‌ಗೆ ರಟ್ಟಿದೆ ಆಗ ಕಿಚ್ಚಿ ಕೊಟ್ಟರೆ ಮೆಂಟ್ಲ್ ಹೊತ್ತಿ ಬೊಳ್ಪು ಕಂಡದೆ. ಎಣ್ಣೆ ಹಾರುವ ಹಾಂಗೆ ಮಾಡಿಕೆ ತಿರ್ಗಣೆ ಉಟ್ಟು. ಇದರ ಬೊಳ್ಪು ತುಂಬಾ ದೂರಕ್ಕೆ ಮುಟ್ಟಿ ಹೋದೆ. ಹೊಗೆ ತುಂಬಾ ಕಮ್ಮಿ. ಇದ್ಕೆ ಮೆಂಟ್ಲ್‌ನ ಸುತ್ತ ಗ್ಲಾಸ್ ಕವರ್ ಇದ್ದದೆ. ಕೆಲವು ಕವರ್ ಸಣ್ಣ ಸಣ್ಣ ಕುಪ್ಪಿ ಪಟ್ಟಿಂದ ಮಾಡಿದ್ದದೆ.

ಹಿಂದೆನ ಕಾಲಲಿ ಮನೆಲಿ ಏನಾರ್ ಜಂಬರ ಇದ್ದರೆ ಗೇಸ್‌ಲೈಟ್ ಹೊತ್ತುಸ್ತಿದ್ದ. ಮನೆಗಳಲಿ ಇದ್ ಇರ್ದು ಕಮ್ಮಿ. ಗುರ್ತದ ಅಂಗಡಿಯವರ್‌ಂದ ಇದರ ತಾತಿದ್ದೋ. ಮತ್ತೆ ಕೆಲವು ಅನುಕೂಲ ಇದ್ದವರ ಮನೇಲಿ ಇರ್ತಿತ್ತ್. ಹಿಂದೆಲ್ಲ ಆಟ, ನಾಟಕಲಿ ಬೆಳ್ಕ್‌ಗೆ ಗ್ಯಾಸ್‌ಲೈಟ್‌ನನೆ ಬಳ್ಸ್‌ತ್ತಿದ್ದೊ. ಕರೆಂಟ್, ಜನರೇಟರ್ ಬಂದ ಮೇಲೆ ಗ್ಯಾಸ್ ಲೈಟ್ ಅಟ್ಟಕ್ಕೆ ಹೋತ್. **(ಎಂ.ಜಿ.ಕೆ.)**

ಕಿಚ್ಚಿಂದ ಬೇಸಿ ತಿಂಬದರ ಕಲ್ತ ಮೊನ್ಸಂಗೆ ಕತ್ತಲೆಲಿ ಓಡಾಡ್ದು ಹೆಂಗೆತ ಪ್ರಶ್ನೆ ಮೂಡ್ತ್. ಹಂಗೆ ಮೂಡ್ದ ಪ್ರಶ್ನೆಗೆ ಉತ್ತರ ಇಂದ್‌ನ ಈ ಎಲ್ಲಾ ವ್ಯವಸ್ತೆ ಆಕೆ ಕಾರಣ ಆತ್.

ಸುರ್ ಸುರೂಲಿ ಕಿಚ್ಚ್‌ನ ಕೊಳ್ಳಿನ ಬೀಸಿಕಂಡ್ ನಡ್ದೊ. ಮತ್ತೆ ಮತ್ತೆ ಸೂಟೆ ಮಾಡಿಕೆ ಕಲ್ತೊ. ಮತ್ತೆ ಮತ್ತೆ ದೀಪ ಹಿಡ್ದೊ. ಲಾಟೀನ್ ಹಿಡ್ದೊ. ಲ್ಯಾಂಪ್‌ತ ಬಾತ್. ಗ್ಯಾಸ್ ಲೈಟ್, ಟಾರ್ಚ್ ಲೈಟ್, ಸಿಗಾರ್ ಲೈಟ್, ಲೈಟರ್, ಕರೆಂಟ್, ಸೋಲಾರ್, ನೈಸರ್ಗಿಕ ಅನಿಲ, ಗೋಬರ್‌ಗ್ಯಾಸ್.... ಹಿಂಗೆ ಎಂತೆಲ್ಲೊ...

ಕರೆಂಟ್ ಬಾಕೆ ಮುಂದೆ (ಹಳ್ಳಿಗಳ್‌ಲಿ) ಸಬೆ ಸಮಾರಂಬ, ಮೊದುವೆ ಮನೆಗಳ್‌ಲಿ ಗ್ಯಾಸ್‌ಲೈಟ್ ದೇ ಕಾರ್ ಬಾರ್. ಒಂದ್ ಇಲ್ಲರೆ ಎರ್ಡ್ ಗ್ಯಾಸ್‌ಲೈಟ್‌ಗಳ ಬಾಡಿಗೆಗೆ ತಾತಿದ್ದೊ. ಟೌನ್‌ಗಳ್‌ಲಿ ಆಗ ಗ್ಯಾಸ್ ಲೈಟ್‌ನ ಬಾಡಿಗೆಗೆ ಕೊಡುವ ವ್ಯವಸ್ತೆನೂ ಇತ್ತ್.

ಗ್ಯಾಸ್‌ಲೈಟ್ ತಂದ ಮೇಲೆ ಅದರ 'ಉಸ್ತುವಾರಿ'ನ ಯಾರಾರ್‌ಒಬ್ಬ ನೋಡಿಕಂಬತಿತ್. ಆ ಉಸ್ತುವಾರಿ ಮಾಡುವವನ ನೋಡಿಕೆ ಪಡ್ಡೆ ಹೈದಂಗ ಸುತ್ತ ನಿಲ್ತ್‌ತಿದ್ದೊ. ಪಡ್ಡೆ ಹೈದಂಗಳಿಗೆ ಅಂವ ಮಹಾ ದೊಡ್ಡ ಜ್ಞಾನಿನೇ ಹೌದು. ಯಾಕೆತ್ತೇಳ್ರೆ ಆ ಗ್ಯಾಸ್ ಲೈಟ್‌ಗೆ 'ಮ್ಯಾಂಟಲ್' ಕಟ್ಟುದು, ಗ್ಯಾಸ್ ಲೈಟ್‌ಗೆ ಪಂಪ್ ಮಾಡ್ದು, ಆಗ ಅದ್ 'ಗೊಸ್ ಗೊಸೋತ' ಸದ್ದ್ ಮಾಡ್ದು, ಮ್ಯಾಂಟಲ್‌ಗೆ ಕಿಚ್ಚ್ ಹಿಡೆದು, ಆಗ ಸುತ್ತೆಲ್ಲಾ ಬೆಳಕೋ ಬೆಳಕ್‌ನ ನೋಡಿ ಕುಸಿ ಪಡ್ದು– ಎಲ್ಲಾ ಇಂವನ ಕೈ ಚಳಕತ ಒಂದ್ ರೀತಿಯ ಗೌರವ ಕೊಡ್ತಿದ್ದೊ. ಹಂಗೆ ಹೊತ್ತಿದ ಗ್ಯಾಸ್ ಲೈಟ್‌ನ ಚಪ್ಪರದ ಅಡ್ಡ ಬಡಿಗೆಗೆ ಕೋಸಿರೆ ಅಂಗಳ ತುಂಬಾ ಬೆಳ್ಕ್. ಅದೇನಾರ್ ಮಂಕ್ ಆದರೆ ಮತ್ತೆ ಆ ಉಸ್ತುವಾರಿನೇ ಬಂದ್ ಪಂಪ್ ಮಾಡಿ ಮೇಲೆ ಕೋಸ್‌ತಿತ್ತ್. ಬೆಳ್ಕ್‌ಗೆ ತರ ತರದ ಹುಳಗ ಮುತ್ತಿಕಂಬತಿದ್ದೊ. ಮೊದುವೆ ಶಾಸ್ತ್ರಕ್ಕಿಂತ ಇಸ್ಪೀಟ್ ಆಟದವ್ಕೇ ಅಷ್ಟಗಲದ ಜಾಗೆ ಬೇಕಿತ್ತ್.

ಗ್ಯಾಸ್ ಲೈಟ್‌ಗೆ ಪಂಪ್ ಮಾಡಿ ಬೆಂಕಿ ಹಿಡೆಕನ ಒಮ್ಮೆಗೆ ಬೆಂಕಿ ಮೇಲೆ ಬಂದ್ ಗಡ್ಡ ಮೀಸೆ, ಕೆನ್ನೆ ಪೂರಾ ಸುಟ್ಟ ಕತೆಗ ಸುಮಾರ್ ಒಳೊ. ಮ್ಯಾಂಟಲ್ ಸುಟ್ಟ್ ಅದರ ಬೂದಿ ಹಂಗೆ ನಿತ್ತಿದ್ದದೆ. ಆ ಬೂದಿಗೆ ಕಿಚ್ಚ್ ಹಿಡ್ದರೆ ಹಾಲ್ಬೆಳಕ್ ಸೂಸಿದೆ. ಆದರೆ ಆ ಬೂದಿ ಅಲ್ಲಾಡಿ ಬೀಳದಂಗೆ ಎಚ್ಚರ ಮಾಡಿಕಂಬೊದು ಜಾಣತನ. ದೂರ ಹೋಕನ ಗ್ಯಾಸ್ ಲೈಟ್‌ನ ತಲೆಗೆ ಕಟ್ಟ್‌ತ್ತಿದ್ದೊ. ಅದರ ಹೊರಿಕೇ ಜನನ ಗೊತ್ತು ಮಡ್ತಿದ್ದೊ. ದೀಪ ಹೊತ್ತಂವ ಕತ್ತಲೆಲಿರ್‌ತಿತ್ತ್! ದೀಪದ ಕೆಳಗೆ ಕತ್ತಲೆ ತಾನೆ! **(ಬಾ.ಜೋ.)**



ಚಿಮ್ನೆಣ್ಣೆ ದೀಪ

ಚಿಮಣಿ ಎಣ್ಣೆಂದ ಹೊತ್ತುಸುವ ದೀಪಕ್ಕೆ ಸೀಮೆಣ್ಣೆ (ಚಿಮ್ಮಣ್ಣೆ ದೀಪಂತ) ಹೇಳುವೆ, ತುಳುಲಿ ಚಿಮಣಿ ದೀಪ ಹೇಳುವೆ. ಮಲೆಯಾಳಂಲಿ ಚಿಮ್ಮಿಣಿಕೂಡ್, ಬ್ಯಾರಿ ಬಾಸೆಲಿ ಚಿಮುಣಿತ ಹೇಳುವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಇದ್ ಇದ್ದದೆ.

ಹಿಂದೆನೊವು ಒಂದು ಸಣ್ಣ ಬಾಯಿನ ಕುಪ್ಪಿದ್ ಮುಚ್ಚಳಕ್ಕೆ ಸಣ್ಣ ಒಟ್ಟೆ ಮಾಡ್ತಿದ್ದೊ. ಒಂದು ಸೀರೆ (ಹತ್ತಿದ್ ಆಕು) ತುಂಡುನ ನೆಣೆ ಮಾಡಿ ಕುಪ್ಪಿ ಮುಚ್ಚಳದ ಒಳಗೆ ಇಸ್ತಿದ್ದೊ. ಕುಪ್ಪಿಗೆ ಚಿಮ್ನಿ ಎಣ್ಣೆ ಹಾಕಿ ಬತ್ತಿಗೆ ಕಿಚ್ಚಿ ಕೊಟ್ಟ್ ದೀಪ ಹೊತ್ತಿಸ್ತಿದ್ದೊ. ದೀಪಲಿ ಬೇರೆ ಬೇರೆ ತರ ಇದ್ದದೆ. ಕುಪ್ಪಿದ್, ಹಿತ್ತಾಳೆದ್, ಕಂಚಿದ್, ಕೀಜಿದ್ ಇದ್ದದೆ. ಅಂತಾ ದೀಪ ಎಲ್ಲ ಕಾರ್ಖಾನೆಲಿ ತಯಾರಾದೆ. ಕತ್ತಲೆ ಆಕನ ಬೊಳ್ಪು ಕಾಂಬಕೆ ಬೇಕಾಗಿ ಇಂತಾ ದೀಪ ಬೇಕ್. ದೀಪ ಹೇಂಗೇ ಇರ್‌ಲಿ ಅದ್ ಕತ್ತಲೆನ ಓಡ್ಸಿಕೆ ಇರುವ ಸೊತ್ತು.

ದೀಪ ಎತ್ತರಲಿ ಇದ್ದರೆ ಲಾಯ್ಕ್ ಕಂಡದೆಂತ ಎತ್ತರಲಿ ಇಸ್ತಿದ್ದೊ. ಎತ್ತರ ಮಾಡಿಕೆ ಮರದ ರೀಪುನ ಅಡಿಗೆ ಮತ್ತೆ ಮೇಲೆಗೆ ಸಣ್ಣ ಹಲಗೆ ತುಂಡುನ ಹೊಡ್ದ್ ನಿಲ್ಸಿ ಅದರ ಮೇಲೆ ದೀಪ ನಿಲ್ಸ್‌ತ್ತಿದ್ದೊ. ಕೆಲವು ದೀಪಗ ಎತ್ತರವೇ ಇದ್ದದೆ. ದೀಪನ ಗೋಡೆಗೆ ಕೋಸಿ ಇಸಿಕೆ ಆಗುವ ಹಾಂಗೆ ಸ ಇದ್ದದೆ. ಕೆರೆ ನೀರ್ ಆರಿಕನ ದೊರೆ ಮಜ ಸತ್ತದೆ. ಅಂದರೆ ದೀಪಲಿರುವ ಎಣ್ಣೆ ಮುಗೆಕನ ದೀಪ ಕೆಟ್ಟದೆ ತೇಳುವ ಒಡ್ಪೊಕತೆ ಉಟ್ಟು. ದೀಪದ ಬುಡಲಿ ಯಾಗೊಳು ಕತ್ತಲೆ ತೇಳಿದ್ ಗಾದೆ ಮಾತ್ ಉಟ್ಟು.. **(ಎಂ.ಜಿ.ಕೆ.)**



ತೊಟಿಗಿಲ್

ಸಣ್ಣ ಮಕ್ಕಳ ನಿಲ್‌ಗ್ಸಿಕೆ ಬೇಕಾದ ಸೊತ್ತು. ತುಳುಲಿ ತೊಟ್ಟಿಲ್ / ಒಟಿಲ್ ತೇಳುವೆ. ಮಲೆಯಾಳಂಲಿ ಇಜ್ಜಾಲ್, ಬ್ಯಾರಿ ಬಾಸೆಲಿ ತೊಟ್ಲುತ ಹೇಳುವೆ. ಹಿಂದೆ ತೊಟಿಗಲ್‌ನ ಬೆತ್ತಲಿ ಮಾಡ್ತಿದ್ದೊ. ಬೆತ್ತನ ಸೀಳಿ ಬಾಸ್ ಮಾಡಿಕಾಂಕು. ಒಳ್‌ಂಗಿದ ಬೆತ್ತನ ಮುಡೆಕಾಕನ ನೀರ್‌ಲಿ ಹಾಕಿ ಪದ್‌ನಿಸಿಕಂಡವೆ. ಮತ್ತೆ ಲಾಯ್ಕಾಲಿ ಮುಡ್ಡ್ ತೊಟಿಗಿಲ್ ಮಾಡುವೆ. ಇದ್ಕೆ ಬೆತ್ತದ ಬೊಳ್ಳಿಂದಲೇ ಸಂಕಲೆನ ಹಾಂಗೇ ನೇಯ್ದ್ ಅದರ್‌ಲಿ ತೊಟ್ಟಿಲ್‌ನ ನೇತಾಡ್ಸುವೆ. ತೊಟಿಗಿಲ್‌ನ ಬೆದ್ರ್‌ಂದ, ಓಟೆಂದ ಸ ಮಾಡಿಕಾದೆ. ಮಾಯ್ಲುರ್ ಕೊರಗರ್ ಇಂತಾ ತೊಟಿಗಿಲ್ ಮಾಡುವೆ. ಮರಂದಲೂ ಮಾಡುವೆ. ಮರದ ತೊಟಿಗಿಲ್‌ನ ಮರದ ಆಚಾರಿಗ ಮಾಡುವೆ. ಹಿತ್ತಾಳೆಂದ ಮಾಡ್ದ ತೊಟ್ಟಿಲ್ ಸ ಉಟ್ಟು. ಬಾರೀ ಪಿರಾಕ್ಲೇ– ಪುರಾಣದ ಕಾಲಲೇ ತೊಟ್ಟಿಲ್ ಇತ್ತ್. ತೊಟ್ಟಿಲ್‌ನ ಬದಲಿಗೆ ಸೀರೆನ ಕಟ್ಟಿ ಮಕ್ಕಳ ಒಚ್ಚುವೆ. ಮಕ್ಕಳ ಸುರುಗೆ ತೊಟಿಗಿಲ್‌ಗೆ ಹಾಕಿಕನ ನೆಂಟರಿಷ್ಟರ ಕರ್ದ್ ಜಂಬರ ಮಾಡುವೆ. ಹಾಂಗೆ ಸುರುನ ಹೆರ್‌ಗ್ಲಿ ಅಯ್ಯೆನ ಮನೆಂದ ಗಂಡನ ಮನೆಗೆ ಕೂಸುನ ತೊಟಿಗಿಲ್ ತಕೊಂಡ್ ಹೋವ ಕ್ರಮ ಉಟ್ಟು. **(ಎಂ.ಜಿ.ಕೆ.)**

ತೊಟಿಗಿಲ್, ತೊಟ್ಲ್ ಹೆಂಗೆ ಹೇಳಿರೂ ಒಂದೇ. ತೊಟಿಗಿಲ್‌ನ ಬೆತ್ತ ಇಲ್ಲರೆ ವಾಟೆಂದ ಮಾಡಿವೆ. ಬೆತ್ತನ ಉದ್ದೋಕೆ ಸೀಳಿ ಸೀಂಕ್ ಇಲ್ಲದಂಗೆ ಲಾಯ್ಕ ಕೀಸಿ ಎರಡ್‌ವರೆ ಅಡಿ ಉದ್ದ, ಒಂದುವರೆ ಅಡಿ ಅಗಲ, ಮುಕ್ಕಾಲ್ ಅಡಿ ಆಳದಷ್ಟೇ ಅಳ್ತೆಲಿ ಒಳ್ಳ ಮನ್ಸ್‌ಂದ ತಯಾರಿಸಿವೆ. ಕುಕ್ಕೆ ಕೆಲ್ಸ ಮಾಡವು ಅದರ ಮಾಡಿವೆ. ತೊಟ್ಲಗೆ ನಾಕ್ ಕಾಲ್ ಇಸಿದ್ದವೆ. ತೊಟಿಗಿಲ್ ಕೆಳಗೆಂದ ಹಗ್ಗ ಹಾಕಿ ಮೇಲೆ ಬಿಟ್ಟಕೆ ಕಟ್ಟಿವೆ. ತೊಟಿಗಿಲ್ ಒಚ್ಚ್‌ಕನ ಹಗ್ಗ ಜಾರಿಕಾಗದ್‌ತ್ತೇಳುವ ಕಾರಣಂದ ತೊಟಿಗಿಲ್ ಕೆಳಗೆ ನಾಕ್ ಕಾಲ್ ಇಸುದು.

ತೊಟಿಗಿಲ್‌ನ ಬೆತ್ತದ ಸರಕ್ಕೆ ಜೋಡಿಸ್ತಿದ್ದೊ. ಸರತೇಳ್ರೆ ಸೀಳ್‌ದ ಬೆತ್ತನ ಉಂಗುರ ಉಂಗುರದಂಗೆ ಒಂದರೊಳಗೊಂದ್ ಪೋಣ್ಸಿ ಉದ್ದೋಕೆ ನೆಯ್ದ ಸರ. ಅದ್ ತುಂಬ ಗಟ್ಟಿ ಇದ್ದದೆ. ನೋಡಿಕೂ ಲಾಯ್ಕ. ತೊಟಿಗಿಲ್ ಕೆಳಗೆಂದ ಆ ಸರನ ತಕಂಡ್ ಮೇಲೆ ಬಿಟ್ಟಕ್ಕೆ ಕೋಸಿವೆ. ತೊಟಿಗಿಲ್‌ಲಿ ಕೂಸುನ ಮಲ್ಗಿಸಿ ಒಚ್ಚಿರೆ ಆಹಾ! ಆ ಸರಂದ ಬಾವ ಇರಾಇರ, ಇರಾಇರ ಸದ್ದ್ ಕೇಳಿಕಂಡೇ ಕೂಸು ನಿಲ್ಗಿ ಬುಟ್ಟದೆ. ಆ ಸರ ಉದ್ದ ಇದ್ದದೆ. ಹಂಗಾಗಿ ಇಲ್ಲಿಂದ ಒಚ್ಚಿ ಬುಟ್ಟರೆ ಆ ಗೋಡೆ ವರೆಗೆ ಹೋಗಿ ಹಿಂದೆ ಬಂದೆದಲ್ಲಾ.... ಕೂಸಿಗೆ ಪರಮಾನಂದ ಒಂದೆರ್ಡ್ ದಪ ಹಂಗೆ ಒಚ್ಚಿಕಂಡ್ ಜೋಗುಳ ಪದ ಹಾಡಿರಂತೂ ಆ ಪರಮ ಸುಕ ಯಾರಿಗುಟ್ಟು?

ಈಗೀಗ ಆ ತರದ ಬೆತ್ತದ ಸರಕಮ್ಮಿ. ಹಂಗಾಗಿ ತೆಂಗ್‌ನ ನಾರ್ ನದಪ್ಪ ಹಗ್ಗನ ಉಪಯೋಗ್ಸಿ ತೊಟಿಗಿಲ್ ತೂಂಗಿವೆ. ಈಗೀಗಂತೂ ಸಣ್ಣ ಸಣ್ಣ ಕೋಂಬರೆಗ. ಆಚೆ ಕಟ್ಲ್ ಈಚೆ ಕಟ್ಲ್. ನಡೂಲಿ ತೊಟ್ಲ್! ಹೆಂಗೆ ಒಚ್ಚುದು? ಎಷ್ಟ್ ಒಚ್ಚುದು? ಅಂಗ್ಡಿಂದ ತಂದ ಕಬ್ಬಿಣದ ತೊಟಿಗಿಲ್ ಕೊಂಯ್ಕ್ ಕೊಂಯ್ಕ್ ತೇಳಿ ಇಷ್ಟೇ ಇಷ್ಟೇ ಅಲ್ಲಾಡುವ ತೊಟಿಗಿಲ್‌ಗಳೇ ಈಗ ಜಾಸ್ತಿ ಆಗ್ತಾ ಉಟ್ಟು.

ಕೆಲವ್ ಮನೆಗಳ್‌ಲಿ ಅದೂ ಸನ ಇಲ್ಲೆ. ಜೋಳಿಗೆತರ ಮಾಡಿ ಮಲ್ಗಿಸಿವೆ. ಮರದ ಆಚಾರಿಗ ಬಾರೀ ಪೊರ್ಲುನ ಮರದ ತೊಟಿಗಿಲ್‌ನ ಮಾಡಿವೆ. ಮತ್ತೆ ಕೆಲವ್ ಶ್ರೀಮಂತಿಕೆಗೆ ತಕ್ಕಂಗೆ ತೊಟಿಗಿಲ್ ಮಾಡ್ಸಿಕಂಡವೆ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ತೊಟಿಗಿಲ್‌ಗ ಸನ ಒಳೊ. **(ಬಾ.ಜೋ.)**



ಬೆತ್ತದ ಪೆಟ್ಟಿಗೆ

ಬೆತ್ತದ ಪೆಟ್ಟಿಗೆ ಹೆಸರ್ ಹೇಳುವಾಂಗೆ ಬೆತ್ತಲೇ ಮಾಡ್ದ ಪೆಟ್ಟಿಗೆ. ತುಳುಲಿ ಬೆತ್ತದ ಪೆಟ್ಯೆ, ಮಲೆಯಾಳಂಲಿ ಚೂರಲ್ ಪೆಟ್ಟಿತ ಹೇಳುವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆ ಮತ್ತೆ ಹಾಸನ ಜಿಲ್ಲೆನ ಸಕ್ಲೇಸ್ಪುರ ಕಡೆಲೆಲ್ಲ ಇದ್ದದೆ.

ಒಳ್ಳೆ ಜಾತಿದ್ ಬೆತ್ತನ ಸೀಳಿ ತೆಳ್ಳಂಗೆ ಸಪೂರಕ್ಕೆ ಕೀಸಿ ಮಾಡ್ದ ಬೊಳ್ಳಿಲಿ ಪೊರ್ಲುಲಿ ಬೇರೆ ಬೇರೆ ಅಲಂಕಾರಲಿ ಪೆಟ್ಟಿಗೆನ ಮಾಡ್‌ವೆ. ಅದ್ಕೆ ಆಗಾಗ ತೇಲ್ರೆ ಕೆಲವ್ ವರ್ಸಕ್ಕೆ ಒಮ್ಮೆ ಮರದ ಎಣ್ಣೆ ಕೊಟ್ಟ್‌ಕಂಡ್ ಇದ್ದರೆ ಎಸ್ಟ್ ವರ್ಸ ಆದರೂ ಹಾಳಾಕಿಲ್ಲೆ. ಪೆಟ್ಟಿಗೆನ ಬೇರೆ ಬೇರೆ ಆಕಾರಲಿ ಮಾಡುವೆ. ಚೌಕ, ಆಯತ, ಉರುಂಟು, ಮೊಟ್ಟೆ ಆಕಾರಲಿ ಇದ್ದದೆ. ಅದ್ಕೆ ಮುಚ್ಚಳ ಸಹ ಉಟ್ಟು. ಮುಚ್ಚಿಕೆ, ತೆಗೆಕೆ ಬಿಜಾಗ್ರಿ ಉಟ್ಟು. ಬೀಗ ಹಾಕಿಕೆ ಸಾ ಆದೆ. ಚರ್ಮದ ಬಿಜಾಗ್ರಿ, ಬೆತ್ತದ ಬಿಜಾಗ್ರಿ, ಮತ್ತೆ ಹಿತ್ತಾಳೆದ್ ಕೂಡ ಇದ್ದದೆ.

ಇದರ ಕೊರಗರ್, ಮಲೆ ಕುಡಿಯರ್, ಅಜಲರ್ ಮಾಡ್ತಿದ್ದೊ. ಅವು ಅಲ್ಲದೆ ಬೇರೆ ಜನಂಗಸ ಕಲ್ತ್ ಮಾಡ್ತಿದ್ದೊ.

ಇಚಿತಹ ಪೆಟ್ಟಿಗೆಲಿ ಹಿಂದೆನವು ಬಟ್ಟೆಬರೆ, ನಗನಾಣ್ಯ, ಜಾಗೆಗೆ ಸಂಮ್ಮಂದಿಸಿದ ದಾಕಲೆಗಳ ಎಲ್ಲ ಹಾಕಿ ಇಸ್‌ತಿದ್ದೊ. ಅದ್ ಅಲ್ಲದೇ ದೆವ್ವದ ಬಂಡಾರ, ದೆವ್ವಕ್ಕೆ ಸಂಮ್ಮಂದಪಟ್ಟ ವಡವೆನ ಹಾಕಿ ಇಸ್‌ತ್ತಿದ್ದೊ.

ನೋಡಿಕೆ ಬಾರೀ ಪೊರ್ಲುಟ್ಟು. ಇದರ ಮಾಡಿಕೆ ಚಾತುರ್ಪು ಬೇಕ್. ಯಾಕೆಂತೇಳ್ರೆ ಇದರ್‌ಲಿ ಹನಿಸ್ ಕುಸುರಿ ಕೆಲಸ ಉಟ್ಟು. **(ಎಂ.ಜಿ.ಕೆ.)**



ಬೆತ್ತದ ಹರಿವಾಣ

ಬೆತ್ತದ ಬೊಳ್ಳಿಂದ ಮಾಡ್ದ ಹರಿವಾಣ (ಹರ್ವಾಣ), ತೇಳ್ರೆ ಬಟ್ಟಲ್‌ನ ಹಾಂಗೇ ಇರ್‌ವ ಎಲೆ ಅಡಿಕೆ ಹಾಕಿಸಿಕೆ ಆವ ಒಂದ್ ಸೊತ್ತು. ತುಳುಲಿ ಬೆತ್ತದ ಹರಿವಾಣ, ಮಲೆಯಾಳಂಲಿ ಚೂರಲ್ ತಳಿಗ, ಬ್ಯಾರಿ ಬಾಸೆಲಿ ಬೆತ್ತಂಡೆ ಬೆತ್ತಲ್ ಬಟ್ಟಿತ ಹೇಳುವೆ. ದಕ್ಷಿಣ ಕನ್ನಡ ಜಿಲ್ಲೆಲಿ ಹೆಚ್ಚಾಗಿ ಎಲ್ಲಾ ಮನೆಲೂ ಇತ್ತ್.

ಬೆತ್ತದ ಬೊಳ್ಳಿನ ಸಪೂರಕ್ಕೆ ಸಿಗ್ದ್ ಕೀಸಿ ಪೊರ್ಲು ಮಾಡಿ ಇದರ ನೇಯ್ದುವೆ. ಇದರ್‌ಲಿ ಎತ್ತರದ್‌ಸ ಇದ್ದದೆ. ಎತ್ತರ ಇದ್ದ ಹರಿವಾಣ ಗುಂಡಿ ಆಗಿದ್ದದೆ. ಮತ್ತೆ ಅದ್ಕೆ ಅಡಿಗೆ ಪೀಟದ ಹಾಂಗೇ ಇದ್ದದೆ. ಬೆತ್ತದ ಬೊಳ್ಳಿಲಿ ಅಲ್ಲರ್ ಕಾಡ್ ಬೊಳ್ಳಿಲಿ ಸ ಇದರ ಮಾಡಕ್.

ಕೊರಗರ್, ಮಲೆ ಕುಡಿಯರ್, ಅಜಲರ್ ಇದರ ಮಾಡುವೆ. ಬೇರೆ ಜೆನಂಗ ಸ ಇದರ ಮಾಡುವೆ. ಇದರ್‌ಲಿ ಎಲೆ ಅಡಿಕೆ ಹಾಕಿಸಿಕೆ ಆದೆ. ಜಂಬರದ ಮನೆಲಿ ಎಲೆ ಅಡಿಕೆ ಹರಿವಾಣ ಅಲ್ಲಲ್ಲಿ ಇಸ್‌ವ ಕ್ರಮ ಉಟ್ಟು. (ಎಂ.ಜಿ.ಕೆ.)



ಬೆಂಡುಕುಕ್ಕೆ

ಹೂವು, ಹೊದ್ರಿ, ಅವುಲಕ್ಕಿ ಹೀಂಗೆ ಬೇರೆ ಬೇರೆ ಸಾಮಾನ್ ಹಾಕಿ ಇಸುವ ಸೊತ್ತು. ಬೊಳ್ಳಿ ಇಲ್ಲರ್ ಒಲಿಲಿ ಮೊಡ್ಡ ಸೊತ್ತ್ ಬೆಂಡ್ ಕುಕ್ಕೆ. ಕಂಬದ ಹಂಗೆ ಎತ್ತರ ಇದ್ದ್ ಹಿಡಿ ಇಲ್ಲದ ಕುಕ್ಕೆ. ಇದ್ಕೆ ತುಳುಲಿ ಬೊಂಡುರ್‌ವೆ (ಬೊಂಡುಕುರ್ವೆ) ಮಲೆಯಾಳಂಲಿ ಉಂಡಕುರಿಯ, ಬ್ಯಾರಿ ಬಾಸೆಲಿ ಕುರಿಯತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಇದ್ದದೆ.

ಬೆಂಡ್ ಕುಕ್ಕೆನ ಚಾಳೆ ಒಲಿಲಿ, ತಾಳೆ (ತಾರಿ) ಮರದ ಒಲಿಲಿ, ಹಳ್ಳದ ಕರೆಲಿ ಇರುವ ಮೂಡೆಂಜನ ಒಲಿಲಿ ತೇಲ್ರೆ ಮೊಂದ್ರಿ ಮುಡಿವ ದೆಯ್ಯಿನ ಸೋಗೆಲಿ, ಬೆತ್ತದ ಬಾಸ್‌ಲಿ ಅಲ್ಲರ್ ಬೆದ್ರ್‌ನ ಬಾಸ್‌ಲಿ ಸ ಬೆಂಡ್ ಕುಕ್ಕೆ ಹೆಣ್ದ್ ಮಾಡುವೆ.

ಬೆತ್ತ ಮತ್ತೆ ಬೆದ್ರ್‌ನ ಸೀಳಿ ತೆಳ್ಳಂಗೆ ಅದರ ಬೆಂಡ್ ಒಳಗೆನ ಬಾಗ ತೆಗ್ದ್ ಕೀಸಿ ಲಾಯ್ಕ್ ಮಾಡಿಕಾಂಕು. ತೆಳ್ಳಂಗೆ ಆದಷ್ಟ್ ಮುಡೆಕೆ ಸುಲಬ ಆದೆ. ಒಲಿ ಆದರೆ ಸಪೂರಕ್ಕೆ ಸೀಳಿಕಾಂಕು. ಕೆಲವು ಜನ ಹಞ ಅಗಲಕ್ಕೆ ಸಿಗ್ದ್ ಕುಕ್ಕೆ ಮುಡ್ದವೆ. ಬೆತ್ತ, ಬೆದ್ರ್, ಒಲಿ ಯಾವುದೇ ಆಗಲಿ ಅದ್ ಪೊರ್ಲುಟ ಒಳ್‌ಂಗೊಕು. ಒಳ್‌ಂಗಿದ ಮೇಲೆ ಮುಡೆಕಾಕನ ಅದರ ನೀರಿಗೆ ಹಾಕಿ ಮೆತ್ತಂಗೆ ಮಾಡಿಕಾಂಕು. ಬೆಂಡ್ ಕುಕ್ಕೆ ಮುಡೆಕೆ ಕೈಚಳಕ್‌ನ ಚಾತುರ್ಯ ಬೇಕ್. ಬೆಂಡ್ ಕುಕ್ಕೆನ ಬೇರೆ ಬೇರೆ ಉಪಯೋಗಕ್ಕೆ ಬರ್‌ವ ಹಾಂಗೆ ಆಕಾರಲಿಸಾ ಬದಲಾವಣೆ ಮಾಡ್‌ವೆ.

ಅಕ್ಕಿ ತೊಳೆಕೆ ಒಸಿ ಎತ್ತರಕೆ ಸಪೂರಕೆ ಇರುವ ಕುಕ್ಕೆ ಬೇಕು. ದೆವ್ವ ದೇವ್ರ್‌ಗೆ ಬೇಕಾದ ಸಾಮಾನ್‌ನ ಜೋಡ್ಸಿ ಇಸಿಕೆ ಅಗಲ ಬಾಯಿದ್ ದೊಡ್ಡದ್ ಇರೋಕು. ಹೊದ್ರಿ, ಅವುಲಕ್ಕಿ, ಬೆಲ್ಲ, ಬಾಳೆಹಣ್ಣ್ ಹಾಕಿಕೆ ಅಗಲ ಬಾಯಿದ್ ದೊಡ್ಡ ಬೆಂಡ್ ಕುಕ್ಕೆ ಬೇಕಾದೆ. ಹಗೂರದ ಸಾಮಾನ್ ಹಾಕಿಸಿಕೆ ತೇಲ್ರೆ ಹೂ, ಹೊದ್ರಿ, ಅವುಲಕ್ಕಿ ಇಂತ ಸಾಮಾನ್ ಹಾಕಿಸಿಕೆ ಒಲಿದ್ ಕುಕ್ಕೆ ಸಾಕ್. ಬೆತ್ತದ ಬೆಂಡ್ ಕುಕ್ಕೆ ಬಾಳ್ತರ ಜಾಸ್ತಿ ಬಂದದೆ. ಬೆದ್ರ್‌ನ ಕುಕ್ಕೆ ಮಾಡಿಕೆ ಹಞ ಕೆಲ್ಸ ಜಾಸ್ತಿ.

ವರ್ಸದ ಎಲ್ಲಾ ದಿನ ಉಪಯೋಗಕ್ಕೆ ಬಂದದೆ. ಹೆಚ್ಚಾಗಿ ಕೊರಗರ್, ಅಜಲರ್, ಮಲೆ ಕುಡಿಯರ್ ಇದರ ಮುಡೆತಿದ್ದೊ. ಬೇರೆ ಜಾತಿ ಜನಾಂಗದೊವು ಸ ಕುಕ್ಕೆ ಮುಡ್ದವೆ. **(ಎಂ.ಜಿ.ಕೆ.)**



ಬ್ಯಾಟ್ರಿ ಲೈಟ್

ಹಳ್ಳಿಲಿ ಪ್ರತಿ ಮನೆಲಿ ಬ್ಯಾಟ್ರಿ ಲೈಟ್‌ಇರ್ತಿತ್. ಹಿಂದೆ ಹೆಚ್ಚಿನ ಹಳ್ಳಿಗಳ್‌ಲಿ ಕರೆಂಟ್ ಸಂಪರ್ಕ ಇತ್ಲೆ. ರಾತ್ರೆ ಮನೆ ಒಳಗೆ ಚಿಮ್ನೆಣ್ಣೆ ಇಲ್ಲರ್ ಲ್ಯಾಂಪ್ ಬೊಳ್ಪು, ಹೊರಗೆ ಹೋಕಾರ್ ಬ್ಯಾಟ್ರಿಲೈಟ್ ಬೇಕಿತ್ತ್. ಹಿಂದೆ ಹೆಚ್ಚಿನ ಮನೆಗಳ್‌ಲಿ ಸಂಡಾಸ್ ಇತ್ಲೆ. ಸಂಡಾಸ್‌ಗೆ ಚೋಡಿಕೆರೆ ಇಲ್ಲರ್ ಗುಡ್ಡೆಗೆ ಹೋತಿದ್ದೊ. ರಾತ್ರೆ ಸಂಡಾಸ್‌ಗೆ ಹೋಕೆ ಟಾರ್ಚ್ ಅತೀ ಅಗತ್ಯ ಬೇಕಿತ್ತ್. ಅದ್ಕೆ ಹಾಕುವ ಬೆಟ್ರಿನ ನಿಪ್ಪೊ, ಎವೆರೆಡಿ, ಪಿಲಿಪ್ಸ್ ಕಂಪೆನಿಗ ತಯಾರ್ ಮಾಡ್ತಿದ್ದೊ. ಈಗೊಳೊ ಬ್ಯಾಟ್ರಿ ಲೈಟ್ ಉಟ್ಟು. ಆದರೆ ಉಪಯೋಗ ಮಾಡುವ ಜನ ಬಾರೀ ಕಮ್ಮಿ. ಬ್ಯಾಟ್ರಿ ಲೈಟ್‌ಗಳ್‌ಲಿ 2 ಬೆಟ್ರಿ, 4 ಬೆಟ್ರಿ ಮತ್ತೆ 6 ಬೆಟ್ರಿ ಹಾಕುವ ಲೈಟ್‌ಗ ಇದ್ದವೆ. ಅದ್ಕೆ ಸರಿಯಾಗಿ ಅದರ ಒಳಗೆ ಹಾಕುವ ಬಲ್ಬ್‌ನ ವೊಲ್ಟ್‌ಲಿ ಸಹ ವ್ಯತ್ಯಾಸ ಇದ್ದದೆ. ಲೈಟ್ ಬೆಳ್ಕ್ ಬಾವ ತಲೆನ ಎಡ್ದ್ – ಬಲ್ದ್‌ಗೆ ತಿರ್‌ಗ್‌ಸಿರೆ ದೂರಕ್ಕೆ ಬೀಳುವ ಬೆಳ್ಕ್‌ಲಿ ವ್ಯತ್ಯಾಸ ಆದೆ. ರಾತ್ರೆ ದಾರಿಲಿ ನಡ್ಕಂಡ್ ಹೋಕನ ನಾಲ್ಕೈದ್ ಜನ ಇದ್ದರೆ, ಲೈಟ್ ಬೆಳ್ಕ್‌ನ ಅಗಲಕ್ಕೆ ಬೀಳುವಂಗೆ ತಿರ್ಗುಸುವೆ. ಇನ್ನ್ ತೋಟಕೆ ರಾತ್ರೆ ಆನೆ, ಹಂದಿ, ಎಯಿಪೊಂಜಿ ಮೊನಿ ಬಂದುಟೋ ತೇಳಿ ನೋಡಿಕೆ, ಲೈಟ್‌ನ ತಲೆನ ತಿರ್ಗ್‌ಸಿ ಎಲ್ಲಾ ಬೆಳ್ಕ್ ಒಂದೇ ಕಡೆ ಬೀಳುವಂಗೆ ಮಾಡಿಕೆ ಆದೆ. ಕೆಲವು ಜನ ರಾತ್ರೆ ಹಳ್ಳಿಲಿ ಹಳ್ಳಕೆ ಮೀನ್ ಕೆಡೆಕೆ ಹೊಕೆ ಸ ಇದರ ಬಳ್ಸುವೆ.

ಈಗ ಬ್ಯಾಟ್ರಿ ಲೈಟ್ ಉಪಯೋಗ ಕಮ್ಮಿ ಆಗಿ ಕರೆಂಟ್‌ಲಿ ಚಾರ್ಜ್ ಮಾಡುವ ಲೈಟ್‌ಗ್ ಬಂದೊಳೊ. ಬ್ಯಾಟ್ರಿ ಲೈಟ್ಗಳ ಹೆಚ್ಚಾಗಿ ಸ್ಟೀಲ್‌ಂದ ಮಾಡುವೆ. ಹಿಂದೆ ಹೆಚ್ಚಿನವರಕ್ಕಲೆ ಎವೆರೆಡಿ ಕಂಪೆನಿನ ಲೈಟ್‌ಗ ಇರ್ತಿದ್ದೊ. **(ಪು.ಕೆ.ವಿ)**



ಮಡೆ ಗುತ್ತಿ

ಎಲಡಿಕೆ ಮತ್ತೆ ಹೊಸೆಪ್ಪು ತಿಂಬವರ ಬಾಯಿ ತುಂಬ ಮಡೆ ತುಂಬಿಕಂಡದೆ. ಜಗಲ್‌ಲಿ ಕುದ್ದ್ ಅಂಗಳದ ಒಂದ್ ಕರೆಗೆ ಉಗ್ದವೆ. ಬಾಯಿಗಿಸಿದ ಎಡ್ದ ಕೈ ಎರಡ್ ಬೆರಳ್ ಸಂದಿಂದ ಕೆಂಪು ನೀರ್ ಚೊಳ್ಳ್‌ತ ಹಾರಿ ಬಾಗಿ ಬಿದ್ದದೆ. ಹಂಗೆ ಯಾಗೋಳು ಉಗ್ದ್ ಉಗ್ದ್ ಅಸ್ವಗಲ ನೆಲ 'ಬಲಿನೆಲ'ದಂಗೆ ಕಂಡದೆ. ಮತ್ತೆ ಕೆಲವು ಸಿಕ್ಕಿದಲ್ಲೆಲ್ಲಾ ಉಗ್ದವೆ. ಹಂಗೆಲ್ಲ ಉಗ್ದ್ ಹೇಸಿಗೆ ಮಾಡ್ದು ಬೇಡತ ಗೊತ್ತಾತ್. ಹಂಗೆ ಗೊತ್ತಾದಲ್ಲಿಂದ ಯಾಗೋಳು ಎಲಡಿಕೆ ತಿಂಬವು ಉಗೆಕೆ ಸುರ್ ಸುರ್‌ಲಿ ದೊಡ್ಡ ಚಿಪ್ಪಿಗೆ ಉಗೆತಿದ್ದೊ. ಆದರೆ ಚಿಪ್ಪಿ ಸರಿಯಾಗಿ ನೆಲಲಿ ಕೂರದೆ ಹೊಣ್ಚುದೇ ಜಾಸ್ತಿ ಆತಿತ್. ಅಲ್ಲೆಲ್ಲಾ ಚೆಲ್ಲಾಡಿ ಹೇಸಿಕೆ ಆದು ಬೇಡಾತ ಗ್ಯಾನಾತ್. ಆಗ ಬಂದದೆ ಮಡೆಗುತ್ತಿನ ಎಂಜಿಲ್ ಕೊಳಂಬೆ, ಪೀಕದಾನಿತೆಲ್ಲಾ ಕರ್ದವೆ. ಹೆಂಗೇ ಕರ್ದರೂ ಅದ್ ಉಗೆಕಿರ್‌ವ ಪಾತ್ರತೇ ಅರ್ತ.

ಮಡೆಗುತ್ತಿ ರಾಜರ ಕಾಲಂದಳೇ ಬಂದುಟು. ರಾಜ ಕುದ್ದ್ ಕಂಡ್ ಬಲ್ದ ಕಡೆತಿರ್ಗಿರೆ ಎಲಡಿಕೆ ಬೇಕುತ ಅರ್ತ. ರಾಜ ಎಡ್ದ ಕಡೆ ತಿರ್ಗಿತ್‌ತಾದರೆ ಎಂಜಿಲ್ ಕೊಳಂಬೆ ಹಿಡೆಕುತ ಅರ್ತ. ಹಂಗಾಗಿ ರಾಜನ ಎಡ ಬಲಲಿ ಯಾಗೊಳು ಇಬ್ಬರ್ ಸೇವಕಿಗ ನಿತ್ತಿರೊಕು. ಒಬ್ಬು ಎಲಡಿಕೆ ಮಡ್ಲಿಕಂಡ್ ನಿತ್ತರೆ ಇನ್ನೊಬ್ಬು ಮಡೆಗುತ್ತಿನ ಹಿಡ್ದ್ ನಿತ್ತಿರಕಾಗಿತ್ ಗಡ.

ಅದ್ ರಾಜರ ಕತೆ ಬುಡಿ. ಇನ್ನ್ ಸಾಮಾನ್ಯ ಜನಏನ್ ಮಾಡೊಕು? ವಯಸ್ಸಪ್ಪವು ಮಲ್ಗಿದ ತಲೆ ಕಡೆ ಕಟ್ಲ್ ಕೆಳಗೆ ಮಡೆಗುತ್ತಿನ ಇಸಿದ್ದವೆ. ಕೆಮ್ಮಿ ಉಗೆಕೂ ಆತ್, ಎಲಡಿಕೆ ಹೊಸೆಪ್ಪು ತಿಂದ್ ಉಗೆಕೂ ಆತ್. ಕೆಲವು ಒಳಗೆ ಕುದ್ದರೆ ಒಳಗೆ, ಹೊರಗೆ ಕುದ್ದರೆ ಹೊರಗೆ ಅವವೇ ಹಿಡ್ಕಂಡ್ ಓಡಾಡಿವೆ. ಕಂಚ್, ತಾಮ್ರದ ಮಡೆಗುತ್ತಿ ಇದ್ದದೆ. ಕೀಜಿನ ಮಡೆಗುತ್ತಿನೂ ಉಟ್ಟು. ಮಡೆಗುತ್ತಿನ ದಿನಾ ತೊಳ್ದಿಸುದು ಒಂದ್ ಒಳ್ಳ ಅಬ್ಯಾಸ. **(ಬಾ.ಜೋ.)**

ಮಡೆ ಉಗೆಕೆ ಇರುವ ಲೋಹಂದ ಮಾಡ್ದ ಗುತ್ತಿ ಮಡೆಗುತ್ತಿ. ತುಳುಲಿ ಇದ್ನೆ ಮಡೆತ ಪಡ್ಯ, ಮಲೆಯಾಳಂಲಿ ಕೊಳಾಂಬಿ, ಬ್ಯಾರಿ ಬಾಸೆಲಿ ತುಪ್ಪುನ ಅಂತ ಹೇಳುವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಬಳಕೆಲಿ ಉಟ್ಟು. ಇದ್ ಸಣ್ಣದಾಗಿದ್ದ್ ಬಾಯಿ ಅಗಲ ಇದ್ದದೆ. ಮಡೆಗುತ್ತಿಲಿ ಬೇರೆ ಬೇರೆ ತರ ಇದ್ದದೆ. ಆಕಾರಲಿ ಸ ಬೇರೆ ಬೇರೆ ಬಗೆ ಇದ್ದದೆ.

ಅನುಕೂಲ ಇದ್ದೋವು ಪೊರ್ಲುನ ಮಡೆಗುತ್ತಿನ ತಕಂತಿದ್ದ. ಬೆದ್ರ್ ಗುತ್ತಿಂದ ಸ ಮಡೆಗುತ್ತಿ ಮಾಡಿಕಾದೆ. ಅದ್ ಪೊರ್ಲು ಕಾಂಬೊದಿಲ್ಲೆ. ಅದರೆ ಬೇಕಾದವು ಅವವೇ ಮಾಡಿಕಂಡವೆ. ಪ್ರಾಯದವುಕೆ ಕಾಯಿಲೆಲಿ ಕೆಮ್ಮು ಬಾಕನ ಕಪ ಬಂದರೆ ಇದರ್‌ಲಿ ಉಗೆತಿದ್ದೊ. ಕಪದ ತೊಂದರೆ ಇದ್ದೊವು ಉಗೆಕೆ ಬಾಕನ ಮಡೆಗುತ್ತಿಲಿ ಉಗೆತ್ತಿದ್ದ.

ಹಿಂದೆನವುಕೆ ಎಲಾಡ್ಕೆ ತಿಂಬೊದು ಅಬ್ಬೆಸ ಇತ್ತ್. ಮನೆಗೆ ಬಂದ ನೆಂಟ್ರ್‌ಗೆ ಎಲಾಡ್ಕೆ ಕೊಡ್ದು ನಡ್ಕನ್ ಬಂದ ಕ್ರಮ. ಹಾಂಗಾಗಿ ಎಲಾಡ್ಕೆ ತಿಂದೊವು ಆಗಾಗ ಉಗೆಕೆ ಹೊರಗೆ ಹೋದು ಆಕಿಲೆ ಅಂತ ಗುತ್ತಿಲೇ ಉಗೆತಿದ್ದ. ಮೂಲಲಿ ಬೆದ್ರ್‌ಗುತ್ತಿಲೇ ಮಡೆ ಉಗೆತ್ತಿದ್ದ, ಅಲ್ಲರ್ ಚಿಪ್ಪಿಲೂ ಉಗೆತಿದ್ದ. **(ಎಂ.ಜಿ.ಕೆ.)**



ಮರದ ಪೆಟ್ಟಿಗೆ

ಮದುಮಗಳ ಚಿನ್ನ – ಬಣ್ಣ (ಬಣ್ಣ ಬಂಗಾರ) ಇಸುವ ಪೆಟ್ಟಿಗೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಇದ್ದದೆ. ಇದ್ ಮರಂದಲೇ ಮಾಡ್ದ್. ಇದರ್‌ಲಿ ತುಂಬಾ ಅದೆಗ ಇದ್ದದೆ. ಚೈನ್, ಬಳೆ, ಉಂಗುರ, ಕೆಬಿದ್, ನಗ ಎಲ್ಲ ಇಸಿಕೆ ಆಗುವ ಹಾಂಗೆ. ಬೀಗ ಹಾಕಿ ಕೂ ಸ ಮಾಡ್‌ವೆ. ಇದರ ಮರದ ಆಚಾರಿಗಳೇ ಮಾಡ್ದು. ಮೊದುವೆಗೆ ದಿಬ್ಬಣ ಹೋಕನ ಚಿನ್ನ ಬಣ್ಣ ಎಲ್ಲ ತುಂಬಿಸಿಕನ್ ಹೋಕೆ ಬೇಕಾದೆ. ಅಲ್ಲರ್ ಮೊದುವೆ ಮನೆಲಿ ಚಿನ್ನ ಬಣ್ಣ ಎಲ್ಲ ತುಂಬಿಸಿ ಇಸಿಕೆ ಈ ಪೆಟ್ಟಿಗೆ ಬೇಕಾದೆ. **(ಎಂ.ಜಿ.ಕೆ.)**

ಮರದ ಏಣಿ

ಮನೆಗಳ್‌ಲಿರ್‌ವ ಪವಿತ್ರ ಸೊತ್ತ್‌ಗಳ್‌ಲಿ ಏಣಿನೂ ಒಂದ್. ಅಟ್ಟ ಇರ್‌ವ ಮನೆ ಯಾವ್ದುಟ್ಟೊ, ಅಲ್ಲಿ ಏಣಿ ಉಟ್ಟೆ ಉಟ್ಟು. ನೆರಿಕೆ ಮನೆನೇ ಆಗಲಿ, ಗೋಡೆ ಮನೆನೇ ಆಗಲಿ ಆ ಮನೆಗೆ ಅಟ್ಟ ಇದ್ದೇ ಇದ್ದದೆ. ಅಟ್ಟ ಉಟ್ಟುತಾದರೆ ಅಲ್ಲಿಗೆ ಏಣಿ ಬೇಕೇ ಬೇಕ್.

ಏಣಿ ಮರದ್ದೇತ ಅಲ್ಲ. ಬೆದ್ರ್‌ನ ಏಣಿನೂ ಇದ್ದದೆ. ಸಾಮಾನ್ಯಾಗಿ ಏಣಿಗೆ ಎರಡ್‌ಕಾಲ್. ಆದರೆ ಎಷ್ಟೋ ಮನೆಗಳ್‌ಲಿ ಒಂಟಿಕಾಲ್‌ದ್ ಬೆದ್ರ್‌ಏಣಿ ಇತ್ತ್. ಏಣಿದ್ ಉದ್ದ ಗೋಡೆ ಎತ್ತರಕ್ಕೆ ತಕ್ಕಂಗಿದ್ದದೆ. ಒಂಬತ್ತ್ ಮೆಟ್ಟ್ ಇರ್‌ವ ಏಣಿಲಿ ಮೆಟ್ಟ್‌ಂದ ಮೆಟ್ಟಿಗೆ ಒಂದೂ ಕಾಲಡಿ ದೂರ ಇದ್ದದೆ. ಏಣಿದ್ ಅಡ್ಡಗಲ ಒಳಗೆಂದೊಳಗೆ ಒಂದೂವರೆ ಅಡಿ ಇದ್ದದೆ. ಏಣಿ ಹತ್ತ್‌ಕನಾಗಲಿ, ಇಳೆಕನಾಗಲಿ ಎಲ್ಲಾರ್ ಗೊತ್ತಿಲ್ಲದೆ ಕಾಲ್ ಒಳಗೆ ಹಾಕಿ ಕಷ್ಟ ಆಕಾಗದ್‌ತ ಕೆಲವ್ ಕಡೆ ಏಣಿಗೆ ಪಾರ್ ಹೊಡ್ದ್ ಪೆಟ್ಟಿಗೆನಂಗೆ ಮಾಡಿದ್ದವೆ. ಮರದ ಏಣಿನ ಆಚಾರಿಗ ಮಾಡಿವೆ ಅಲ್ಲರೆ ಬೆದ್ರ್ ಏಣಿನ ಮನೆಯವೇ ಮಾಡಿಕಂಡವೆ. ಹಲ್ಸ್‌ನ ಮರ, ಸಂಪಿಗೆ ಮರ ಬುಟ್ಟ್ ಮತ್ತೆ ಯಾವ್ದೇ ಗಟ್ಟಿ ಮರಂದ ಏಣಿ ಮಾಡಿವೆ.

ಏಣಿದ್ ಉಪಕಾರ ಒಂದೆರ್ಡಲ್ಲ. ಮುಡ್ಪುನ ಮೋಂದಾಯಕ್ಕೆ ಕಟ್ಟಿಕ್ಕಾಗಲಿ ಅರ್ಸಯ ದಿನ ಅದರ ಬಿಚ್ಚಿ ತಾಕಾಗಲಿ ಅಟ್ಟ ಹತ್ತಿಕೆ ಏಣಿ ಬೇಕೇ ಬೇಕ್. ಅಟ್ಟಲಿ ಕಟ್ಟಿದ ಕಡ್ಕೆಗೆ ಬತ್ತ ತುಂಬಿಕೆ, ಬತ್ತ ಕುಟ್ಟಕನ ಕಡ್ಕೆಂದ ಇಳ್ಸಿ ತಾಕೆ, ಅಟ್ಟಲಿ ಬಾಳೆಗೊನೆ ಕಟ್ಟಿಕೆ, ಬೆಳ್ಳೆರಿ (ಒಡ್ಡು ಸೋಂತೆ), ನೀರ್ ಸೋಂತೆ, ಆಲ್ಗೆಂಡೆ, ನೀರ್‌ಳ್ಳಿನೆಲ್ಲಾ ಪೊತ್ತುರ್ತೆ ಮಾಡಿಕೆ, ಎಡೆ ಇಸಿಕನ ಒಂದ್ ಪಾಲ್‌ನ ಅಟ್ಟಲಿ ಇಸಿಕೆ, ಜನ ಜಾಸ್ತಿ ಆದಂದ ಇರ್‌ಲ್ಲ ಅಟ್ಟಲಿ ನಿಲ್ಗಿಕೆ (ನಿಲ್ಲುದುತ್ತೇಳ್ರೆ ನಿದ್ದೆ ಮಾಡ್ದು) ಹತ್ತೊಕುತಾದರೆ ಏಣಿ ಬೇಕೇ ಬೇಕ್. ಅಟ್ಟಲಿರ್‌ವ ಎಲಿ ಹಿಡೆಕೆ, ಮರಿ ಹಾಕಿಕೆ, ಆ ಮರಿಗಳ ಅಟ್ಟ ಅಡಿತ್ತೇಳಿ ಜಾಗ ಬದಲ್ ಮಾಡಿಕೆ ಕೊತ್ತಿಗಳಿಗೆ ಅಟ್ಟ ಹತ್ತಿಕೆ ಇಳೆಕೆ ಏಣಿ ಬೇಕ್. ಹುತ್ತೆರಿ ಹಬ್ಬಲಿ ಬತ್ತದ ಕದ್ರ್‌ನ ಏಣಿ ಕಾಲಿಗೆ ಕಟ್ಟಿ ಗೌರವ ಕೊಟ್ಟವೆ. ಪಾದರಕ್ಷೆನ ಬುಟ್ಟ್ ಏಣಿ ಹತ್ತಿವೆ. ಅದ್ ಏಣಿಗಿರ್‌ವ ಪಾವಿತ್ರತೆನ ತೋರ್ಸಿದೆ. ಏಣಿಕಾಲ್ ಬುಡಲಿ ಎಡೆ ಇಸುವ ಕ್ರಮನೂ ಉಟ್ಟು. ಏಣಿಗೆ ಒಂದೇ ಜಾಗೆ ಕಾಯಂ ಆಗಿದ್ದದೆ.

ಜಾಮೆವ್ವಂಗೆ ನಾವ್ ಹೆಂಗೆ ಗೌರವ ಕೊಟ್ಟವೆನೊ ಹಂಗೆ ಏಣಿಗೂ ಗೌರವ ಕೊಟ್ಟವೆ. ಅದ್ಕೆತ ಕಂಡದೆ 'ನಮ್ಮ ನೆಲೊಂದ್ ಅಜ್ಜಿ ಕಾಲ್ ನೀಂಡಿ ಕುದ್ದುಟು' ತ ಒಡ್ಗೋಕತೆ ಕಟ್ಟಿಯೊಳದ್. ಟೇರಿಸ್ ಮನೆ ಕಟ್ಟ್‌ತ್ತಿದ್ದಂಗೆ ಅಟ್ಟನೂ ಬುಟ್ಟೋತ್, ಏಣಿನೂ ಕಾಣದಾತ್. **(ಬಾ.ಜೋ.)**



ಮಾಯ್ಪು ಸೂಡಿ

ನೆಲಲಿ ಹರ್‌ಂಡಿರುವ ಕಾಡ್, ಕಡ್ಡಿ, ದೂಳುನೆಲ್ಲ ಗುಡ್ಸಿ ಮನಾರ ಮಾಡಿಕಿರುವ ಒಂದು ಸೊತ್ತು. ತುಳುಲಿ ಸ ಮಾಯ್ಪು ಸೂಡಿಂತಲೇ ಹೇಳುವೆ. ಇದ್ ಇಡೀ ಲೋಕಲೇ ಇರುವಂತದ್ದೇ. ಅದರೆ ರೂಪ ಮಾತ್ರ ನಾನಾ ನಮೂನೆ ಇರ್‌ದು.

ಮಾಯ್ಪು ಸೂಡಿನ ದಕ್ಷಿಣ ಕನ್ನಡ, ಉಡುಪಿ ಕಡೆಲೆಲ್ಲ ಎರಡ್ ರೀತಿಲಿ ಮಾಡುವೆ. ಒಂದು– ಕೊಮ್ಮುನ (ಅಡ್ಕೆ ಮರದ) ಸೋಗೆಲಿ ಮಾಡುವಂತದ್ದ್. ಹಣ್ಣಾಗಿ ಉದುರ್‌ದ ಸೋಗೆಲಿ ಲಾಯ್ಕ್ ಇರುವ ಮತ್ತೆ ಜಾಸ್ತಿ ಉದ್ದ ಇರುವ ಸೋಗೆನ ತಂದ್ ಅದರ ಸೋಗೆನ ಜಾಗ್ರತೆಲಿ ತೆಗೆಕು. ಸೋಗೆಂದ ಕಡ್ಡಿನ ಸಿಗ್ದ್ ತೆಗೆಕು. ಬೇಕಾದಷ್ಟ್ ಕಡ್ಡಿ ಆದ ಮೇಲೆ ಕಡ್ಡಿನ ಪೊರ್ಲು ಒಳ್‌ಂಗಿ ಸೊಕು. ಹೆಚ್ಚ್ ಕಮ್ಮಿ ಒಳ್ಳ ಮಾಯ್ಪು ಆಕರ್ ನಾಲ್ಕೈದ್ ಸೋಗೆ ಬೇಕಾದು. ಎಷ್ಟೇ ಜಾಗ್ರತೆಲಿ ಸೋಗೆನ ಸಿಗ್ದರೂ ಸೋಗೆನ ಸೀಂಕ್ ಅದರ್‌ಲೆ ಉಳ್ಕಂಡದೆ. ಪೊರ್ಲು ಒಳ್‌ಂಗಿದ ಕಡ್ಡಿನ ಒಟ್ಟು ಸೇರ್‌ಸಿ ದೊರಗ್ ಇರುವ ನೆಲಲಿ ಹಾಕಿ ಎರಡೂ ಕೈಲಿ ಪೊರ್ಲು ಉಜ್ಜೊಕು. ಆಗ ಕಡ್ಡಿಲಿ ಇರುವ ಸೋಗೆ ಹುಡಿ ಹುಡಿಯಾಗಿ ಉದರ್‌ದೆ. ಒಂದು ಪುಂಡಿ ಕಡ್ಡಿನ ಕೈಲಿ ಹಿಡ್ಕಂಡ್ ಕಡೆನ ಒಟ್ಟು ಸೇರ್‌ಸಿ ಒಂದು ಮರದ ತುಂಡು ಮೇಲೆ ಇಸಿ ಕತ್ತಿಲಿ ಕಡ್ದರೆ ಲಾಯ್ಕಾದೆ. ಮತ್ತೆ ಕಡ್ಡಿಗಳ ಒಟ್ಟು ಸೇರ್‌ಸಿ ಕಟ್ಟ ಹಾಕಿರೆ ಮಾಯ್ಪು ತಯಾರಾತ್.

ಇನ್ನೊಂದು ರೀತಿ ತೇಳ್ರೆ, ಚಾಳೆ ಕಡ್ಡಿಂದ ಮಾಡ್ದು. ಇದರ ಮಾಡಿಕೆ ಹಣ್ಣಾಗಿ ಬಿದ್ದ ಚಾಳೆ ಮಡ್ಲ್ ಆದುಲೆ. ಹದಾ ಬೆಳ್ದ ಚಾಳೆ ಮಡ್ಲ್‌ನ ತೆಗ್ದ್ ಅದರ ಕತ್ತಿ ಅಲ್ಲರ್ ಚೂರಿಲಿ ಸಿಗ್ದ್ ಕಡ್ಡಿ ಬೇರೆ ಮಾಡೊಕು. ಕಡ್ಡಿನ ಪೊರ್ಲು ಕೀಸಿರೆ ಕಡ್ಡಿ ಲಾಯ್ಕ್ ಆದೆ. ಈ ಕಡ್ಡಿನೂ ಕಡೆ ಕತ್ತರಿಸಿ ಕಾಂಕು. ಮತ್ತೆ ಕಡ್ಡಿನ ನೆರಳ್‌ಲಿ ಒಳ್‌ಂಗಿಸಿ ಕಟ್ಟ ಹಾಕಿರೆ ಮಾಯ್ಪು ಆದಂಗೆ. ಮಾಯ್ಪುನ ಹಳ್ಳಿಲಿರುವ ಹೆಚ್ಚಿನವು ಮಾಡಿ ಕಂಡವೆ. ಮತ್ತೆ ಯಾರೂ ಮಾಡಿಕೆ ಆದೆ.

ಮನೆಲಿ, ಆಪೀಸ್‌ಲಿ ಅಲ್ಲರ್ ಬೇರೆ ಕಡೆಗಳ್‌ಲಿ ಗುಡ್ಸಿಕೆ ಇದ್ ಬೇಕಾದೆ. ಹಾಂಗೇ ಬತ್ತ, ರಾಗಿ, ಜೋಳ, ಅಕ್ಕಿ ಇದರೆಲ್ಲ ಗುಡ್ಸಿ ರಾಸಿ ಮಾಡಿಕೂ ಬೇಕ್. ಗುಡ್ಸಿ ಗುಡ್ಸಿ ಮಾಯ್ಪು ಸಮ್ದ್ ಸಮ್ದ್ ಸಣ್ಣದಾದೆ. ಅದರ ಕುಂಟು ಮಾಯ್ಪತ ಹೇಳುವೆ. ಇದರ್‌ಲಿ ಜಾಲ್ ಗುಡ್ಸಿಕೆ ಅಲ್ಲರ್ ಜಾಲಿಗೆ ಸೆಗಣಿ ಗುಡ್ಸಿಕೆ ಒಳ್ಳದಾದೆ.

ಕೊಮ್ಮುನ ಕಡ್ಡಿ ಮಾಯ್ಪುಂದಲೂ ಚಾಳೆ ಕಡ್ಡಿ ಮಾಯ್ಪು ಬಾಳ್ತರ ಜಾಸ್ತಿ.

ಹಳ್ಳಿಲಿ ಎಲ್ಲರ ಮನೆಲೂ ಕೊಮ್ಮುನ ಸೋಗೆಂದ ಮಾಡ್ದ ಮಾಯ್ಪು ಇದ್ದದೆ. ಪೇಟೆಲಿರೊವುಕೆ ಚಾಳೆ ಮಡ್ಲ್‌ನ ಕಡ್ಡಿಂದ ಮಾಡ್ದ ಮಾಯ್ಪು ಅಂಗಡಿಲಿ ಸಿಕ್ಕಿದೆ. ಕೊಡಗ್‌ಲಿ ಹಾಸನ ಜಿಲ್ಲೆಲಿ ಬೇರೆತರದ ಮಾಯ್ಪು ಇದ್ದದೆ. ಅದರ್‌ಲೂ ಕಾಪಿ ಬೆಳ್ಸವವರಲ್ಲಿ ಕಾಪಿ ಗುಡ್ಸಿಕೆಂತ ತುಂಬಾ ಗೆಲ್ಲ್ ಇರುವ ದೆಯ್ಯಿನ ಕಡ್ದ್ ಅದರ ಮಾಯ್ಪುನ ಹಾಂಗೆ ಮಾಡುವೆ.

ಯಾರಾರ್ ತಪ್ಪು ಕೆಲ್ಸ ಮಾಡಿರೆ ಅವಂಗೆ 'ಮಾಯ್ಪು ಸೂಡಿಲಿ ಹೊಡ್ದನೆ' ಅಂತ ಹೇಳುವೆ. ಮತ್ತೆ ಬೇಡದ ಕೆಲ್ಸ ಮಾಡ್ದವಂಗೆ ಹೆಂಗ್‌ಸರ್ ಎಲ್ಲ ಸೇರಿಕಂಡ್ ಮಾಯ್ಪು ಸೂಡಿಲಿ ಹೊಡ್ದವೆ. ಮಾಯ್ಪು ಸೂಡಿಲಿ ಹೊಡೆದು ಅವ ಮರ್ಯಾದೆತ ನಂಬಿಕೆ. ಗುಡ್ಸಿಕನ ಗಂಡಸರ ಕಾಲಿಗೆ ಮಾಯ್ಪು ತಾಂಗಿಸಿಕಾಗದ್ ತ ನಂಬಿಕೆನೂ ಉಟ್ಟು. **(ಎಂ.ಜಿ.ಕೆ.)**



ಮಾಯ್ಪು – ಚೀಪೆ

'ಮನೇಲಿಡೀ ಓಡಾಡಿ ಮೂಲೆಗೆ ಸೇರಿಕಣೆ' ನಾನ್ ಯಾರ್? ತ ಹೇಳುವ ಒಡ್ಪೋಕತೆ ಮಾಯ್ಪು ಗುಟ್ಟು. ಮನೆ ಗುಡ್ಸುವ ಸೊತ್ತುನ ಮಾಯ್ಪು ತೇಳ್ರೆ, ಅಂಗಳ ಗುಡ್ಸುವ ಸೊತ್ತುನ ಚೀಪೆತ್ತೇಳಿ ಕೆಲವು ಕಡೆ ಕರ್ದವೆ.

ಚೀಪೆನ ಬೇರೆ ಬೇರೆ ಹೆಸ್ರ್‌ಂದ ಕರ್ದವೆ. ಪರ್ಕೆ, ಪರಕಿ, ಪೊರ್ಕೆ, ಕಸ ಪರಿಕೆ, ಕಸ ಪೊರಕೆ, ಕಸ ಬುರಿಕೆ, ಹಿಡಿ, ಬರಲು, ಕಸಕಳಿ, ಕಟ್ಟೆ, ಉಡುಗೋಲು, ಚೀಪರಿಕಟ್ಟೆತೆಲ್ಲಾ ಬೇರೆ ಬೇರೆ ಕಡೆ ಕರ್ದವೆ. ಕೊಡಗ್‌ಲಿ ಹಿಡಿಸೂಡಿ, ಚೀಪೆ, ಮಾಯ್ಪುತ ಕರ್ದವೆ.

ಮನೆ ಗುಡ್ಸುವ ಮಾಯ್ಪುಲಿ ಎರಡ್ ತರ ಉಟ್ಟು. ದೊಡ್ಡ ಒಲಿದ್ ಮಾಯ್ಪು ಮತ್ತೆ ಸಣ್ಣ ಒಲಿದ್ ಮಾಯ್ಪುತ. ದೊಡ್ಡ ಒಲಿದ್ ಮಾಯ್ಪುನ ಎಮ್ಮೆ ಮಾಯ್ಪುತ ಕರ್ದವೆ. ಆದರೆ ಅದರ ಬಳಕೆ ಕಮ್ಮಿ. ಜನ ಕುಸಿ ಪಡ್ದು ಸಣ್ಣ ಒಲಿದರ. ಸಣ್ಣ ಒಲಿ ಮಾಯ್ಪುದ್ ಬಾಳಿಕೆ ಜಾಸ್ತಿ. ತುದಿ ತುಂಡಾದು ಕಮ್ಮಿ. ಗುಡ್ಡಿ ಗುಡ್ಡಿ ಸಮ್‌ದ್ ಸಮ್‌ದ್ ಇಷ್ಟೇ ಇಷ್ಟೇ ಉದ್ದ ಆದೆ. ಆದರೂ ಸನ ಅದರ ಬಿಸಾಕುದ್ಲೆ. ಮಾರಿ ನೀಕುವ ಮುಟ್ಟ ಅದರ ಇಸಿಕಂಡವೆ. ಮಾರಿ ನೀಕ್ ಕನ ಮೊರಲಿ (ತೊಡ್ಪೆ) ಇಸುವ ಬೇರೆ ಬೇರೆ ಸೊತ್ತುಗಳ ಒಟ್ಟಿಗೆ ತುಂಡು ಮಾಯ್ಪುನ (ಕುಂಟು ಮಾಯ್ಪು) ಇಸಿವೆ. ಮಾರಿ ನೀಕ್ ಕನ ಅದರ್‌ನ್ನೂ ನೀಕಿವೆ. ಅಷ್ಟೇ ಅಲ್ಲ, ಕೋಳಿ ಪಿಳ್ಳೆಗಳ ಕಾಪುಂದ ಇಳ್ಸಕನ ಮೊರಲಿ (ತೊಡ್ಪೆಲಿ) ತುಂಡು ಮಾಯ್ಪುನ ಇಸಿದ್ದವೆ. ಯಾಕೆತ್ತೇಳ್ರೆ ಅದ್ ಆಗ ದೃಷ್ಟಿ ಪರಿಹಾರದ ಸೊತ್ತು ಮನೆದ್ 'ಕರಿತಟ್ಟ್‌ಕನ' ಕೋಲುದು ತುದಿಗೆ ಮಾಯ್ಪುನ ಕಟ್ಟಿ ಕರಿ ಹೊಡ್ದವೆ.

ಇನ್ನ್ ಅಂಗಳ ಗುಡ್ಸುವ ಚೀಪೆ–ಅದರ ಕಡ್ಡಿ ಚೀಪೆತ ಕರ್ದವೆ. ಚಾಳೆ ಕಡ್ಡಿ ಬಾರೀ ಹೆಸ್ರ್‌ವಾಸಿ. ಕೊಡಗ್‌ಲಿ ಬತ್ತದ ಬೆಳೆ ಸಮೆಲಿ, ಕಾಪಿ ಒಣಂಗ್‌ಕನ ಉಪಯೋಗಕೆ ಬಾದು ಕಡ್ಡಿ ಚೀಪೆಗಳೇ. ಅಷ್ಟೇ ಅಲ್ಲದೆ ಗಿಡಚೀಪೆ, ಬೆದ್ರ್‌ಮುಳ್ಳು ಚೀಪೆ, ಚೀಪೆ ಮರದ ಕಡ್ಡಿ ಚೀಪೆತ ಉಟ್ಟು. ಈ ಚೀಪೆಗೆ ಬತ್ತದ ಒಕ್ಲು ಕೆಲ್ಸ ಸಮಯಕೆ ಬೇಕೇ ಬೇಕು. ಹುಲ್ಲೊಡಿ ಗುಡ್ಸಿಕೆ ಮುಳ್ಳು ಚೀಪೆ ಬಾರಿ ಲಾಯ್ಕಾದೆ. ಕಳಕೆ ಸಗಣಿ ಗುಡ್ಸಿಕೆ ಗಿಡಚೀಪೆ ಇಲ್ಲರೆ ಮರಚೀಪೆ ಒಳ್ಳದಾದೆ.

ಚೀಪೆಕಡ್ಡಿ ಮಾರಾಟ ಮಾಡಿ ಸಾವ್ರಾರ್ ಕುಟುಂಬ ಜೀವನ ಸಾಗ್‌ಸ್ತಾ ಒಳೊ. ತುಮಕೂರ್ ಜಿಲ್ಲೆ ಚಿಕ್ಕನಾಯಕನ ಹಳ್ಳಿ ತಾಲೂಕು ಹುಳಿಯಾರ ಹೋಬಳಿ ಯಾಕೂಬ್ ಸಾಬ್ ಪಾಳ್ಯಲಿ ಸುಮಾರ್ ಇನ್ನೂರ್ರೈವತ್ತ್ ಕುಟುಂಬಗ 'ಕಡ್ಡಿ ಪೊರಕೆ' ವ್ಯಾಪಾರ ಮಾಡಿವೆ. ತೆಂಗ್‌ನ ಗರಿನ ಕಡ್ಡಿಗಳ ಉತ್ತರ ಭಾರತಕ್ಕೆ ರಫ್ತು ಮಾಡಿವೆ. ಒಂದ್ ಕಿಲೋ ಕಡ್ಡಿಗೆ ರೂ.13 ರ್‌ಂದ 20 ರೂಪಾಯಿ ಉಟ್ಟು.

ಚಿಕ್ಕ ಬಳ್ಳಾಪುರ ಜಿಲ್ಲೆಲಿ ನವೆಂಬರ್ ತಿಂಗಳ್‌ಂದ ಮಾರ್ಚ್ ತಿಂಗಳ ಮುಟ್ಟ 'ಪೊರಕೆ ಕಡ್ಡಿಗಳ ಸುಗ್ಗಿತ' ಕರ್ದವೆ. ಅಲ್ಲಿನ ಕುರಿ, ಆಡ್‌ಗಳ ಮೇಸಿಕಂಡ್ ಪೊರಕೆ ಕಡ್ಡಿಗಳ ಸಂಗ್ರಹ ಮಾಡಿವೆ. ದಿನಕ್ಕೆ 10–12 ಚೀಪೆಗೆ ಆಗುವಷ್ಟು ಕಡ್ಡಿಗಳ್ನ ಸಂಗ್ರಹ ಮಾಡಿವೆ. ಒಂದು ಚೀಪೆಗೆ ಇಪ್ಪತ್ತ್ / ಇಪ್ಪತ್ತೈದ್ ರೂಪಾಯಿ ಉಟ್ಟು. ದಿನಕ್ಕೆ ಅವು ಇನ್ನೂರ್‌ಂದ ಇನ್ನೂರ್ರೈವತ್ತ್ ರೂಪಾಯಿ ಸಂಪಾದನೆ ಮಾಡಿವೆ.

ಕೊಡಗ್ ಜಿಲ್ಲೆನ ನಾಪೊಕ್ಲು ಹತ್ರದ ಕಣ್ವ ಬಲಮುರಿಲಿರ್‌ವ ಆದಿ ಕರ್ನಾಟಕ ಸಮುದಾಯದ ಸುಮಾರ್ 18ಕ್ಕೂ ಹೆಚ್ಚ್ ಕುಟುಂಬಗ ಮಾಯ್ಪು ತಯಾರ್ ಮಾಡಿವೆ. ಕೇರಳದ ಇರಿಟ್ಟಿ ಬೆಟ್ಟಗಳ್‌ಂದ ಮಕ್ಕಿ, ಕುರ್‌ದೋಟಿ, ತಾಳಿಕಡ್ಡಿ ಪೊರಕೆಗಳ ತಯಾರ್ ಮಾಡಿವೆ. ಹಿಡಿಕಟ್ಟಿ ಮಾರಿರೆ ಒಂದ್ ಚೀಪೆಗೆ ಐವತ್ತ್ ರೂಪಾಯಿ ಉಟ್ಟು. ಹಿಂದೆಲ್ಲಾ ಅವು ಹೊತ್ತ್‌ಕಂಡ್ ಮನೆ ಮನೆಗೆ ಹೋಗಿ ಮಾರ್ತಿದ್ದೊ.

ಹಳ್ಳಿಂದ ದಿಲ್ಲಿ ಮುಟ್ಟ ಚೀಪೆ ಅಗತ್ಯ ಬೇಕೇ ಬೇಕ್. ಗುಡ್ಸಿ ಗುಡ್ಸಿ ಚೀಪೆ ಮೋಟಾದರೂ ಅದ್ಕೆ ಕಟ್ಟಿದ ಕಟ್ಟ್ ಮಾತ್ರ ಬಿಚ್ಚಿಕಿಲೆ. ಕೆಲವ್ ನಾರ್‌ನ ಹುರಿ ಮಾಡಿ ಕಟ್ಟಿವೆ. ಮತ್ತೆ ಕೆಲವು ಬೆತ್ತನ ಸೀಳಿ ಆ ಬಾಸ್‌ಂದ ಸುತ್ತಿ ಕಟ್ಟಿವೆ.

ಕೊಡಗ್ ಜಿಲ್ಲೆ ಮಡಿಕೇರಿ ತಾಲೂಕ್‌ಲಿರ್‌ವ ಬೆಟ್ಟತ್ತೂರ್‌ಲಿ 'ಚೀಪೆ ಬೆಟ್ಟ'ತ್ತೇಳುವ ಬೆಟ್ಟನೇ ಉಟ್ಟು. ಬೆಟ್ಟದ ಚೀಪೆ ತುಂಬ ಬಾಳಿಕೆ ಬಂದದೆ. ಚೀಪೆ ದೆಯ್ಯಿನ ಹಣ್ಣ್ ಕರ್ಜೂರ ಹಣ್ಣ್‌ನಸ್ಟ್ ರುಚಿ. ಆದರೆ ಆ ದೆಯ್ಯಿನ ಮುಳ್ಳು ಕುತ್ತಿರೆ ಮೂರ್ ಲೋಕನ ತೋರ್ಸಿದೆ. ಸಾವ್ರ ಮಕ್ಕಳ್‌ಗೆ ಒಂದೇ ಉಡದಾರ (ಮಾಯ್ಪು) ತೇಳ್‌ವ ಒಗಟ್ ಉಟ್ಟು **(ಬಾ.ಜೋ.)**



ಮುಕ್ಕಾಲ್ ಮಣೆ

ಮೂರು ಕಾಲ್‌ನ ಮಣೆಗೆ ಮುಕ್ಕಾಲ್ ಮಣೆತೇಳಿ ಕರ್ದವೆ. ಮುಕ್ಕಾಲ್‌ಮಣೆ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಉಟ್ಟು. ಇದ್ ನಾವು ಕುದ್ರುವ ಮಣೆಂದ ಎತ್ತರ ಇದ್ದದೆ. ಅಂದಾಜ್ ಒಂದೂವರೆ ಗೇಣ್‌ನಷ್ಟ್ ಎತ್ತರ ಇದ್ದದೆ.

ಇದರ ಆಕಾರ ಬೇರೆ ಮಣೆನ ಹಾಂಗೆ ಅಲ್ಲ. ಇದ್ಕೆ ಮೂರು ಕಾಲ್ ಉಟ್ಟು. ಒಂದು ಹಲಗೆನ ಎಂಟ್ ಆಕಾರಲಿ ಕತ್ರಿಸಿ ಮಾಡ್ದ ಸಣ್ಣ ಬೆಂಚ್. ಇದರ್‌ಲಿ ಒಂದು ಕಡೆ ಸಣ್ಣದ್ ಇನ್ನೊಂದು ಕಡೆ ದೊಡ್ಡದ್ ಇದ್ದ್ ನಡೂಲಿ ಸಪೂರ ಇದ್ದದೆ. ಮರದ ಆಚಾರಿಗಳೇ ಇದರ ಮಾಡುವೆ.

ಹಿಂದೆ ಮನೆ ಯಜಮಾನ ಉಂಬಕನ ನೆಲಲಿ ಕುದ್ದ್ ಇದರ ಮೇಲೆ ಬಟ್ಲ್ ಇಸಿಕನ್ ಉಂಬೊತಿದ್ದೊ. ಅಲ್ಲದೆ ಪ್ರಾಯದವ್ಕೆ ನೆಲಲಿ ಕುದ್ದ್ ಉಂಬಕೆ ಬಜ ಆತಿತ್. ಹಾಂಗಾಗಿ ಇದ್ ಉಂಬಕೆ ಇರುವ ಮಣೆ. ಇದರ್‌ಲಿ ದೊಡ್ಡದಾಗಿ ಅಗಲ ಇದ್ದಲ್ಲಿ ಬಟ್ಲ್ ಇಸಿಕೆ ಮತ್ತೆ ಸಣ್ಣದಿದ್ದಲ್ಲಿ ಗೆಯ್ಪುನ ಪಿಜಣಿ ಇಸಿಕೆ ಮಾಡ್ದ್. ಮತ್ತೆ ಕಡ್ಕಲ್ಲ್‌ಲಿ ಏನಾರ್ ಕಡೆಕೆ ಕುದ್ರಿಕೆ ಅಲ್ಲರ್ ರಾಗಿ ಬೀಸುವ ಕಲ್ಲ್‌ಲಿ ಏನಾರ್ ಬೀಸಿಕೆ ಕುದ್ರಿಕೆ ಇದ್ ಬೇಕಾದೆ. ಇದರ ಮೇಲೆ ಅಕ್ಕಿ, ಜೋಳ, ರಾಗಿಂದ ರೊಟ್ಟಿ ತಟ್ಟಿಕೆ ಸ ಆದೆ. ಇದ್ ಆಕಾರಲಿ, ಎತ್ತರಲಿ ಬೇರೆ ಬೇರೆ ಇದ್ದದೆ. **(ಎಂ.ಜಿ.ಕೆ.)**



ಲಾಟಾನ್

ಲಾಟಾನ್ ಒಂದು ನಮೂನೆ ದೀಪ. ತುಳುಲಿ ಲಾಟಾನ್, ಮಲೆಯಾಳಂಲಿ ಪಾನೀಸ್ ವಿಳಕ್ಕ್, ಬ್ಯಾರಿ ಬಾಸೆಲಿ ಲಾಟಾನ್‌ತ ಹೇಳುವೆ. ಇದ್ ಹೆಚ್ಚ್ ಕಮ್ಮಿ ನಮ್ಮ ರಾಜ್ಯದ ಎಲ್ಲಾ ಕಡೆಲೂ ಇದ್ದದೆ. ಇದರ ಅಡಿ ಬಾಗಲಿ ಎಣ್ಣೆ ತುಂಬ್ಸಿಕೆ ಸಣ್ಣ ಟಾಂಕಿ ಉಟ್ಟು. ಆ ಟಾಂಕಿಗೆ ಇರುವ ಬಾಯಿಗೆ ನೆಣೆ – ಬತ್ತಿ ಇಸಿಕೆ ಒಂದು ತಿರ್ಗಣೆ ಇರುವ ಮುಚ್ಚಳ ಉಟ್ಟು. ಇದ್ಕೆಅಗಲದ ನೆಣೆ ಇಸೊಕು. ಅದರ ಸಣ್ಣದ್ ದೊಡ್ಡದ್ ಮಾಡಿಕೆ ಒಂದು ತಿರ್ಗಣೆ ಇರುವ ಕುಟ್ಟಿ ಉಟ್ಟು. ಹಿಡ್ಕಂಕೆ ಉದ್ದದ ಕೈ ಉಟ್ಟು ಎರಡ್ ಪುಡೆಲೂ ಕೈನ ಹಾಂಗೆ ಉಟ್ಟು. ಹೊಗೆ ಹೋಕೆ ಸುತ್ತೋಳು ಒಟ್ಟೊಟ್ಟೆ ಇರುವ ಮುಚ್ಚಳ ಉಟ್ಟು. ಆ ಮುಚ್ಚಳನ ಮೇಲೆ ಮಾಡಿ ಕುಪ್ಪಿನಗ್ಲಾಸ್ ಇಸಿಕೆ ಆದೆ. ಅದ್ ಗಾಳಿ ಬಾಕನ ಕಿಚ್ಚಿನ ಕೆಡದ ಹಾಂಗೆ ಮಾಡಿದೆ. ಇದರ ಹೊತ್ತಿಸಿರೆ ದೀಪಂದ ಹೆಚ್ಚ್ ಬೊಳ್ಪು ಕಂಡದೆ. ಇದ್ಕೆ ಗಾಳಿ ಹಾಕಿಕೆ ಇಲ್ಲೆ.

ಇದ್ ಮನೆಲಿ ಹೊತ್ತುಸದರ್‌ಂದಲೂ ದಾರಿಲಿ ನಡೆಕನ ಹೆಚ್ಚ್ ಬೇಕಾದೆ. ಯಾಕೆಂತೇಳಿರೆ ನಡೆಕನ ಗಾಳಿ ಬೀಸಿದೆ. ಗಾಳಿಗೆ ಕೆಡದಾಂಗೆ ಗ್ಲಾಸ್ ತಡ್ದದೆ. ಹಿಂದೆ ಕತ್ತಲೆ ಹೊತ್ತುಲಿ ಗಾಡಿ ಹೊಡೆಕನ ಗಾಡಿಗೆ ಲಾಂಟಾನ್ ಕಟ್ಟ್‌ತ್ತಿದ್ದೊ. ಹೊಗೆ ಜಾಸ್ತಿ ಆದರೆ ಗ್ಲಾಸ್‌ನ ಒಳಮೆಯ್ಯಿಲಿ ಅಂಟಿ ಕಪ್ಪಾದೆ. ಆಗ ಗ್ಲಾಸ್‌ನ ತೆಗ್ದ್ ಉಜ್ಜಿಕಾಂಕು. **(ಎಂ.ಜಿ.ಕೆ.)**

ಲಾತೀನ್ ಇಲ್ಲರೆ ಲಾಟೀನ್ ತಲೆಮಾರ್‌ಂದ ಬಂದ 'ಹಿಡಿ ಬೆಳ್ಕ್' ತ್ತೇಳಕ್. ಹಿಡಿ ಬೆಳ್ಕ್‌ತ್ತೇಳ್ರೆ ಹಿಡ್ಕಂಡ್ ಓಡಾಡುವ ಬೆಳ್ಕ್‌ನ ವ್ಯವಸ್ತೆ. ಮನೆ ಒಳಗೆ, ಕೋಂಬರೆಂದ ಕೋಂಬರೆಗೆ ಓಡಾಡ್‌ಕನ ಮನೆವು ಲಾಟೀನ್ ಹಿಡ್ಕಂಡ್ ಓಡಾಡ್‌ತ್ತಿದ್ದೊ. ಮೀಯಕೆ ಬಚ್ಚಲ್‌ಗೆ (ಗುಡ್ಡ) ಹೋಕನ, ಹಟ್ಟಿಲಿ ಇಲ್ಲರೆ ಕೋಳಿ ಗೂಡುಲಿ ಮನಿ ಸದ್ದಾದರೆ ಅಲ್ಲಿಗೆ ಹೋಕೆ ಲಾಟೀನ್ ಹಿಡ್ಕಂಡ್ ಹೋತಿದ್ದೊ. ಓದ್‌ವ ಮಕ್ಕ ಇದ್ದರೆ ಲಾಟೀನ್‌ನ ನಡೂಲಿ ಇಸಿಕಂಡ್ ಓದುದು ಬರೆದು ಮಾಡ್ತಿದ್ದೊ. ಯಾರಾರ್ ನಂಟ್ರ್‌ಗಿಂಟ್ರ್ ಬಂದಂದ್ ಅವ್ ಒಳ್ಕಂಡರೆ ಇರ್‌ಳ್ ಉಂಬಕನ ಲಾಟೀನ್‌ನ ನಡೂಲಿ ಇಸ್‌ತಿದ್ದೊ. ಇಲ್ಲರೆ ಕಂಬಕೆ ಆಣಿಹೊಡ್ದ್ ಅಲ್ಲಿ ಅದರ ಕೋಸ್‌ತಿದ್ದೊ. ಮಂಕ್ ಬೆಳ್ಕ್ ಒಂದಷ್ಟು ಅಗಲಲಿ ಹರಂಡ್‌ತಿತ್ತ್. ಅಂದ್‌ನ ಜನ ಆ ಬೆಳ್ಕ್‌ಗೆ ಹೊಂದಿಕಂಡಿದ್ದೊ.

ಬೆಳೆ ಕೆಲ್ಸ ಸಮೆಲಿ ಗದ್ದೆ ಪಾರಕ್ಕೆ ಅಟ್ಟಪಾಳಿಲಿ ಮಲ್ಗಿಕೆ ಹೋಗಂವು ಲಾಟೀನ್‌ನ ಹಿಡ್ಕಂಡ್ ಹೋತಿದ್ದೊ. ಸುರೂನ ಬಸ್ಸ್‌ಗೆ ಹೋಗವು ನಾಕೈದ್ ಮೈಲ್‌ದೂರ ನಡೆಕಾಗಿತ್ತ್. ಕೋಳಿ ಕೂಂಗುವ ಹೊತ್ತಿಗೆ ಮನೆಂದ ಹೊರ್ಡ್‌ಕಾಗಿತ್ತ್. ಆಗ ದಾರಿದೀಪತ್ತೇಳ್ರೆ ಲಾಟೀನೇ ಆಗಿತ್ತ್. ಬಸ್ಸ್‌ಗೆ ಕರ್ಕಂಡ್ ಹೋಗಿ ಬುಟ್ಟ್ ಬಾತಿದ್ದೊ. ಲಾಟೀನ್ ಹಿಡ್ಕಂಬದು ಸುಲಾಬದ ಮಾತಲ್ಲ. ಅದರ ಅಲ್ಲಾಡಿಸಿಕೆ ಬತ್ತ್. ಅಲ್ಲಾಡಿರೆ ಬುಗ್‌ಬುಗ್‌ತ್ತೇಳಿ ಹೊಗೆ ಬಂದ್ ಕಡೆಗೆ ಕೆಟ್ಟೇ ಹೋದೆ. ನಡೂಕಾಡ್ ದಾರಿಲಿ ಹಂಗೆ ಆಗೋದರೆ? ನಡೆಕನ ಆಚೆ ಈಚೆ ಹೆಟ್ಟಿಕೆ ಬತ್ತ್. ಹೆಟ್ಟಿರೆ ಅದರ ಕುಪ್ಪಿ ಒಡ್ದೋದೆ. ನೀರ್ ಹನಿ ಬೀಳಿಕೆ ಬತ್ತ್. ಬಿಸಿಗೆ ನೀರ್ ತಾಂಗಿರೆ ಕುಪ್ಪಿ ಪಟ್ಟ್‌ತ ಒಡ್ದದೆ. ಹಿಂಗಿರಕನ ಅಂತಾ ಲಾಟೀನ್‌ನ ತಲೆ ಮೇಲೆ ಕಟ್ಟಿಕಂಡ್ ಬೇಟೆಗೂ ಹೋತಿದ್ದೊ. ದಿಬ್ಬಣನೂ ಹೋತಿದ್ದೊ ಗಡ....

ಲಾಟೀನ್ ವ್ಯವಸ್ತೆ ಒಳ್ಳದುಟ್ಟು. ಕೆಳಗೆನ ಬಾಗ ಸೀಮೆಣ್ಣೆ ತುಂಬಿಕೆ. ಅದ್ ತಗಡ್‌ಂದ ಮಾಡ್ದ್. ಲಾಟೀನ್‌ದ್ ಕುಪ್ಪಿನ ತೆಗೆಕೆ– ಹಾಕಿಕೆ ಒಂದ್ ಉಂಗುರದ ವ್ಯವಸ್ತೆ ಇತ್ತ್. ಅದರ್‌ಂದ ಕೆಳಗೆ ಮೇಲೆ ಮಾಡಕ್. ಕುಪ್ಪಿ ಬೀಳದಂಗೆ ಸಲಿಗೆ(ಸರಿಗೆ) ಸುತ್ತು ಇರ್ತಿತ್. ಕುಪ್ಪಿನ ತೆಗ್ದ್ ಚೆಂಡಿ ಬಟ್ಟೆಲಿ ಕರಿನ ತೆಗ್ದ್ ಸುಣ್ಣ ಲೇಪನ ಮಾಡಿ ಮತ್ತೆ ಬಟ್ಟೆಂದ ಪೂಜಿರೆ ಹೊಸಾ ಕುಪ್ಪಿನಾಂಗೆ ಆದೆ. ಈ ಎಲ್ಲಾ ಕೆಲ್ಸಲಿ ಸೂಕ್ಸುಮ ಬೇಕು. ಹಳಿ ಕೈ ತಪ್ಪಿರೆ ಕುಪ್ಪಿ ಚೂರಾದೆ. ಹೊಸಾ ಬತ್ತಿ ಹಾಕಿ ಸೀಮೆಣ್ಣೆ ಹೊಯ್ದ್ ಲಾಟೀನ್ ಬೆಳ್ಗಿರೆ ಒಂದರ್ಡ್ ದಿನ ಒಳ್ಳ ಬೆಳ್ಕ್ ಕೊಟ್ಟದೆ, ಮತ್ತೆ ಮಂಕ್ ಬೆಳ್ಕಷ್ಟೇ. ದೊಂದಿ ಬೆಳ್ಕೇ ಇರ್ಲಿ, ಲಾಟೀನ್ ಬೆಳ್ಕೇ ಇರ್ಲಿ ಆ ಬೆಳ್ಕಲಿ ನಮ್ಮ ನೆರಳೇ ನಾವಿಗೇ ಹೆದ್ರಿಕೆ ಹುಟ್ಟಿಸಿದೆ! ಏನೇ ಆಗಲಿ ಸಾದಾರಣ ಗಾಳಿ ಬಂದರೂ ಕೆಡದೇ ಇದ್ದ ಒಂದೇ ಒಂದ್ 'ಹಿಡಿ ಬೆಳ್ಕ್' ತ್ತೇಳ್ರೆ ಲಾಟೀನ್ ಮಾತ್ರ. **(ಬಾ.ಜೋ.)**



ಲ್ಯಾಂಪ್

ಲಾಂಟಾನ್‌ನ ಹಾಂಗೇ ಇರುವ ಇನ್ನೊಂದು ಬಗೆನ ದೀಪ ಲೇಂಪು. ತುಳುಲಿ ಲೇಂಪು, ಮಲೆಯಾಳಂಲಿ ವಿಳಕ್ಕ್, ಬ್ಯಾರಿ ಬಾಸೆಲಿ ಲೇಂಪು ತ ಹೇಳುವೆ.

ಇದ್ ಲಾಂಟಾನ್‌ನ ಹಾಂಗೇ ಇದ್ದರೂ ಇದರ ಗ್ಲಾಸ್ ಉದ್ದ ಇದ್ದ್ ಮುಚ್ಚಳ ಇರ್ದುಲೆ. ಇದರ ಎರಡೂ ಪುಡೆಲಿ ಅಡಿಂದ ಮೇಲೆ ಮುಟ್ಟ ಸಪೂರದ ಕಬ್ಬಿಣಂದ ಮಾಡ್ದ ಹಿಡಿ ಉಟ್ಟು. ಇದರ ಅಡಿಲಿರುವ ಸಣ್ಣ ಚಕ್ರಕ್ಕೆ ಅಂಟಿದ ಹಂಗೇ ಇದ್ದ್ ಮೇಲೆ ಹಿಂಞ ಸಪೂರ ಆದೆ. ಅಡಿಲಿರುವ ಚಕ್ರಕ್ಕೆ ಲೇಂಪುನ ಅಡಿ ಬಾಗ ತೇಳಿರೆ ಲೇಂಪುಗೆ ಎಣ್ಣೆ ಹಾಕುವ ಕುಪ್ಪಿ ಟಾಂಕಿನ ಕೋಸಿಕೆ ಆದೆ. ಮೇಲೆ ಇರುವ ಸಪೂರದ ಬಾಗಲಿ ಹುಗ್ಸಿ ಇಸಿದ ಉರುಂಟು ಇರುವ ತೆಳ್ಳಂಗೆನ ಒಂದು ಬಟ್ಲ್ ಇದ್ದದೆ. ಇದ್ಲೂ ಬತ್ತಿ ಇಸಿಕೆ ಒಂದು ಬರ್ನಲ್ ಉಟ್ಟು. ಬತ್ತಿನ ಕಾಗಡೆ ಮೇಗಡೆ ಮಾಡಿಕೆ ತಿರ್ಗಣೆ ಉಟ್ಟು. ಈ ಬರ್ನಲ್‌ಗೆ ಮೇಲೆನ ಗ್ಲಾಸ್ ಸಿಕ್ಕಿಸಿಕೆ ಆದೆ. ಇದರ್‌ಂದ ಬೊಳ್ಪು ಹೆಚ್ಚ್ ಕಾಂಬಕೆ ಒಳ್ಳದಾದೆ. ಲೇಂಪುನ ಗ್ಲಾಸ್ ಮೇಲೆ ಸಪೂರ ಇದ್ದ್ ಅದರ್‌ಲಿ ಹೊಗೆ ಸೀದಾ ಹೊರಗೆ ಹೋದೆ. ಈ ಲೇಂಪುನ ಎತ್ತರಲಿ ಕೋಸಿ ಇಸಿಕೆ ಆದೆ. ಕೆಲವು ಲೇಂಪುಗೆ ಕೋಸಿ ಇಸುವ ವ್ಯವಸ್ತೆ ಇರ್ದುಲೆ. ಬತ್ತಿ ಮೇಗಡೆ ಕಾಗಡೆ ಮಾಡಿಕಾದೆ. ಆಗ ಬೊಳ್ಪು ಹೆಚ್ಚ್ ಕಮ್ಮಿ ಆದೆ. ಗಾಳಿ ಬಾಕನ ಕೆಡದ ಹಾಂಗೆ ಕುಪ್ಪಿದ್ ಗ್ಲಾಸ್ ತಡ್ದದೆ.

ಇದ್ ಮನೆಲಿ ದೀಪದ ಬದಲ್ ಬೊಳ್ಪು ಕಾಂಬಕೆ ಬೇಕಾದ ಸೊತ್ತು. ಇದರ್‌ಲಿ ಹೆಚ್ಚ್ ಬೊಳ್ಪು ಸಿಕ್ಕಿದೆ. ಗ್ಲಾಸ್‌ನ ಒಳಗೆ ಹೊಗೆ ಹಿಡ್ದದೆ. ಆಗ ಅದರ ಉಜ್ಜಿಕಾಂಕು. ಇಂತ ದೀಪಂದ ಹೆಚ್ಚ್ ಬೊಳ್ಪು ಸಿಕ್ಕಿದೆ. **(ಎಂ.ಜಿ.ಕೆ.)**

ಲಾಟೀನ್‌ಗೂ ಲ್ಯಾಂಪುಗೂ ತುಂಬ ವ್ಯತ್ಯಾಸ ಉಟ್ಟು. ಲಾಟಿನ್‌ನ ಎಲ್ಲಿ ಬೇಕಾರೂ ತಕಂಡ್ ಹೋಕ್. ಆದರೆ ಲ್ಯಾಂಪ್ ಹಂಗಲ್ಲ. ಮನೆ ಒಳಗೆ ತಕಂಡ್ ಓಡಾಡಕಷ್ಟೇ. ಲ್ಯಾಂಪ್‌ಲಿ ತರಾವರಿ ಉಟ್ಟು. ಸಣ್ಣ ಲ್ಯಾಂಪು ಬಾಣಂತಿ ಕೋಂಬರೆಗಾತಿತ್. ದೊಡ್ಡದಾದರೆ ಬಾಡೆಲಿ ಇಸಿಕಂಬತಿದ್ದೊ. ಲ್ಯಾಂಪ್‌ದ್ ಟ್ಯಾಂಕ್ ಸುರ್ ಸುರ್‌ಲಿ ಟಿನ್ನ್‌ದ್ ಇರ್ತಿತ್. ಕ್ರಮೇಣ ಗಾಜ್‌ದ್ ಬಾತ್. ಗಾಜ್‌ದಾದರೆ ಹೊರಗೆಂದ ಎಣ್ಣೆಕಂಡದೆ. ಟಿನ್‌ದಾದರೆ ಅಲ್ಲಾಡ್ಸಿ ಸದ್ದ್ ಕೇಳಕಾಗಿತ್. ಕೆಲವು ಲ್ಯಾಂಪ್‌ಗೆ ಒಂದುಕಡೆ ಹಿಡ್ಕಂಬಕೆ ಹಿಡಿ ಇರ್ತಿತ್. ಮತ್ತೆ ಕೆಲವು ಬೋಳು ಲ್ಯಾಂಪ್. ಬೋಳು ಲ್ಯಾಂಪ್‌ಂದ ಜಾಸ್ತಿ ಬೆಳ್ಕ್ ಸಿಕ್ಕಿದೆ. ಹಿಡಿ ಇರ್‌ವ ಲ್ಯಾಂಪಾದರೆ ಹಿಡಿಯಷ್ಟು ಬಾಗಲಿ ಕತ್ತಲೆ ಆದೆ. ಆದರೆ ಅದರ ಗೋಡೆ ಆಣಿಗೆ ಸಿಕ್ಕಿಸಿಕಂಬಕೆ ಒಳ್ಳದಿತ್.

ಯಾವ್ದೆ ಲ್ಯಾಂಪ್ ಆಗಲಿ, ಲಾಟೀನ್ ಆಗಲಿ ಸೀಮೆಣ್ಣೆದ್‌ತಾದ ಮೇಲೆ ಹೊಗೆ ಇರ್ತಿದ್ದದೆ. ಒಂದೆರ್ಡ್‌ಗಂಟೆ ಲ್ಯಾಂಪ್ ಮುಂದೆ ಕುದ್ದರೆ ಮೂಕ್‌ಲಿ ಕರಿ ತುಂಬುತಿತ್, ಅದ್ ಆರೋಗ್ಯಕ್ಕೆ ಒಳ್ಳದಲ್ಲ. ಆದರೆ ಅಂದ್ ಅನಿವಾರ್ಯ ತಾನೆ. ಲ್ಯಾಂಪ್ ಒಮ್ಮೆಗೆ ಎದ್ದ್ ಹೊತ್ತಿರೆ ಅಪಾಯ. ಇಡೀ ಲ್ಯಾಂಪ್ ಹೊಗೆ ತುಂಬಿಕಂಡ್ ದಗ್ ದಗ್‌ತ್ತೇಳಿ ಕೆಳಗೆ ಟ್ಯಾಂಕಿಗೆ ಕಿಚ್ಚ್ ಇಳೆತಿತ್. ಆಗಂತೂ ಅಪಾಯ ಕಟ್ಟಿಸಿದ ಬುತ್ತಿ. ಅದ್ಕೆ ಮುಕ್ಯ ಕಾರಣ ಆ ಲ್ಯಾಂಪ್‌ದ್ ಬರ್ನರ್. ಬರ್ನರ್‌ನ ಆಗಾಗ ಬದಲಾವಣೆ ಮಾಡಕ್ಕಾಗಿತ್. ಅಂದ್ ಲ್ಯಾಂಪ್‌ತಾದೇ ಕಷ್ಟೇ ಅಂತರ್‌ಲಿ ಆಗಾಗ ಬರ್ನರ್ ಬದಲಾವಣೆ ಮಾಡಿಕೆ ಜನ ಹೋತಿದ್ದದೂ ಕಮ್ಮಿ. ಅಂತೂ ಅರವತ್ತ್ ಎಪ್ಪತ್ತ್ ವರ್ಸಗಳ ಹಿಂದೆ ಮಕ್ಕ ಹೆಂಗೋ ಓದಿಕಂಬತ್ತಿದ್ದೊ. ಲ್ಯಾಂಪ್‌ದ್ ಬತ್ತಿನ ಹೆಚ್ಚ್ ಕಮ್ಮಿ ಮಾಡಿಕಂಬಕೆ ಒಂದ್ ತಿರುಪು ಇರ್ತಿತ್. ಆ ತಿರುಪುನ ಕೆಳಗೆ ಮೇಲೆ ಮಾಡ್ದರ 'ಬೇರ್‌ದು' ತ ಹೇಳ್ತಿದ್ದೊ. ಆ ಬತ್ತಿನ ಹಿಂಞ ಬೇರ್‌ತ ಅಪ್ಪನೊ ಅವ್ವನೋ ಹೇಳ್ತಿದ್ದೊ.

ದಿನ ಕಳ್ದಂಗೆ ಬೆಡ್‌ಲ್ಯಾಂಪ್, ಟೇಬಲ್ ಲ್ಯಾಂಪ್‌ತೆಲ್ಲಾ ಬಾಕೆ ಸುರಾತ್. ಅದೆಲ್ಲಾ ಕರೆಂಟ್‌ದೊ ಸೋಲಾರ್‌ದ್‌ತೆಲ್ಲಾ ಬಾತ್. ಚಾರ್ಜರ್ ಲ್ಯಾಂಪ್ ಬಾತ್. ಈಗೀಗ ಪೂರ್ತಿ ಕರೆಂಟ್ ಬಂದ್ ಬಲ್ಬ್‌ಗೆ ಬದಲಾಗೊಳೊ. ಈಗಂತೂ 'ಇನ್‌ವರ್ಟರ್' ಬಂದುಟು, ಕರೆಂಟ್ ಹೋದರೂ ಗೊತ್ತಾಲೆ. 'ಕಾಲ ಬಂದಂಗೆ ಕೋಲ'ತ ಹೇಳುವಂಗೆ ಜನ ಹೊಂದಿಕಣ್ತಾ ಒಳೊ. **(ಬಾ.ಜೋ.)**



ಸುಣ್ಣಕಾಯಿ

ಸುಣ್ಣಕಾಯಿಂತೇಳಿರೆ ಸುಣ್ಣ ಹಾಕಿಸುವ ಕರ್‌ಡಿಗೆ. ಇದ್ ದಕ್ಷಿಣ ಕನ್ನಡ ಕೊಡಗು ಹಾಂಗೇ ಬೇರೆ ಬೇರೆ ಜಿಲ್ಲೆಲಿ ಸ ಇರುವ ಒಂದು ಸೊತ್ತು. ಸುಣ್ಣಕಾಯಿ ಬೇರೆ ಬೇರೆ ಆಕಾರಲಿ ಇದ್ದದೆ. ಇದ್ ಕೋಳಿನ ಬಟ್ಟೆಕಾಯಿನ ಹಾಂಗೆ ಇದ್ದ್ ಒಳಗೆ ಗೋಳೆ ಇದ್ದದೆ. ಇದರ ಒಂದು ಪುಡೆಲಿ ಸಣ್ಣ ಒಟ್ಟೆ ಇದ್ದದೆ. ಅದರ ಒಳಗೆ ಸುಣ್ಣ ತುಂಬಿಸಿಕೆ ಆದೆ. ಅದ್ಕೆ ಮುಚ್ಚಳ ಉಟ್ಟು. ಮುಚ್ಚಳ ತೆಗೆಕೆ ಹಾಕಿಕೆ ಆವ ಹಾಂಗೆ ಅದ್ಕೆ ಬಿಜಾಗ್ರಿ ಸ ಉಟ್ಟು. ಒಳಗೆಂದ ಸುಣ್ಣ ತೆಗೆಕೆ ಸಣ್ಣ ಕಡ್ಡಿ ಸ ಇದ್ದದೆ. ಸುಣ್ಣದ ಕಾಯಿಗೆ ಸಣ್ಣದೊಂದು ಚೈನ್ ಸ ಇದ್ದದೆ. ಕೆಲವು ಸುಣ್ಣಕಾಯಿ ಎಲೆ ಆಕಾರಲಿ ಇದ್ದದೆ. ಅದರ ಮುಚ್ಚಳನ ಒಂದು ಕರೆಗೆ ಜಾರ್ಸಿರೆ ಸುಣ್ಣ ಕಾಣುವ ಹಾಂಗೆ ಇದ್ದದೆ. ಇದ್ ಹಿತ್ತಾಳೆಂದ ಮಾಡ್ದ ಸೊತ್ತು. ಹಿತ್ತಾಳೆ ಕೆಲಸ ಮಾಡೋವು ಸುಣ್ಣಕಾಯಿ ಮಾಡುವೆ. ಹಳ್ಳಿಲಿ ಹೆಚ್ಚಿನವುಕೆ ಮನೆಲಿ ಎಲೆ ಅಡಿಕೆ ತಿಂಬೊ ಅಬ್ಬೆಸ ಉಟ್ಟು. ಅವು ಇಂತ ಸುಣ್ಣಕಾಯಿ ಇಸಿಕಂಡವೆ. ಇದರ್ಲಿ ಸುಣ್ಣ ಎಷ್ಟೇ ದಿನ ಆದರೂ ಒಳ್‌ಂಗುದಿಲ್ಲೆ. **(ಎಂ.ಜಿ.ಕೆ.)**

ಹಿಂದೆಲ್ಲಾ ಎಲಡಿಕೆ ತಿಂಬವರ ಹತ್ರ ಬೆಳ್ಳಿದ್ ಸುಣ್ಣಕಾಯಿ ಇರ್ತಿತ್. ಎಮ್ಮೆ ನೆಲ್ಲಿಕಾಯಿತ್ತೇಳಿವೆಯಲ್ಲ ಅಸ್ಟ್ ದಪ್ಪ ಇರ್ತಿತ್. ನೋಡಿಕೂ ಲಾಯ್ಕ್.

ಬೆಳ್ಳಿ ಸುಣ್ಣ ಕಾಯಿನ ಎಲೆ ತಟ್ಟೆಲಿ (ಹರ್ವಾಣ) ಇಸ್‌ತ್ತಿದ್ದದ್ ಕಮ್ಮಿ. ಎಲೆ ತಟ್ಟೆ ಇಲ್ಲರೆ ಎಲೆ ಪಚ್ಚೆಲಿ ಸುಣ್ಣ ಡಬ್ಬಿತ ಇದ್ದದೆ. ಅದರೊಳಗೆ ಸಣ್ಣ ಕಡ್ಡಿ ಇದ್ದದೆ. ಬೆಳ್ಳಿ ಸುಣ್ಣ ಕಾಯಿನ ಬೇರೆಯವುಕೆ ಕೊಡ್ತಿತ್‌ಲೆ. ಅದೇನಿದ್ದರೂ ಒಬ್ಬಂಗೇ, ಒಬ್ಬನ ಹತ್ರ ಅದ್ ಸೊಂಟಲೋ ಎಲ್ಲೋ ಸೆಕ್ಕಿಕಂಬತ್ತಿದ್ದೊ. ಅದರ ಕೋಸಿಕಂಬಕೆ ಬೆಳ್ಳಿದೇ ಸಣ್ಣ ಚೈನ್ ಇರ್ತಿತ್. ಈಗ ಕೆಲವೆಲ್ಲ ನೆಸೆ ಡಬ್ಬಿನೇ ಸುಣ್ಣ ಡಬ್ಬಿತ ಮಾಡಿಕಂಡೊಳೊ. **(ಬಾ.ಜೋ.)**

ಪೂಜೆ ಸಾಮಗ್ರಿಗ



ಉರುಳಿ

ಉರುಳಿಂತೇಳಿರೆ ಅಳೆಗೆನ ಆಕಾರಲಿ ಇರುವ ಹಿತ್ತಾಳೆ ಪಾತ್ರೆ. ತುಳುಲಿ ಉರ್ಲಿ, ಮಲೆಯಾಳಂಲಿ ಉರುಳಿ, ಬ್ಯಾರಿ ಬಾಸೆಲೂ ಉರುಳಿಂತಲೇ ಹೇಳುವೆ.

ಇದ್ ದಪ್ಪ ಇದ್ದ್ ಬಾರ ಇದ್ದದೆ. ಇದರ ಮಿಸಾನ್‌ಲಿ ಹಿತ್ತಾಳೆ ಲೋಹಲಿ ಮಾಡ್‌ವೆ. ಇದರ್‌ಲಿ ಎಣ್ಣೆತಿಂಡಿ ಮಾಡಿಕೆ ಲಾಯ್ಕ್ ಆದೆ. ಹಪ್ಪಳ ಕಾಸಿಕೆ ಆದೆ. ಸತ್ಯನಾರಾಯಣ ಪೂಜೆ ಮಾಡಿಕನ ಸಪಾದ ಬಕ್ಷ್ಯ ಮಾಡಿಕೆ, ದೇವ್ರುಗೆ ನೈವೇದ್ಯ ಮತ್ತೆ ಕಲ್ತಪ್ಪ ಮಾಡಿಕೆ ಬೇಕಾದೆ. ತುಪ್ಪ ಕಾಸಿಕೆನೂ ಬಳ್ಸುವೆ. ಎಣ್ಣೆ ಕಾಯಕೆ ಹಙ ಹೊತ್ತಾದರೂ ಒಮ್ಮೆ ಕಾದ ಎಣ್ಣೆ ಪಕ್ಕ ತಣ್ಣಂಗೆ ಆದುಲೆ. **(ಎಂ.ಜಿ.ಕೆ.)**

ಕೊಂಬುನ ಗಿಂಡಿ

ಗಿಂಡಿಗೆ ಕೊಂಬು ಇದ್ದದ್ದಕ್ಕೆ ಇದ್ ಕೊಂಬುನ ಗಿಂಡಿತ ಆತ್. ಇದ್ ಹಿತ್ತಾಳೆಂದ ಮಾಡ್ದ ಗಿಂಡಿ. ಪೂಜೆ ಮಾಡಿಕನ ಗಿಂಡಿ ಬೇಕಾದೆ. ಅದ್ ಅಲ್ಲದೆ ಮೊದುವೆ ಕ್ರಮಕ್ಕೆ ಅಗತ್ಯ ಬೇಕಾದೆ.

ಮೊದೋಳಿಗೆ ಮೊದುಮಜನ ಒಟ್ಟಿಗೆ ಗೂಡೆಗ ಕಳ್ಸ ಕನ್ನೆಡಿ ಹಿಡೆವ ಕ್ರಮ ಉಟ್ಟು. ಮೊದುಮಕ್ಕಳ ಹಕ್ಕಲೆ ಸಂಬಂದದ ಗೂಡೆಗ ಇದರ ಹಿಡ್ದವೆ. ಹರಿವಾಣಲಿ ಅಕ್ಕಿ ಹಾಕಿ ಅದರ ಮೇಲೆ ಗಿಂಡಿ ಇಸಿದ್, ಅದ್ಕೆ ಹಾಲ್ ಹಾಕಿ ಅದರ ಬಾಯಿಗೆ ಮಾಯಿನ ಸೊಪ್ಪುನ ಸುತ್ತಲೂ ಇಸಿದ್ ಕಾಯಿನ ಇಸುವೆ, ಅದರ ಮೇಲೆ ಹೂ ಪಿಂಗಾರ ಇಸುವ ಕ್ರಮ ಉಟ್ಟು. ಅಕ್ಕಿ ಮೇಲೆ ದೀಪ ಕುಂಕುಮ ಎಲ್ಲ ಇಸುವ ಕ್ರಮವು ಉಟ್ಟು. ದಾರೆ ಹೊಯ್ಯಕನ ಗೂಡೆನ ಸೋದರ ಮಾವ ಅಲ್ಲರ್ ಅಪ್ಪ ಕೊಂಬುನ ಗಿಂಡಿಲಿ – ಕೊಂಬುಲಿ ಹಾಲ್ ಬೀಳುವ ಹಾಂಗೆ ಹೊಯ್ಯುವ ಕ್ರಮ ಉಟ್ಟು. ದೇವಸ್ತಾನಲೀ ದೇವ್ರುಗೆ ಅಬಿಸೇಕ ಮಾಡಿಕೆ ಕೊಂಬುನ ಗಿಂಡಿ ಬೇಕಾದೆ. ಯಾವುದೇ ಒಳ್ಳ ಕಾರ್ಯಕ್ರಮ ನಡೆಕನ ಕೊಂಬುನ ಗಿಂಡಿ ಅಗತ್ಯ ಬೇಕಾದೆ. **(ಎಂ.ಜಿ.ಕೆ.)**



ದೀಪ

ಮೊನ್ಲ ಗುಹೆಂದ ಗುಡ್ಲಿಲಿಗೆ ಬಾಕನ ದೀಪ ಇತ್ತ್. ಪ್ರಾಣಿಗಳ ಕೊಬ್ಬುಂದ ದೀಪ ಹೊತ್ತ್‌ಸ್ತಿದ್ದೊ. ಎಣ್ಣೆ ಬೀಜಗಳ್‌ನೆ ಹೊತ್ತ್‌ಸ್ತಿದ್ದೊ. ಕ್ರಮೇಣ ಬೀಜಂದ ಎಣ್ಣೆ ತೆಗೆಕೆ ಸುರ್ ಮಾಡ್ದೊ. ಎಣ್ಣೆ ತೆಗ್ದಂಗೆ ದೀಪ ಮಾಡ್ದೊ. ದೀಪಕ್ಕೆ ನೆಣೆ ಮಾಡ್ದೊ. ಮಣ್ಣ್‌ಂದ ದೀಪ ಮಾಡ್ದೊ. ಲೋಹ ಕಂಡ್ ಹಿಡ್ದಂಗೆ ಅದರ್‌ಂದ ದೀಪ ಮಾಡ್ದೋ.

ದೀಪದ ಕಲ್ಪನೆ ಬಂದಲ್ಲಿಂದ ನಾಗರಿಕತೆ ಹೊಸ ಶಕ್ತಿನ ಪಡ್ಕಂತ್. ಬೆಳ್ಕ್ ಮೊನ್ಲಂಗೆ ಜ್ಞಾನದ ಮೂಲ. ವೇದಿಕೆಲಿ ದೀಪ ಬೆಳ್ಗಿವೆ. ಕತ್ತಲೆಂದ ಬೆಳ್ಕ್‌ನ ಕಡೆಗೆ ತ್ತೇಕ್ರೆ ಜ್ಞಾನದ ಕಡೆಗೆ ಪೋಯಿತೇಳುವ ಸಂಕೇತ ಆಗುಟು. ರಾಮಾಯಣ ಮತ್ತೆ ಮಹಾಬಾರತ ಕತೆಗಳ್‌ಲಿ ಚಿನ್ನದ ಮತ್ತೆ ಬೆಲೆಬಾಳ್‌ವ ಹರಳ್‌ಗಳ ದೀಪದ ವಿಸಯ ಬಂದದೆ.

ಸುರ್ ಸುರೂಲಿ ದೀಪ ಬಟ್ಲ್ ನಂಗೆ ಇದ್ದ್ ಅದರ ಒಂದ್‌ಕಡೆ ನೆಣೆ ಇಸಿಕೆ ಚಂಚ್ ಇರ್ತಿತ್. ಕ್ರಮೇಣ ದೀಪಕ್ಕೆ ಮರದ ಇಲ್ಲರ್ ಕಲ್ಲ್‌ದ್ ಲಾಯ್ಕ್‌ದ್ ಪೀಟ ಬಾತ್. ಕೆಲ ಗುಡ್ಡಗಾಡ್ ಜನಾಂಗದವು ಯಾವ್ದಾರ್ ಹೊಡಿಂದ ಮಾಡ್ದ ದೀಪಗಳ ಆನೆ, ಕುದ್ರೆ, ನವುಲುಗಳ ಆಕೃತಿಗಳ್‌ಂದ ಅಲಂಕಾರ ಮಾಡಿ ಮೊದುವೆ ಇಲ್ಲರೆ ಹಬ್ಬಗಳ ಸಮೆಲಿ ಉಪಯೋಗಿಸಿವೆ. ಮದ್ಯ ಪ್ರದೇಶದ ಗೋಂಡರ ಮೊದುವೆಗಳ್‌ಲಿ ಐದಡಿ ಎತ್ತರದ ಕಂಬದ ಮೇಲೆ ಕೆಂಪು ಇಲ್ಲರೆ ನೀಲಿ ಕಣ್ಣ್‌ನ ಮೊನ್ಸಾಕೃತಿ ನಡುಲಿ ನಾಲ್ಕ್ ದೀಪಗ ಇದ್ದವೆ. ಅದ್ ಅಲ್ಲಿದ್ ವಿಸೇಸ.

ದೀಪಗಳ್‌ಲಿ ಅರ್ಚನಾ ದೀಪ, ದೀಪ ಲಕ್ಸ್‌ಮಿ, ಆರತಿ ದೀಪ, ನಂದಾ ದೀಪ, ತೂಗುದೀಪ, ಕಾಲ್ ದೀಪ ಹಿಂಗೆ ಬೇರೆ ಬೇರೆ ತರದ ದೀಪಗ ಒಳೊ. ದೇವರ ಮುಂದೆ ಯಾಗೋಳು ಬೆಳ್ಗುವ ದೀಪನ ನಂದಾ ದೀಪತ್ತೇಳಿವೆ. ಆರತಿ ದೀಪನ ಹಿಡ್ಕಂಬಕೆ ಹಿಡಿ ಇದ್ದದೆ.

ದೀಪಗಳ ಪೊಲ್ರ್ಕಾಂಬೊದು ದೀಪಾವಳಿಯಂದ್. ಹಿಂದೆನ ಕಾಲಲಿ ಯುದ್ದಕ್ಕೆ ವೀರರ್‌ನ ಕಳ್ಸಕನ, ಅವು ಗೆದ್ದ್ ಬಾಕನ ದೀಪ ಬೆಳ್ಗಿ ಅವರ ಸ್ವಾಗತ ಮಾಡ್ತಿದ್ದೊ. ಮಹಾತ್ಮಗಾಂದಿಯವು ದಂಡಿಯಾತ್ರೆ ಮಾಡಕನ ದಾರಿ ಉದ್ದೋಕೆ ಹೆಣ್ಮಕ್ಕ ಪ್ರಾರ್ತನಾ ದೀಪನ ಹಿಡ್ದ್ ಸ್ವಾಗತ ಮಾಡ್ತಿದ್ದೊಗಡ. ನಡು ಮನೆಲಿ(ಬಾಡೆಲಿ) ದೀಪದ ಗೂಡು ಇದ್ದದೆ. ಅಲ್ಲಿ ದೀಪ ಬೆಳ್ಗಿ ಆ ಗೋಡೆ ಮೇಲೆ ಚಿತ್ರ ಬರ್ದಂಗೆ ಕಪ್ಪಾಗಿದ್ದದೆ. ದೀಪಂದ ಎಣ್ಣೆ ಸೋರಿ ಸೋರಿ ಕೆಳ ಗೋಡೆಲೂ ಚಿತ್ರ ಮೂಡಿದ್ದದೆ. ದೀಪದ ಮುಂದೆ ಕೆಟ್ಟ ಮಾತ್ ಆಡಿಕೆ ಬತ್ತ್. ಹುತ್ರಿ ಹಬ್ಬಲಿ ನ್ಯಾಯ ತೀರ್ಮಾನ ಅದೇ ದೀಪದ ಮುಂದೆ. ರಾಜಿ ಮಾಡಿಕಂಡ್ ನೆಮ್ಮದಿಂದ ಬೊದ್ಕಿವೆ. ಮೊದುವೆ ಸಾಸ್ತ್ರಲಿ, ಯಾವ್ದೇ ಸುಬ ಕಾರ್ಯಲಿ ದೀಪಕ್ಕೆ ಗೌರವ ಉಟ್ಟೇ ಉಟ್ಟು. ಮಕ್ಕ ಬಾಯಿಪಾಟ ಹೇಳಿ, ಸ್ತೋತ್ರ ಹೇಳಿ ಅಡ್ಡಬಿದ್ದ್ ನಮಸ್ಕಾರ ಮಾಡಿವೆ. **(ಬಾ.ಜೋ.)**



ಮುಡ್ಪು

ತಾಂಬ್ರಂದ ಮಾಡ್ದ ಉರುಂಟು ಇರ್ವ ಒಂದ್ ಸಣ್ಣ ಪೆಟ್ಟಿಗೆ. ಅದ್ಕೆ ಬೀಗ ಹಾಕುವ ವ್ಯವಸ್ತೆ ಇದ್ದದೆ. ಶ್ರೀ ವೆಂಕಟರಮಣ ಸ್ವಾಮಿಯ ಹೆಸ್ರ್‌ಲಿ ಮುಡ್ಪು ಇದ್ದದೆ. ಬಾರೀ ಸುದ್ದ ಮುದ್ರಿಕೆಂದ ಅದರ ಕಾಪಾಡಿವೆ. ಕುಟುಂಬದ ಐನ್ ಮನೆಲಿ ಅದ್ ಇದ್ದದೆ. ವರ್ಸಕ್ಕೆ ಒಮ್ಮೆ, ಇಲ್ಲರೆ ಎರಡ್ ವರ್ಸಕ್ಕೆ ಒಮ್ಮೆ ಮುಡ್ಪುನ ಅಟ್ಟಂದ ಇಳ್ಸಿ 'ಹರ್ಸಯ'ತ ಮಾಡಿವೆ. ಆಗ ಮುಡ್ಪುನ ಸುದ್ದ ಮಾಡಿ ನಾಕಾರ್ ಒಳ್ಳೆ ಮೆಣ್ಸ್ ಕಾಳ್ ಹಾಕಿ ಬಂಡಾರ ಹಾಕಿದ ಹಣನ ಲೆಕ್ಕ ಮಾಡಿ ಬರ್ದ್ ಅದರ ಒಳಗೆ ಇಸಿ ಮುಚ್ಚಿವೆ.

ಐನ್‌ಮನೆ (ಮೂಲದ ಮನೆ) ಅಟ್ಟಲಿ ಮೇಲೆ ಮೋಂದಾಯಕ್ಕೆ ಮುಡ್ಪುನ ಕಟ್ಟಿವೆ. ಮತ್ತೆ ಪೂಜೆ ದಿನ ಇಳ್ಸಿವೆ. ಹರ್ಸಯ ದಿನ ಬಕ್ತಾದಿಗಳ್‌ಂದ ಬಿದ್ದ ಬಂಡಾರದ ಹಣನ ಪೂರ ಮುಡ್ಪುಗೆ ಹಾಕಿವೆ. ಯಾಗ ತಿರ್‌ಪತಿಗೆ ಹೋದವೆನೋ ಆಗ ಆ ಹಣನ ಹೋವ ದಾರಿ ಕರ್ಚಿಗೆ ಉಪಯೋಗ ಮಾಡಕ್. ಹಣ ಒಳ್ದರೆ ಅದರ್‌ನೆಲ್ಲ ತಿರ್‌ಪತಿಲಿ ದೇವರ ಹುಂಡಿಗೇ ಹಾಕೊಕು. ಆದರೆ ಬಾಕನ ಮಾತ್ರ ಮುಡ್ಪು ಹಣನ ಬಾಕಿ ಮಾಡಿಕಂಬಕೆ ಬತ್ತೇ ಬತ್ತ್. ಹರ್ಸಯದ ಪೂಜೆನೆಲ್ಲಾ ಮಾಡ್ದು ದಾಸಯ್ಯ. ಒಬ್ಬನೇ ಮಂತ್ರ ಹೇಳಿ, ಸಂಕ ಊದಿ, ಜಾಗಟೆ ಬಡ್ಕಂಡ್ ಪೂಜೆ ಮಾಡ್ದರ ನೋಡಿಕೆ ಲಾಯ್ಕಿದ್ದದೆ. **(ಬಾ.ಜೋ.)**

ಹೂವುನ ಕುಕ್ಕೆ

ತುಳುಲಿ ಇದರ ಪೂತ ಕುರ್ವೆಂತ, ಮಲೆಯಾಳಂಲಿ ಪೂ ಕುರಿಯತ ಹೇಳುವೆ. ಇಂತ ಕುಕ್ಕೆ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲೆಲ್ಲ ಉಟ್ಟು.

ಬೆದ್ರ್ ಅಲ್ಲರ್ ಬೆತ್ತಲಿ ಇದರ ಮಾಡಿಕಾದೆ. ಕುಕ್ಕೆಗೆ ಅಡಿಲಿ ಕಾಲ್‌ನ ಹಾಂಗೆ ಸುತ್ತಳೂ ಇದ್ದದೆ. ಕುಕ್ಕೆ ಮಾಡಿಕೆ ಗೊತ್ತಿದ್ದೊವು ಯಾರ್ ಸ ಇದರ ಮಾಡ್‌ವೆ. ಆದರೂ ಹೆಚ್ಚಾಗಿ ಅಜಲರ್, ಮಲೆ ಕುಡಿಯರ್, ಮಾಯ್ಲರ್ ಈ ಕುಕ್ಕೆನ ಮುಡ್ದೊವೆ. ಹೂ ಕೊಯ್ಯೊಕೆ ಹೋಕನ ಇದ್ ಬೇಕಾದೆ. ಕೊಯ್ದು ಹೂವು ಇದರ್‌ಲಿ ಹಾಕಿಕೆ ಒಳ್ಳೆದಾದೆ. **(ಎಂ.ಜಿ.ಕೆ.)**

ಬೇಟೆ ಹತ್ಯಾರ್‌ಗ



ಕೂಂಜೋಳು

ಮೀನ್ ಹಿಡೆಕೆ ಆವ ಒಂದ್ ಸೊತ್ತ್. ಕೂಂಜೋಳು ತೇಲ್ರೆ ಗದ್ದೆ ಕಣಿ ಅಲ್ಲರ್ ಚೋಡ್‌ಲಿ ಎತ್ತರಂದ ಬೀಳುವ ನೀರಿದ್ದಲ್ಲಿ ಉಬರ್ ಮೀನ್ ಹತ್ತಿಕನ್ ಬಾಕನ ಹಿಡೆಕೆ ಆವ ಸೊತ್ತು. ತುಳುಲಿ ಸಾ ಇದ್ಕೆ ಕೂಂಜೋಳುಂತ ಕರ್ದವೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆ ಮತ್ತೆ ಸಕ್ಲೇಶ್ಪುರ ಕಡೆಲೆಲ್ಲ ಉಟ್ಟು.

ಕೂಂಜೋಳು ಮಾಡಿಕೆ ಬೆಳ್ದ ಹಇ ತೋರದ ಬೆದ್ರ್‌ನ ತುಂಡು ಬೇಕು. ಬೆದ್ರ್ ನೀರ್ ಬೀಳುವ ಜಾಗೆ ನೋಡಿಕಂಡ್ ಅದರ ಎತ್ತರಕ್ಕೆ ಸರಿಯಾಗಿ ಅರ್ದದಷ್ಟು ಸೀಳಿ ಸಪೂರಲಿ ಎಂಟ್ ಹತ್ತ್ ಬಾಗ ಮಾಡೊಕು. ಆ ಬಾಗಗಳ ಅಗಾಲಕ್ಕೆ ಬುಡ್ಸಿಕಾಂಕು. ಅದ್ಕೆ ಒಳಗೆಂದ ದಪ್ಪದ ಬೊಳ್ಳಿನ ಮಾದ್ರಿ ಬೊಳ್ಳಿ ಅಲ್ಲರ್ ಇಂಜೆರ್ ಬೊಳ್ಳಿ ಚಕ್ರದ ಹಾಂಗೆ ಮಾಡಿ ಇಸಿಕಾಂಕು. ಈಗ ಬೆತ್ತದ ಬಾಸ್ ಅಲ್ಲರ್ ಬೆದ್ರ್‌ನ ಬಾಸ್‌ಂದ (ಓಟೆ ಬಾಸ್ನೂ ಆದೆ). ಬಾಸ್ ತೇಲ್ರೆ ತೆಳ್ಳಂಗೆ ಕೀಸಿ ಮಾಡ್ದ ಸೀಳ್. ಅದರ ಸುತ್ತೋಳು ಎಡೆ ಇಲ್ಲದ ಹಾಂಗೇ ನೇಯೋಕು. ಹೀಂಗೆ ಕೂಂಜೋಳು ತಯಾರ್ ಆದೆ. ಇದರ ಎಲ್ಲಾ ಸಮುದಾಯದವು ಕಲ್ತ್ ಮಾಡ್ತಿದ್ದೊ.

ಹರ್ಕಂಡ್ ಹೋವ ನೀರಿಗೆ ಕೂಳಿ ಇಸುವೆ. ಎತ್ತರಂದ ಬೀಳುವ ನೀರಿದ್ದಲ್ಲಿಗೆ ಮೀನ್ ಹಿಡೆಕೆ ಕೂಂಜೋಳು ಮತ್ತೆ ಏಪೆ ಇಸುವೆ. ಮಳೆಗಾಲ ಮೀನ್‌ಗ ಉಬರ್ ಹತ್ತುವೆ. ಇದ್ ಒರ್ತೆ ನೀರ್ ಬಾವಲ್ಲಿಗೆ ಮೊಟ್ಟೆ ಇಸಿ ಮರಿ ಮಾಡಿಕೆಂತ ಮೀನ್‌ಗ ನೀರ್ ಹರ್ದ್ ಬಾವ ಕಡೆಗೆ ಹೋದವೆ. ಆಗ ಕೆಲವು ಕಡೆ ನೀರ್‌ಎತ್ತರಂದ ಬೀಳುವ ಜಾಗ ಇದ್ದದೆ. ಅಲ್ಲಿ ಮೀನ್‌ಗ ಮೇಲೆ ಹಾರಿ ಹತ್ತಿ ಹೋಕೆ ನೋಡುವೆ. ಮೇಲೆ ಹಾರ್ದ ಮೀನ್‌ಗ ಕೆಲವೊಮ್ಮೆ ಹಾರಿಕನ ನೀರ್‌ನ ರಬಸಕ್ಕೆ ಹತ್ತಿ ಕಾಗದೆ ಕಾಗಡೆ ಬಿದ್ದ್ ಬುಟ್ಟವೆ. ಅಂತ ಜಾಗಲಿ ಕೂಂಜೋಳು ಇಸುವೆ. ಹಾರಿಕಾಕನ ಬಿದ್ದ ಮೀನ್‌ಗ ಕೂಂಜೋಳು ಒಳಗೆ ಬಿದ್ದರೆ ಮತ್ತೆ ಹಾರಿಕಾಗದೆ ಅದರ್‌ಲೆ ಬಾಕಿ ಆದವೆ. ಮಳೆಗಾಲಲಿ ಕೂಂಜೋಳುನ ಮೀನ್ ಹಿಡೆಕೆ ಉಪಯೋಗ ಮಾಡ್‌ವೆ.

ಕೂಂಜೋಳುನ ಹಾಂಗೇ ಇನ್ನೊಂದು ಏಪೆ. ಇದ್ ಉರುಂಟು ಇರದೆ ಅಗಲಕ್ಕೆ ಚಪ್ಪಟೆ ಇದ್ದದೆ. **(ಎಂ.ಜಿ.ಕೆ.)**



ಕೂಳಿ

ಕೂಳಿ ಮೀನ್ ಹಿಡೆಕೆ ಬೇಕಾದ ಒಂದು ಸೊತ್ತು. ಇದರ ಒಳಗೆ ಹೋದ ಮೀನಿಗೆ ಹೊರಗೆ ಹೋಕೆ ಆದುಲೆ. ತುಳುಲಿ ಕೂರಿ, ಮಲೆಯಾಳಂಲಿ ಮೀನ್‌ಕೂಡ್ ಅಂತ ಹೇಳುವೆ. ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಮತ್ತೆ ಹಾಸನ ಜಿಲ್ಲೆನ ಸಕ್ಲೇಸ್ಪುರ ಕಡೆ ಹಳ್ಳ ಚೋಡಿ ಇರುವ ಕಡೆಗಳ್‌ಲ್ಲಿ ಮತ್ತೆ ಗದ್ದೆ ಬೇಸಾಯ ಇರುವ ಕಡೆಲೆಲ್ಲ ಇದರ್‌ಲಿ ಮೀನ್ ಹಿಡ್ದವೆ. ಕೂಳಿನ ಚಾಳೆ ಮಡಲ್‌ನ ಕಡ್ಡಿಲಿ, ಬೆದ್ರ್‌ನ ಕಡ್ಡಿಲಿ, ಬೈನೆ ಸೋಗೆ ಕಡ್ಡಿಲಿ ಮಾಡುವೆ. ಅದ್ ಅಲ್ಲದೆ ಕಾಡ್ಲಿ ಇರುವ 'ಚಿಕ' ದೆಯ್ಯಿನ– ಪಾಮ್‌ಎಣ್ಣೆ ಮರದ ಹಾಂಗೇ ಇರುವ ಒಂದು ಜಾತಿ ಮರದ ಸೋಗೆ ಕಡ್ಡಿಂದಲೂ ಮಾಡುವೆ.

ಕಡ್ಡಿನ ಪೊರ್ಲುರ್ಜ ಕೀಸೊಕು. ಕೂಳಿಗೆ ಆಕಾರ ಬರೊಕುಂತಾದರೆ ಹಂಞ ದಪ್ಪದ ಮಾದ್ರಿ ಬೊಳ್ಳಿ ಅಲ್ಲರ್ ಬೆತ್ತಲಿ ಚಕ್ರದ ಹಾಂಗೆ ಮಾಡಿಕಂಡ್ ಅದ್ಕೆ ಸುತ್ತಲೂ ಕಡ್ಡಿಗಳ ಬೆತ್ತದ ಬೊಳ್ಳಿಲಿ ಹಕ್ಕಲೆ ಹಕ್ಕಲೆ ನೇಯೊಕು. ಚಿತ್ರ ನೋಡಿ –ಒಂದು ಕಡೆ ದೊಡ್ಡ ಬಾಯಿ ಕಂಡದೆ. ಇನ್ನೊಂದು ಕಡೆ ಗಾತ್ರ ಸಣ್ಣದಾಗ್ತಾ ಹೋದೆ. ಹಾಂಗೆ ಆಕರ್ ಅಲ್ಲಿಗೆ ಸಣ್ಣ ಚಕ್ರಗಳ ಇಸಿಕಣಕು, ಕೂಳಿನ ಆಕಾರ ಬಂದ ಮೇಲೆ ಸಪೂರದ ಕಡೆಲಿ ಎಲ್ಲಾ ಕಡ್ಡಿಗಳ ಜೋಡಿಸಿ ಕಟ್ಟೊಕು. ಮತ್ತೆ ಸಣ್ಣ ಕಡ್ಡಿಗಳ ಹಕ್ಕಲೆ ಹಕ್ಕಲೆ, ಅಂದಾಜ್ ಅರ್ದ ಮಾರ್‌ನಷ್ಟು ನೇಯೊಕು. ಅದರ ಒಂದು ಪುಡೆಲಿ ನೇಯದೇ ಹಾಂಗೇ ಬುಡೊಕು. ನೇಯ್ದ ಮೇಲೆ ಹಾಂಗೇ ಬುಟ್ಟ ಪುಡೆನ ದೊಡ್ಡ ಬಾಯಿ ಇರುವಲ್ಲಿ ಒಳಗೆ ಹೋಗುವಾಂಗೆ ಮಾಡೊಕು. ಇನ್ನೊಂದು ಪುಡೆ ದೊಡ್ಡ ಬಾಯಿಲಿ ಇರುವ ಚಕ್ರಕ್ಕೆ ಜೋಡಿಸಿ (ಚಿತ್ರಲಿ ಕಾಂಬ ಹಾಂಗೇ) ಕಟ್ಟಿಕಂಡ್ ಹೋಕು. ಅದರ್‌ಲಿ ಒಳ್ದ ಬಾಗನ ಮೇಲೆ ಕಿರೀಟದ ಹಾಂಗೇ ಕಾಂಬ ರೀತಿ ಕಟ್ಟೊಕು. ಇದ್ಕೆ 'ಕಂಜಿ' ಅಂತ ಹೇಳುವೆ. ಇದರ್‌ಲಿ ಮೀನ್‌ಗಳ್ಗೆ ಒಳಗೆ ಹೋಕೆ ಆಕು. ಹೊರಗೆ ಬಾಕೆ ಆಗದ ಹಾಂಗೆ ಇರೊಕು. ಅದರ ಎಡೆಗೆ ಕಾಯಿ ಚೊಪ್ಪು ಇಸಿ ಸೆರೆ ಇಲ್ಲದ ಹಾಂಗೆ ಕಟ್ಟುವೆ. ಚಾಳೆ ಕಡ್ಡಿ, ಬೈನೆ ಕಡ್ಡಿಲಿ ಮಾಡ್ದ ಕೂಳಿ ಹೆಚ್ಚ್ ದೊಡ್ಡದಿರುದುಲೆ. ಬೆದ್ರ್ ಕಡ್ಡಿಲಿ ಮಾಡ್ದ ಕೂಳಿ ಉದ್ದ ಇದ್ದದೆ. ಕೂಳಿನ ಮೇಲ್ಪುಡೆಗೆ ಹಿಡ್ಕಂಕೆ ಆವಾಂಗೇ ಕೈ ಇದ್ದದೆ. ಕೂಳಿ ಮಾಡಿಕೆ ಎಲ್ಲವುಕು ಆಕಿಲೆ. ಅದರೆ ಒಸಿ ಚಾತುರ್ಪು ಬೇಕು ಅಷ್ಟೆ.

ಮಳ್ಗಾಲ ಮಳೆ ಬಾಕನ ಹಳ್ಳಲಿ ನೀರ್ ಜಾಸ್ತಿ ಆಕನ ಮೀನ್‌ಗ ನೀರ್ ಬಾವ ಕಡೆಗೆ ಬಂದವೆ. ಮಳೆಗಾಲ ಮೀನ್‌ಗ ಉಬರ್ ಹತ್ತುವೆ. ಉಬರ್ ಹತ್ತುದ್ ತೇಳ್ರೆ ಒರ್ತೆ ನೀರ್ ಬಾವಲ್ಲಿಗೆ ಮೊಟ್ಟೆ ಇಸಿ ಮರಿ ಮಾಡಿಕೆಂತ ಮೀನ್‌ಗ ನೀರ್ ಹರ್‌ದ್ ಬಾವ ಕಡೆಗೆ ಹೋದವೆ. ಆಗ ಹಳ್ಳಕ್ಕೆ ಅಲ್ಲರ್ ಕಣಿಗೆ ಅಡ್ಡಕ್ಕೆ ಮರ, ಕೊಮ್ಮುನ ಅಲ್ಲರ್ ಬೆದ್ರ್‌ನ ತುಂಡುಗಳ ಗೂಟ ಹಾಕಿ ಕಟ್ಟಿ ಅದರ ಎಡೆಲಿ ಕೂಳಿನ ದೊಡ್ಡ ಬಾಯಿ ನೀರ್ ಹರ್‌ಕಂಡ್ ಹೋವ ಕಡೆಗೆ ಜಾಗ್ರತೆಲಿ ಕಟ್ಟಿ ಇಸುವೆ. ಕೂಳಿ ನೀರ್‌ಲಿ ಕೊಚ್ಚಿ ಹೋಗದ ಹಾಂಗೆ ಕೂಳಿನ ಮೇಲೆ ದಿನ್ನದ ಕಲ್ಲ್ ಇಸುವೆ. ಮೀನ್‌ಗ ಮೇಲೆ ಮೇಲೆ ಹತ್ತಿಕನ್ ಬಂದ್ ಕೂಳಿ ಒಳಗೆ ಹೋದವೆ. ಒಳಗೆ ಹೋದ ಮೀನ್‌ಗಳಿಗೆ ಹೊರೆಗೆ ಹೋಕೆ ಆದುಲೆ. ಮೂಡು, ನೊಳಿ, ಕೀಜಣ, ಚೀಕೊಟೆ, ಹರ್‌ಗ್ಲ್, ಕೂರ್‌ಲು, ಕರಿಮೀನ್, ಕಾಜೋವ್, ಪಾಚೋಳ್ತಿ, ಕಲ್ಲುಳ್ಳ, ಬಾಳೆಮೀನ್, ಹಾವುಮೀನ್ ಹೀಂಗೆ ತರತರದ ಮೀನ್‌ಗ ಕೂಳಿ ಒಳಗೆ ಇದ್ದವೆ. ಒಮ್ಮೊಮ್ಮೆ ಎರಡ್ ಮೂರು ಸೇರ್‌ನಸ್ಟ್ ಮೀನ್ ಸಿಕ್ಕುದುಟ್ಟು. ಕೂಳಿನ ಮೇಲೆ ತಂದ್ ಅದರ ಸಪೂರದ ಪುಡೆಲಿ ಇರುವ ಕಟ್ಟ ಬಿಚ್ಚಿ ಕೊಡ್ಕಿರೆ ಮೀನ್‌ಗ ಉದುರುವೆ.

ಅರ್‌ಕಿಲ್ಲ್‌ಲಿ ಗದ್ದೆ ನೀರ್ ಅರ್ರುವ ಕ್ರಮ ಉಟ್ಟು, ಆಗ ಗದ್ದೆಲಿ ಇದ್ದ ಮೀನ್‌ಗ ನೀರ್ ಹೋದ ಕಡೆಗೇ ಹೋದವೆ. ಬಡ್ಚಿಲ್ ಕಡ್ದ್ ನೀರ್ ಹೋಕೆ ಬುಟ್ಟ ಜಾಗೆಲಿ ಕೂಳಿ ಇಸುವೆ. ಸಣ್ಣ ಸಣ್ಣ ಮೀನ್‌ಗ ಇರುವ ಜಾಗೆಲಿ ಚಾಳೆ ಮಡಲ್ ಕಡ್ಡಿಂದ ಮಾಡ್ದ ಕೂಳಿ ಒಳ್ಳದ್ ಅಂತ ಹೇಳುವೆ. ಮಳ್ಗಾಲ ಅಲ್ಲದೆ ಬೇರೆ ದಿನಗಳಲಿ ಕೂಳಿ ಒಳಗೆ ಕೋಳಿ ಕರ್ಳ್ ಹಾಕಿ ದೊಡ್ಡ ದೊಡ್ಡ ಗುಂಡಿಲಿ ಕಲ್ಲ್ ಕಟ್ಟಿ ಇಸುವೆ. ಮೀನ್‌ಗ ಕರ್ಳ್ ತಿಂಬಕೆ ಅದರ ಒಳಗೆ ಹೋಗಿ ಅಲ್ಲೇ ಬಾಕಿ ಆದವೆ. ಇಂತಾ ಕೂಳಿಗೆ ಎದ್ರ್‌ಗಡೆ ಕಿರೀಟ ಇರ್ದುಲೆ.

ಹಿಂದೆನ ಕಾಲದ ಜನಕ್ಕೆ ಬೇಜಾರ್ ಆಕನ ಕಾಡಿಗೆ ಮೃಗಗಳ ಬೇಟೆಗೆ, ಹಳ್ಳ, ಚೋಡಿಗೆ ಮೀನ್ ಬೇಟೆಗೆ ಹೋತಿದ್ದೊ. ಮಳೆಗಾಲ ಮೀನ್ ಹಿಡೆಕೆ ಕೂಳಿನ ಮಾಡ್ತಿದ್ದೊ. ಹಾಂಗಾಗಿ ಕೂಳಿ ಪಿರಾಕ್ಲೇ ಜನ ಕಂಡ್ ಹಿಡ್ದ ಒಂದು ಸೊತ್ತು. ಮಳ್ಗಾಲ ಮಾತ್ರ ಅಲ್ಲದೇ ಅರ್ಕಿಲ್ ಸ ಇದ್ ಉಪಯೋಗಕ್ಕೆ ಬಂದದೆ. ಒಮ್ಮೊಮ್ಮೆ ಎಸ್‌ಂಡ್, ಹಾವು ಕೂಡ ಕೂಳಿಲಿ ಸಿಕ್ಕಿ ಬಿದ್ದದೆ. ಹಾವು ಸಿಕ್ಕಿಬಿದ್ದರೆ ಮೀನ್‌ತಿಂದ್ ಕಾಲಿ ಮಾಡ್ದೆ.

'ಒಳಗೆ ಹೋಕೆ ಆದೆ. ಹೊರಗೆ ಬಾಕೆ ಆದುಲೆ', 'ಹುಗ್ಗಿಕೆ ಆದೆ, ಹೊರಡಿಕೆ ಆದುಲೆ', 'ಹೋಕೆ ಹೋಗೊಲೊ, ಬಾಕೆ ಆದುಲೆ' ಅಂತ ಒಡ್ಗೋಕತೆಗ ಒಳೊ. **(ಎಂ.ಜಿ.ಕೆ.)**



ಕೇಪುನ ಕೋವಿ

'ತಿರಿತೋಕ್' ಆದ ಮೇಲೆ ಕೇಪುನ ಕೋವಿದ್ ಶೋದನೆ ಆಗಿರೊಕು ತ ಕಂಡದೆ. ತಲೆತಲಾಂತರಂದ ಬಂದ ಆಸ್ತಿ ಕೇಪುನ ಕೋವಿ. ಹೊರಗೆಂದ ಕೇಪು(ಕ್ಯಾಪ್) ಇಸಿ ಗುಂಡ್ ಹೊಡೆವ ಕೋವಿಯೇ 'ಕೇಪುನ ಕೋವಿ'.

ಕೊಡಗ್‌ಲಿ ಜಮ್ಮಾ ಹಿಡುವಳಿ ಇರವು ಕೋವಿ ಇಸಿಕಂಡಿದ್ದವೆ. ಜಮ್ಮಾದವುಕೆ ಕಾನೂನು ನಿಯಮಲಿ ಹಞ ಸಡ್ಲ ಉಟ್ಟು. ಚುನಾವಣೆ ಬಾಕನ ಕೋವಿನ ಪೋಲಿಸ್ ಸ್ಟೇಷನ್‌ಲಿ ಇಸೊಕುತಿಲ್ಲೆ. ಲೈಸನ್ಸ್ ನವೀಕರಣಕ್ಕೆ ಬಾಕಿದ್ದವುಕ್ಕಿರ್‌ವ ನಿಯಮ ಇಲ್ಲೆ.

ಏರ್‌ಗನ್ ಮೂರ್‌ಕಾಲ್ ಅಡಿ ಉದ್ದ ಇದ್ದರೆ, ತೋಟಾ ಕೋವಿ ನಾಲ್ಕ್ ಅಡಿ ಇದ್ದದೆ. ಆದರೆ ಕೇಪುನ ಕೋವಿ ನಾಕ್‌ಕಾಲ್ ಅಡಿ ಉದ್ದ ಇರ್ದು ಅದರ ವಿಸೇಸ. ಕೊಳ ಉದ್ದ ಇದ್ದಸ್ಟ್ ಗುಂಡ್ ದೂರಕ್ಕೆ ಹೋದೆ ತ್ತೇಳಿವೆ.

ಕೇಪುನ ಕೋವಿಲಿ ಮುಕ್ಯ ಎರಡ್ ಬಾಗಗ. ಕೋವಿ ಬುಡ ಪಾತಿ ಸಹಿತ, ಇನ್ನೊಂದ್ ಕೋವಿಕೊಳ (ನಳಿಗೆ). ಕೋವಿ ಬುಡ ಬಾಗಲಿ ಕಳ್ಳ(ಟ್ರಿಗಾರ್) ಕೊತ್ತಿ(ಹ್ಯಾಮರ್ ಕುದುರೆ) ತ ಇದ್ದದೆ. ಕೊತ್ತಿ ಇಳ್ಸಿಕಂಡ್ ಇರ್ದು, ಕೊತ್ತಿನ ಎಳ್ದ್ ನಿಲ್ಸುದುತ ಎರಡ್ ತರ ಉಟ್ಟು. ಕೊತ್ತಿ ಎಳ್ದ್ ನಿಲ್ಸುದರ 'ಬೇಟೆ ಕೊತ್ತಿ' ತ್ತೇಳಿವೆ. ಬೇಟೆ ಕೊತ್ತಿ ಎಳ್ದ್ ಕಳ್ಳಕ್ಕೆ ಕೈ ಕೊಟ್ಟರೆ ಅಂದರೆ ಕೈ ಬೆರಳ್‌ಂದ ಎಳ್ದದರೆ ಬೇಟೆ ಕೊತ್ತಿ ಕೇಪು ಮೇಲೆ ಬಿದ್ದ್ ಗುಂಡು ಹೊಟ್ಟಿದೆ.

ಇನ್ನ್ ಕೊಳದ ಮುಕ್ಯ ಬಾಗ : ಕೊಳದ ಬುಡಲಿ 'ಕಣ್ಣ್' ಇರ್‌ವ ಒಂದು ಆಣಿ. ಕೊಳದ ತುದಿಲಿ ಮೂಗು ಬೊಟ್ಟು ತರದ ಒಂದು ಗುರ್ತ್ ಇದ್ದದೆ. ಕೊಳದ ಅಡಿಲಿ 'ಅಚ್ಚ್‌ಕೋಲು' ಹಾಕಿಕೆ ವ್ಯವಸ್ತೆ ಇದ್ದದೆ. ಕೊಳನ ಪಾತಿಗೆ ಕರ್ಸಿ ಒಂದ್ ಬಳೆ ಹಾಕಿವೆ. ಕೊಳ ಪಾತಿಂದ ಜಾರದಂಗೆ ಇರ್ಲಿತ ಬಳೆ ಹಾಕುದು. ಕೇಪುನ ಕೋವಿಲಿ ಒಂಟಿ ಕೊಳ ಇನ್ನೊಂದು ಜೋಡು ಕೊಳ ಕೋವಿನೂ ಉಟ್ಟು.

ಅದ್ಚ್ ಕೋಲುನ ಕೊಳದ ಒಳಗಿರ್‌ವ ಮಸಿನ ತೆಗೆಕೆ ಉಪಯೋಗ್ಸಿವೆ. ಅಚ್ಚ್ ಕೋಲು ಕಬ್ಬಿಣದಾಗಿದ್ದದೆ. ಅದರ ತುದಿಲಿ ದಬ್ಬಳದ ಕಣ್ಣ್‌ನಂಗೆ ಒಂದ್‌ಕಣ್ಣ್ ಇದ್ದದೆ. ಆ ಕಣ್ಣ್ ಒಳಗೆ ಬಟ್ಟೆಚೂರ್‌ನ ನುಗ್ಗಿಸಿವೆ. ಕೊಳದ ಒಳಗೆ ಅಚ್ಚ್ ಕೋಲುನ ಹಾಕಿ ತಿರ್ಗಿಸಿ ಎಳ್ದರೆ ಕೊಳ ಸುದ್ದ ಆದೆ. ಕೋವಿಗೆ 'ತುಂಬು' ತುಂಬಿಕೂ ಕೋಲು ಬೇಕ್. ತುಂಬು ತೇಲ್ರೆ ಗುಂಡು ಹೊಡೆಕೆ ತಯಾರ್ ಮಾಡ್ದುತ. ಸುರೂಗೆ ಕೊಳದ ಒಳಗೆ ನೆಸೆ ಡಬ್ಬಿ ತರದ ಡಬ್ಬಿಂದ ಕೋವಿ ಮದ್ದ್ ಸುರ್ದವೆ. ಹಂಗೆ ಸುರ್ದ್ ಮೆಲ್ಲ ಮೆಲ್ಲ ತಟ್ಟೊಕು. ಆಗ ಮದ್ದ್ ಕೊಳದ ಬುಡಲಿರ್‌ವ ಕಣ್ಣ್ ಇರ್‌ವ ಆಣಿಲಿ ದಾಟಿದೆ. ಹಂಗೆ ದಾಟದಿದ್ದರೆ ನೆಸೆ ಹೊಡಿನ ಹಾಕಿದಂಗೆ ಹಾಕಿ ಸೂಜಿಂದ ಕುತ್ತಿ ಕುತ್ತಿ ತುಂಬಿವೆ. ಮತ್ತೆ ತೆಂಗ್‌ನ ಚೇರಿನ ಇಲ್ಲರೆ ಬಟ್ಟೆ ಚೂರ್‌ನ ಸಣ್ಣ ಉಂಡೆ ಮಾಡಿ ಕೊಳದ ಒಳಗೆ ಹಾಕಿ ಅಚ್ಚ್‌ಕೋಲ್‌ಂದ ಉಂದಿ ಕೋವಿ ಮದ್ದ್ ಜಾರದಂಗೆ ಗಟ್ಟಿ ಮಾಡಿವೆ. ಮತ್ತೆ ಸೀಸದ ಉಂಡೆನ – ಚಿಲ್ ಆದರೆ ಮೂವತ್ತ್ ಮೂವತ್ತೈದ್, ತರಿಕಲ್ಲ್ ಆದರೆ ನಾಕೈದ್ ಹಾಕಿ ಮತ್ತೆ ಚೇರಿ ಉಂಡೆನ ಹಾಕಿ ಅಚ್ಚ್‌ಕೋಲ್‌ಂದ ಕುಟ್ಟಿ ಮಾಡಿವೆ. 'ತುಂಬು' ಎಷ್ಟಾಪ್‌ತ ಅಚ್ಚು ಕೋಲ್‌ಂದ ಅಳ್ತೆ ತೆಗ್ದವೆ. ಇದೆಲ್ಲಾ ಆದ ಮೇಲೆ ಕೇಪುನ ಆಣಿ ಮೇಲೆ ಕರ್ಸಿವೆ. ಮತ್ತೆ ಕೊತ್ತಿನ ಮೆಲ್ಲ ಇಳ್ಸಿವೆ. ಅಲ್ಲಿಂದ ಮುಂದೆ ತುಂಬ ಜಾಗ್ರತೆ ಮಾಡಿವೆ.

ಆಣಿಲಿ ಸರಿಯಾಗಿ ಕೋವಿ ಮದ್ದ್ ಇಲ್ಲದೆ ಹೋದರೆ 'ಚಟ್–ಗುಡ್' ತ ಗುಂಡು ರಟ್ಟಿದೆ. ಕೇಪು ಕೋವಿಲಿ ಅನಾಹುತನೇ ಜಾಸ್ತಿ. ಒಂದೋ ದಾರಿಲೇ ಕೇಪು ಬಿದ್ದು ಹೋದು. ಇಲ್ಲರೆ ಚಟ್ ಗುಡ್ಡ್‌ತ ಕೇಪು ಸಿಡ್ದ್ ಗುಂಡು ರಟ್ಟುದ್. ಇಲ್ಲರೆ ಚಟಕ್‌ತ್ತೇಳಿ ಗುಂಡು ಆಗದೇ ಇರ್ದು. ಇಲ್ಲರೆ ಚಟ್ಟಕ್‌ತ್ತೇಳಿ ಗುಂಡು ಹಾರ್‌ಕನ ಕೇಪುದು ಚೂರ್, ಮದ್ದ್ ಬೆಂಕಿ ಕಿಡಿಕಣ್ಣ್ ಮೊಕಕೆಲ್ಲಾ ರಟ್ಟಿ ಗೋಳಾಡ್ಸಿದೆ. ಬೆಸಗೆ ಕೆಳಗೆ ಕೋವಿ ಕೋಸಿಕೆತೇ ನೇಕೆ ಕಟ್ಟಿದ್ದವೆ. ಆಯುದ ಪೂಜೆ ದಿನ ಕೋವಿನ ತೊಳ್ದ್ ಪೂಜೆ ಮಾಡಿ ಬೊಟ್ಟು ಹಾಕಿ ಬೆಚ್ಚಂಗಿಸುವೆ.

"ಕಾಡೆಲ್ಲಾ ಸುತ್ತಿ ಬೆಸಗೆ ಕೆಳಗೆ ಬೆಚ್ಚಂಗಿರ್‌ವ ನಾನ್‌ಯಾರ್?" ತ ಕೋವಿಗಿರ್‌ವ ಒಡ್ಪೊಕತೆ ಉಟ್ಟು. **(ಬಾ.ಜೋ.)**



ಕೇಪುನ ಬೆಡಿ

ಕೇಪು ಇಸಿ ಹೊಡೆವ ಬೆಡಿಗೆ ಕೇಪುನ ಬೆಡಿಂತ ಹೇಳುವೆ. ತುಳುಲಿ ಇದ್ ಕೇಪುತ ಬೆಡಿ. ಈ ಬೆಡಿ ಎಲ್ಲಾ ಊರುಲಿ ಇದ್ದದೆ. ಬೆಡಿನ ಕಡೆಲಿ ಹಿಡ್ಕಂಕೆ ಹಿಡಿನ ಹಾಂಗೇ ಇರುವ ಮರದ ಹಿಡಿ ಇದ್ದದೆ. ಅದ್ಕೆ ಪಾತಿಂತ ಹೇಳುವೆ. ಬೆಡಿಗೆ ಉದ್ದದ ಕಬ್ಬಿಣದ ನಳಿಗೆ ಇದ್ದದೆ. ಅದ್ಕೆ ಕಾಗಡೆಂದ ಜೋಡ್ಸಿಕನ್ ಸಪೂರದ ಕಬ್ಬಿಣದ ಕೋಲು ಇದ್ದದೆ. ಅದ್ಕೆ ಗಜ ಕೋಲುತ ಹೇಳುವೆ. ಅದರ ಕಡೆಲಿ ಹಞ ದಪ್ಪ ಇದ್ದದೆ. ಕೊಡಿ ಸಪೂರ ಆಗಿ ಚೂಪಾಗಿ ಗಾಳದ ಕೊಡಿನ ಹಾಂಗೆ ಇದ್ದದೆ. ಅದರ ಜೋಡ್ಸಿಕೆ ಕಬ್ಬಿಣದೇ ಹಞ ಅಗಲದ ಬಳೆನ ಹಾಂಗೆ ಇರುವ ಪಟ್ಟಿ ಇದ್ದದೆ. ಅದ್ಕೆ ಗಜಪಟ್ಟಿತ ಹೆಸ್ರ್. ಕೆಲವು ಬೆಡಿಲಿ ನಳಿಗೆನ ಅಡಿ ಬಾಗಲಿ ಸಣ್ಣ ಪೈಪುನ ಹಾಂಗೆ ಮೂರ್ನಾಲ್ಕು ಅಂಗುಲದಷ್ಟ್ ಇರುವ 2–3 ತುಂಡು ಹೆಸಿಗೆ ಹಾಕಿ ಇದ್ದದೆ. ಇದರ ಒಳಗೆ ಗಜಕೋಲ್‌ನ ಚುರ್ಚು ಇಸುವೆ. ನಳಿಗೆನ ಕೊಡಿಲಿ ಮೇಲ್ಬುಡೆಲಿ ಸಣ್ಣ ಬೊಟ್ಟುನ ಹಾಂಗೇ ಇರುವ ಒಂದು ಆಕಾರಕ್ಕೆ ನೊಣತ ಹೇಳುವೆ. ಪಾತಿನ ಅಡಿಲಿ ನಡು ಬಾಗಲಿ ಸಣ್ಣ ಕುಟ್ಟಿ ಉಟ್ಟು. ಅದ್ಕೆ ಕಳ್ಳ ತ ಹೇಳುವೆ. ಕಳ್ಳ ಒಂದು ಸಣ್ಣ ಬಳೆನ ಒಳಗೆ ಇರುವ ಹಾಂಗೆ ಉಟ್ಟು. ಅದರ ಸರಿ ಮೇಲ್ಬುಡೆಲಿ ಕಬ್ಬಿಣದ ಕೋಟಿ ಉಟ್ಟು. ಅದ್ಕೆ ಕುದುರೆನ ತಲೆನ ಹಾಂಗೆ ಇರುವ ಒಂದು ಕಬ್ಬಿಣದ ಕೀಲ್ ಉಟ್ಟು. ಅದ್ಕೆ ಕೊತ್ತುತ ಹೇಳುವೆ. ಕೊತ್ತುನ ಕೊಡಿಗೆ ಕುದುರೆತ ಹೇಳುವೆ. ನಳಿಗೆನ ಕಡೆಲಿ ಒಂದು ಅಂಗುಲದಷ್ಟು ಉದ್ದದ ಸಪೂರದ ಕುಟ್ಟಿ ಉಟ್ಟು. ಆ ಕುಟ್ಟಿನ ಒಳಗೆ ಒಟ್ಟೆ ಉಟ್ಟು. ಅದರ ಮೇಪುಳು ತ ಹೇಳುವೆ. ಮೇಪುಳುನ ಒಟ್ಟೆ ನಳಿಗೆ ಒಳಗೆ ಮುಟ್ಟ ಇದ್ದದೆ. ಕೊತ್ತುನ ಎಳ್ದರೆ ಅದ್ ಹಞ ಹೊರಗೆ ಬಂದ್ ನಿಲ್ಲುವ ಹಾಂಗೆ ಒಳಗೆಂದ ಕೀಲ್ ಉಟ್ಟು. ಕಳ್ಳನ ಎಳೆಕನ ಕೊತ್ತುನ ಕೀಲ್ ತಪ್ಪಿದೆ. ಆಗ ಮೇಪುಳನ ಮೇಲೆ ಕುದುರೆ ಬಿದ್ದದೆ. ಬೆಡಿ ಅಂದಾಜ್ ಐದ್ ಫೀಟ್‌ನಷ್ಟು ಉದ್ದ ಇದ್ದದೆ. ಕೆಲವು ಬೆಡಿ ಇನ್ನೂ ಉದ್ದ ಇದ್ದದೆ.


ಕೇಪುನ ಬೆಡಿ ಅಂಗಡಿಲಿ ಸಿಕ್ಕಿದೆ. ಬೆಡಿ ಹಿಡೆಕರ್ ಅದ್ಕೆ ಲೈಸನ್ಸ್ ಬೇಕು. ಹಳ್ಳಿಲಿರೋವುಕೆ ಕಾಡ್ ಪ್ರಾಣಿಗಳ ಕಾಟ ಜಾಸ್ತಿ. ಗದ್ದೆ ತೋಟಕ್ಕೆ ಕುರೆ, ಕಾಟಿ, ಕಾಡ್ ಹಂದಿಗಳ ಉಪದ್ರ ಜಾಸ್ತಿ. ಮತ್ತೆ ಕಾಡ್ ಪ್ರಾಣಿಗಳ ಬೇಟೆಗೆನೂ ಬೆಡಿ ಬೇಕಾದೆ. ಬೆಡಿ ತುಂಬಿಸಿಕೆ ಬೆಡಿ ಮೊದ್ದು ಬೇಕಾದೆ. ಬೆಡಿ ಮೊದ್ದಿಗೆ ರಂಜಕತ ಹೇಳುವೆ. ಮತ್ತೆ ಕರಿಮೊದ್ದು, ಕೇಪು ಬೇಕಾದೆ. ಕೇಪು ತೇಳಿರೆ ಸಣ್ಣ ಟೊಪ್ಪಿನ ಹಾಂಗೇ ಇರುವ ಒಂದು ಸಾಮಾನ್. ಅದ್ ಮೇಪುಳುನ ಕೊಡಿಗೆ ಸಿಕ್ಕಿಸುವ ಹಾಂಗೇ ಇದ್ದದೆ. ಕೇಪುನ ಟೊಪ್ಪಿನ ನಡುಲಿ ಸಣ್ಣ ದಾಸ್ಮೆನಷ್ಟೇ ಮೊದ್ದು–ಕಿಚ್ಚಿನ ಪೆಟ್ಟಿಗೆಲಿರುವ ಕಡ್ಡಿನ ಕಡೆಲಿರುವ ಮೊದ್ದು ಇದ್ದದೆ. ಮತ್ತೆ ಚಿಲ್ಲ್, ಗುಂಡು ಬೇಕಾದೆ. ಇದರ ಸೀಸಂದ ಮಾಡುವೆ. ಹಾಂಗೇ ಕಾಯಿ ಚೊಪ್ಪೊನ ನಾರ್ ತೇಳಿರೆ ಕಾಯಿ ಚೊಪ್ಪುಲಿರುವ ಹೂ ತೆಗ್ದರೆ ಸಿಕ್ಕುವ ನಾರ್ ಸ ಬೇಕಾದೆ.

ಸುರೂಗೆ ಅಂದಾಜ್ ಒಂದು ಚಂಚೆನಷ್ಟ್ ಕರಿಮೊದ್ದು ನಳಿಗೆನ ಒಳಗೆ ಹಾಕುವೆ. ಅದ್ ಮೇಪುಳುನ ಕೊಡಿಗೆ ಮುಟ್ಟ ಬರೋಕು. ಮತ್ತೆ ಹಞ ಕಾಯಿಚೊಪ್ಪುನ ಸಣ್ಣ ಅಡಿಕೆನಷ್ಟು ಉಂಡೆ ಮಾಡಿ ನಳಿಕೆನ ಒಳಗೆ ಹಾಕಿ ಗಜ ಕೋಲುಲಿ ಒಳಗೆ ನೂಕಿ ಜಡ್ದವೆ. ಇದಕ್ಕೆ ಪೊಂದುತ ಹೇಳ್‌ವೆ ಮತ್ತೆ ಹಞ ರಂಜಕ ಹಾಕಿ ಮತ್ತೆ ಚೊಪ್ಪು ಜಡ್ದವೆ. ಅದರ ಮೇಲೆ ಚಿಲ್ಲ್ ಹಾಕುವೆ. ದೊಡ್ಡ ಪ್ರಾಣಿಗಾದರೆ ಗುಂಡು ಬೇಕು. ಮತ್ತೆ ಚೊಪ್ಪು ಹಾಕಿ ಸರೀ ಜಡೆಕು. ಜಡ್ದಸ್ಟ್ ಒಳ್ಳೆದ್.

ಪ್ರಾಣಿಗಳಿಗೆ ಗುಂಡು ಹೊಡೆಕರ್ ಬೆಡಲಿ ಗುರಿ ಹಿಡೆಕು. ಬೆಡಿನ ಕಡೆ ತೇಳಿರೆ ಪಾತಿನರಟ್ಟೆ ಹಕ್ಕಲೆ ಇಸಿ ಒಂದು ಕೈನ ನೀಂಡಿ ಬೆಡಿ ಹಿಡೆಕು. ಕುದುರೆನ ಹಕ್ಕಲೆ ಕಣ್ಣ್ ಇಸಿ ನೊಣನ ನೋಡಿಕನ್ ಗುರಿ ಹಿಡೆದು. ಕಣ್ಣಿಗೆ ಕಿಡಿರಟ್ಟದ ಹಾಂಗೆ ಜಾಗ್ರತೆ ಮಾಡಿಕಾಂಕು. ಕೊತ್ತುನ ಎಳ್ದ್ ಗುರಿ ನೋಡಿ ಕಳ್ಳನ ಎಳೆಕು. ಆಗ ಕುದುರೆ ಕೇಪುನ ಮೇಲೆ ಬಿದ್ದದೆ. ಕೇಪುನ ಒಳಗೆ ಇರುವ ಮೊದ್ದು ಟಾಪ್ ಅಂತ ಹೊಡ್ದದೆ. ಆಗ ಅದರ್‌ಂದ ಕಿಡಿ ಬಂದ್ ಕರಿ ಮೊದ್ದಿಗೆ ತಾಂಗಿದೆ. ಅದ್ಕೆ ಕಿಚ್ಚಿ ಹಿಡ್ದ್ ಮುಂದೆ ಹೋಗಿ ರಂಜಕಕ್ಕೆ ತಾಂಗಿದೆ. ಅದರ್‌ಲಿ ಕಿಚ್ಚಿ ಹೊತ್ತಿದ ರಬಸಕ್ಕೆ ಚಿಲ್ಲ್ ಹೊರ್ಟ್ ಹೋದೆ. ಗುರಿ ಸರಿ ಇದ್ದರೆ ಆ ಚಿಲ್ಲ್ ಗುರಿ ಹಿಡ್ದದ್ಕೆ ತಾಂಗಿದೆ. ಅಬ್ಬೆಸ ಇಲ್ಲದವ್ಕೆ ಬೆಡಿ ಸಮ ಹಿಡ್ಕಂತ್ಲರೆ ಬೆಡಿ ಎದೆಗೆ ಮೆಟ್ಟುದು ಉಟ್ಟು.

ಹಿಂದೆನೊವು ಚಿಲ್ಲ್ ಗುಂಡು ಎಲ್ಲ ಮನೆಲೇ ಮಾಡ್ತಿದ್ದೊ. ಸೀಸನ ಕರ್‌ಗಿಸಿ ಸಪೂರದ ಕಬ್ಬಿಣದ ನಳಿಗೆ ಒಳಗೆ ಹಾಕಿ ಚಣಿಸುತ್ತಿದ್ದೊ. ಮತ್ತೆ ಸಣ್ಣ ಸಣ್ಣ ತುಂಡು ಮಾಡಿ ಕಡ್ಕಲ್‌ಲಿ ಕಡೆತಿದ್ದೊ. ಹಞ ಕಡೆಕನ ಅದ್ ಉರುಂಟು ಆತಿತ್. ಈಗ ಬೆಡಿನ ಮಾರುವ ಅಂಗಡಿಲಿ ಬೇರೆ ಬೇರೆ ಗಾತ್ರಲಿ ಸಿಕ್ಕಿದೆ.

ಈಣ ಕಾಡ್ ಪ್ರಾಣಿಗಳ ಬೇಟೆ ಮಾಡಿಕೆ ಬೊತ್ತುಂತ ಕಾನೂನು ಉಟ್ಟು. ಕೇಪುನ ಬೆಡಿಲಿ ಒಮ್ಮೆ ಗುಂಡು ಹೊಡ್ದರೆ ಮತ್ತೊಮ್ಮೆ ಹೊಡೆಕೆ ಹಞ ಹೊತ್ತಾದೆ, ತೇಳ್ರೆ ತುಂಬಿಸಿಕೆ ಹೊತ್ತಾದೆ. ತೋಟೆ ಬೆಡಿಲಿ ಬೇಗ ಬೇಗ ಹೊಡೆಕೆ ಆದೆ. ಹಿಂದೆನ ಕಾಲಲಿ ಕೇಪುನ ಬೆಡಿ ಜಾಸ್ತಿ ಇತ್ತ್. ಕೇಪುನ ಬೆಡಿಲಿ ಎರಡ್ ನಳಿಕೆ ಇರುವ ಬೆಡಿ ಸ ಇದ್ದದೆ. ಅದರ ಜೋಡು ನಳಿಗೆ ಬೆಡಿಂತ ಹೇಳುವೆ. ಅದರ್ಲೇ ಹುಲಿ ಹೊಡ್ದೊವು ಸ ಇದ್ದೊ. ಹಿಂದೆ ದಂಡ್‌ನವರ ಹಕ್ಕಲೆ ಕೇಪುನ ಬೆಡಿಯೇ ಇದ್ದದ್. ಕೇಪುನ ಬೆಡಿನ ಕೆಲವು ಆಚಾರಿಗಳೂ ಮಾಡುವೆ. ಆದರೆ ಅದ್ಕೆ ಲೈಸನ್ಸ್ ಸಿಕ್ಕುದುಲ್ಲೆ. ಅದರ ಕಳ್ಳಬೆಡಿತ ಹೇಳುವೆ. **(ಎಂ.ಜಿ.ಕೆ.)**





ಗೋರಿ

ಮೀನ್ ಹಿಡೆಕೆ ಆವ ಒಂದು ಸೊತ್ತು. ಇದರ್‌ಲಿ ಹಳ್ಳಲಿ ಮೀನ್‌ನ ಗೋರಿಕೆ ಆದೆ – ಹಾಂಗಾಗಿ ಇದ್ಕೆ ಗೋರಿಂತ ಹೆಸ್ರ್ ಬಂದಿರ್ದು. ತುಳುಲಿ ಗೋರಿತಲೇ ಹೇಳುವೆ. ಮಲೆಯಾಳಂಲಿ ಕೋರಿತ ಹೇಳುವೆ. ಇದ್ ಬೆತ್ತಂದ ಮಾಡ್ದ್. ಬೆತ್ತದ ಬಾಸ್‌ನ ಸಪೂರಕ್ಕೆ ಕೀಸಿ ಪೊರ್ಲುಗ್ ಮಾಡಿ ಮತ್ತೆ ಮುಡೆಕು. ಇದರ ಅಜಲರ್, ಕೊರಗರ್ ಮಾಡುವೆ.

ಹಳ್ಳಕ್ಕೆ ಕಡು ಹಾಕಿರೆ ಅದರ ಕಾರಕ್ಕೆ ಮೀನ್‌ಗ ಮೇಲೆ ಮೇಲೆ ಬಂದವೆ. ಆಗ ಈ ಗೋರಿಲಿ ಮೀನ್‌ನ ಗೋಂಚಿಕೆ ಆದೆ. ಗದ್ದೆಲಿ ಸ ಮೀನ್ ಗೋಂಚಿಕೆ ಆದೆ. ಬೆದ್ರ್‌ನ ಬಾಸ್‌ಂದಲೂ ಇದರ ಮಾಡಿಕಾದೆ. **(ಎಂ.ಜಿ.ಕೆ.)**

ಬಿಲ್ಲ್

ಹಳ್ಳಿ ಜೆನಗ ಹಕ್ಕಿಗಳ ಹೊಡೆಕೆ ಬೆದ್ರ್‌ಲಿ ಮಾಡ್ದ ಒಂದು ಆಯುದ ಬಿಲ್ಲ್. ಇದ್ ಸುಳ್ಯ ತಾಲೂಕುನ ಹೆಚ್ಚಿನ ಹಳ್ಳಿಗಳ್‌ಲಿ ಕಂಡ್ ಬಂದದೆ. ಇದಲ್ಲಿ ಹೆಚ್ಚಿನ ಎಲ್ಲಾ ತರದ ಹಕ್ಕಿಗಳ ಬೇಟೆ ಆಡಿಕೆ ಆದೆ. ಇದರ ಬೇಟೆ ಆಡಿಕೆ ಹೋವನೇ ತಯಾರ್ ಮಾಡ್ದೆ. ಹಂಗೆ ತೇಲ್ರೆ ಎಲ್ಲೊವುಕೂ ಇದರ ಮಾಡುವ ಹಿಕ್‌ಮತ್ ಗೊತ್ತಿಲ್ಲೆ. ಹಂಗೆನೇ ಇದರ ಮಾಡಿಕೆ ಸುಮಾರ್ ಕೆಲ್ಸ ಉಟ್ಟು. ಒಳ್ಳ ಬೆಳ್ದ ಬೆದರ್‌ನ ನಾಲ್ಕ್ ಬಾಗಮಾಡಿ ಅದರ್ಲಿ ಒಂದು ತಟ್ಟೆನ ಸುಮಾರು 4 ರಿಂದ 5 ಅಡಿಕೋಲ್ ಉದ್ದದಷ್ಟು ತುಂಡು ಮಾಡೊಕು. ಹಂಗೆ ತುಂಡು ಮಾಡ್‌ಕನ ಅದರ ಎರಡೂ ಕಡೆಲೂ ಬೆದ್ರ್‌ನ ಗಂಟ್ ಸಿಕ್ಕುವಂಗೆ ನೋಡೊಕು. ಈ ಬಾಗ ಮಾಡ್ದ ಬೆದ್ರ್‌ನ ತಟ್ಟೆನ ಎರ್ಡ್ ಕೊಡಿಗಳ್‌ಲಿ ಗಂಟ್‌ಗಳ ಕೆಳಗೆ ಬೊಳ್ಳಿ ಕಟ್ಟಿಕೆ ಚಡಿ ಮಾಡೊಕು. ಬೆದ್ರ್ ತಟ್ಟೆನ ಲಾಯ್ಕ್ ಕೀಸಿ, ನೆಡೂಲಿ ಅಗಲ ಮತ್ತೆ ಎರ್ಡ್ ಕಡೆಲೂ ಸಪೂರ ಇರ್‌ವಂಗೆ ಕೀಸೊಕು. ಆಮೇಲೆ ಗೋಳಿ ಮರದ ಬೀಣೆನ ಬೊಳ್ಳಿ ಮಾಡಿಕಂಕು. ಅದರ ಲಾಯ್ಕ್ ಹುರಿಮಾಡಿ ಎರ್ಡ್ ಕಡೆಲೂ ಬೆದ್ರ್‌ನ ಚಡಿಲಿ ಸಿಕ್ಕುವಂಗೆ ಮಾಡಿ, ಬೆದ್ರ್ ತಟ್ಟೆನ ಬೆನ್ನ್ ಬಾಗ ಒಳಗೆ ಬಾವಂಗೆ ಬೊಗ್ಗ್‌ಸಿ ಬೊಳ್ಳಿನ ಎರ್ಡ್ ಕೊಡಿಗಳ ಜೋಡ್ಸಿ ಕಟ್ಟೊಕು.ಅಮೇಲೆ ಬೊಳ್ಳಿನ ಎರಡು ಕಡೆಗೂ ಸೇರ್‌ವಂಗೆ ನೆಡು ಬಾಗಲಿ ಒಂದು ಪಟ್ಟೆನ ನೆಯ್ಯೆಕು, ಅದ್ ಸುಮಾರ್ 1 ಇಂಚ್ ಅಗಲ 2 ಇಂಚ್ ಉದ್ದ ಇದ್ದದೆ. ಅದರ ಬೆದ್ರ್ ತಟ್ಟೆನ ನೆಡೂ ಸಮಕ್ಕೆ ಬಾವಂಗೆ ಅಡ್ಡ ಆಗಿ ಕಟ್ಟೊಕು. ಪಟ್ಟೆಲಿ ಕಲ್ಲ್‌ನ ಸಿಕ್ಕಿಸಿ ಹೊಡೆಕೆ ಎರಡ್ ಬೊಳ್ಳಿಗಳ ನೆಡುಲಿ ಒಂದು ಕಡ್ಡಿನ ಬೊಳ್ಳಿ ಕಟ್ಟಿ ಇಸೊಕು. ಅದ್ಕೆ ಪಂತ್‌ಕಡ್ಡಿ ಅಂತ ಹೇಳುವೆ. **(ಪು.ಕೆ.ವಿ.)**





ವಯರ್ ಲೈಟ್‌ನ ಪೆಟ್ಟಿಗೆ

ವಯರ್ ಲೈಟ್ ರಾತ್ರಿ ಬೇಟೆಗೆ ಹೋಗೊವ್ಕೆ ಅಗತ್ಯ ಬೇಕಾದ ಒಂದು ಸೊತ್ತು. ಅದ್ಕೆ ಶಕ್ತಿ ಹೋಕರ್ ಬೇಟ್ರಿ ಇಸುವ ಪೆಟ್ಟಿಗೆ ಬೇಕು. ಇದ್ ಅಂತಾ ಒಂದು ಪೆಟ್ಟಿಗೆ. ಈ ಪೆಟ್ಟಿಗೆಂದ ಬೇಟ್ರಿನ ಪವರ್ ವಯರ್‌ಲಿ ಹೋವ ಕಾರಣ ಇದ್ಕೆ ವಯರ್ ಲೈಟ್‌ನ ಪೆಟ್ಟಿಗೆಂತ ಹೇಳುವೆ. ಇದ್ ದಕ್ಷಿಣ ಕನ್ನಡ ಮತ್ತೆ ಕೊಡಗ್ ಜಿಲ್ಲೆಲಿ ಇರುವಂತದ್ದ್.

ಮರಂದ ಪೆಟ್ಟಿಗೆ ಮಾಡುವೆ. ಅದರ್‌ಲಿ ನಾಲ್ಕ್ ಬೆಟ್ರಿ, ಆರ್ ಬೆಟ್ರಿ ಇಸಿಕೆ ಆವ ಪೆಟ್ಟಿಗೆ ಇದ್ದದೆ. ಅದರ ಒಳಗೆ ವಯರ್ ಜೋಡ್ಸೊಕು. ಮತ್ತೆ ಸುಚ್ಚಿ ಇಸೊಕು. ಅದರ ಒಳಗೆ ವಯರ್ ಜೋಡ್ಸುವ ಕೆಲ್ಸನ ಗೊತ್ತಿದ್ದ ಯಾರೂ ಮಾಡಕ್. ಬೇಟ್ರಿ ಇಸಿ ಸುಚ್ಚಿ ಹಾಕಿರೆ ಅದರ ಪವರ್ ವಯರ್‌ಲಿ ತಲೆಗೆ ಕಟ್ಟಿದ ಟೋರ್ಚ್ ಲೈಟ್‌ನ ತಲೆಗೆ ಹೋದೆ. ಈ ಪೆಟ್ಟಿಗೆನ ಮರದ ಆಚಾರಿಗ ಮಾಡುವೆ. ವಯರ್ ಸುಚ್ಚಿ ಜೋಡ್ಸುವ ಕೆಲ್ಸ ಗೊತ್ತಿದ್ದೊವು ಯಾರ್ ಸ ಮಾಡಕ್. ಪೆಟ್ಟಿಗೆನ ಹೆಗ್ಲಿಗೆ ಕೋಸಿ ಕಂಡವೆ. ಲೈಟ್‌ನ ತಲೆಗೆ ಕಟ್ಟಿ ರಾತ್ರಿ ಬೇಟೆಗೆ ಹೋಗೊವು ಪ್ರಾಣಿಗಳಿಗೆ ಬೊಳ್ಪು ಕಾಂಬಕನ ಅದರ ಕಡೆಗೆ ನೋಡುವೆ. ಆಗ ಅದರ ಕಣ್ಣ್ ಹೊಳ್ದದೆ. ಇದ್ಕೆ ಕಣ್ಣ್ ಕೊಡ್ದುತ ಹೇಳುವೆ. ಆ ಕಣ್ಣಿಗೆ ಗುರಿ ಹಿಡ್ದ್ ಗುಂಡು ಹೊಡ್ದವೆ. ಮೂಲಲಿ ಉದ್ದದ ಟೋರ್ಚ್ ಲೈಟ್ ತಲೆಗೆ ಕಟ್ಟಿಕಾಂತಿದ್ದೊ. ಅದರ ಪ್ರಕಾಶ ಕಡಿಮೆ ಆದೆಂತ ಇಂತಾ ವ್ಯವಸ್ತೆ ಮಾಡ್ತಿದ್ದ. **(ಎಂ.ಜಿ.ಕೆ.)**

ಮೀನ್ ಹುಡ್ಕೆ

ಮೀನ್ ತುಂಬುಸುವ ಕುಕ್ಕೆಗೆ ಮೀನ್ ಹುಡ್ಕೆಂತ ಹೇಳ್‌ವೆ. ಗಾಳ ಹಾಕಿ, ಬಲೆ ಬೀಸಿ ಅಲ್ಲರ್ ಕೂಳಿ ಇಸಿ ಹಿಡ್ದ ಮೀನ್‌ಗಳ ತುಂಬುಸುವ ಕುಕ್ಕೆ. ತುಳುಲಿ ಮೀನ್‌ಕುರ್ವೆ, ಮಲೆಯಾಳಂಲಿ ಮೀನ್ವಟ್ಟಿ, ಬ್ಯಾರಿ ಬಾಸೆಲಿ ಮೀನ್ ಕುರಿಯತ ಹೇಳ್‌ವೆ. ಇದ್ ಹೆಚ್ಚ್ ಕಮ್ಮಿ ಹಳ್ಳ, ಚೋಡಿ, ಗದ್ದೆ, ಕೆರೆ ಇರುವ ಕಡೆ ಇದ್ದದೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್, ಸಕ್ಲೇಶ್ಪುರ ಕಡೆಲೆಲ್ಲ ಮೀನ್ ಹಿಡೆವುಕೆಲ್ಲ ಬೇಕಾದೆ.

ಈ ಕುಕ್ಕೆನ ಹೆಚ್ಚಾಗಿ ಬೆತ್ತದ ಬೊಳ್ಳಿಂದಲೇ ಮಾಡ್ದು. ಮಾದ್ರಿ ಬೊಳ್ಳಿ, ಇಂಜೆರ್ ಬೊಳ್ಳಿಂದಲೂ ಮಾಡಿಕಾದೆ. ಇದರ ಕೊರಗರ್, ಮಾಯಿಲರ್, ಅಜಲರ್ ಎಲ್ಲ ಮಾಡ್ತಿದ್ದೊ. ಅವು ಅಲ್ಲದೆ ಬೇರೆ ಜಾತಿಯವೂ ಸ ಮಾಡ್ತಿದ್ದೊ.

ಮೀನ್ ಹಿಡಿಯಕೆ ಹೋಕನ ಇದರ ಸೊಂಟಕ್ಕೆ ಕಟ್ಟಿ ಕಾಂತಿದ್ದೊ. ಮೀನ್ ಸಿಕ್ಕಿದ ಹಾಂಗೇ ಅದರ ಈ ಕುಕ್ಕೆಗೆ ಹಾಕ್ತಿದ್ದೊ. ಇದರ್‌ಲಿ ಹಾಕಿರೆ ಅದ್ ಹಾರಿ ಮೇಲೆ ಹೋಕೆ ಆದುಲೆ. ಯಾಕೆಂತೇಳಿರೆ ಈ ಕುಕ್ಕೆನ ಕುತ್ತಿಗೆ ಸಪೂರ ಉಟ್ಟು.

ಮೀನ್ ಬೇಟೆ ಸುರಾಕನೇ ಈ ಕುಕ್ಕೆ ಮಾಡಿಕೆ ಸುರು ಮಾಡಿರುವೊ. ತೇಳಿರೆ ನಮ್ಮ ಹಿಂದೆನವು ಬೇಸಾಯ ಕೆಲ್ಸ ಸುರು ಮಾಡಿಕನೇ ಇದರ ಉಪಯೋಗ ಬಂದಿರ್ದು. ಇದರ್‌ಲಿ ಹಳ ಎತ್ತರಲಿ ಹೆಚ್ಚಿಕಮ್ಮಿ ಮತ್ತೆ ಗಾತ್ರಲಿ ಸಣ್ಣದ್. ದೊಡ್ಡದ್ ಇರ್ದು. **(ಎಂ.ಜಿ.ಕೆ.)**



ಮಿಂಟಿ

ಮಿಂಟಿ ಒಂದು ಮೀನ್ ಹಿಡೆವ ಕಬ್ಬಿಣದ ಸೊತ್ತ್. ಇದರ ಕಬ್ಬಿಣದ ಆಚಾರಿಗ ಮಾಡಿ ಕೊಟ್ಟವೆ. ಇದ್ ನೋಡಿಕೆ ಬರ್ಜಿನಂಗೆ ಇದ್ದ್‌ದ್, ಇದರ್ಲಿ ನಾಲ್ಕ್ ಇಲ್ಲರ್ 5 ದೂಂಚಿ ಇರುವ ಉದ್ದದ ಹಲ್ಲ್‌ಗ ಇದ್ದವೆ. ಈ ಮಿಂಟಿ ಸುಮಾರ್ ಒಂದ್ ಅಡಿಕೋಲ್‌ನಷ್ಟ್ ಉದ್ದ ಇದ್ದ್, ದೂಂಚಿ ಇರುವ ಹಲ್ಲ್‌ಗಳ ಮೇಲೆ ಪುಡೆನ ಕಬ್ಬಿಣದ ತುಂಡುನ ಒಳಗೆ ಗೋಳೆ ಇದ್ದದೆ. ಅದ್ಕೆ 4–5 ಅಡಿನಷ್ಟ್ ಉದ್ದದ ಬಾರದ ಮರದ ಕೋಲ್‌ನ ಒಳೆಗೆ ನುಗ್ಗುಸಿ ಹಿಡ್ಕಂಕೆ ಬೇಕಾದಷ್ಟು ಉದ್ದ ಮಾಡಿಕಂದವೆ. ಮಿಂಟಿಗೆ ಬೆದ್ರ್ ಇಲ್ಲರ್ ಪ್ಲಾಸ್ಟಿಕ್ ನ ಕೋಲು ಹಾಕಿರೆ ನೀರ್‌ನ ಒಳಗೆ ತಕಂಡ್ ಹೋಕೆ ಆದುಲೆ. ಕಬ್ಬಿಣದ ಕೋಲು ಹಾಕಿರೆ ಬಾರ ಜಾಸ್ತಿ ಆದೆ. ಅದ್ಕೆ ಮರದ ಕೋಲ್ನ ಸಿಕ್ಕುಸುದು.

ಹಳ್ಳಿಯವುಕೆ ರಾತ್ರೆ ಸೂಟೆ ಮೀನಿಗೆ ಹೋಗುವ ಅಬ್ಬೆಸ ಉಟ್ಟು. ಚಿಮ್ನೆಣ್ಣೆ ದೊಂದಿ ಇಲ್ಲರ್ ಕಮ್ಮುನ ತಟ್ಟೆನ ಸೂಟೆ ಮಾಡಿ ಹಳ್ಳಕೆ ಮೀನ್ ಕೆಡೆಕೆ ಹೋದರ 'ಸೂಟೆ ಮೀನಿಗೆ ಹೋದು' ತೇಳಿ ಕರ್ದವೆ. ರಾತ್ರಿ ಹಳ್ಳಿಲಿ ಮೀನ್‌ಗ ನಿದ್ದೆಮಾಡುವೆ. ಸೂಟೆ ಬೆಳ್ಕ್ ಲಿ ಮೀನ್‌ಗಳ ಕತ್ತಿಲಿ ಕಡೆಕೆ ದೊಡ್ಡ ಗುಂಡಿಗಳ್‌ಲಿ ಆದುಲೆ. ಸಣ್ಣ ಚೆರಿಗ ಮತ್ತೆ ಹಳ್ಳಗಳ್ ಲಿ ನೀರ್ ಕಮ್ಮಿ ಇದ್ದದೆ. ಅಲ್ಲಿ ಮಾತ್ರ ಮೀನ್ ಕೆಡೆಕೆ ಆದೆ. ಮೂಡು, ನೊಳಿ, ಬಾಳೆ, ಕಲ್ಲ್‌ಮುಳ್ಳ, ಎಸ್‌ಂಡ್ ತರದ ಮೀನ್‌ಗ ನೀರ್‌ನ 3–4 ಅಡಿ ಗುಂಡಿಲಿ ಇದ್ದರೆ, ಅಲ್ಲಿಗೆ ಕತ್ತಿ ತಕ್‌ಂಡ್ ಹೋಕನ ಓಡಿ ಹೋದವೆ. ಅದ್ಕೆ ಮಿಂಟಿನ ಮೆಲ್ಲ ಮೇಲೆಂದ ತಕಂಡ್ ಹೋಗಿ, ಮೀನ್‌ಗ ನಿತ್ತ್‌ಕಂಡ್ ಇರ್ವಲ್ಲಿಗೆ ಒಮ್ಮೆಗೆ ಹೆಟ್ಟೂಕು. ಆಗ ಮೀನ್ ಮಿಂಟಿನ ದೂಂಚಿ ಹಲ್ಲ್ ಲಿ ಇಲ್ಲರ್ ಹಲ್ಲ್‌ಗಳ ನೆಡುಲಿ ಸಿಕ್ಕಿಕಂದೆ, ಮತ್ತೆ ಕೈಲಿ ಹಿಡ್ದ್ ಮೀನ್ ಕುಕ್ಕೆಗೆ ಹಾಕುದು. ಕೆಲವು ಮಿಂಟಿಗಳ್‌ಲಿ ಗಾಳಲಿ ಇರ್ವಂಗೆ ಚೂರು ಹಿಂದೆ ಬೊಗ್ಗ್‌ಸಿದ ಸಣ್ಣ ಕೊಕ್ಕೆಗ ಇದ್ದವೆ. ಅದ್ ತುಂಬಾ ದೂಂಚಿ ಇದ್ದದೆ. ಅದ್ಕೆ ಮೀನ್‌ಗ ಸಿಕ್ಕಿ ಹಾಕಂದವೆ. ಅಂತ ಮಿಂಟಿಗ ಇದ್ದರೆ ತುಂಬ ನೀರ್ ಇರ್ವ ಗುಂಡಿಲಿ ಮಿಂಟಿ ಹಾಕಿ ಸಿಕ್ಕಿದ ಮೀನ್‌ನ ನೀರಿನ ಅಡಿಗೆ ಹೋಗಿ ಕೈಲಿ ಹಿಡೆಕುಂತ ಇಲ್ಲೆ. ಮಿಂಟಿನ ಮೇಲೆ ಎತ್ತ್‌ಕನ ಅದರೊಟ್ಟಿಗೆ ಮೀನ್ ಕೊಕ್ಕೆಲಿ ಸಿಕ್ಕಿಕಂಡ್ ಬಂದದೆ.

ಈಗೀಗ ಜೆನಗ ಬಲೆ ಮತ್ತೆ ಮೈಲುತುತ್ತು ಹಾಕಿ ಮೀನ್ ಹಿಡೆವ ಕಾರಣ ಸೂಟೆ ಮೀನಿಗೆ ಹೋದು ಕಮ್ಮಿ ಆವುಟು. ಕೋಲಿಗೆ ಬ್ಯಾಟ್ರಿ ಕರೆಂಟ್ ಕೊಟ್ಟು ಮೀನ್ ಹಿಡೆದೂ ಸಹ ಸುರುಮಾಡೆಳೊ, ಆದರೆ ಅದ್ ಅಪಾಯ. **(ಪು.ಕೆ.ಎ)**

ಮೊದ್ದುನ ಸಲಕರಣೆಗ



ಗೊಟ್ಟ

ದನ ಕರ್‌ಗಳಿಗೆ, ಎಮ್ಮೆ, ಕೋಣ, ಕುರಿ, ಆಡ್ ಇಂತವ್ಕೆಲ್ಲಾ ಮದ್ದ್ ಕುಡ್ಸಿಕೆ ವಾಟೆಂದ ಮಾಡ್ದ ಸೊತ್ತು. ತುಳುಲಿ ಗೊಟ್ಟೊ, ಮಲೆಯಾಳಂಲಿ ಮುಳೆಯುಡೆ ನಾಳಂ ಅಂತ ಹೇಳುವೆ.

ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಹಾಂಗೇ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ. ಇದರ ಸಪೂರದ ಬೆದ್ರ್ ಅಲ್ಲರ್ ಅಮೆ ಓಟೆಲಿ ಮಾಡಿಕೆ ಆದೆ. ಒಂದು ಕಡೆಲಿ ಗಂಟ್ ಇದ್ದದೆ. ಇನ್ನೊಂದು ಕಡೆಲಿ ಚಾರೆ ಕೊಯ್ದ್ ತುಂಡು ಮಾಡುವೆ. ಹೆಚ್ಚ್ ತೋರ ಇರಿಕೆ ಬೊತ್ತು. ದನ ಕರ್‌ಗಳ ಬಾಯಿಗೆ ಹೋವಷ್ಟ್ ತೋರ ಇದ್ದರೆ ಸಾಕ್. ಆರ್ ಏಳ್ ಅಂಗುಲಂದ ಎರಡ್ ಗೇಣ್‌ನಷ್ಟು ಉದ್ದ ಇದ್ದದೆ. ಗೊಟ್ಟನ ಯಾರೂ ಸಹ ಮಾಡಕ್.

ಬೆಸಾಯದ ಒಟ್ಟೊಟ್ಟಿಗೆ ಜಾನುವಾರು ಸಾಕಣೆ ಸುರು ಆತ್. ಆಗಂದಲೇ ದನ ಕರ್‌ಗಳಿಗೆ ಕಾಯಿಲೆ ಕಸಲೆ ಬಾಕನ ಹಳ್ಳಿಲಿ ಮೊದ್ದು ಅರ್ದ್ ಕುಡ್ಸುವ ಕ್ರಮ ಸುರು ಆತ್. ಮೊದ್ದುನ ಗೊಟ್ಟದ ಒಳಗೆ ಸುರ್ದ್ ದನದ ಬಾಯಿಗೆ ಹಾಕಿ ಕುಡ್ಸ್‌ತ್ತಿದ್ದೊ.

ದನಗಳಿಗೆ ಏನಾರ್ ಹೆಚ್ಚ್‌ಕಮ್ಮಿ ಆದರೆ ಅದ್ಕೆ ಮೊದ್ದು ಆಗನ ಜನಗಳಿಗೆ ಗೊತ್ತಿತ್ತ್. ಅಲ್ಲರ್ ಗೊತ್ತಿದ್ದೊವು ಊರ್‌ಲಿ ಯಾರಾರ್ ಇರ್ತಿದ್ದೊ. ಬೇರೆ ಬೇರೆ ಕಾಯಿಲೆಗೆ ಬೇರೆ ಬೇರೆ ಸೊಪ್ಪುನ ಅರ್ದ್ ದನಗಳಿಗೆ ಕೊಡ್ತಿದ್ದೊ. ಕಪ್ಪೆ, ಕಟ್ರೆ ಮೊನಿ ಆದರೆ ಗಾಂದಾರಿ ಮೆಣ್ಸ್ ಯಾವುದೋ ಸೊಪ್ಪುನ ಸೇರ್‌ಸಿ ಅರ್ದ್ ರಸ ತೆಗೆತಿದ್ದೊ. ಅಲ್ಲರ್ ಗೇರ್ದ್ ಹಣ್ಣಿನ ಸರಾಯ ಕುಡ್ಸುವೆ.

ಕಾವೇರಿ ಸಂಕ್ರಮಣದಂದ್ ತಲಕಾವೇರಿ ಬ್ರಹ್ಮಕುಂಡಿಕೆಲಿ ಬರ್‌ವ ತೀರ್ತನ ಸನ ಉದ್ದದ ಗೊಟ್ಟಲಿ ತುಂಬಿ ಮನೆಗೆ ತಕಂಡ್ ಹೋದವೆ. ಅದರ ಕುಡ್ದ ಬಾಕಿದ್ದ ತೀರ್ತನ ಗೊಟ್ಟಲೇ ಇಸಿದ್ದವೆ. ಮನೆಗೆ ಬಂದವ್ಕೆಲ್ಲಾ ಹಂಗೆ ಕೊಡ್ದು ಕೊಡಗ್‌ನ ಪದ್ದತಿ.

ಮೊದುವೆ ದಿನ ಒಂದಿಷ್ಟ್ ಅಕ್ಕಿ, ಒಳ್ಳಮೆಣ್ಸ್ ಕಾಳ್ ಹಾಕಿ ಎರಡ್ ಗೊಟ್ಟಗಳ ಅಟ್ಟಲಿಸುವ ಸಾಸ್ತ್ರ ಉಟ್ಟು. ಇನ್ನ್ ಬೆದ್ರ್ ಗೊಟ್ಟ ಅಗಾಲ ಬಾಯಿದ್. ಕೆಲವು ಅದರ ಎಲೆ, ಅಡಿಕೆ ಹೊಸೆಪು ಹಾಕಿ ಇಸಿಕಂಬಕೆ ಉಪಯೋಗಿಸುವೆ. ಮಕ್ಕ ಚಿಟ್ಟಿ ಗೋಲಿಗಳ ತುಂಬಿ ಕಂಬಕೆ ಗೊಟ್ಟನ ಉಪಯೋಗ್‌ಸ್ತಿದ್ದೊ.

ಬೆದ್ರ್ ಗೊಟ್ಟನ ಬೆದ್ರ್ ಗುತ್ತಿತ ಸನ ಕರ್ದವೆ. ಹುತ್ರಿ ಹಬ್ಬಲಿ 'ಗುತ್ತಿ ತುಂಬುದು' ಒಂದು ಸಾಸ್ತ್ರ ಉಟ್ಟು. ಸಾಸ್ತ್ರೋಕ್ತವಾಗಿ ಆ ಗುತ್ತಿನ ಮನೆ ಯಜಮಾನ ಹೆಗ್ಲ್ ಮೇಲೆ ಗೌರವಂದ ಇಸಿವೆ. ಗದ್ದೆಗೆ ಹೋಗಿ ಕದ್ರ್ ತೆಗೆವಲ್ಲಿ ಅದರ ಇಳ್ಸಿ ಕದ್ರ್ ಕೊಯ್ದ್ ಸಾಸ್ತ್ರೋಕ್ತ ಆಗಿ ಕದ್ರ್‌ನ ಗುತ್ತಿಗೆ ತುಂಬಿ ಮತ್ತೆ ಹೆಗ್ಲ್ ಮೇಲೆ ಹೊತ್ತ್‌ಕಂಡ್ 'ಪೊಲಿ ಪೊಲಿ ಪೊಲಿದೇವಾ'ತ ಹೇಳ್ಕಂಡ್ ಮನೆ ಹತ್ತ್‌ವ ಕ್ರಮ ಉಟ್ಟು. **(ಬಾ.ಜೋ., ಎಂ.ಜಿ.ಕೆ.)**



ಮೊದ್ದು ಅರೆವ ಮರದ ಪಾತ್ರೆ

ಮೊದ್ದು ಅರೆಕಾವ ಮರದ ಪಾತ್ರೆ. ತುಳುಲಿ ಇದರ ಮರ್ದ್ ಅರೆಪುನ ಪಾತ್ರೆತ ಮಲೆಯಾಳಂಲಿ ಮರನ್ನ್ ಅರಕ್ಕ್‌ನ ಪಾತ್ರಂತ ಹೇಳುವೆ. ದಕ್ಷಿಣ ಕನ್ನಡ ಮತ್ತೆ ಕೊಡಗು ಜಿಲ್ಲೆ ಹಾಂಗೇ ಸಕಲೇಶ್ಪುರ ಕಡೆಲಿ ಮಕ್ಕಳಿಗೆ ಮೊದ್ದು ಅರ್ದ್ ಕೊಟ್ಟವೆ.

ಇದ್ ಮರಂದ ಮಾಡ್ದ ಸೊತ್ತ್. ಮರನ ಹಲಗೆನ ಉರುಂಟು ಇಲ್ಲರೆ ಚೌಕ ಕೊಯ್ದ್ ಹಞ ಗುಂಡಿ ಮಾಡಿಕಾಂಕು. ಅದ್ಕೆ ಹಿಡ್ಕಂಕೆ ಕೈ ಸ ಇದ್ದದೆ. ಸಣ್ಣ ಗುಂಡು ಕಲ್ಲ್‌ನ ಹಾಂಗೇ ಮರಂದಲೇ ಮಾಡ್ದ ಒಂದು ಹತ್ಯಾರ್ ಮೊದ್ದು ಅರೆಕೆ ಬೇಕಾದೆ. ಇದರ ಮರದ ಆಚಾರಿಗ ಮಾಡುವೆ. ಮೊದ್ದು ಅರೆಕೆ ಕಲ್ಲ್ ಸ ಇದ್ದದೆ. ಅದರ ಕಲ್ಲ್ ಕುಟ್ಟಿ ಜೆನಂಗ ಮಾಡುವೆ.

ಮಕ್ಕಳಿಗೆ ಮಾತ್ರ ಅಲ್ಲದೆ ದೊಡ್ಡೊವುಕು ಹುಸಾರಿಲ್ಲದ ಹಾಂಗೇ ಆದುಟ್ಟು. ಆಗ ಗೊತ್ತಿರುವವು ಯಾವುದಾರ್ ಸೊಪ್ಪು, ಕಾಯಿ, ಬೇರ್ ತಂದ್ ಇದರ್‌ಲಿ ಅರ್ದ್ ಮೊದ್ದು ಮಾಡುವೆ. ಅದರ ಅರ್ಪಿ ಕುಡೆಕೆ ಕೊಟ್ಟವೆ. ಮತ್ತೆ ಕೆಲವು ಹುಣ್ಣುಗಳಿಗೆ ಅಲ್ಲರ್ ಬಿದ್ದ್ ಪೆಟ್ಟಾಗಿ ಬಾಪಿದಲ್ಲಿಗೆ ಲೇಪ ಹಾಕುವೆ. ಸಣ್ಣ ಮಕ್ಕಳಿಗೆ ಹುಗ್ಗೆ ಮತ್ತೆ ಹಾಲ್ ಬೆರ್‌ಸಿ ಇದರ್‌ಲಿ ಅರ್ದ್ ಹಞ ಬೆಲ್ಲ ಉಪ್ಪು ಸೇರ್ಸಿ ಮಕ್ಕಳಿಗೆ ತಿನ್ಸುವೆ. **(ಎಂ.ಜಿ.ಕೆ.)**

ಮೊದ್ದುನೆಣ್ಣೆ ಹಾಕಿಸುವ ಕೊಂಬು

ಮೊದ್ದುನೆಣ್ಣೆ ಹಾಕಿಸುವ ಕೊಂಬು – ದಕ್ಷಿಣ ಕನ್ನಡ ಜಿಲ್ಲೆನ ಕೆಲವು ಮನೆಲಿ ಉಟ್ಟು. ಇದ್ ಕಾಟಿದ್ ಕೊಂಬು. ಇದ್ಕೆ ಎರಡೂ ಕೊಡಿಲಿ ಹಿತ್ತಾಳೆಂದ ಮಾಡ್ದ ಪೊರ್ಲ್‌ನ ಕಟ್ಟ ಉಟ್ಟು. ಈ ಹಿತ್ತಾಳೆ ಕಟ್ಟಕ್ಕೆ ಸಂಕಲೆ ಸಿಕ್ಕಿಸಿ ನೇತಾಡುಸುವ ಹಾಂಗೆ ಮಾಡುವೆ. ಇದರ ಒಂದು ಕೊಡಿಲಿ ಸಣ್ಣ ಒಟ್ಟೆ ಇದ್ದ್ ಅದರ್‌ಲಿ ಎಣ್ಣೆನ ಹೊಯ್ಯುದು ಮತ್ತೆ ಅದರ್‌ಲೇ ತೆಗೆದು. ಮೊದ್ದುನ ಎಣ್ಣೆ ಕಾಸಿದ್ ಇದರ್‌ಲಿ ತುಂಬಿಸಿ ಎತ್ತರಲಿ ನೇಲ್‌ಸಿ ಇಸುವೆ. ಬಿದ್ದ್ ಗುದ್ದಿದ ಹಾಂಗೆ ಆದಲ್ಲಿಗೆ, ಬೀಳಿಕನ ಅಲ್ಲರ್ ಕತ್ತಿದ್ ಗಡಿ ಆಕನ ಈ ಎಣ್ಣೆನ ಮುಟ್ಟಿಸಿರೆ ಬಾರಿ ಬೇಗ ಗುಣ ಆದೆ ಗಡ. **(ಎಂ.ಜಿ.ಕೆ)**

ಹಳೆ ಇತರ ಸೊತ್ತುಗ



ಕಳಿ

ಸುಮಾರ್ ಎರಡೂವರೆ ಅಡಿ ಉದ್ದ ನಾಕ್ ಇಂಚ್ ದಪ್ಪದ ಎರಡ್ ಗಟ್ಟಿ ಮರದ ಉರುಂಟು ರೋಲ್ ನಂಗಿರ್‌ವ ಮರದ ಕೋಲುಗ ಬೇಕ್. ಇದರ ಒಂದು ತಲೆಲಿ ಎರಡ್ ಕೋಲ್‌ಗಳ ಗಟ್ಟಿ ಹುರಿ ಬೊಳ್ಳಿ ಇಲ್ಲಾರ್ ಸಲಿಗೆಲಿ ಜೋಡ್ಸಿ ಕಟ್ಟ್‌ವೆ. ಕಳಿನ ಬೀಜದ ಹೋರಿಗಳ ತರ್ಡ್‌ನ ಒಡ್ದ್ ನೀರ್ ಮಾಡಿಕೆ ಬಳಸ್‌ವೆ. ಹೋರಿ ಕೋಣಂಗಳಿಗೆ ಎರಡ್ ಪರು/ಹಲ್ಲ್ ಬಾಕೆ ಮುಂದೆ ಈ ಕೆಲ್ಸನ ಮಾಡಿ ಮುಗ್ಸೊಕು. ಹೆಚ್ಚಿಗೆ ಪ್ರಾಯ ಆದರೆ ಅಪಾಯ ಆದೆತ ಅನುಬವಸ್ತರ ಮಾತ್. ಬೀಜದ ಹೊರಿಗಳ ಗದ್ದೆ ಹೂಡ್‌ಕೆ, ಗಾಡಿ ಎಳೆಕೆ ಉಪಯೋಗ ಬಾರಿ ಕಮ್ಮಿ. ಬೀಜ ಒಡ್ದ ಎತ್ತ್‌ಗ ರೈತಂಗೆ ಕಷ್ಟದ ಗದ್ದೆ ಕೆಲ್ಸಕ್ಕೆ ಉಪಯೋಗ ಆತಿತ್ತ್. ಬೀಜ ಒಡ್ದ ದಿನಂದ ಎರ್ಡ್ ಮೂರ್ ದಿನ ಎತ್ತ್‌ಗಳಿಗೆ ಜ್ವರ ಬಾತಿತ್ತ್. ಒಡ್ದ ಬೀಜಕ್ಕೆ ಮೇಲೆಂದ ಒಳ್ಳಮೆಣ್ಸ್ ಹೊಡಿಮಾಡಿ ಎಣ್ಣೆಲಿ ಕಲ್ಸಿ ಲೇಪ ಹಾಕ್‌ತಿದ್ದೊ. ಆ ಮೊದ್ದ್‌ಲೇ ಬೇನೆ ಕಮ್ಮಿ ಆತಿತ್. ಎತ್ತ್‌ನ ಮೂರು ನಾಕ್ ದಿನ ಹೊರಗೆ ಮೇಯಕೆ ಬುಡ್‌ತಿತ್ಲೆ. ಕಟ್ಟಿದಲ್ಲಿಗೆ ಹುಲ್ಲ್ ನೀರ್‌ಕೊಡ್ತಿದ್ದೊ. ಈಗ ಪಶು ವೈದ್ಯರಕ್ಕಲೆ ಬೀಜ ಒಡೆವ ಬೇರೆ ಕ್ರಮ ಉಟ್ಟು.

ರಾಜರ ಕಾಲಲಿ ರಾಣಿ ವಾಸದ ಅರಮನೆ ಕಾವಲ್ ಮಾಡಿಕೆ ಬೀಜ ಒಡ್ದ ಗಂಡಸರ ನೇಮಕ ಆತಿತ್ತ್. ಹಾಂಗೆ ಬೀಜ ಒಡ್ದವರ್‌ಲಿ ಹತ್ತಕ್ಕೆ ಏಳೆಂಟ್ ಜನ ಸಾಯೊತಿದ್ದೊತ ಎಸ್.ಎಲ್. ಬೈರಪ್ಪನವು ಒಂದ್ ಕಾದಂಬರಿಲಿ ಬರ್ದೊಳೊ. **(ಕು.ಶಿ.)**



ಕಳ್ಳ್ ತೆಗೆವ ಗಡಿಗೆ ಮತ್ತೆ ಕಳ್ಳ್‌ನ ಮಡಿಕೆ

ಕಳ್ಳ್ ತೆಗೆವ ಗಡಿಗೆ ಮತ್ತೆ ಅದರ ತುಂಬ್ಸುವ ಮಡಿಕೆ. ಇದ್ ದಕ್ಷಿಣ ಕನ್ನಡ, ಉಡುಪಿ, ಕೊಡಗ್ ಜಿಲ್ಲೆಲಿ ಹಾಂಗೇ ಸಕ್ಲೇಶ್ಪುರ ಕಡೆಲೆಲ್ಲ ಇದ್ದದೆ.ಇದರ ಮೊಣ್ಣ್‌ಲೇ ಮಾಡ್ದು. ಇದರ ಮಡಿಕೆ ಮಾಡುವ ಮೂಲ್ಯ ಸಮುದಾಯದವು ಮಾಡ್ದು. ಬೈನೆ ಮರ, ಚಾಳಿ / ತಾಳೆ ಮರ ಮತ್ತೆ ಚಾಳೆಂದ ಕಳ್ಳ್ ತೆಗ್ದವೆ. ಕಳ್ಳ್ ತೆಗೆಕೆ ಇದ್ ಬೇಕಾದೆ.

ಮರಲಿರುವ ಕೀಲೆಲಿ ಕಾಯಿ ಕಟ್ಟಿಕೆ ಮುಂದೆ ಅದ್ಕೆ ಕೊಂಬುಂತೇಳುವೆ. ಅದರ ಕೊಡಿ ತುಂಡು ಮಾಡುವೆ. ಮೂರ್ತೆ ಮಾಡೋವು ಆ ಕೊಂಬುನ ಕೊಡಿ ಕೊಯ್ದ್ ಗುದ್ದಿ ಹದ ಮಾಡುವೆ. ಹೀಂಗೆ ಮಾಡಿರೆ ಅದರ್‌ಂದ ನಿದಾನಲಿ ರಸ ಬಂದದೆ. ಅದರ ಕಳ್ಳ್‌ಂತೇಳುವೆ. ಕೊಂಬು ಗುದ್ದಿದ ಮೇಲೆ ಅದ್ಕೆ ಇಂತಾ ಗಡಿಗೆನ ಕಟ್ಟುವೆ. ಅದರ ಒಳಗೆ ಬಿದ್ದ ಕಳ್ಳ್‌ನ ಮರಂದಲೇ ಮಡಿಕೆಗೆ ಹೊಯ್ದ್ ತಂದವೆ. ಮೂರ್ತೆ ಮಾಡೊವು – ಪೂಜಾರಿಗ – ಬಿಲ್ಲೊವು ಈ ಕೆಲ್ಸ ಮಾಡುವೆ. **(ಎಂ.ಜಿ.ಕೆ.)**

ಗುಜಾಣಿಕೆ

ಗುಜಾಣಿಕೆಂತ ಹೇಳಿರೆ ಎಣ್ಣೆ ಹಾಕಿಸುವ ಪಾತ್ರೆ. ಇದ್ ದಕ್ಷಿಣ ಕನ್ನಡ ಜಿಲ್ಲೆನ ಕೆಲವರ ಮನೆಲಿ ಮಾತ್ರ್ ಇದ್ದದ್. ಪಂಚಲೋಹಂದ ಮಾಡ್ದ ಒಂದ್ ಸೊತ್ತ್. ಹಿಂದೆನ ಕಾಲಲಿ ಎಣ್ಣೆ ಹಾಕಿಸ್ವ ಪಾತ್ರೆ. ಕಾಯೆಣ್ಣೆ ಅಲ್ಲರ್ ಎಳ್ಳೆಣ್ಣೆ ಇದರ್‌ಲಿ ಹಾಕಿಸಿರೆ ಎಷ್ಟ್ ಕಾಲಕ್ಕೂ ಹಾಳಾದುಲೆ. ಇದ್ಕೆ ಬೀಗ ಹಾಕಿಸಿಕೆನೂ ಆದೆ. ಎಣ್ಣೆ ತುಂಬಿಸಿ ಎತ್ತರಲಿ ಕೋಸಿ ಇಸಿಕೆನೂ ಆದೆ. ಹಿಂದೆನವು ಇದರ್‌ಲಿ ಎಣ್ಣೆ ತುಂಬಿಸಿ ಇಸುತ್ತಿದ್ದೊ. ಎಸ್ಟ್ ಕಾಲಕ್ಕೂ ಇದರ್‌ಲಿ ಇರುವ ಎಣ್ಣೆ ಹಾಳಾದುಲೆ. ಇದ್ ಸುಮಾರ್ ನೂರೈವತ್ತ್ ವರ್ಷ ಹಿಂದೆನ ಸೊತ್ತು. **(ಎಂ.ಜಿ.ಕೆ.)**



ಗೆಡ್ಗೆ

ಗೆಡ್ಗೆ ಸ್ಟೀಲ್, ತಾಮ್ರ, ಕೊಡ್ಪಾಣಗ ಬಾಕೆ ಮುಂದೇ ಇದ್ದ ನೀರ್ ತಕಂಡ್ ಹೋಕೆ ಮಾಡ್ದ ಮೊಣ್ಣ್‌ನ ಮಡ್ಕೆ. ಇದರ ಮೊಣ್ಣ್‌ನ ಕೊಡ್ಪಾಣ ತೇಳಿ ಸ ಕರೆಕ್. ದೊಡ್ಡವರ (ಶ್ರೀಮಂತರ) ಮನೆಲಿ ಹೆಚ್ಚಾಗಿ ತಾಮ್ರದ ಕೊಡ್ಪಾಣಗ ಇರ್ತಿದ್ದೊ. ಬಡವರ ಮನೆಲಿ ನೀರ್‌ತಾಕೆ ಮತ್ತೆ ತಂದ್ ಇಸಿಕೆ ಗೆಡ್ಗೆನ ಬಳ್ಸ್‌ತ್ತಿದ್ದೊ. ಗೆಡ್ಗೆನ ಮೊಣ್ಣುನ ಪಾತ್ರ ಮಾಡುವ ಮೂಲ್ಯರ್ ಮಾಡುವೆ.

ಸುಳ್ಯ, ಪುತ್ತೂರು ಬಾಗಲಿ ಹಿಂದೆ ಗದ್ದೆಲಿ ಚೂರು ಸಮಯಕ್ಕೆ (ಒಂದೆರಡ್‌ತಿಂಗ) ನೆಟ್ಟಿಕಾಯಿ (ಮೆಣ್ಸ್, ಸೊಂತೆ, ಬೆಂಡೆ, ಅಲ್ಸಂಡೆ, ಹರ್ವೆ) ಬೆಳ್ಸ್‌ತ್ತಿದ್ದೊ. ಆಗ ಪೊಂಪ್‌ನ ಬಳ್ಸ್‌ತ್ತಿದ್ದ ಜನ ಕಮ್ಮಿ. ಚೊಂಟೆಲಿ ಗುಂಡಿದ ನೀರ್‌ತೆಗ್ದ್ ಗದ್ದೆಲಿ ಸಣ್ಣ ಗುಂಡಿ ಮಾಡಿ ಅದ್ಕೆ ಹೋವಂಗೆ ಮಾಡ್ತಿದ್ದೊ. ಆ ಗುಂಡಿಂದ ನೀರ್ ತೆಗ್ದ್ ನೆಟ್ಟಿಕಾಯಿ ದೈಯಿಗಳಿಗೆ ಹೊಯ್ಯಕೆ ಗಡಿಗೆನ ಉಪಯೋಗಿಸುತ್ತಿದ್ದೊ. ಬಾರೀ ಜಾಗ್ರತೆಲಿ ಈ ಕೆಲ್ಸನ ಮಾಡಕಾಗಿತ್ತ್. ಹಂಗೆ ನೆಟ್ಟಿಕಾಯಿ ದೈಯಿಗಳಿಗೆ ನೀರ್ ಹೊಯ್ಯಕೆ ಈ ಗೆಡ್ಗೆಲಿ ಸಣ್ಣ ಕಂಟ (ಕುತ್ತಿಗೆ) ಇರುವ ಕಾರಣ ಲಾಯ್ಕ್ ಆತಿತ್.

ಈಗೀಗ ಸುಳ್ಯ ಪುತ್ತೂರು ಹಳ್ಳಿಗಳ್‌ಲಿ ನೆಟ್ಟಿಕಾಯಿ ಬೆಳ್ಸೊವು ಕಮ್ಮಿ. ನೆಟ್ಟಿಕಾಯಿ ಮಾಡುವ ಜನಂಗ ಪೊಂಪ್‌ಲಿ ನೀರ್‌ತೆಗ್ದ್, ಪೈಪ್‌ಲಿ ಇಲ್ಲರ್ ಸ್ಪಿಂಕ್ಲರ್‌ಲಿ ಹಾಕುವೆ. ಗೆಡ್ಗೆನ ಜಾಗ್ರತೆಲಿ ಇಸಿಕಣದಿದ್ದರೆ ಒಡ್ದ್ ಹೋದೆ. ಹಂಗಾಗಿ ಇತ್ತೀಚೆಗೆ ಅದರ ಉಪಯೋಗ ಕಮ್ಮಿ ಆವುಟು. ಗೆಡ್ಡೆ ನೋಡಿಕೆ ಬಾರೀ ಲಾಯಿಕ್. ಅದರ ಕಂಟ ಸಣ್ಣದ್ ಇದ್ದ್, ಹೊಟ್ಟೆಬಾಗ ಉರುಂಟು ಇದ್ದದೆ. ಇದರ್ಲಿ ಬೇರೆ ಬೇರೆ ತರ, ನೋಡಿಕೆ ಪೊರ್ಲ್ ಇರುವ ಗೆಡ್ಗೆಗಳೂ ಒಳೊ. ಹಳೆ ಗೆಡ್ಗೆಗೆ ಅಟ್ಟಕ್ಕೆ ಹೋದವು ಕಮ್ಮಿ, ಒಡ್ದ್ ಹೋದೊವೆ ಜಾಸ್ತಿ. ಅಂತೂ ಬಡವರ ಮತ್ತೆ ಕೃಸಿಕರ ಮೊಣ್ಣ್‌ನ ಕೊಡ್ಪಾಣ ಒಂದು ನಿತ್ಯೋಪಯೋಗಿ ವಸ್ತೂ ಆಗಿತ್ತ್, ಕೃಸಿಗೆ ಸ ಅಗತ್ಯ ಇತ್ತ್. ಕೆಲವು ಜೆನ ಗೆಡ್ಗೆಗಳ ನೆಲಲಿ ಸುಂಪೆಲಿ ಇಸಿರೆ, ಇನ್ನ್ ಕೆಲಜನ ಅದರ ಕಂಟಕೆ (ಕುತ್ತಿಗೆಗೆ) ಬೊಳ್ಳಿ ಹಾಕಿ ನೇತಾಡ್ಸಿ ಇಸ್‌ತ್ತಿದ್ದೊ. ಒಟ್ಟೆ ಆದ ಗೆಡ್ಗೆಗಳಿಗೆ ಮೊನ್ಸನ ತಲೆ, ಬಾಯಿ ಚಿತ್ರನ ಸುಣ್ಣಲಿ ಬುಡ್ಸಿ ಗದ್ದೆಗೆ ಪೆರ್ಚಿ ಕುತ್ತುತ್ತಿದ್ದೊ. ದೂರಂದ ನೋಡಿಕನ ಅದ್ ದೊಡ್ಡ ತಲೆ ರಾಕ್ಷಸ ನಿಂತ್‌ಕಂಡಂಗೆ ಕಾಂಬತಿತ್. **(ಪು.ಕೆ.ವಿ)**



ಬತ್ತದ ಕದ್ರ್ ಗೂಡು

ಬತ್ತ ಕದ್ರ್ ಗೂಡು ಮನೆಗೊಂದ್ ಅಲಂಕಾರ. ಅಂಗ್ಡಿಲಿ ಮಾರಾಟ ಮಾಡದ ವಸ್ತು. ಅಜ್ಜಿಯ ಕೈಚಳಕದ ವಸ್ತು. ತಾಳ್ಮೆಯ ಪ್ರತೀಕ. ಚಿನ್ನದ ರಂಗ್‌ನ ಬತ್ತದ ಕದ್ರ್ ಗೂಡುನ ಎಲ್ಲವ್ಕೂ ಮಾಡಿಕಾಗದ ಕೈ ಕಸುಬು. ಕದ್ರ್‌ದ್ ತುದಿಂದ ಬುಡದ ಮುಟ್ಟ ಬತ್ತ ಬೆಳ್ದ್ ಚಿನ್ನದ ರಂಗ್‌ಗೆ ಬಂದಿರೊಕು. ಆಗ ಒಂದು ಗೂಡು ಮಾಡಿಕೆ ಎಷ್ಟ್ ಕದ್ರ್ ಬೇಕೋ ಅಷ್ಟ್ ಕದ್ರ್‌ನ ಎಳ್ದ್ ತರೊಕು. ಕದ್ರ್ ಎಳೆಕನ ಬತ್ತ ಉದ್ರಿಕೆ ಬತ್ತ್. ಅಂತ ಕದ್ರ್‌ಗಳ ತಂದ್ ಚಾಮೆವ್ವನ ಕೈಲಿ ಕೊಟ್ಟರೆ ಪಿಳ್ಳಿಕಳ ಕುದ್ರಿಸಿಕಂಡ್ ಪದ ಹೇಳಿಕಂಡ್ ಗೂಡು ನೆಯ್ಯೊದರ ನೋಡ್ದೇ ಒಂದ್ ಪೊರ್ಲು.

ಕದ್ರ್ ಯಾವ ಬತ್ತದಾದರೂ ಆಕ್. ಆದರೆ ಜೀರಿಗೆ ಸಣ್ಣ, ಗಮನ ಸಣ್ಣ ಬತ್ತದ ಗೂಡು ಮಾಡಿರಂತೂ ಆ ಮನೆದ್ ಪರಿಮಳನೇ ಬೇರೆ. ಇನ್ನೊಂದು ಬತ್ತ ಉಟ್ಟು, ಅದರ ತುದಿಲಿ ಚೂಪು ಮುಳ್ಳು ಇರುವ ಬತ್ತಂತೂ ಇದ್ದರೆ ಮನೆ ಒಳಗೆ ಯಾಗೊಳು ಸಣ್ಣಕ್ಕಿ ಹಣ್ಣ್‌ದ್ ಗಮನನೇ. ನೋಡಿಕೂ ಲಾಯ್ಕ, ಮೂಗಿಗೂ ಹಬ್ಬ.

ನೂರಾರ್ ಕದ್ರ್‌ಗಳ ಪೋಣ್ಸಿ ಬಾಡೆಲಿ ಬಿಟ್ಟಕ್ಕೆ ಕಟ್ಟಿರೆ ಬಂದವೆಲ್ಲಾ ಅದರ ನೋಡಿಕಂಡ್ ಕುಸಿಪಟ್ಟವೆ. ಮನೆಯವ್ಕೂ ಏನೋ ಒಂಥರದ ನೆಮ್ಮದಿ.ಮಚ್ಚ್ ಪಾರ್ ಹಾಕಿದ ಮನೆಲಿ ಬತ್ತದ ಕದ್ರ್ ಗೂಡ್ ಒಂದು ಕಾಲಲಿ ಇತ್ತ್. ಮಚ್ಚ್ ಪಾರ್‌ತೇಲ್ರೆ ಬಿಟ್ಟ ಹಾಕಿ ಪಾರ್ (ಹಲಗೆ) ಹೊಡ್ದ ಮನೆತ ಅರ್ಥ. ಟೇರಿಸ್ ಮನೆಗಳ ಈ ಕಾಲಲಿ ಬತ್ತದ ಕದ್ರ್ ಗೂಡು (ಬತ್ತದ ಕದ್ರ್ ಜುಮುಕಿ) ಇರುವ ಜಾಗೆಲಿ ಒಂದೋ ಗಾಳಿ ತಿರಗಣೆ (ಫ್ಯಾನ್) ಅದಿಲ್ಲರೆ ಮಿಣಿ ಮಿಣಿ ಮಣಿ ದೀಪ ಬಂದುಟು. **(ಬಾ.ಜೋ)**



ಮಂಜೆಟಿ ಮಣೆ

ಮಂಜೆಟಿ ಮಣೆ ಹಾಗೆಂತೇಳಿರೆ ಮಂಜೆಟಿ ಆಟ ಆಡುವ ಮಣೆ. ತುಳುಲಿ ಚೆನ್ನೆಮಣೆ, ಮಲೆಯಾಳಂಲಿ ಮಂಜಾಡಿ ಪಲ, ಕನ್ನಡಲಿ ಅಳಗುಳಿ ಮನೆ, ಬ್ಯಾರಿ ಬಾಸೆಲಿ ಚೆನ್ನೆಮಣೆತ ಹೇಳ್‌ವೆ. ಈ ಆಟಕ್ಕೆ ಮಂಜೋಟಿ ಬಿತ್ತ್ ಬೇಕ್. ದಕ್ಷಿಣಕನ್ನಡ ಮತ್ತೆ ಉಡುಪಿ ಜಿಲ್ಲೆಲಿರುವ ಜನಪದ ಆಟದ ಮಣೆ. ಇದ್ ಕುದ್ರಿಕೆ ಆವ ಮಣೆನ ಹಾಂಗೇ ಇದ್ದದೆ. ಆದರೆ ಇದರ್‌ಲಿ ಕುದ್ರುದುಲೆ. ಈ ಮಣೆನ ಮೇಲೆ ಎರಡ್ ಪುಡೆಗೆ ಏಳೇಳ್ ಗುಂಡಿ ಇದ್ದದೆ. ಎರಡೂ ತುದಿಲೂ ಅಗಲಕ್ಕೆ ಗುಂಡಿ ಇದ್ದದೆ. ಇದರ್‌ಲಿ ಗೆದ್ದ ಬಿತ್ತ್‌ಗಳ ಹಾಕಿಸುವೆ ಇದರ ಮಣೆನ ಮರದ ಆಚಾರಿಗ ಮಾಡುವೆ.

ಆಟಿ ತಿಂಗಳ್‌ಲಿ ಮಳೆ ಬಾಕನ ಮನೆಲಿ ಆಟ ಆಡುವೆ. ಇದರ್‌ಲಿ ಮೂರು ನಾಲ್ಕ್ ಬಗೆಲಿ ಆಡುವ ಆಟ ಉಟ್ಟು.

ಒಂದು ಒಬ್ಬನೇ ಆಡುವ ಸೀತೆ ಆಟ. ಇದರ್‌ಲಿ ಗುಂಡಿಗೆ ಬಿತ್ತ್ ಹಾಕಿಕನ ಒಂದು ಪುಡೆಲಿ ಒಂದನೇ ಗುಂಡಿಗೆ ಒಂದು ಬಿತ್ತ್ ಎರಡ್‌ನೆ ಗುಂಡಿಗೆ ಎರಡ್ ಬಿತ್ತ್ ಮೂರನೇ ಗುಂಡಿಗೆ ಮೂರು ಹೀಂಗೇ ಏಳ್ ಗುಂಡಿಗೆ ಮುಟ್ಟ ತುಂಬಿಸಿ ಇನ್ನೊಂದು ಪುಡೆಲಿ ಏಳ್, ಆರ್, ಐದ್ ಹೀಂಗೇ ತುಂಬಿಸಿ ಒಬ್ಬನೇ ಆಡ್ದು. ಸುರುಲಿ ಯಾವ ಗುಂಡಿಂದಲೂ ಆಟ ಸುರು ಮಾಡಕ್, ಅದರೆ ತೆಗ್ದ ಗುಂಡಿಗೆ ಒಂದು ಬಿತ್ತ್ ಹಾಕಿ ಉಳ್ದ ಗುಂಡಿಗೂ ಒಂದೊಂದು ಬಿತ್ತ್ ಹಾಕಿಕನ್ ಅಕೇರಿಗೆ ಉಳ್ದ ಒಂದು ಬಿತ್ತ್‌ನ ಹಾಕಿದ ಗುಂಡಿಂದ ಮತ್ತೆ ಎಲ್ಲ ತೆಗ್ದ್ ಅದ್ಕೂ ಒಂದು ಬಿತ್ತ್ ಹಾಕಿಕನ್ ಅಡ್ತಾ ಹೋಕು. ಇದ್ ಎಷ್ಟ್ ಹೊತ್ತಾದರೂ ಮುಗಿಯದ ಆಟ.

ಇನ್ನೊಂದು ಇಬ್ಬೊರು ಆಡುವ ಆಟ. ಒಂದು ಪುಡೆಗೆ ಒಬ್ಬ ಇನ್ನೊಂದು ಪುಡೆಗೂ ಒಬ್ಬ ಕುದ್ದ್ ಆಡುವ ಕ್ರಮ. ಈ ಆಟಲಿ ಎಲ್ಲಾ ಗುಂಡಿಗೂ ನಾಲ್ಕ್ ನಾಲ್ಕ್ ಬಿತ್ತ್ ಹಾಕೊಕು. ಯಾರಾದರೊಬ್ಬ ಆಟ ಸುರು ಮಾಡೊಕು. ಅವ ಆಟ ಸುರು ಮಾಡಿಕನ ಅವನ ಪುಡೆಲಿರುವ ಗುಂಡಿಂದ ಮಾತ್ರ ಬಿತ್ತ್ ತೆಗೆದು. ಒಂದು ಗುಂಡಿಂದ ಬಿತ್ತ್ ತೆಗ್ದ್ ಅದರ ಮುಂದೆನ ಗುಂಡಿಗೆ ಒಂದೊಂದೇ ಹಾಕನ್ ಬರೊಕು. ಕೈಲಿದ್ದದ್ ಕಾಲಿ ಆಕನ ಅದರ ಮುಂದೆನ ಗುಂಡಿಂದ ಬಿತ್ತ್ ತೆಗ್ದ್ ಆಟ ಮುಂದರಿಸಿಕನ್ ಹೋಕು. ಎಲ್ಲಿಯಾರ್ ಅವನ ಕೈಲಿರುವ ಬಿತ್ತ್ ಕಾಲಿ ಆಕನ ಅದರ ಮುಂದೆನ ಗುಂಡಿ ಕಾಲಿ ಇದ್ದರೆ ಅದರ ಮುಂದೆನ ಗುಂಡಿಲಿದ್ದ ಎಲ್ಲಾ ಬಿತ್ತ್ ಅವಂಗೆ ಸಿಕ್ಕಿದೆ.ಈ ಆಟಲಿ ಯಾರ ಗುಂಡಿಂದ ಒಮ್ಮೆ ಕಾಲಿ ಆಗಿ ನಾಲ್ಕ್ ಬಿತ್ತ್ ಆದರೆ ಅದ್ ಅವನ ಪಾಲಾದೆ. ಅದ್ಕೆ ಬೆಳೆಂತ ಹೇಳ್‌ವೆ. ಇಬ್ಬರೂ ಆಡಿ ಅಕೇರಿಗೆ ಎಲ್ಲಾ ಬಿತ್ತ್ ಕಾಲಿ ಆದ ಮೇಲೆ ಅವನ ಗುಂಡಿಗಳ್‌ಗೆ ಮತ್ತೆ ತುಂಬುಸೊಕು. ಆಗ ಮಿನಿ ಅವನ ಗುಂಡಿಗೆ ತುಂಬಿಸಿಕೆ ಬಿತ್ತ್ ಕಮ್ಮಿ ಆದರೆ ಆ ಗುಂಡಿಗೆ ಕಿಚ್ಚಿ ಬೀತ್‌ಂತ ಕರ್ದವೆ. ಆ ಗುಂಡಿಗೆ ಏನಾರ್ ಬೇರೆ ಕಡ್ಡಿ ಕಾಡ್ ತುಂಬುಸೊಕು. ಅಕೇರಿಗೆ ಯಾರ ಕೈಲಿ ಗುಂಡಿ ತುಂಬುಸುವಷ್ಟ್ ಬಿತ್ತ್ ಒಳೆದ್ಲೆನೋ ಅವ ಸೋತತ್ – ಅವಂಗೆ ಮದುವೆಂತ ಹೇಳಿತ ಮಾಸೆ ಮಾಡ್‌ವೆ. ಇಬ್ಬರೇ ಆಡುವ ಆಟಲಿ ಇನ್ನೊಂದು ಆಟ ಉಟ್ಟು. ಇದರ್‌ಲಿ ಬೆಳೆತ ಇಲ್ಲೆ. ಆಟ ಆಡಿಕನ್ ಹೋಕನ ಅಕೇರಿಗೆ ಒಂದು ಇರಿಕನ ಹಾಕಿದ ಗುಂಡಿಂದ ಮತ್ತೆ ತೆಗ್ದ್ ಮುಂದೆನ ಗುಂಡಿಗೆ ತುಂಬುಸ್ತಾ ಹೋದು.

ಇನ್ನೊಂದು ಮೂರುಜನ ಸೇರಿ ಆಡುವ ಆಟ ಉಟ್ಟು. ಇದ್ಕೆ ಅರಸು ಆಟ ತ ಹೇಳ್‌ವೆ. ಕೆಲವು ಕಡೆ ದನಿ ಒಕ್ಕುಲು ಆಟಂತಲೂ ಹೇಳ್‌ವೆ. ಇದರ್‌ಲಿ ಎರಡ್ ಕಡೆನವು ಎದ್ರ್ ಬದ್ರ್ ನಾಲ್ಕ್ ನಾಲ್ಕ್ ಗುಳಿ ಒಬ್ಬೊಬ್ಬಂಗೆ ಆದರೆ ನಡೂಲಿ ಎದ್ರ್ ಬದ್ರ್ ಇರುವ ಆರ್ ಗುಂಡಿಗ ಅರಸುಗೆ. ಆಟ ಇಬ್ಬೊರು ಆಡುವ ಆಟದ ಹಾಂಗೇ. ಆಟದ ಅಕೇರಿಗೆ ದನಿಗೆ ಒಕ್ಲ್ ಒಂದೊಂದು ಕಾಯಿ ಗೇಣಿ ಅಂತ ಕೊಡೊಕು. ಇನ್ನೊಂದು ರೀತಿನ ಮಣೆ ಉಟ್ಟು ಅದರ್‌ಲಿ ಹನ್ನೆರಡ್ ಹನ್ನೆರಡ್ ಗುಂಡಿ ಇದ್ದದೆ. ಮಂಜೊಟಿ ಆಟಲಿ ಕವಡೆ ಇಸಿಕನ್ ಆಡುವ ಆಟವೂ ಉಟ್ಟು. ಒಟ್ಟುಲಿ ಈ ಆಟ ಆಡಿಕೆ ಬಾರೀ ಚಾತುರ್ಪು ಬೇಕು. ಮಂಜೆಟ್ಟಿ ಆಟನ ಗಂಡ ಹೆಣ್ಣ್ ಆಡಿಕೆ ಬೊತ್ತುಂತ ಹೇಳ್‌ವೆ. ಯಾಕೆಂತೇಳಿರೆ ಈ ಆಟ ಆಡಿಕನ ಸೋತೊವುಕೆ ಬೇಜಾರ್ ಆದೆ. ಗೆದ್ದವ ಹಂಗಿಸಿದೆ. ಆಗ ಜಗಳ ಆಗುವ ಅಲ್ಲರ್ ಕೋಪ ಬರುವ ಸಂಗತಿ ನಡ್ದದೆ, ಅದ್ಕೇ ಆಗಿರ್ದು. **(ಎಂ.ಜಿ.ಕೆ.)**



ಮಾಯಕದ ಹೂಜಿ

ನೀರ್ ಹಾಕಿಸುವ ಹೂಜಿ. ತುಳುಲಿ ಮಾಯಕೊದ ಊಜಿ, ಮಲೆಯಾಳಂಲಿ ಕೂಜ, ಬ್ಯಾರಿ ಬಾಸೆಲಿ ಮಣ್ಣ್ ಜಬಣೆ ತ ಹೇಳುವೆ. ಇದ್ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಲಿ ಇತ್ತ್. ನೀರ್ ತುಂಬಿಸಿ ಇಸುವ ಒಂದು ಬಗೆ ಹೂಜಿ. ಇದರ ಮಾಯಕದ ಹೂಜಿತ ಹೇಳಕ್. ಚೋದ್ಯ ಏನ್‌ಂತ ಹೇಳಿರೆ ಇದರ ಅಡಿ ಬಾಗಲಿ ಒಟ್ಟೊಟ್ಟೆ ಇದ್ದದೆ. ಕಂತ ಮಾಡಿ ಈ ಒಟ್ಟೆಗೆ ನೀರ್ ಹೊಯ್ದರೆ ಅದರ ಒಳಗೆ ಹೋದೆ. ಮತ್ತೆ ಸರ್ತ ಮಾಡಿರೆ ನೀರ್ ತೂಸುದುಲೆ. ಅದರ್‌ಲಿ ಕಾಂಬ ಕೊಂಬುನ ಬೊಗ್ಗಿಸಿ ಬಾಯಿಗೆ ಹಿಡ್ದರೆ ಅದರೊಳಗೆ ಇರುವ ನೀರ್ ಬಿದ್ದದೆ. ಇದರ ಮೂಲ್ಯ ಜನಂಗ ಮಾಡ್ದು. ಅದರೊಳಗೆ ಇದ್ದ ನೀರ್ ಹೇಂಗೆ ಹಿಡ್ದರೂ ತೂಸಿ ಹೋದುಲೆ. ಅಡ್ಡ ಹಿಡ್ದರೆ ಮಾತ್ರ ಕೊಂಬುಲಿ ಬಾದು. ಅದ್ಕೇ ಇದ್ ಮಾಯಕದ ಹೂಜಿ. **(ಎಂ.ಜಿ.ಕೆ.)**

ಮೊಣ್ಣ್‌ನ ಕಪ್ಪಲ್

ತಪಲೆನ ಹಾಂಗೇ ಇರುವ ಮೊಣ್ಣ್‌ಂದ ಮಾಡ್ದ ಅಗಲ ಬಾಯಿ ಇರ್‌ವ ಪಾತ್ರೆ. ತುಳುಲಿ ಇದ್ಕೆ ಮಣ್ಣ್‌ದ ಮರಾಯಿತ ಹೇಳುವೆ. ಮಲೆಯಾಳಂಲಿ ಮಣ್ಣ್ ಪಾತ್ರಂ, ಬ್ಯಾರಿ ಬಾಸೆಲಿ ಮಣ್ಣ್‌ಂಡೆ ಮರಾಯಿತ ಹೇಳುವೆ. ದಕ್ಷಿಣಕನ್ನಡ, ಉಡುಪಿ, ಕೊಡಗ್ ಜಿಲ್ಲೆ ಹಾಂಗೇ ಸಕ್ಲೇಶ್ಪುರ ಕಡೆಲೆಲ್ಲ ಇದ್ ಇದ್ದದೆ. ಇದ್ ಮೊಣ್ಣ್‌ಂದ ಮಾಡ್ದ ಸೊತ್ತು. ಇದರ ಮಡಿಕೆ ಮಾಡುವ ಮೂಲ್ಯ ಜನಾಂಗದೊವು ಮಾಡುವೆ.

ನೀರ್ ಹಾಕಿ ಇಸಿಕೆ ಇರುವ ಪಾತ್ರೆ. ಈ ಪಾತ್ರೆ ಮನೆ ಹಕ್ಕಲೆ ಇರ್‌ವ ಬಸಲೆ ಚಪ್ಪರದ ಅಡಿಲಿ ಇದ್ದದೆ. ಇದರ್‌ಲಿ ಯಾಗೊಳು ನೀರ್ ತುಂಬಿಸಿ ಇಸುವೆ. ಇದೇ ನೀರ್‌ಲಿ ಪಾತ್ರೆ ತೊಳೆವ ಕ್ರಮ ಇತ್ತ್.

ಹೊರಗೆ ಹೋಗಿ ಬಂದವು ಮನೆ ಒಳಗೆ ಹೋಕೆ ಮುಂದೆ ಕೈ ಕಾಲ್ ತೊಳ್ದ್ ಹೋವ ಕ್ರಮ ಹಿಂದೆ ಇತ್ತ್. ಹಾಂಗಾಗಿ ಹೊರಗೆಂದ ಬಂದೊವು ಇಲ್ಲೇ ಕೈ ಕಾಲ್ ತೊಳ್ದವೆ. ಮನೆಗೆ ಬಂದ ನೆಂಟ್ರ್ ಕೈಕಾಲ್ ತೊಳೆಕೆ ಬಸಲೆ ಚಪ್ಪರದ ಅಡಿಗೇ ಹೋವ ಕ್ರಮ ಹಿಂದೆ ಇತ್ತ್. **(ಎಂ.ಜಿ.ಕೆ.)**



ಒಳ್ರ್ ಕಲ್ಲ್

ಎಲೆ ಅಡಿಕೆ ಗುದ್ದಿಕೆ ಇರುವ ಕಲ್ಲ್. ಇದರ ಒಳ್ರ್ ಕಲ್ಲ್‌ಂತ ಹೇಳುವೆ. ಇದ್ ಸುಳ್ಯ ಮತ್ತೆ ಕಡಬ ತಾಲೂಕ್‌ಲಿ ಉಟ್ಟು. ಇದ್ ಹೆಚ್ಚ್ ಕಮ್ಮಿ ನೂರು ವರ್ಷಂದ ಬಳಕೆಲಿ ಉಟ್ಟು. ನೋಡಿಕೆ ಸಣ್ಣ ಕಡ್ಕಲ್‌ನ ಹಾಂಗೇ ಉಟ್ಟು. ಅದರೆ ಕಡ್ಕಲ್‌ನ ಹಾಂಗೆ ಪುಡೆಲಿ ಜಾಗೆ ಇಲ್ಲೆ, ಬರೇ ಗುಂಡಿ ಮಾತ್ರ ಇದ್ದದೆ. ಗುದ್ದುವ ಕಲ್ಲ್ ಕಡ್ಕಲ್ಲ್ ಗುಂಡು ಕಲ್ಲ್‌ನ ಹಾಂಗೆ ಇರದೆ ಹಞ ಸಪೂರ ಆಗಿ ಗೇಣ್‌ನಷ್ಟೇ ಉದ್ದ ಉಟ್ಟು. ಇದರ ಕರ್ಗಲ್‌ಂದ ಮಾಡ್ದು. ಒಳ್ಳೆ ಕರ್ಗಲ್ಲ್‌ಲಿ ಕಲ್ಲ್ ಕುಟ್ಟಿಗರೇ ಇದರ ಮಾಡುವೆ. ಪ್ರಾಯದವುಕೆ ಎಲಾಡ್ಕೆ ತಿಂಬೊಕರ್ ಅಡಿಕೆನ ಅಗೆಕೆ ಆದುಲೆ. ಯಾಕೆಂತೇಳಿರೆ ಅವರ ಹಲ್ಲ್ ಉದುರಿದ್ದದೆ, ಅಲ್ಲರ್ ಹಲ್ಲ್ ಬೇನೆ ಇದ್ದದೆ. ಹಾಂಗಾಗಿ ಅಡಿಕೆನ ಗುದ್ದೊಕಾದೆ. ಅಡಿಕೆ ಮತ್ತೆ ಸುಣ್ಣ ಪೂಜಿದ ಎಲೆನ ಗುಂಡಿಗೆ ಹಾಕಿ ಗುದ್ದುವ ಕಲ್ಲ್‌ಲಿ ಗುದ್ದುವೆ. ಆಗ ಅಡಿಕೆನೊಟ್ಟಿಗೆ ಎಲೆ ಸಣ್ಣದಾದೆ.

ಈ ಕಲ್ಲ್‌ಲ್ಲಿ ಎಲೆ ಅಡಿಕೆ ಮಾತ್ರ ಗುದ್ದುದು ಅಲ್ಲ. ಮೊದ್ದುನ ಸೊಪ್ಪು, ಮೊದ್ದುನ ಬೇರ್, ಗೆಯ್ಯುಗೆ ಬೇಕಾದ ಬೆಳ್ಳುಳ್ಳಿ, ಶುಂಟಿ, ಒಳ್ಳಮೆಣಸ್, ಏಲಕ್ಕಿ ಹೀಂಗೇ ಎಂತ ಬೇಕಾರು ಗುದ್ದಿಕೆ ಆದೆ. ಕೆಲವ್ ಕಡೆ ಮರಂದ ಮಾಡ್ದ ಒರಳ್ ಕಲ್ಲ್ ಸ ಇದ್ದದೆ. **(ಎಂ.ಜಿ.ಕೆ.)**



ಸ್ಲೇಟ್

ಸ್ಲೇಟ್‌ಂತೇಳಿರೆ ಬರೆಕೆ ಆವ ಬಳದ ಕಲ್ಲ್‌ನ ಹಲಗೆ. ತುಳುಲಿ, ಮಲೆಯಾಳಂಲೂ ಸ್ಲೇಟ್ ಅಂತಲೇ ಹೇಳುವೆ. ಇದ್ ಕಾಡ್‌ಲಿ ಸಿಕ್ಕುವ ಒಂದ್‌ಜಾತಿ ಮೆತ್ತಂಗೆ ಇರ್‌ವ ಕಲ್ಲ್‌ಂದ ಮಾಡದ ಸೊತ್ತು. ಕಲ್ಲ್‌ನ ತೆಳ್ಳಂಗೆ ಸಿಗ್ಸ್‌ದ್ ಹಲಗೆ ಮಾಡುವೆ. ಹಲಗೆನ ಬೇಕಾದ ಹಾಂಗೆ ದೊಡ್ಡದ್ ಸಣ್ಣದ್ ಕತ್ರಿಸಿ ಅದ್ರೆ ಸುತ್ತಲೂ ಮರದ ಪ್ರೇಮು ಹಾಕುವೆ. ಇದ್ ಕೈಲಿ ಮಾಡಿಕೆ ಆದುಲೆ. ಮಿಸಾನ್ಲಿ ಇದರ ಮಾಡುವೆ.

ಸಣ್ಣ ಸಣ್ಣ ಮಕ್ಕಳಿಗೆ ಅಕ್ಸರ ಬರೆಕೆ ಲೆಕ್ಕ ಬರೆಕೆ ಇದ್ ಬೇಕು. ಬರೆಕೆ ಆವ ಕಡ್ಡಿ ಸಿಕ್ಕಿದೆ. ಅದರ್‌ಲಿ ಇದರ ಮೇಲೆ ಬರೆಕೆ, ಸುಲಬಲಿ ಉಜ್ಜಿಕೆನೂ ಆದೆ. ಕೈಲೂ ಉಜ್ಜಕ್ಕ್, ಇಲ್ಲರ್ ನೀರ್ ಹಾಕಿನೂ ಉಜ್ಜಕ್. ಸ್ಲೇಟ್‌ನ ಜಾಗ್ರತೆ ಇಸೊಕು. ನೆಲಕ್ಕೆ ಬಿದ್ದರೆ ಒಡ್ಡದೆ. **(ಎಂ.ಜಿ.ಕೆ.)**

ಅಕ್ಕಿ ಮೇಲೆ ಅಕ್ಷರ ಬರ್‍ದ್, ಸಿಲೇಟ್(ಸ್ಲೇಟ್) ಮೇಲೆ ಬರವಣಿಗೆ ಮುಂದರ್‍ತ್. ಇಸ್ಕೂಲ್‌ಲಿ ಶಾರದಾ ಪೂಜೆ ದಿನ ತುದಿ ಬಾಳೆಲೆ ಮೇಲೆ ಅಕ್ಕಿ ಹರ್‌ಂಡ್‌ತ್ತಿದ್ದೊ. ಆ ದಿನ ಅಯ್ಯೆಕ ಸೊಂಟಲಿ ಕೂಸುನ ತೆತ್ತಿಕಂಡ್ ಪೂಜೆಗೆ ಹೋತಿದ್ದೊ. ಆಗ ಅಲ್ಲಿ ಸುರೂಗೆ ಅಕ್ಷರ ಬರ್‍ಸವ ಕಾರ್ಯಕ್ರಮನೂ ಇರ್‍ತಿತ್. ಅರ್ಚಕ ಕೂಸುನ ಕೈ ಹಿಡ್ಡ್ ಬಲ್ದ ಕೈನ ತೋರ್ ಬೆರಳ್‌ನ ಹಿಡ್ಕಂಡ್ 'ಓಂ ಶ್ರೀ'ತ ಬರೆತಿದ್ದೊ. ಆಗ ಕೆಲವ್ ಮಕ್ಕ ಕಿರ್‌ಚಾಡಿ ಪೇಚಾಡ್ತಿದ್ದೊ. ಚಾಮಿ ಮಾಡಪ್ಪಾತ ಅಡ್ಡ ಬೀಳ್‌ಸ್ತಿದ್ದೊ. ಮಕ್ಕ ಆ ದಿನನ ಗ್ಯಾನ ಮಾಡಿಕಂಡ್ ಬಳಪ ಕಡ್ಡಿಲಿ ಸಿಲೇಟ್ ಮೇಲೆ ಗೀಚ್ತಿದ್ದೊ. ಗೀಚಿ ಗೀಚಿ ಆಕನ ಆ ಗೀಚಾಟಕ್ಕೆ ಒಂದ್ ಆಕಾರ ಬಾತ್. ಕಡೆಗೆ 'ಅ' ಅಕ್ಷರ ಮೂಡ್ತ್. ಹಂಗೇ ಕೂಸ್‌ಗೆ ಅಕ್ಷರಮಾಲೆ ಅಬ್ಯಾಸ ಸುರಾತ್.

ಬಳಪದ ಸಿಲೇಟ್‌ಗೆ ನಾಕ್ ಕಡೆ ಮರದ ಚೌಕಟ್ ಇರ್‍ತಿತ್. ಒಂದು ಕಡೆನ ಎಡ್ದ ಅಂಗೈಲಿ ಬೆರಳ್‌ಂದ ಹಿಡ್ಡ್ ಇನ್ನೊಂದು ಕಡೆನ ಎದೆಗೆ ಒತ್ತಿ ಬರೆತಿದ್ದೊ. ಉಗೆದು, ಉಜ್ಜುದು, ಬರೆದು. ಪುನಾ ಹಂಗೇ ಮಾಡ್ತಿದ್ದೊ. ಕೈಯೆಲ್ಲಾ ಬೂದಿ ಬಡ್ಕಂಬತಿತ್ತ್. ಕಡ್ಡಿನ ಕಚ್ಚುದು, ತಿಂಬೊದು, ಮತ್ತೆ ಕಡ್ಡಿ ಒಳ್ದರೆ ಬರೆದು ಹಿಂಗೇ ಮಾಡಿಕಂಡ್ ಆಡಿಕಂಡ್ ಇರಕನ ಸಿಲೇಟ್ ಬಿದ್ದ್ ಚೂರಾತಿತ್. ಅದಿಲ್ಲರೆ ಯಾರಾರ್ ಪುಂಡ ಮಕ್ಕ ಮೆಟ್ಟಿ ಬುಡ್ತಿದ್ದೊ. ಆಗಂತೂ ಸಿಲೇಟ್‌ದ್ ನಡೂ ಒಡ್ಡೋತಿತ್ತ್. ಮನೆಗೆ ಎತ್ತಕನ ಒಡ್ದ ಹಂಚಿ ಚೂರ್‌ಗಳ ಗುಡ್ಡೆ ಮಾಡ್ದಂಗೆ ಮಾಡಿಕಂಡ್ ಹೋತಿದೊ. ಕೆಲಸತಿ ಸಿಲೇಟ್‌ದ್ ಮರದ ಚೌಕಟ್ಟ್ ಸಡ್ಲ ಆಗಿ ಕಿತ್ತ್ ಹೋತಿತ್. ಮತ್ತೆ ಬೋಳು ಸಿಲೇಟೇ ಗತಿ! ಕೆಲ ಮಕ್ಕಳಿಗೆ ವರ್ಸಕ್ಕೆ ಎರಡ್ ಸಿಲೇಟ್ ಬೇಕಾಗ್ತಿತ್. ಸಿಲೇಟ್ ಉಜ್ಜಿಕೆ ನೀರ್‌ಕಡ್ಡಿ, ದಪ್ಪ ಎಲೆ, ಸೀತೆ ಹೂನ ಗೆಂಡೆನೆಲ್ಲಾ ಉಪಯೋಗ ಮಾಡ್ತಿದ್ದೊ.

ಸಿಲೇಟ್ ಸರಿಯಾಗಿ ಉಟ್ಟುತಾದರೆ ಅದ್ಕೆ ಕೊಡ್ತಿದ್ದ ಗೌರವನೇ ಬೇರೆ. ನಾಳೆ ಪರೀಕ್ಸೆತಾದರೆ ಇಂದ್ ಸಿಲೇಟ್‌ಗೆ ನೀರ್ ಹಾಕಿ ಮಸಿಂದ ಉಜ್ಜಿ ತೊಳ್ದ್ ಕಿಚ್ಚಿಲಿ ಒಣಂಗಿಸಿ ಇಸಿತಿದ್ದೊ. ಬ್ಯಾಗಿಗೆ ಹಾಕಿ ಇಸಿರೆ ಇನ್ನ್ ಇಸ್ಕೂಲ್‌ಲಿ ಪರೀಕ್ಸೆ ಬರ್‍ಸಕನೇ ಬ್ಯಾಗ್‌ಂದ ಹೊರಗೆತೆಗೆದು ಮಾಡ್ತಿದ್ದೊ. ಪರೀಕ್ಸೆ ಬರ್‍ದಂಗೆ ಗುರ್‌ಗ ಸರಿಯಾದರೆ ಸರಿ, ತಪ್ಪಾದರೆ ತಪ್ಪು ಗುರ್‍ತ್ ಮಾಡ್ತಿದ್ದೊ. ಅದರ ಮಕ್ಕ ಹಂಗೆ ತಂದ್ ಮನೆಪ್ಕೆ ತೋರ್‌ಸ್ತಿದ್ದೊ.

ಕೆಲವು ಸ್ಲೇಟ್‌ಗಳ್‌ಲಿ ಲೆಕ್ಕ ಮಾಡಿಕೆ ಮಣಿಗಳೂ ಇರ್‍ತಿದ್ದೊ. ದಿನ ಕಳ್ದಂಗೆ ಟಿನ್ನ್‌ದ್/ಡಬ್ಬಿದ್ ಸಿಲೇಟ್ ಬಾತ್.

ಸಿಲೇಟ್ ಹಿಡೆಕೂ ಗತಿ ಇಲ್ಲದ ಸ್ತಿತಿ ಕೆಲವ್ಕೆ ಇತ್ತ್. ಪೊಯ್ಯೆಲಿ ಬರ್‍ದ್ ಕಲ್ತವೂ ಒಳೊ! **(ಬಾ.ಜೋ.)**

ಅಕಾಡೆಮಿ ಅಧ್ಯಕ್ಷರು



ಲಕ್ಷ್ಮೀನಾರಾಯಣ ಕಜೆಗದ್ದೆ

ಅಕಾಡೆಮಿ ಸದಸ್ಯರು



ಬೈತಡ್ಕ ಜಾನಕಿ ಬೆಳ್ಯಪ್ಪ



ಸ್ಮಿತಾ ಅಮೃತರಾಜ್



ಚೊಕ್ಕಾಡಿ ಪ್ರೇಮ ರಾಘವಯ್ಯ



ಧನಂಜಯ ಅಗೋಳಿಕಜೆ



ದಂಬೆಕೋಡಿ ಯಸ್. ಆನಂದ



ಡಾ. ದಯಾನಂದ ಕೆ. ಸಿ.
ಕೂಡಕಂಡಿ



ಕುಸುಮಾಧರ ಎ.ಟಿ



ಡಾ. ವಿಶ್ವನಾಥ ಬದಿಕಾನ



ಜಯಪ್ರಕಾಶ್
ಮೋಂಟಡ್ಕ ಬಿಳಿನೆಲೆ



ಪುರುಷೋತ್ತಮ ಕಿರ್ಲಾಯ



ಡಾ. ಪುರುಷೋತ್ತಮ ಕೆ.ವಿ.
ಕರಂಗಲ್ಲು



ಕಿರಣ್ ಕುಂಬಳಚೇರಿ



ಭರತೇಶ ಅಲಸಂಡೆಮಜಲು

ರಿಜಿಸ್ಟ್ರಾರ್



ಶ್ರೀ ಚಿನ್ನಸ್ವಾಮಿ

ಅರ್ಥ ಸದಸ್ಯರು



ಶ್ರೀಮತಿ ಕೆ.ಟಿ. ದರ್ಶನ

ಕಛೇರಿ ಸಿಬ್ಬಂದಿಗಳು



ಶ್ರೀಮತಿ ಜ್ಯೋತಿ



ಶ್ರೀಮತಿ ಶೋಭಾ



ಶ್ರೀ ವಿಘ್ನೇಶ್

ನಮ್ಮ ನಾಡ್‌ನ ಜೆನರ, ಅದರ್ಲಿನು ಬೆನ್ನಿ ಬೇಸಾಯ ಮಾಡ್ವ ಮತ್ತೆ ಕೂಲಿ ಕೆಲ್ಸಕೆ ಹೋವ ಜೆನರ ಇತಿಹಾಸನ ಕಟ್ಟ್‌ವ ಪ್ರಯತ್ನ ಈಗ ಹೆಚ್ಚ್ ಹೆಚ್ಚ್ ನಡಿತ ಉಟ್ಟು. ಈ ಬಗೆನ ಇತಿಯಾಸನ ಬಾಯಿಮಾತ್‌ನ ಇತಿಯಾಸ ಅಂತ ಕರ್‌ದವೆ. ಬರೆವ ಪರಂಪರೆನ ಮೂಲ ಸೊತ್ತ್‌ಗಳ ಬಳ್ಸಿ ಬರೆವ ಇತಿಯಾಸಕ್ಕಿಂತ ಬಾಯಿಮಾತ್‌ನ ಇತಿಯಾಸ ತುಂಬಾ ಬೇರೆ ಬೇರೆ ಅವುಟ್ಟು. ಅರೆಬಾಸೆ ಮಾತಾಡ್ವ ಗೌಡ್ರ ಇತಿಯಾಸ ಹೊಸ ರೂಪಲಿ ಕಟ್ಟುದಾದರೆ ಈ ಪುಸ್ತಕ ಉಪಕಾರಕೆ ಬಾದು. ಗೌಡರ ಕುಟುಂಬ, ಆಹಾರ, ಕುಲ ಕಸುಬುಗ, ಗದ್ದೆ ಮತ್ತೆ ಬೇಸಾಯ, ಕುಟುಂಬ ನಿರ್ವಹಣೆ, ಆರೋಗ್ಯ ರಕ್ಷಣೆ, ಆಚರಣೆಗ ಇವ್‌ಗಳ್‌ಗೆ ಸಮ್ಮಂದ ಇರ್‌ವ ಸಾಂಸ್ಕೃತಿಕ ಇತಿಯಾಸನ ಈ ಸೊತ್ತುಗಳ ಕೋಶನ ಮಾಹಿತಿ ನೆರವುಲಿ ಕಟ್ಟಕ್.

ಈ ಪುಸ್ತಕಲಿರ್‌ವ ಸೊತ್ತುನ ಚಿತ್ರಗಳ ನಿರ್ಜೀವಂತ ನೋಡದೆ ಆ ಚಿತ್ರಗ ತಮ್ಮ ವಿವರಣೆ ಮುಕೇನ ಬಿಚ್ಚಿಸುವ ಕತೆಗೆ ನಾವ್ ಕೆಬಿ ಕೊಡಕ್. ಪ್ರತಿಯೊಂದ್ ಸೊತ್ತುಗ ಸಾ ಅದರ ಚರಿತ್ರೆನ ಬರೆಯಕೆ ಕಾದು ಕುದ್ದೊಳೊ. ನಾವ್ ಹಿಜ್ಞಿ ಆಸಕ್ತಿ ತೋರ್ಸಿರೆ ಕೆಲವ್ ಸೊತ್ತುಗ ನಾವ್‌ಗೆ ಗೊತ್ತಿರದ ನಿಗೂಢ ಲೋಕನ ಬುಳ್ಗಿ ಇಸಿಕೆ ಉತ್ಸುಕ ಆಗಿದ್ದವೆ. ಎಲ್ಲೋ ಹುಟ್ಟಿ ಎಲ್ಲಿಗೋ ವಲಸೆ ಬಂದದರ ಹೇಳ್‌ವೆ. ಕೆಲ್ಸಂದ ಬಿಡ್ಗಡೆ ಆಗಿ ಮೂಲೆ ಸೇರ್ದರ ತಿಳ್ಸವೆ. ನಿಜವಾಗಿ ಸೊತ್ತುಗ ಕಟ್ಟ್‌ವ ಇತಿಯಾಸದ ಕತನಗ ಜೆನರ ಇತಿಯಾಸನೇ ಆಗಿದ್ದದೆ. ಈ ಸೊತ್ತುಗಳ್‌ಂದ ನಾವ್ ಪಡೆವ ಜ್ಞಾನ ಜೆನರ ಸಂವಹನದ ಬಾಗನೇ ಆವುಟು.

– ಮುನ್ನುಡಿಂದ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

"ಕಾಫಿಕೃಪಾ", ರಾಜಸೀಟ್ ರಸ್ತೆ, ಮಡಿಕೇರಿ – 571201 ಕೊಡಗು ಜಿಲ್ಲೆ.
08272–223055, ಮೊ: 6362522677


arebaseacademy@gmail.com
www.arebhasheacademy.karnataka.gov.in

9 788195 659845

ಅರೆಭಾಷೆ ಪಾರಂಪರಿಕ ವಸ್ತುಕೋಶ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅರೆಭಾಷೆ ಪಾರಂಪರಿಕ ವಸ್ತುಕೋಶ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ